ಮಾನವಿಕ ಕರ್ನಾಟಕ

ಸಂಪುಟ ೨ ಸಂಚಿಕೆ ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೨

ಲೇಖಕರಿಗೆ ಸೂಚನೆಗಳು

೧ ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು

೪ ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೨ ಸಂಚಿಕೆ ೪

೮

ಆಗಸ್ಟ್ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೨

MANAVIKA KARNATAKA, Kannada Quarterly of the University of Mysore. Volume 2, Number 4, August 1972. Edited by H. S. Krishnaswamy Iyengar and Dr. A. V. Narasimha Murthy

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ಈ ಸಂಚಿಕೆಯ ಲೇಖಕರು

1	ಡಾ. ಎಂ. ಮಾದಯ್ಯ	ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ರೀಡರ್
2	ಬಿ. ರಾಮಚಂದ್ರರಾವ್	ಉಸ್ಮಾನಿಯ ವಿಶ್ವವಿದ್ಯಾಲಯದ ಭಾಷಾಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು
3	ಎ. ಎಸ್. ಧರಣೇಂದ್ರಯ್ಯ	ಧಾರವಾಡದ ಕರ್ನಾಟಕ ಆರ್ಟ್ಸ್ ಕಾಲೇಜಿನಲ್ಲಿ ಮನಶ್ಶಾಸ್ತ್ರ ಅಧ್ಯಾಪಕರು
4	ಡಾ. ಕೆ. ಪುಟ್ಟಸ್ವಾಮಯ್ಯ	ಡೆಪ್ಯೂಟಿ ಡೈರೆಕ್ಟರ್ ಆಫ್ ಇವಾಲ್ಯುಯೇಷನ್, ಮೈಸೂರು ಸರ್ಕಾರ, ಬೆಂಗಳೂರು
5	ಯು. ಪಿ. ಉಪಾಧ್ಯಾಯ	ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರದಲ್ಲಿ ಸಂಶೋಧನಾಧಿಕಾರಿಗಳು
6	ಸುಶೀಲಾ ಉಪಾಧ್ಯಾಯ	ಸಹಾಯಕ ಸಂಶೋಧಕಿ, ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ, ಮೈಸೂರು
7	ಎಚ್. ಜಿ. ಹನುಮಪ್ಪ	ನವದೆಹಲಿಯ ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಜೂನಿಯರ್ ರಿಸರ್ಚ್ ಆಫೀಸರ್
8	ಪ್ರಭುಸ್ವಾಮಿ	ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು
9	ಡಾ. ಅಬ್ದುಲ್ ಅಜೀಸ್	ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣದ ಅರ್ಥಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು
10	ರಘುಸುತ	ಕೆ. ಆರ್. ರಂಗಾಚಾರ್, ಮಿರ್ಲೆಯಲ್ಲಿರುವ ಜ್ಯೂನಿಯರ್ ಕಾಲೇಜಿನಲ್ಲಿ ಅಧ್ಯಾಪಕರು
11	ಎಂ. ಎಸ್. ಕೃಷ್ಣಮೂರ್ತಿ	ಮಾನಸಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಪುರಾತತ್ವ ವಸ್ತು ಸಹಾಯಕರು
12	ಕೆ. ಬಿ. ನೀಲಾವರ್	ಮೂಡಬಿದರೆಯ ಮಹಾವೀರ ಕಾಲೇಜಿನಲ್ಲಿ ಅರ್ಥಶಾಸ್ತ್ರ ರೀಡರ್
13	ಬಿ. ಎನ್. ಸರ್ವಮಂಗಳಾ	ಮಾನಸಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಸಂಶೋಧಕಿ
14	ಎ. ವಿ. ಎನ್.	ಡಾ. ಎ. ವಿ. ನರಸಿಂಹಮೂರ್ತಿ. ಮಾನಸಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ರೀಡರ್, ಮಾನವಿಕ ಕರ್ಣಾಟಕದ ಸಂಪಾದಕರಲ್ಲೊಬ್ಬರು
15	ಎಂ. ಶಿವಲಿಂಗಯ್ಯ	ಮಾನಸಗಂಗೋತ್ರಿಯ ಭೂಗೋಳಶಾಸ್ತ್ರ ವಿಭಾಗದಲ್ಲಿ ರೀಡರ್
16	ಸಿಂಧುವಳ್ಳಿ	ಎಸ್. ಅನಂತಮೂರ್ತಿ, ಮೈಸೂರು ವಿಶ್ವವಿದ್ಯಾನಿಲಯದ ಲಲಿತಕಲೆಗಳ ಕಾಲೇಜಿನಲ್ಲಿ ಅಧ್ಯಾಪಕರು
17	ಎನ್. ಬಸವಾರಾಧ್ಯ	ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಡೆಪ್ಯೂಟಿ ಡೈರೆಕ್ಟರ್
18	ಬಾ. ರಾ. ಗೋಪಾಲ	ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಶಾಸನತಜ್ಞರು
19	ಬಿ. ಡಿ. ಹೆಗಡೆ, ದೊಡ್ಮನೆ	ಶಿರಸಿಯ ಖ್ಯಾತ ಅಡ್ವೊಕೇಟರು

ಡಾ. ಎಂ. ಮಾದಯ್ಯ

ಪ್ರಶಾಂತ ಚಂದ್ರ ಮಹಾಲನೋಬಿಸ್

ಪ್ರೊಫೆಸರ್ ಪ್ರಶಾಂತ ಚಂದ್ರ ಮಹಾಲನೋಬಿಸ್‌ರವರು 1972ರ ಜೂನ್ 28ರಂದು ಮಧ್ಯಾಹ್ನ ತಮ್ಮ ಕೊನೆಯ ಉಸಿರು ಬಿಟ್ಟರು. ಅವರು ದೈವಾಧೀನರಾದಾಗ ಅವರಿಗೆ 79 ವರ್ಷವಾಗಿತ್ತು. ಅವರು ಇಪ್ಪತ್ತನೆಯ ಶತಮಾನದ ಪ್ರಮುಖ ವಿದ್ವಾಂಸರಲ್ಲಿ ಒಬ್ಬರಾಗಿದ್ದರು. ಕಳೆದ ಐವತ್ತು ವರ್ಷಗಳಿಂದಲೂ ಭಾರತದ ಪ್ರತಿಭಾವಂತ ಪ್ರಜ್ಞಾಶಾಲಿಗಳಲ್ಲಿ ಒಬ್ಬರಾಗಿದ್ದ ಅವರ ಜೀವನದ ಪ್ರಮುಖ ಅಂಶವೇನೆಂದರೆ ತರ್ಕಸಮ್ಮತವಾದ ಮತ್ತು ಶಾಸ್ತ್ರ ರೀತಿಯ ವಿವೇಚನೆಗೆ ಪ್ರಾತಿನಿಧ್ಯ ನೀಡುವುದು ಮತ್ತು ಜೀವನದಲ್ಲಿ ಅದೇ ರೀತಿ ನಡೆಯುವುದು. ಅವರು ವಿಜ್ಞಾನದ ಬೆಳೆವಣಿಗೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ಉದಾಹರಣೆಗೆ ಭಾರತದಲ್ಲಿ ಸಂಖ್ಯಾಕಲನಶಾಸ್ತ್ರದ ಬೆಳೆವಣಿಗೆಗೆ ಮತ್ತು 1920ರಿಂದೀಚೆಗೆ ಅದರ ಹೆಚ್ಚು ಹೆಚ್ಚು ಬಳಕೆಗೆ ಅವರ ಸತತವಾದ ದುಡಿಮೆಯೇ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ಸಂಖ್ಯಾಕಲನಶಾಸ್ತ್ರಕ್ಕೆ ಅವರ ಕೊಡುಗೆ ಅಪಾರವಾದ್ದು. ಅಲ್ಲದೆ ಮಹಾಲನೋಬಿಸ್‌ರವರಿಂದಲೂ ಅವರ ಲೇಖನಗಳಿಂದಲೂ ಸ್ಫೂರ್ತಿ ಪಡೆದವರು ಅನೇಕರಾದ್ದರಿಂದ ಆ ದೃಷ್ಟಿಯಿಂದಲೂ ಅವರು ಸಂಖ್ಯಾಕಲನಶಾಸ್ತ್ರದ ಬೆಳೆವಣಿಗೆಗೆ ಹೆಚ್ಚಿನ ಕೊಡುಗೆಯನ್ನು ನೀಡಿದರೆನ್ನಬಹುದು. ಆದರೂ ಸಂಖ್ಯಾಕಲನಶಾಸ್ತ್ರದ ಅಧ್ಯಯನ ಮಹಾಲನೋಬಿಸ್‌ರವರ ನಿತ್ಯಜೀವನದ ಒಂದು ಭಾಗ ಮಾತ್ರವಾಗಿತ್ತು. ಸುಮಾರು ಹತ್ತು ಹದಿನೈದು ವರ್ಷಗಳ ಕಾಲ ಭಾರತದ ರಾಷ್ಟ್ರೀಯ ಅಭಿವೃದ್ಧಿ ಯೋಜನೆಯನ್ನು ಮಹಾಲನೋಬಿಸ್‌ರವರ ಹೆಸರಿನ ಜೊತೆಗೆ ಗುರುತಿಸಲಾಗುತ್ತಿತ್ತು. ಈ ವಿಷಯದಲ್ಲಿ ಭಾರತಕ್ಕೆ ಅವರ ಕೊಡುಗೆ ಅಪಾರವಾದ್ದು. ಎರಡನೆಯ ಪಂಚವಾರ್ಷಿಕ ಯೋಜನೆಯ ಚೌಕಟ್ಟನ್ನು ರಚಿಸಲು ಬೇಕಾದ ಮೂಲವಾಗಿ ಒಂದು ಅರ್ಥಮಾಪನ ಆರ್ಥಿಕ ಅಭಿವೃದ್ಧಿ ಮಾದರಿಯನ್ನು ರಚಿಸಿಕೊಟ್ಟ ಕೀರ್ತಿ ಇವರದಾಗಿದೆ. ಮಹಾಲನೋಬಿಸರು ಪಂಡಿತ ಜವಾಹರಲಾಲ್ ನೆಹರೂ ಅವರಿಗೆ ಅಭಿವೃದ್ಧಿ ಯೋಜನೆಗಳ ವಿಷಯದಲ್ಲಿ ಹೊಸ ಹೊಸ ಸಲಹೆಗಳನ್ನು ಕೊಟ್ಟು ಅವರಿಗೆ ಬಹಳ ಸಹಾಯಕರಾಗಿದ್ದರು. ಮೇಲೆ ಹೇಳಿದ ಎರಡು ಕ್ಷೇತ್ರಗಳಲ್ಲದೆ ಅವರು ಕಲೆ, ಸಾಹಿತ್ಯ, ಸಾಮಾಜಿಕ ಮತ್ತು ತಾತ್ವಿಕ ಚಿಂತನೆಗಳಲ್ಲಿಯೂ ತುಂಬ ಆಸಕ್ತಿ ತೋರಿಸುತ್ತಿದ್ದುದನ್ನು ಅವರ ಜೀವನಚರಿತ್ರೆಯನ್ನು ಕೂಲಂಕಷವಾಗಿ ಅಭ್ಯಸಿಸಿದವರಿಗೆ ಗೊತ್ತಾಗುತ್ತದೆ. ಅವರು ಜೀವನದ ನಾನಾ ಕ್ಷೇತ್ರಗಳಲ್ಲಿ ಸಾಧಿಸಿರುವ ಎಲ್ಲ ಅಂಶ ಗಳನ್ನೂ ವಿಚಾರ ಮಾಡಲು ಪ್ರಸಕ್ತ ಲೇಖನದಲ್ಲಿ ಸಾಧ್ಯವಾಗುವುದಿಲ್ಲ. ಮಹಾಲನೋಬಿಸ್‌ರವರ ಜೀವನದ ಮುಖ್ಯ ಘಟ್ಟಗಳನ್ನೂ ಭಾರತದ ಅಭಿವೃದ್ಧಿ ಯೋಜನೆಗೆ ಅವರು ನೀಡಿರುವ ಕೊಡುಗೆಯನ್ನೂ ಕುರಿತ ವಿವೇಚನೆಯನ್ನಿಲ್ಲಿ ನಡೆಸಲಾಗಿದೆ.

ಜೀವನ

ಮಹಾಲನೋಬಿಸರು 1893ರ ಜೂನ್ 29ರಂದು ಕಲ್ಕತ್ತದಲ್ಲಿ ಜನ್ಮ ತಾಳಿದರು. ಇವರು ಕಲ್ಕತ್ತ ವಿಶ್ವವಿದ್ಯಾಲಯಕ್ಕೆ ಸೇರಿದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ 1912ರಲ್ಲಿ ಬಿ.ಎಸ್‌ಸಿ. (ಆನರ್ಸ್) ಪದವಿ

ಯನ್ನೂ 1915ರಲ್ಲಿ ಬ್ರಿಟನ್ನಿನ ಕೇಂಬ್ರಿಜ್ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿಯನ್ನೂ ಪಡೆದರು. ಭೌತಶಾಸ್ತ್ರ ಗಣಿತಶಾಸ್ತ್ರಗಳನ್ನು ಮೇಲೆ ಹೇಳಿದ ಎರಡು ವಿಶ್ವವಿದ್ಯಾಲಯಗಳಲ್ಲೂ ಅಧ್ಯಯನ ಮಾಡಿದರು. ಕೇಂಬ್ರಿಜ್‌ನಿಂಧ ಸ್ವದೇಶಕ್ಕೆ ವಾಪಸಾದ ಮೇಲೆ, 1922ರಿಂದ 1945ರ ವರೆಗೆ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿಯೂ 1945ರಿಂದ 1948ರ ವರೆಗೆ ಅದೇ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿಯೂ ಕೆಲಸ ಮಾಡಿದರು. 1948ರಿಂದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರೊಫೆಸರ್ ಎಮೆರಿಟಸ್ ಆಗಿದ್ದರು. ಇಷ್ಟಲ್ಲದೆ 1922–26ರ ಅವಧಿಯಲ್ಲಿ ಕಲ್ಕತ್ತದಲ್ಲಿ ಪವನಶಾಸ್ತ್ರಜ್ಞರಾಗಿಯೂ ಕೆಲಸ ಮಾಡಿದರು. ಇವರ ಅಸಾಧಾರಣ ಪ್ರತಿಭೆ ರವೀಂದ್ರನಾಥ ಠಾಕೂರರ ಗಮನ ಸೆಳೆದು, ವಿಶ್ವಭಾರತಿಯನ್ನು ಕಟ್ಟಲು ಇವರ ಸಹಾಯ ಪಡೆದುಕೊಂಡರು. ಇವರು ವಿಶ್ವಭಾರತಿಯ ಮುಖ್ಯಕಾರ್ಯದರ್ಶಿಯಾಗಿ 1921ರಿಂದ 1931ರ ವರೆವಿಗೆ ಕಾರ್ಯನಿರ್ವಹಣೆ ಮಾಡಿದರು. ಈಗ ಪ್ರಪಂಚದಲ್ಲೆಲ್ಲ ಪ್ರಖ್ಯಾತಿಗಳಿಸಿರುವ 'ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ'ನ್ನು 1931ರಲ್ಲಿ ಸ್ಥಾಪಿಸಿ ತಮ್ಮ ಬಾಳಿನ ಕೊನೆಯ ವರೆಗೂ ಅದರ ನಿರ್ದೇಶಕರಾಗಿ ಅದರ ಏಳಿಗೆಗಾಗಿ ದುಡಿದರು. 1933ರಲ್ಲಿ 'ಸಾಂಖ್ಯಾ' ಪತ್ರಿಕೆ ಇವರಿಂದಲೇ ಜನ್ಮತಾಳಿತು. ಆ ದಿನದಿಂದಲೂ ಇವರು ಆ ಪತ್ರಿಕೆಯ ಸಂಪಾದಕರಾಗಿಯೂ ಇದ್ದರು. ಇಷ್ಟಲ್ಲದೆ 1941ರಿಂದ 1945ರ ವರೆಗೆ ಮಹಾಲನೋಬಿಸರು ಕಲ್ಕತ್ತ ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಂಖ್ಯಾಕಲನಶಾಸ್ತ್ರ ಇಲಾಖೆಯ ಮುಖ್ಯಸ್ಥರಾಗಿಯೂ ಇದ್ದರು. 1945–48ರ ಅವಧಿಯಲ್ಲಿ ಪಶ್ಚಿಮ ಬಂಗಾಳ ರಾಜ್ಯ ಸರ್ಕಾರಕ್ಕೆ ಅಂಕಿ ಅಂಶಗಳ ಸಲಹೆಗಾರರಾಗಿದ್ದರು. 1949ರಿಂದ ಭಾರತ ಸರ್ಕಾರದ ಸಂಖ್ಯಾಕಲನಶಾಸ್ತ್ರ ಸಲಹೆಗಾರರಾಗಿದ್ದರು. 1955ರಿಂದ 1966ರ ವರೆಗೆ ಭಾರತದ ಯೋಜನಾ ಆಯೋಗದ ಸದಸ್ಯರಾಗಿ ಸೇವೆ ಸಲ್ಲಿಸಿದರು.

ಸದಸ್ಯತ್ವ ಮತ್ತು ಗೌರವ ಪ್ರಶಸ್ತಿಗಳು

ಡಾ. ಮಹಾಲನೋಬಿಸರು ಅನೇಕ ರಾಷ್ಟ್ರೀಯ–ಅಂತರರಾಷ್ಟ್ರೀಯ ಸಂಘಗಳ ಸಂಪರ್ಕ ಪಡೆದಿದ್ದರು. ವಿಜ್ಞಾನಗಳ ಭಾರತೀಯ ಅಕಾಡೆಮಿ, ವಿಜ್ಞಾನಗಳ ರಾಷ್ಟ್ರೀಯ ಅಕಾಡೆಮಿ, ಲಂಡನ್ನಿನ ರಾಯಲ್ ಸ್ಟ್ಯಾಟಿಸ್ಟಿಕಲ್ ಸೊಸೈಟಿ ಇವುಗಳ ಫೆಲೋ ಆಗಿದ್ದರು. ಅಮೆರಿಕನ್ ಸ್ಟ್ಯಾಟಿಸ್ಟಿಕಲ್ ಅಸೋಸಿಯೇಷನ್ನಿನ ಸದಸ್ಯರಾಗಿದ್ದರು. 1937ರಲ್ಲಿ ಅಂತರರಾಷ್ಟ್ರೀಯ ಸ್ಟ್ಯಾಟಿಸ್ಟಿಕಲ್ ಅಸೋಸಿಯೇಷನ್ನಿನ ಸದಸ್ಯರಾಗಿದ್ದರು. 1952ರಲ್ಲಿ ಅದರ ಗೌರವ ಸದಸ್ಯರಾಗಿಯೂ 1957ರಿಂದ ಗೌರವ ಅಧ್ಯಕ್ಷರಾಗಿಯೂ ಇದ್ದರು. ಅವರು ಅಂತರರಾಷ್ಟ್ರೀಯ ಬಯೊಮೆಟ್ರಿಕ್ಸ್ ಸೊಸೈಟಿಯ ಉಪಾಧ್ಯಕ್ಷರಾದ್ದು 1947ರಲ್ಲಿ. ಅವರು ಪಾಕಿಸ್ತಾನದ ಸ್ಟ್ಯಾಟಿಸ್ಟಿಕಲ್ ಅಸೋಸಿಯೇಷನ್ನಿನ ಗೌರವ ಸದಸ್ಯರು (1952), ಎಕನಾಮೆಟ್ರಿಕ್ ಸೊಸೈಟಿಯ ಫೆಲೋ ಆಗಿದ್ದರು. ಇಂಡಿಯನ್ ಸೈನ್ಸ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದು 1950ರಲ್ಲಿ. 1946ರಿಂದ ಅವರು ವಿಶ್ವಸಂಸ್ಥೆಯ ಸಂಖ್ಯಾಕಲನ ಸಮಿತಿಯ ಸದಸ್ಯರಾಗಿದ್ದುದಲ್ಲದೆ, 1954–58ರ ಅವಧಿಯಲ್ಲಿ ಅದರ ಅಧ್ಯಕ್ಷರಾಗಿಯೂ ಇದ್ದರು. 1947ರಲ್ಲಿ ನಡೆದ ವಿಶ್ವಸಂಖ್ಯಾಕಲನ ಕಾಂಗ್ರೆಸ್ಸಿನಲ್ಲಿ ಭಾರತ ನಿಯೋಗದ ನಾಯಕರಾಗಿದ್ದರು. ಇವರು ಭಾರತದ ಪ್ರತಿನಿಧಿಯಾಗಿ ಇನ್ನೂ ಅನೇಕ ಕಡೆಗಳಲ್ಲಿ ಕೆಲಸ ನಿರ್ವಹಿಸಿದ್ದಾರೆ. ಸ್ವತಂತ್ರ ಭಾರತದಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿಯ ವಿಷಯದಲ್ಲಿ ನೆಹರೂರವರಿಗೆ ಒಬ್ಬ ಪ್ರಮುಖ ಮೇಧಾನಿಧಿಯಂತಿದ್ದರು.

ಮಹಾಲನೋಬಿಸರು ಸಲ್ಲಿಸಿದ ಅಗಾಧ ಸೇವೆಗೂ ಅವರ ವಿದ್ವತ್ತಿಗೂ ಅನೇಕ ಕಡೆ ಗೌರವ ದೊರೆಯಿತು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಇವರಿಗೆ 1944ರಲ್ಲಿ ವೆಲ್ಡನ್ ಪದಕವನ್ನು ನೀಡಿ ಗೌರವಿಸಿತು. 1957ರಲ್ಲಿ ಕಲ್ಕತ್ತ ವಿಶ್ವವಿದ್ಯಾಲಯ ಗೌರವ ಡಾಕ್ಟೊರೇಟ್ ನೀಡಿತು. 1961ರಲ್ಲಿ ವಿಶ್ವಭಾರತಿ ವಿಶ್ವವಿದ್ಯಾಲಯ ಇವರಿಗೆ ದೇಶಿಕೋತ್ತಮ ಪ್ರಶಸ್ತಿ ನೀಡಿತು. 1961ರಲ್ಲಿ ಸೋಫಿಯ ಸ್ಟೇಟ್ ವಿಶ್ವವಿದ್ಯಾಲಯವೂ 1964ರಲ್ಲಿ ದೆಹಲಿ ವಿಶ್ವವಿದ್ಯಾಲಯವೂ ಇವರಿಗೆ ಗೌರವ ಡಿ.ಎಸ್‌ಸಿ. ಪದವಿಗಳನ್ನು ನೀಡಿ ಮನ್ನಣೆ ಮಾಡಿದುವು. 1964ರಲ್ಲಿ ಜೆಕೊಸ್ಲೊವಾಕಿಯ ಅಕಾಡೆಮಿ ಆಫ್ ಸೈನ್ಸ್ ಇವರಿಗೆ ಚಿನ್ನದ ಪದಕ ನೀಡಿ ಗೌರವಿಸಿತು. ಇವೆಲ್ಲಕ್ಕಿಂತ ಹೆಚ್ಚಾಗಿ ಭಾರತ ಸರ್ಕಾರ ಇವರ ಅಪಾರ ಸೇವೆಯನ್ನು ಪರಿಗಣಿಸಿ 1968ರಲ್ಲಿ ಇವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿತು.

ಕೃತಿಗಳು

ಟಾಕ್ಸ್ ಆನ್ ಪ್ಲ್ಯಾನಿಂಗ್, 1961; ಎಕ್ಸ್‌ಪೆರಿಮೆಂಟ್ ಇನ್ ಸ್ಟ್ಯಾಟಿಸ್ಟಿಕಲ್ ಸ್ಯಾಂಪ್ಲಿಂಗ್, 1961; ಅಪ್ರೋಚ್ ಆಫ್ ಆಪರೇಷನಲ್ ರಿಸರ್ಚ್ ಟು ಪ್ಲ್ಯಾನಿಂಗ್ ಇನ್ ಇಂಡಿಯ 1963. ಇವುಗಳ ಜೊತೆಗೆ ಮಹಾಲನೋಬಿಸರು ಸಂಖ್ಯಾಕಲನಶಾಸ್ತ್ರ, ರಾಷ್ಟ್ರೀಯ ವರಮಾನ ಬಯೊಮೆಟ್ರಿಕ್ಸ್, ಭಾರತದ ಆರ್ಥಿಕ ಅಭಿವೃದ್ಧಿ ಯೋಜನೆ ಮುಂತಾದವುಗಳ ವಿಷಯವಾಗಿ ನೂರಾರು ಗಣನೀಯ ಲೇಖನಗಳನ್ನು ಬರೆದಿದ್ದಾರೆ.

ಮಹಾಲನೋಬಿಸರು ತಮ್ಮ 'ಎಕ್ಸ್‌ಪೆರಿಮೆಂಟ್ ಇನ್ ಸ್ಟ್ಯಾಟಿಸ್ಟಿಕಲ್ ಸ್ಯಾಂಪ್ಲಿಂಗ್' ಎಂಬ ಕೃತಿಯಲ್ಲಿ ಭಾರತದ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟಿನವರು ಅನೇಕ ಕ್ಷೇತ್ರಗಳಲ್ಲಿ ಮಾಡಿರುವ ದೊಡ್ಡ ಗಾತ್ರದ ಮಾದರಿ ಸಮೀಕ್ಷೆಗಳ ವಿಷಯ ಕೂಲಂಕಷವಾಗಿ ವಿವರಿಸಿದ್ದಾರೆ. ಭೂ ವಿಸ್ತೀರ್ಣ ಮತ್ತು ಉತ್ಪಾದನೆ, ಗ್ರಾಮಾಂತರ ಕುಟುಂಬಗಳ ಸಾಮಾಜಿಕ–ಆರ್ಥಿಕ ಪರಿಸ್ಥಿತಿ, ಜನಜೀವನಮಟ್ಟ, ಕುಟುಂಬ ಗಳ ಆಯ–ವ್ಯಯಪಟ್ಟಿ—ಈ ವಿಷಯಗಳಲ್ಲಿ ಇವರು ಮಾಡಿರುವ ಮಾದರಿ ಸಮೀಕ್ಷೆಗಳನ್ನು ಕುರಿತು ವಿವೇಚಿಸಿ, ದೇಶದ ಹಿತದೃಷ್ಟಿಯಿಂದ ಅವುಗಳ ಪ್ರಾಮುಖ್ಯ ಏನೆಂಬುದನ್ನು ಎತ್ತಿತೋರಿಸಿದ್ದಾರೆ.

'ಟಾಕ್ಸ್ ಆನ್ ಪ್ಲ್ಯಾನಿಂಗ್' ಎಂಬ ಕೃತಿ ಅನೇಕ ಲೇಖನಗಳಿಂದ ಕೂಡಿದ್ದು, ಇದರಲ್ಲಿ ಯೋಜನೆಯ ವಿಷಯದಲ್ಲಿ ಮಹಾಲನೋಬಿಸರ ಸ್ವೋಪಜ್ಞವೂ ಸ್ವಾರಸ್ಯವೂ ಆದ ವಿವೇಚನೆಯನ್ನು ಕಾಣಬಹುದು. ಈ ಗ್ರಂಥದಲ್ಲಿ ಕಂಡುಬರುವ ಮುಖ್ಯ ಲೇಖನಗಳು ಇವು: 1 ರಾಷ್ಟ್ರೀಯ ವರಮಾನ, ಬಂಡವಾಳ ಮತ್ತು ಅಭಿವೃದ್ಧಿ; 2 ರಾಷ್ಟ್ರೀಯ ಅಭಿವೃದ್ಧಿಗೆ ಯೋಜನೆ ಎಂಬ ವಿಚಾರ ಕುರಿತ ಅಧ್ಯಯನ; 3 ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಸೂತ್ರೀಕರಿಸುವಾಗ ನೀಡಿದ ಶಿಫಾರಸುಗಳು; 4 ಭಾರತದ ಯೋಜನೆಯ ಪಥಸೂಚಿ; 5 ವಿಜ್ಞಾನ ಮತ್ತು ರಾಷ್ಟ್ರೀಯ ಯೋಜನೆ; 6 ಯೋಜನೆಯಲ್ಲಿ ಮುಂದಿನ ಹೆಜ್ಜೆಗಳು; 7 ಹಿಂದುಳಿದ ದೇಶಗಳಲ್ಲಿ ಕೈಗಾರಿಕಾಭಿವೃದ್ಧಿಯಾದರೆ ಅದು ವಿಶ್ವಶಾಂತಿಗೆ ಒಂದು ಹೆದ್ದಾರಿ; 8 ಹಿಂದುಳಿದ ರಾಷ್ಟ್ರಗಳ ಕೈಗಾರಿಕಾಭಿವೃದ್ಧಿಯ ಹಾದಿಯಲ್ಲಿ ಬರುವ ಸಮಸ್ಯೆಗಳನ್ನು ಕುರಿತ ಅಧ್ಯಯನ; 9 ಆರ್ಥಿಕ ಅಭಿವೃದ್ಧಿಗೆ ವೈಜ್ಞಾನಿಕ ತಾಂತ್ರಿಕ ಜನಬಲದ ಆವಶ್ಯಕತೆ. 10 ನಿರುದ್ಯೋಗ ಸಮಸ್ಯೆ ಮತ್ತು 11 ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಕೂಲಿಗಾರರ ಸಮಸ್ಯೆಗಳು.

ಭಾರತದ ಆರ್ಥಿಕ ಯೋಜನೆಗೆ ಕೊಡುಗೆ

ದೇಶಾಭಿಮಾನಿಯಾದ ಪ್ರೊಫೆಸರ್ ಮಹಾಲನೋಬಿಸರು ಭಾರತದ ಜನತೆಯ ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳ ಬಗ್ಗೆ ಸದಾ ಯೋಚಿಸುತ್ತಿದ್ದರು. ಆದ್ದರಿಂದ ದೇಶದ ಆರ್ಥಿಕ ಅಭಿವೃದ್ಧಿ ಸಮಸ್ಯೆಗಳ ಅಧ್ಯಯನ ಮಾಡಲು ಮೊದಲನೆಯ ಹಂತವಾಗಿ 1931ರಲ್ಲಿ ಇವರು 'ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ'ನ್ನು ಸ್ಥಾಪಿಸಿದರು. ಮಹಾಲನೋಬಿಸ್ ಸಂಪ್ರದಾಯವಾದಿ ಆರ್ಥಿಕ ವಿಶ್ಲೇಷಣೆಯನ್ನು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದಾಗ ಎಂದೂ ಓದಿದವರಲ್ಲ. ಆದರೆ ಅವರು ನಡೆಸಿದ ಗಣಿತಶಾಸ್ತ್ರ, ಸಂಖ್ಯಾಕಲನಶಾಸ್ತ್ರ ಮತ್ತು ಭೌತಶಾಸ್ತ್ರ ಅಧ್ಯಯನದಿಂದ ಯಾವುದೇ ಸಮಸ್ಯೆಯ ಬಗ್ಗೆ ನಿಷ್ಕೃಷ್ಟವಾಗಿ ಆಲೋಚನೆ ಹರಿಸುವ ಅಭ್ಯಾಸ ಪ್ರಾಪ್ತವಾಗಿತ್ತು. ಜವಾಹರಲಾಲ ನೆಹರೂರವರು ಶಾಂತನಿಕೇತನಕ್ಕೆ ಆಗಾಗ್ಗೆ ಭೇಟಿ ನೀಡುತ್ತಿದ್ದಾಗ ಅವರಿಗೆ ಮಹಾಲನೋಬಿಸರ ಪರಿಚಯ ಚೆನ್ನಾಗಿ ಆಯಿತು. ನೆಹರೂ ಅವರು ಇವರ ಕೆಲಸವನ್ನೂ ಯೋಜನೆಯಲ್ಲಿ ಇವರಿಗಿದ್ದ ಆಸಕ್ತಿಯನ್ನೂ ಮೆಚ್ಚಿ ದೇಶಕ್ಕೆ ಸ್ವಾತಂತ್ರ್ಯ ಬರುವ ಮುನ್ನವೂ ಅವರ ಜೊತೆಯಲ್ಲಿ ಭಾರತದ ಆರ್ಥಿಕ ಸಮಸ್ಯೆಗಳ ಬಗ್ಗೆ ವಿಚಾರ ನಡೆಸುತ್ತಿದ್ದರು. ಆದ್ದರಿಂದಲೇ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನೆಹರೂ ಅವರು ಮಹಾಲನೋಬಿಸರನ್ನು ಭಾರತ ಸರ್ಕಾರಕ್ಕೆ ಅಂಕಿ ಅಂಶಗಳ ಸಲಹೆಗಾರರನ್ನಾಗಿ ನೇಮಿಸಿಕೊಂಡರು. ಭಾರತದ ಆರ್ಥಿಕ ಅಭಿವೃದ್ಧಿ ಸಮಸ್ಯೆಗಳ ವಿಷಯವನ್ನು ದೀರ್ಘವಾಗಿ ಆಲೋಚಿಸುವ ಮೊದಲು, ನಾವು ರಾಷ್ಟ್ರೀಯ ವರಮಾನದ ಬಗ್ಗೆ ಅಂಕಿ ಅಂಶಗಳನ್ನು ಶೇಖರಿಸಬೇಕೆಂಬುದು ಅವರ ಅಭಿಪ್ರಾಯ ವಾಗಿತ್ತು. ಇವರ ಸಲಹೆಯ ಮೇರೆಗೆ ಭಾರತ ಸರ್ಕಾರದವರು 1949ರಲ್ಲಿ 'ರಾಷ್ಟ್ರೀಯ ವರಮಾನದ

ಕಮಿಟಿ'ಯನ್ನು ನೇಮಿಸಿದರು. ಮಹಾಲನೋಬಿಸರನ್ನು ಈ ಸಮಿತಿಯ ಅಧ್ಯಕ್ಷರನ್ನಾಗಿಯೂ ನೇಮಕ ಮಾಡಿದರು. ಈ ಸಮಿತಿ ತನ್ನ ಮೊದಲನೆಯ ವರದಿಯನ್ನು 1951ರಲ್ಲೂ ಅಂತಿಮ ವರದಿಯನ್ನು 1954ರಲ್ಲೂ ಸರ್ಕಾರಕ್ಕೆ ಸಲ್ಲಿಸಿತು. ರಾಷ್ಟ್ರೀಯ ವರಮಾನದ ಅಂದಾಜಿಗೆ ಈ ವರದಿಗಳು ಒಂದು ವ್ಯವಸ್ಥಿತ ಹಾಗು ನಿರಂತರವಾದ ಅಡಿಪಾಯ ಹಾಕಿದುವು. ಅಲ್ಲಿಂದೀಚೆಗೆ ಸರ್ಕಾರದವರು ರಾಷ್ಟ್ರೀಯ ವರಮಾನದ ಅಂದಾಜುಗಳು ಮತ್ತು ಇದಕ್ಕೆ ಸಂಬಂಧಿಸಿದ ಅಂಕಿಅಂಶಗಳನ್ನು ಕ್ರಮವಾಗಿ ಪ್ರಕಟಿಸುತ್ತ ಬಂದಿದ್ದಾರೆ. ರಾಷ್ಟ್ರೀಯ ವರಮಾನ ಸಮಿತಿ ಕೆಲಸ ಮಾಡುತ್ತಿದ್ದಂತೆಯೇ, ಮಹಾಲನೋಬಿಸರ ಗಮನ ಇನ್ನೂ ಎರಡು ಕಡೆ ಹರಿದಿತ್ತು. ಭಾರತದ ಆರ್ಥಿಕತೆಯಲ್ಲಿಯ ಅಂಕಿ ಅಂಶಗಳ ಕೊರತೆ ಮತ್ತು ತೆರಪುಗಳನ್ನು ಹೇಗೆ ಸರಿಪಡಿಸುವುದು ಎಂಬುದು ಮೊದಲನೆಯದು. ಭಾರತದ ರಾಷ್ಟ್ರೀಯ ವರಮಾನ ವನ್ನು ಹೆಚ್ಚಿಸಲು ಅಗತ್ಯವಾದ ಯೋಜನೆಗೆ ಕೆಲವು ಸೂತ್ರಗಳನ್ನು ರೂಪಿಸುವುದು ಎರಡನೆಯದು. ಮೊದಲನೆಯ ಉದ್ದೇಶವನ್ನು ಸಾಧಿಸುವ ಸಲುವಾಗಿ ಸರ್ಕಾರಕ್ಕೆ ಸಲಹೆ ನೀಡಿ ಕೇಂದ್ರೀಯ ಅಂಕಿ ಅಂಶ ಸಂಘಟನೆಯೊಂದನ್ನು ಸ್ಥಾಪಿಸುವಂತೆ ಮಾಡಿದರು. ಇದಕ್ಕೆ ಸಹಾಯಕವಾಗಿ 'ರಾಷ್ಟ್ರೀಯ ಮಾದರಿ ಸರ್ವೇಕ್ಷಣ' ಸಂಸ್ಥೆಯನ್ನು ಸರ್ಕಾರದ ಹಣದ ನೆರವಿನಿಂದ ತಮ್ಮ ಸಂಸ್ಥೆಯಲ್ಲೇ ಸ್ಥಾಪಿಸಿದರು. 1950ರಿಂದೀಚೆಗೆ ಈ ಸಂಸ್ಥೆ ಅನೇಕ ಸರ್ವೇಕ್ಷಣಗಳನ್ನು ನಡೆಸಿ ಭಾರತ ಆರ್ಥಿಕತೆಯ ಬಗ್ಗೆ ಹೇರಳ ವಾದ ಅಂಕಿಅಂಶಗಳನ್ನು ಒದಗಿಸಿದೆ. ಅದು ನಡಸಿರುವ ಕೆಲವು ಸರ್ವೇಕ್ಷಣಗಳು ಇವು: ಭಾರತದಲ್ಲಿ ಭೂ ಹಿಡುವಳಿಯ ಹಂಚಿಕೆ, ಅನುಭೋಗಿಯ ವೆಚ್ಚದ ವಿತರಣೆ ಮತ್ತು ಸಂಯೋಜನೆ, ನಿರುದ್ಯೋಗ, ಕೃಷಿ ಅರ್ಥಶಾಸ್ತ್ರ, ಆರೋಗ್ಯ ಪರಿಸ್ಥಿತಿ, ಭಾರತದ ಹಳ್ಳಿಗಳ ಪರಿಸ್ಥಿತಿ, ಕೃಷಿ ಕಾರ್ಮಿಕರು, ಸಣ್ಣಗಾತ್ರದ ಕೈಗಾರಿಕೆ ಮತ್ತು ಜನಸಂಖ್ಯೆ.

ಆದರೆ ಮಹಾಲನೋಬಿಸರ ದೃಷ್ಟಿಯಲ್ಲಿ ಅಂಕಿಅಂಶಗಳ ಶೇಖರಣೆಯೇ ಅಂತಿಮ ಗುರಿಯಲ್ಲ; ಭಾರತದ ದಾರಿದ್ರ್ಯವನ್ನು ನಿರ್ಮೂಲ ಮಾಡಬೇಕೆಂಬ ಗುರಿಯ ಸಾಧನೆಗೆ ಅದು ಒಂದು ಸಾಧನ ಮಾತ್ರ. ಆದ್ದರಿಂದ ಮಹಾಲನೋಬಿಸರು ವೃತ್ತಿಯಿಂದ ಅರ್ಥಶಾಸ್ತ್ರಜ್ಞರಾಗಿರದಿದ್ದರೂ, ಅವರ ಮನಸ್ಸು ಈ ಬಡತನ ನಿರ್ಮೂಲ ಮಾಡುವ ಬಗ್ಗೆ ಹೊಸ ದಾರಿಯನ್ನು ಅನ್ವೇಷಿಸಲು ಹೊರಟಿತು. ಇದಕ್ಕಾಗಿ ಬಂಡವಾಳ ವಿನಿಯೋಜನೆಯೆ ಕೇಂದ್ರವಾಗಿ ಉಳ್ಳ, ಇಡೀ ದೇಶಕ್ಕೆ ಅನ್ವಯವಾಗುವ ಆರ್ಥಿಕ ಅಭಿವೃದ್ಧಿಯ ಸರಳ ಮಾದರಿಯೊಂದನ್ನು 1950–51ರಲ್ಲಿ ರೂಪಿಸಿದರು. ಇಷ್ಟರಲ್ಲೇ ಇದೇ ಹಾದಿಯಲ್ಲಿ ಅರ್ಥ ಶಾಸ್ತ್ರಜ್ಞರಾದ ಹೆರಾಡ್ ಮತ್ತು ಡೋಮಾರ್ ಅವರು ತಮ್ಮ ಅಭಿವೃದ್ಧಿ ಮಾದರಿಗಳನ್ನು ಸೃಜಿಸಿ ದ್ದುದು ಮಹಾಲನೋಬಿಸರಿಗೆ ಬಹುಶಃ ಅರಿವಿದ್ದಂತೆ ಕಾಣಲಿಲ್ಲ. ಈ ಮಾದರಿಯನ್ನು ಮಹಾಲ ನೋಬಿಸರ ಏಕವಲಯ (ಸಿಂಗಲ್ ಸೆಕ್ಟಾರ್) ಮಾದರಿ ಎಂದು ಕರೆಯುತ್ತಾರೆ. ರಾಷ್ಟ್ರೀಯ ವರಮಾನ ಒಂದು ನಿಗದಿಯಾದ ಪರಿಮಾಣದಲ್ಲಿ ಹೆಚ್ಚುವರಿಯಲು ಅಗತ್ಯವಾದ ವಿನಿಯೋಜನೆಯ ಮಟ್ಟದ ಅಂದಾಜು ಗೊತ್ತಾಗಬೇಕಾದರೆ, ಬಂಡವಾಳ–ಉತ್ಪತ್ತಿ ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂಬುದೇ ಇವರ ಅಭಿಪ್ರಾಯ.

1953ರಲ್ಲಿ ಮಹಾಲನೋಬಿಸರು ಮತ್ತೆ ಒಂದು ದ್ವಿ–ವಲಯ (ಬೈ–ಸೆಕ್ಟಾರ್) ಮಾದರಿಯನ್ನು ರೂಪಿಸಿದರು. ಈ ಮಾದರಿಯ ಮುಖ್ಯ ಲಕ್ಷಣಗಳನ್ನು ಹೀಗೆ ವಿವರಿಸಬಹುದು: ದೇಶದ ಒಟ್ಟು ನಿವ್ವಳ ಬಂಡವಾಳವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಒಂದು ಭಾಗವನ್ನು ಮೂಲ ಬಂಡ ವಾಳ ಸರಕು ಉತ್ಪಾದನೆ ಹೆಚ್ಚಿಸಲೂ ಮತ್ತೊಂದು ಭಾಗವನ್ನು ಅನುಭೋಗ ಸರಕುಗಳ ಉತ್ಪಾದನೆ ಯನ್ನು ಅಧಿಕಗೊಳಿಸಲೂ ಉಪಯೋಗಿಸಬೇಕು. ಇವೆರಡರಲ್ಲಿ ಯಾವುಯಾವುದಕ್ಕೆ ಎಷ್ಟೆಷ್ಟು ಬಂಡ ವಾಳ ಹೂಡಬೇಕು ಎಂಬುದು ಯೋಜಕರಿಗೆ ಬಿಟ್ಟದ್ದು. ಮೇಲೆ ವಿವರಿಸಿದ ಎರಡು ಆರ್ಥಿಕ ಅಭಿವೃದ್ಧಿ ಮಾದರಿಗಳೂ ತುಂಬ ಸರಳವಾದವು.

ದೇಶಕ್ಕೆ ತಕ್ಕಂಥ ಯೋಜನಾವ್ಯೂಹ ರಚಿಸಲು ಅತ್ಯುತ್ತಮವಾಗಿ ಪರಿಷ್ಕರಿಸಿದ ಹಾಗು ವಿಶದ ವಾದ ಯೋಜನಾ ಮಾದರಿಯೊಂದನ್ನು ರೂಪಿಸಿ ಕೊಡುವಂತೆ ಸರ್ಕಾರ ಭಾರತದ ಅಂಕಿಅಂಶ ಸಂಸ್ಥೆಗೆ 1954ರಲ್ಲಿ ಕರೆ ನೀಡಿತು. ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವ ಸಲುವಾಗಿ ಇದು ಅಗತ್ಯವಿತ್ತು. ಮಹಾಲನೋಬಿಸರು ಈ ಸದವಕಾಶವನ್ನು ಉಪಯೋಗಿಸಿಕೊಂಡು ಬಹಳ ಶ್ರಮ

ಪಟ್ಟಿ. ಖ್ಯಾತ ಅರ್ಥಶಾಸ್ತ್ರಜ್ಞರಾದ ರ್ಯಾಗ್ನರ್ ಫ್ರಿಸ್. ಬೆಟ್ಲೆಲ್‌ಹೀಮ್. ಗಾಡ್‌ವಿನ್, ಡೆಗ್‌ಯಾರ್ ಮುಂತಾದವರ ಸಹಕಾರದಿಂದ ಎರಡನೆಯ ಪಂಚವಾರ್ಷಿಕ ಯೋಜನೆಗೆ ಅಗತ್ಯವಾದ ಚೌಕಟ್ಟನ್ನು ಹಾಕಿಕೊಟ್ಟರು. ನೆಹರೂ ಅವರು 1955ರಲ್ಲಿ ಮಹಾಲನೋಬಿಸರನ್ನು ಆಯೋಜನಾ ಮಂಡಳಿಯ ಸದಸ್ಯರನ್ನಾಗಿ ನೇಮಿಸಿದರು.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಂಡುಬರುವ ಮಹಾಲನೋಬಿಸ್ ಅಭಿವೃದ್ಧಿ ಮಾದರಿಯನ್ನು 'ಚತುರ್ವಲಯ' ಮಾದರಿ ಎಂದು ಕರೆಯಲಾಗಿದೆ. ರಾಷ್ಟ್ರೀಯ ವರಮಾನ ಮತ್ತು ಉದ್ಯೋಗವನ್ನು ಒಂದು ನಿಗದಿಯಾದ ಅವಧಿಯಲ್ಲಿ ಒಂದು ನಿಗದಿಯಾದ ಪರಿಮಾಣದಲ್ಲಿ (5 ವರ್ಷಗಳಲ್ಲಿ) ಹೆಚ್ಚಿಸುವುದು ಈ ಮಾದರಿಯ ಮುಖ್ಯಗುರಿ. ಇದಕ್ಕಾಗಿ ಮಹಾಲನೋಬಿಸರ ಮಾದರಿಯಲ್ಲಿ ಆರ್ಥಿಕತೆಯನ್ನು ನಾಲ್ಕು ವಲಯಗಳಾಗಿ ವಿಂಗಡಿಸಲಾಗಿದೆ: 1 ಬಂಡವಾಳ ಸರಕುಗಳ ವಲಯ, 2 ಕಾರ್ಖಾನೆಯಿಂದ ತಯಾರಾದ ಅನುಭೋಗ ಸರಕು ವಲಯ, 3 ಸಣ್ಣ ಮತ್ತು ಗೃಹೋಪಯೋಗಿ ಕೈಗಾರಿಕೆಗಳ ವಲಯ ಮತ್ತು 4 ಸೇವೋತ್ಪನ್ನ ವಲಯ.

ವಿನಿಯೋಜನದ ಒಟ್ಟು ಹಣವನ್ನು ವಿತರಣೆ ಮಾಡುವಾಗ. ಬಂಡವಾಳ ಸರಕುಗಳನ್ನು ತಯಾರಿಸುವ ಕೈಗಾರಿಕಾ ವಲಯಕ್ಕೆ ಹೆಚ್ಚಿಗೆ ಪ್ರಾಮುಖ್ಯ ಕೊಡಲಾಗಿದೆ. ಒಟ್ಟು ವಿನಿಯೋಜನೆಯಲ್ಲಿ ಮೂರನೆಯ ಒಂದು ಭಾಗವನ್ನು ಈ ಮಾದರಿಯಲ್ಲಿ ಹೊಸದಾಗಿ ಬಂಡವಾಳ ಹೂಡುವುದಕ್ಕಾಗಿ ಮೀಸಲಾಗಿಡಲಾಗಿದೆ. ದೇಶದ ಮುಂದಿನ 20 ಅಥವಾ 25 ವರ್ಷಗಳ ಆರ್ಥಿಕ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ರೀತಿ ವಿತರಣೆ ಮಾಡಲಾಗಿದೆ. ಉಳಿದ ಹಣವನ್ನು ಇನ್ನು ಮೂರು ವಲಯಗಳಿಗೆ ಒಂದು ನಿರ್ದಿಷ್ಟರೀತಿಯಲ್ಲಿ ರಾಷ್ಟ್ರೀಯ ವರಮಾನ ಮತ್ತು ಉದ್ಯೋಗಗಳು ಹೆಚ್ಚುವಂತೆ ಹಂಚಲಾಗುವುದು. ಇದಕ್ಕೆ ಆಧಾರವಾಗಿ ಈ ಮೂರು ವಲಯಗಳಲ್ಲಿ ಕಲ್ಪಿಸಿಕೊಂಡಿರುವ ಬಂಡವಾಳ–ಉತ್ಪತ್ತಿ ಮತ್ತು ಶ್ರಮ–ಉತ್ಪತ್ತಿಗಳ ಪ್ರಮಾಣಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು. ಮಹಾಲನೋಬಿಸರ ಆರ್ಥಿಕ ಅಭಿವೃದ್ಧಿ ಮಾದರಿಗಳನ್ನು ಅವರ ಕೃತಿಗಳಾದ 'ಟಾಕ್ಸ್ ಆನ್ ಪ್ಲ್ಯಾನಿಂಗ್' ಮತ್ತು 'ದಿ ಅಪ್ರೋಚ್ ಆಫ್ ಆಪರೇಷನಲ್ ರಿಸರ್ಚ್ ಟು ಪ್ಲ್ಯಾನಿಂಗ್ ಇನ್ ಇಂಡಿಯ' ಇವುಗಳಲ್ಲಿ ವಿವರವಾಗಿ ಕಾಣಬಹುದು. ಎರಡನೆಯ ಪಂಚವಾರ್ಷಿಕ ಯೋಜನೆ ಯೋಜನಾ ಆಯೋಗದ ನೇತೃತ್ವದಲ್ಲಿ ತಯಾರಾದರೂ, ಅದನ್ನು ಮಹಾಲನೋಬಿಸರ ಹೆಸರಿನಲ್ಲೇ ಪ್ರಕಟಣೆ ಮಾಡಲಾಯಿತು.

ಮಹಾಲನೋಬಿಸರ ಚತುರ್ವಲಯ ಮಾದರಿಯನ್ನು ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ರೂಪಿಸುವಾಗ ಅಡಿಪಾಯವನ್ನಾಗಿ ಇಟ್ಟುಕೊಂಡಿದ್ದರೂ, ಮುಂದಿನ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಯೋಜಕರು ಇದೇ ಮಾದರಿಯನ್ನು ಸ್ವಲ್ಪ ಸಂಸ್ಕರಿಸಿ ಉಪಯೋಗಿಸಿದ್ದಾರೆ. ಇದಲ್ಲದೆ ಈ ಮಾದರಿ ಭಾರತದ ಮತ್ತು ವಿದೇಶಗಳ ಅನೇಕ ತರುಣ ಅರ್ಥಶಾಸ್ತ್ರಜ್ಞರಿಗೆ ಆರ್ಥಿಕ ಅಭಿವೃದ್ಧಿ ಮಾದರಿಗಳ ಬಗ್ಗೆ ಮತ್ತಷ್ಟು ಸಂಶೋಧನೆ ನಡೆಸಲು ಒಂದು ಮೂಲ ಆಧಾರವಾಗಿ ಪರಿಣಮಿಸಿತು.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿ ಕ್ಷೇತ್ರಕ್ಕಿಂತ ಮೂಲ ಮತ್ತು ಭಾರಿ ಕೈಗಾರಿಕೆಗಳ ಅಭಿವೃದ್ಧಿಗಳ ಪ್ರಾಶಸ್ತ್ಯ ಪ್ರಾಪ್ತವಾದದ್ದು ಮಹಾಲನೋಬಿಸರಿಂದಾಗಿಯೇ. ಹಣಕಾಸಿನ ಗುರಿಗಳಿಗಿಂತ ಭೌತಿಕ ಗುರಿಗಳಿಗೆ ಹೆಚ್ಚಿನ ಪ್ರಾಮುಖ್ಯ ನೀಡಿದ್ದೂ ಯೋಜನೆಗೆ ಇವರ ಇನ್ನೊಂದು ಕೊಡುಗೆ. ಜನಜೀವನ ಮಟ್ಟವನ್ನೂ ಉದ್ಯೋಗಗಳನ್ನೂ ಕಲ್ಪಿಸುವ ಅವಕಾಶಗಳನ್ನು ಒಂದೇ ಸಮನೆ ಹೆಚ್ಚಿಸಲು ಯೋಜನೆ ಸಹಕಾರಿಯಾಗಿರಬೇಕೆಂಬುದು ಇವರ ಅಭಿಪ್ರಾಯವಾಗಿತ್ತು. ಈ ಗುರಿಗಳನ್ನು ಮುಟ್ಟಬೇಕಾದರೆ ಏಕಕಾಲದಲ್ಲಿ ಸಣ್ಣ ಮತ್ತು ಗೃಹಕೈಗಾರಿಕೆಗಳನ್ನೂ ಮೂಲ ಬಂಡವಾಳ ಸರಕು ಕೈಗಾರಿಕೆಗಳನ್ನೂ ದೇಶದಲ್ಲಿ ಅಭಿವೃದ್ಧಿಗೊಳಿಸಬೇಕೆಂಬುದು ಇವರ ವಾದವಾಗಿತ್ತು. ಭಾರತದಲ್ಲಿ ನಿರುದ್ಯೋಗ ಸಮಸ್ಯೆ ಬಹಳ ತೀವ್ರವಾಗಿರುವುದರಿಂದ ಪಾಶ್ಚಾತ್ಯ ದೇಶಗಳ ಯೋಜನೆಯ ಪಥ ನಮಗೆ ಈ ಸಮಸ್ಯೆಯನ್ನು ಪರಿಹರಿಸಲು ಹೆಚ್ಚು ಸಹಾಯಕವಾಗುವುದಿಲ್ಲವೆಂಬುದೂ ಇವರ ನಂಬಿಕೆಯಾಗಿತ್ತು. ಆದ್ದರಿಂದಲೇ ಇವರು ಮೂಲಭೂತ ಮತ್ತು ಭಾರಿಯ ಕೈಗಾರಿಕೆಗಳಲ್ಲಿ ಹೆಚ್ಚು ಬಂಡವಾಳ ಹೂಡಬೇಕೆಂದು ಸಲಹೆ ಮಾಡಿದ್ದು. ಏಕೆಂದರೆ ಈ ಬಗೆಯ ಬಂಡವಾಳ ವಿನಿಯೋಜನೆ ತನ್ನಷ್ಟಕ್ಕೆ

ತಾನೆ ಸಣ್ಣ ಗಾತ್ರದ ಮತ್ತು ಗೃಹ ಕೈಗಾರಿಕೆಗಳಿಗೆ ಹೆಚ್ಚಿನ ಬೇಡಿಕೆ ನೀಡಿ ಅವುಗಳ ಅಭಿವೃದ್ಧಿಗೆ ಅವಕಾಶ ನೀಡುತ್ತದೆ. ದೇಶದ ಆದಾಯ ಹೆಚ್ಚಿ ಮುಂದೆ ಬಂಡವಾಳ ವಿನಿಯೋಜನೆಗೆ ಅಗತ್ಯವಾದ ಹಣಕಾಸನ್ನು ಸ್ವದೇಶಿ ಮೂಲಗಳಿಂದ ಪಡೆಯುವ ಶಕ್ತಿಯನ್ನು ಭಾರತ ಆದಷ್ಟು ಬೇಗ ಹೊಂದಬೇಕೆಂಬುದೇ ಇವರ ಆಕಾಂಕ್ಷೆ.

ಯೋಜನೆಯನ್ನು ಕುರಿತಂತೆ ಮಹಾಲನೋಬಿಸರ ಕೆಲವು ಅಭಿಪ್ರಾಯಗಳು ಮತ್ತು ಉದ್ದೇಶಗಳು ಅವರು ಯೋಚಿಸಿದ್ದಷ್ಟು ಫಲಕಾರಿಯಾಗಲಿಲ್ಲ. ಸರ್ಕಾರ ಇವರ ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ಯೋಜನೆಯಲ್ಲಿ ಸರಿಯಾಗಿ ಜಾರಿಗೆ ತರದಿದ್ದುದೂ ಇದಕ್ಕೆ ಒಂದು ಕಾರಣ. ಏನೇ ಆಗಲಿ, ಮಹಾಲನೋಬಿಸರು ಭಾರತದ ಅಭಿವೃದ್ಧಿಗೆ ತಮ್ಮ ಯೋಜನಾ ಮಾದರಿಯ ಮೂಲಕ ಒಂದು ಹೊಸ ಪಥವನ್ನು ತೋರಿಸಿಕೊಟ್ಟರೆಂಬುದನ್ನು ಯಾರೂ ನಿರಾಕರಿಸುವಂತಿಲ್ಲ.

“ನಾನು ಏನು ಎಂಬುದನ್ನು ನಿಷ್ಕೃಷ್ಟವಾಗಿ ಹೇಳುವುದು ನನಗೆ ಕಷ್ಟವಾಗಿದೆ. ಏಕೆಂದರೆ ನಾನು ಎಲ್ಲ ಕ್ಷೇತ್ರಗಳಲ್ಲೂ ಕಾಲಿಡುವವನು. ಆದ್ದರಿಂದ ನನ್ನನ್ನು 'ಮಾಸ್ಟರ್ ಜಾಕ್' ಎಂದು ಕರೆಯಬಹುದು” ಎಂದು ಒಂದು ಕಡೆ ಅವರೇ ಹೇಳಿದ್ದಾರೆ. ಇವರು ಕೆಲಸ ಮಾಡಿದ ಕ್ಷೇತ್ರಗಳಲ್ಲೆಲ್ಲ ಬಹಳ ಮೇಧಾವಿಗಳೆಂದು ಹೆಸರು ಪಡೆದಿದ್ದಾರೆ. ಶಾಸ್ತ್ರೀಯ ರೀತಿಯಲ್ಲಿ ಎಲ್ಲ ಕಾರ್ಯವನ್ನೂ ಇವರು ಸುವ್ಯವಸ್ಥೆಗೊಳಿಸುತ್ತಿದ್ದರು. ಮಹಾವಿದ್ವಾಂಸ, ಸಂಖ್ಯಾಕಲನಶಾಸ್ತ್ರಜ್ಞ, ಅರ್ಥಿಕ ಯೋಜಕ ಮತ್ತು ಮಾನವತಾವಾದಿಯಾಗಿದ್ದ ಪ್ರೊಫೆಸರ್ ಮಹಾಲನೋಬಿಸರು ನಮ್ಮೆಲ್ಲರಿಗೆ ಇಲ್ಲದಂತಾಗಿದ್ದಾರೆ. ಆದರೆ ಅವರು ನಮ್ಮ ದೇಶದ ಸಾಮಾಜಿಕ ಮತ್ತು ಪ್ರಜ್ಞಾವಂತ ಜೀವನದಲ್ಲಿ ಅದ್ವಿತೀಯ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಕೈಹಾಕಿದ ಕ್ಷೇತ್ರಗಳನ್ನೆಲ್ಲಿ ಸಂವೃದ್ಧಿಗೊಳಿಸಿದ ಮಹಾಲನೋಬಿಸರಂಥವರು ಅತ್ಯಂತ ವಿರಳ ಗುಂಪಿಗೆ ಸೇರಿದವರು.

ಬಿ. ರಾಮಚಂದ್ರರಾವ್

ಭಾಷಾಶಾಸ್ತ್ರದಲ್ಲಿ ಪರಿವರ್ತನ ಸಿದ್ಧಾಂತ

ಪ್ರಪಂಚದ ಬೇರೆ ಬೇರೆ ಭಾಷೆಗಳ ವಾಕ್ಯರಚನಾ ವಿಧಾನ ಮತ್ತು ವಾಕ್ಯವಿಶ್ಲೇಷಣೆಗಳ ಬಗೆಗೆ ಪರಿವರ್ತನ ಸಿದ್ಧಾಂತ ಭಾಷಾಶಾಸ್ತ್ರಜ್ಞರಲ್ಲಿ ವಿಶೇಷವಾದ ಆಸಕ್ತಿಯನ್ನು ಕೆರಳಿಸಿದೆ. ಈ ಸಿದ್ಧಾಂತದ ತಂತ್ರಗಳ ಉಪಯುಕ್ತತೆಯನ್ನು ಮನಗಂಡು ಅವುಗಳ ಸಹಾಯದಿಂದ ಬೇರೆ ಬೇರೆ ಭಾಷೆಗಳ ವಾಕ್ಯವಿಶ್ಲೇಷಣೆಗೆ ಭಾಷಾಶಾಸ್ತ್ರಜ್ಞರು ತೊಡಗಿದರು. ಇಂಥ ಸಂಶೋಧನೆಗಳ ಪರಿಣಾಮವಾಗಿ ಅನೇಕ ಹೊಸ ಹೊಸ ವಿಚಾರಗಳು ಬೆಳಕಿಗೆ ಬಂದುವು. ಈಚೆಗೆ ಆ ಸಿದ್ಧಾಂತದ ತಂತ್ರಗಳ ಕೆಲವು ಲೋಪದೋಷಗಳನ್ನು ವಿದ್ವಾಂಸರು ಕಂಡುಕೊಂಡು ಅವುಗಳಲ್ಲಿ ಆಗಬೇಕಾದ ಮಾರ್ಪಾಟುಗಳನ್ನು ಸೂಚಿಸುತ್ತಿದ್ದಾರೆ. ಒಂದು ಭಾಷೆಯ ವ್ಯಾಕರಣ, ಆ ಭಾಷೆಯಲ್ಲಿ ವ್ಯಾಕರಣಸಮ್ಮತವಾದ ವಾಕ್ಯಗಳನ್ನು ಉತ್ಪಾದಿಸುವುದೇ ಅಲ್ಲದೆ ಆ ಭಾಷೆಯ ಜಾಯಮಾನವನ್ನನುಸರಿಸಿ ವಾಕ್ಯದ ಘಟಕಗಳ ಅನ್ಯೋನ್ಯ ರಚನಾತ್ಮಕ ಸಂಬಂಧವನ್ನು ವಿವರಿಸಬೇಕು, ಭಾಷಾವ್ಯವಹಾರಗಳು ವಾಕ್ಯವನ್ನು ಅರ್ಥಮಾಡಿಕೊಳ್ಳುವ ವಿಧಾನವನ್ನು ಸವಿಸ್ತಾರವಾಗಿ ತಿಳಿಸಬೇಕು—ಎಂದು ಈ ಸಿದ್ಧಾಂತ ಒತ್ತಿ ಹೇಳುತ್ತದೆ. ಪರಿವರ್ತನ ಸಿದ್ಧಾಂತದ ಬೆಳಕಿನಲ್ಲಿ ದ್ರಾವಿಡ ಭಾಷೆಗಳಿಗೂ ವ್ಯಾಕರಣಗಳನ್ನು ಬರೆಯುವ ಪ್ರಯತ್ನಗಳು ನಡೆದಿವೆ. ಎ. ಕೆ. ರಾಮಾನುಜನ್ (ಕನ್ನಡ), ಎಂ. ವಿ. ನಾಡಕರ್ಣಿ (ಕನ್ನಡ), ಸಿ. ರಾಮರಾವ್ (ತೆಲುಗು), ಎಸ್ ಅಗಸ್ತ್ಯಲಿಂಗಂ (ತಮಿಳು) ಮೊದಲಾದ ತರುಣ ವಿದ್ವಾಂಸರು ಪರಿವರ್ತನ ಸಿದ್ಧಾಂತವನ್ನನುಸರಿಸಿ ಆಯಾ ಭಾಷೆಗಳಿಗೆ ವ್ಯಾಕರಣಗಳನ್ನು ಬರೆದಿದ್ದಾರೆ. ಭಾಷಾಶಾಸ್ತ್ರದಲ್ಲಿ ಪರಿವರ್ತನ ಸಿದ್ಧಾಂತದ ಬೆಳವಣಿಗೆಯನ್ನು ನಿರೂಪಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಿದೆ.

ಭಾಷಾಶಾಸ್ತ್ರದ ಮುನ್ನಡೆಯಲ್ಲಿ ಬ್ಲೂಮ್‌ಫೀಲ್ಡ್ ಅವರ 'ಲ್ಯಾಂಗ್ವೇಜ್' ಒಂದು ಮೈಲಿಗಲ್ಲು. ಇದು 1933ರಲ್ಲಿ ಪ್ರಕಟವಾಯಿತು. ಅಂದಿನಿಂದ ಸುಮಾರು 1960ರ ವರೆಗಿನ ಕಾಲವನ್ನು ಭಾಷಾಶಾಸ್ತ್ರದ ಇತಿಹಾಸದಲ್ಲಿ ಬ್ಲೂಮ್‌ಫೀಲ್ಡ್ ಯುಗವೆನ್ನಬಹುದು. ಬ್ಲಾಕ್, ಹ್ಯಾರಿಸ್, ಹಾಕೆಟ್ ಮೊದಲಾದವರು ಈ ಯುಗದ ಸುಪ್ರಸಿದ್ಧ ಭಾಷಾಶಾಸ್ತ್ರಜ್ಞರು. ಇವರ ಕಾಲದಲ್ಲಿ ಭಾಷಾಶಾಸ್ತ್ರ ಒಂದು ನೆಲೆಗೆ ಬಂದು ನಿಂತಿತು. ಇತರ ಸಾಮಾಜಿಕ ಶಾಸ್ತ್ರಗಳು ಅಸೂಯೆ ಪಡುವಷ್ಟು ಶಾಸ್ತ್ರೀಯತೆಯನ್ನು ಈ ಯುಗದಲ್ಲಿ ಭಾಷಾಶಾಸ್ತ್ರ ಸಂಪಾದಿಸಿತು. ಈ ಕಾಲದಲ್ಲಿ ಬಂದ ವ್ಯಾಕರಣಗಳು ಅತಿವ್ಯಾಪ್ತಿಯಿಲ್ಲದೆ ಭಾಷೆಗಳನ್ನು ವರ್ಣಿಸುವುದಕ್ಕೆ ಪ್ರಯತ್ನಿಸಿದುವು. ಒಂದು ಭಾಷೆಯಲ್ಲಿ ಬರುವ ನಾಮ, ಕ್ರಿಯೆ, ಅವ್ಯಯಾದಿಗಳು ಆ ಭಾಷೆಯ ಜಾಯಮಾನವನ್ನನುಸರಿಸಿ ನಿರ್ವಚಿಸಲ್ಪಟ್ಟುವು. ಈ ಕಾಲದಲ್ಲೇ ಧ್ವನಿಮ (ಫೋನೀಂ), ರೂಪಿಮ (ಮಾರ್ಫೀಂ), ರಚನೆ ಮೊದಲಾದ ಪದಗಳಿಗೆ ಖಚಿತವಾದ ನಿರ್ವಚನಗಳನ್ನು ಕೊಡುವ ಪ್ರಯತ್ನಗಳು ನಡೆದುವು. ಅಪರಿಚಿತವಾದ ಎಷ್ಟೋ ಭಾಷೆಗಳಿಗೆ ವ್ಯಾಕರಣಗಳು ರಚಿತವಾದುವು. ಈ ವ್ಯಾಕರಣಗಳು ಭಾಷೆಗಳನ್ನು ಕುರಿತು ನಮ್ಮ ಜ್ಞಾನವನ್ನು ವಿಸ್ತೃತಗೊಳಿಸಿದುವು. ಇಂಥ ಚಟುವಟಿಕೆಗಳಿಗೆ ಅಮೆರಿಕ ಖಂಡವೇ ಪ್ರಧಾನ ಕಾರ್ಯಕ್ಷೇತ್ರವಾಗಿತ್ತು. ಇಂದಿನ ಬಹಳ ಮಂದಿ ಅಮೆರಿಕನ್ ಭಾಷಾಶಾಸ್ತ್ರಜ್ಞರು ಕನಿಷ್ಠ ಯಾವುದಾದರೂ ಒಂದು ಅಮೆರಿಕನ್ ಇಂಡಿಯನ್ ಭಾಷೆಯ ಮೇಲೆ ಪರಿಶೋಧನೆ ನಡೆಸಿದವರೇ ಆಗಿದ್ದಾರೆ. ನೂರಾರು ಅಮೆರಿಕನ್ ಇಂಡಿಯನ್ ಭಾಷೆಗಳ ಮೇಲೆ ನಡೆದ

ಪರಿಶೋಧನೆ ಭಾಷಾಶಾಸ್ತ್ರದ ಅಭಿವೃದ್ಧಿಗೆ ವಿಶೇಷ ಪ್ರೇರಣೆಯನ್ನು ನೀಡಿದೆ. ಸಾಮಾನ್ಯವಾಗಿ ಇಂಥ ಭಾಷಾ ಪರಿಶೋಧನೆ ಈ ವಿಧವಾಗಿ ಸಾಗುತ್ತಿತ್ತು:

ಒಬ್ಬ ಪರಿಶೋಧಕ ಒಂದು ಭಾಷೆಯನ್ನಾಡುವವನೊಡನೆ ಮಾತನಾಡುತ್ತ ಅವನಿಂದ ಕೆಲವು ವಾಕ್ಯಗಳನ್ನು ಶೇಖರಿಸುತ್ತಾನೆ. ಇದನ್ನೇ ಕಾರ್ಪಸ್ ಎನ್ನುತ್ತಾರೆ. ಈ ವಾಕ್ಯಗಳನ್ನು ಟೇಪ್ ರೆಕಾರ್ಡರುಗಳ ನೆರವಿನಿಂದಲೂ ಶೇಖರಿಸಬಹುದು. ಇವುಗಳನ್ನು ಪರಿಶೋಧಕ ಬೇರೆಯೇ ಕಾಗದಗಳ ಮೇಲೆ ಧ್ವನಿಲಿಪಿಯಲ್ಲಿ ಬರೆದುಕೊಳ್ಳುತ್ತಾನೆ. ಅನಂತರ ಈ ಧ್ವನಿಗಳನ್ನು ವರ್ಣಸಮೂಹಗಳಾಗಿ ಬೇರ್ಪಡಿಸುತ್ತಾನೆ. ಅನಂತರ ರೂಪಿಮ ನಿರ್ಣಯ. ರಚನೆ ಮೊದಲಾದವನ್ನು ಕಂಡುಕೊಳ್ಳುತ್ತಾನೆ. ಇವಾದ ಮೇಲೆ ಇವೆಲ್ಲವನ್ನೂ ವ್ಯಾಕರಣ ರೂಪದಲ್ಲಿ ಗ್ರಂಥಸ್ಥ ಮಾಡುತ್ತಾನೆ. ಈ ಮಧ್ಯೆ ಸಂದೇಹಗಳು ತಲೆದೋರಿದರೆ ಇನ್ನೊಮ್ಮೆ ಆ ಭಾಷೆಯನ್ನಾಡುವವನನ್ನು ಸಂದರ್ಶಿಸಿ ತನ್ನ ಸಂದೇಹಗಳನ್ನು ಪರಿಹರಿಸಿಕೊಳ್ಳುತ್ತಾನೆ. ಹೀಗೆ ಪರಿಶೋಧಕ ಶೇಖರಿಸಿದ ವಾಕ್ಯಗಳನ್ನೆಲ್ಲ ವ್ಯಾಕರಣಕ್ಕೆ ಅಳವಡಿಸಿಕೊಳ್ಳುತ್ತಾನೆ. ಸಾಮಾನ್ಯವಾಗಿ ಈ ವ್ಯಾಕರಣ ಅವನು ಶೇಖರಿಸಿದ ಆ ವಾಕ್ಯಗಳಿಗೇ ಪರಿಮಿತವಾಗಿರುತ್ತದೆ. ಅಂದಿನ ವೈಯಾಕರಣರ ಲಕ್ಷ್ಯ ವಿಧಾಯಕವಾದದ್ದಲ್ಲ. ವೈಜ್ಞಾನಿಕ ನಿಷ್ಠುರತೆಯೇ ಅವರ ಪ್ರಧಾನ ಲಕ್ಷ್ಯ.

ಸುಮಾರು ಇಪ್ಪತ್ತೈದು ಮೂವತ್ತು ವರ್ಷಗಳ ಕಾಲ ಈ ಪದ್ಧತಿ ಅವಿಚ್ಛಿನ್ನವಾಗಿ ಸಾಗಿತು. ಆದರೆ ಈ ಪದ್ಧತಿಯಲ್ಲಿ ಕೆಲವು ಮೂಢ ಸಿದ್ಧಾಂತಗಳು ಕೂಡ ನೆಲೆಗೊಂಡುವು: ಪರಿಶೋಧಕ ತಾನು ಶೇಖರಿಸಿದ ವಾಕ್ಯಗಳನ್ನು ಮೀರಿ ಏನನ್ನೂ ಹೇಳಬಾರದೆಂದೂ ವ್ಯಾಕರಣದಲ್ಲಿ ವರ್ಣವಿಭಾಗ. ಪದವಿಭಾಗ. ವಾಕ್ಯವಿಭಾಗ ಬೇರೆ ಬೇರೆ ಇರಬೇಕೆಂದೂ ವರ್ಣನಿರ್ಣಯಕ್ಕೆ ರೂಪಿಮ. ವಾಕ್ಯನಿರ್ಮಾಣಗಳೊಡನೆ ಸಂಬಂಧವಿಲ್ಲವೆಂದೂ ಭಾಷೆಗಳ ಮಧ್ಯೆ ಭೇದ ಅಪಾರವಾಗಿದೆಯೆಂದೂ ನಾಮ, ಆಖ್ಯಾತ, ವಿಶೇಷಣ ಮೊದಲಾದವನ್ನು ಆಯಾ ಭಾಷೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ನಿರ್ಧರಿಸಬೇಕೆಂದೂ ಭಾಷೆಯ ಭಿನ್ನ ಪ್ರಯೋಜನಗಳನ್ನನುಸರಿಸಿ ಭಿನ್ನ ವ್ಯಾಕರಣಗಳು ಇರಬಹುದೆಂದೂ ಅವುಗಳಲ್ಲಿ ಒಂದಕ್ಕಿಂತ ಇನ್ನೊಂದು ಶ್ರೇಷ್ಠವಾಗಿದೆ ಎನ್ನುವುದಕ್ಕೆ ನಮಗೆ ಹಕ್ಕಿಲ್ಲವೆಂದೂ ಭಾಷಾವ್ಯವಹಾರಜ್ಞ ಮಾತನಾಡಿದ್ದೆಲ್ಲ ವ್ಯಾಕರಣ ಸಮ್ಮತವಾದುದೆಂದೂ ಅವೆಲ್ಲ ವ್ಯಾಕರಣ ವಿಷಯಗಳೆಂದೂ ಧ್ವನಿಮಗಳನ್ನು, ರೂಪಿಮಗಳನ್ನು, ರಚನೆಗಳನ್ನು ಕೆಲವು ನಿರ್ದಿಷ್ಟ ಪದ್ಧತಿಗಳನ್ನನುಸರಿಸಿದರೆ ಕಂಡುಕೊಳ್ಳಬಹುದೆಂದೂ ಆ ಪದ್ಧತಿಗಳನ್ನು ಕಂಡುಹಿಡಿಯುವುದೇ ಭಾಷಾಶಾಸ್ತ್ರದ ಲಕ್ಷ್ಯವೆಂದೂ ಆಗಿನ ಭಾಷಾಶಾಸ್ತ್ರಜ್ಞರು ಭಾವಿಸಿದ್ದರು. ಈ ನಂಬಿಕೆಗಳು ಅಂದಿನ ಭಾಷಾಶಾಸ್ತ್ರಜ್ಞರೆಲ್ಲರಿಗೂ ಇತ್ತೆಂದು ಇಲ್ಲಿ ಅರ್ಥವಲ್ಲ. ಅಂದಿನ ಶಾಸ್ತ್ರಜ್ಞರಲ್ಲಿ ಬಹಳ ಮಟ್ಟಿಗೆ ವ್ಯಾಪ್ತಿಯಲ್ಲಿದ್ದ ನಂಬಿಕೆಗಳಲ್ಲಿ ಮೇಲಿನವು ಕೆಲವು. ಇವುಗಳಲ್ಲಿ ಕೆಲವನ್ನು ಆಗಾಗ ವಿರೋಧಿಸಿದವರೂ ಇಲ್ಲದೆ ಹೋಗಿಲ್ಲ.

ಧ್ವನಿಮ ನಿರ್ಣಯಕ್ಕೆ ವ್ಯಾಕರಣದಲ್ಲಿ ಇತರ ಭಾಗಗಳ ಅಗತ್ಯವಿದೆಯೆಂಬುದಾಗಿ ಪೈಕ್ ಎಂಬ ವಿದ್ವಾಂಸ ಪ್ರತಿಪಾದಿಸಿದ. ಪರಿಶೋಧಕ ಶೇಖರಿಸಿದ ವಾಕ್ಯಗಳನ್ನು ಪರಿಷ್ಕರಿಸಿಕೊಳ್ಳಬೇಕಾದ ಅಗತ್ಯವಿದೆಯೆಂದು ಹಾಕೆಟ್ ಎಂಬ ವಿದ್ವಾಂಸ ಮನಗಂಡ. ಆದರೂ ಒಟ್ಟಿನಲ್ಲಿ ಆ ಕಾಲದ ಭಾಷಾಶಾಸ್ತ್ರಜ್ಞರಲ್ಲಿ ಮೇಲೆ ಹೇಳಿದ ನಂಬಿಕೆಗಳಿದ್ದುವು.

ಚಾಮ್ಸ್ಕಿ ಕ್ರಾಂತಿ

ಇವುಗಳ ಮೇಲೆಲ್ಲ ಮಾರ್ಪಾಟು ತಂದಾತ ನೋಮ್ ಚಾಮ್ಸ್ಕಿ. ಈತ ಜೆಲಿಗ್ ಹ್ಯಾರಿಸನ ಶಿಷ್ಯ. ವಾಕ್ಯಗಳ ಪರಸ್ಪರ ಸಂಬಂಧವನ್ನು ವ್ಯಾಕರಣ ನಿರೂಪಿಸಬೇಕಾದ ಅವಶ್ಯಕತೆಯಿದೆ ಎಂಬುದನ್ನು ಹ್ಯಾರಿಸ್ ಮನಗಂಡಿದ್ದ. ಅದೇ ವಿಷಯದ ಮೇಲೆ ಆತ ಪರಿಶೋಧನೆ ನಡೆಸುತ್ತಿದ್ದ. ಕೆಲವು ಕಾಲ ಅದೇ ವಿಷಯದ ಮೇಲೆ ಅವರಿಬ್ಬರೂ ಸೇರಿ ಪರಿಶೋಧನೆ ನಡೆಸಿದರು. 1955ರಲ್ಲಿ ಹ್ಯಾರಿಸನ ನಿರ್ದೇಶನದಲ್ಲಿ ಚಾಮ್ಸ್ಕಿ 'ದಿ ಲಾಜಿಕಲ್ ಸ್ಟ್ರಕ್ಚರ್ ಆಫ್ ಲಿಂಗ್ವಿಸ್ಟಿಕ್ ಥಿಯೊರಿ' ಎಂಬ ಸಿದ್ಧಾಂತ ಗ್ರಂಥವನ್ನು ಬರೆದು ಡಾಕ್ಟೊರೇಟ್ ಪಡೆದ. ಅದರಲ್ಲಿರುವ ಕೆಲವು ಅಭಿಪ್ರಾಯಗಳನ್ನು ಸಂಗ್ರಹಿಸಿ 1956ರಲ್ಲಿ 'ತ್ರೀ ಮಾಡೆಲ್ಸ್ ಫಾರ್ ದಿ ಡಿಸ್ಕ್ರಿಪ್ಷನ್ ಆಫ್ ಲ್ಯಾಂಗ್ವೇಜ್' ಎಂಬ ಲೇಖನವನ್ನು ಪ್ರಕಟಿಸಿದ. ಈ ಅಭಿಪ್ರಾಯಗಳನ್ನು ಇನ್ನೂ ಸ್ವಲ್ಪ ವಿಶದೀಕರಿಸಿ 1957ರಲ್ಲಿ 'ಸಿಂಟ್ಯಾಕ್ಟಿಕ್ ಸ್ಟ್ರಕ್ಚರ್ಸ್' ಎಂಬ ಒಂದು ಚಿಕ್ಕ ಪುಸ್ತಕವನ್ನು

ಪ್ರಕಟಿಸಿದ. ಈ ಪುಸ್ತಕ ಭಾಷಾಶಾಸ್ತ್ರ ವಿದ್ಯಾರ್ಥಿಗಳನ್ನು ಬಹು ಬೇಗನೆ ಆಕರ್ಷಿಸಿತು. ಅಂದಿನಿಂದ ಇಂದಿನ ವರೆಗೂ ಎಷ್ಟೋ ಪುಸ್ತಕಗಳನ್ನು. ಪ್ರಬಂಧಗಳನ್ನು ಚಾಮ್‌ಸ್ಕಿ ಬರೆದಿದ್ದಾನೆ. ಸಂಶೋಧನೆಗಳು ಮುಂದುವರಿದಂತೆ ಅವನ ಅಭಿಪ್ರಾಯಗಳು ಕೂಡ ಮಾರ್ಪಾಟನ್ನು ಪಡೆಯುತ್ತ ಇವೆ. 1965ರಲ್ಲಿ ಅವನು ಪ್ರಕಟಿಸಿದ 'ಆಸ್ಪೆಕ್ಟ್ಸ್ ಆಫ್ ದಿ ಥಿಯೊರಿ ಆಫ್ ಸಿಂಟ್ಯಾಕ್ಸ್' ಎಂಬ ಗ್ರಂಥದಲ್ಲಿ ಭಾಷಾಶಾಸ್ತ್ರದ ಗುರಿಯನ್ನು ಕುರಿತು. ವ್ಯಾಕರಣ ರೀತಿಗಳನ್ನು ಕುರಿತು ವಿಪುಲವಾದ ಚರ್ಚೆ ಇದೆ. ಈ ಗ್ರಂಥದಲ್ಲಿ ಅವನು ಅಲ್ಲಿಯ ವರೆಗೆ ಭಾಷಾಶಾಸ್ತ್ರದಲ್ಲಿ ನಾಟಿಹೋಗಿದ್ದ ಮೂಢ ವಿಶ್ವಾಸಗಳನ್ನು ತೀವ್ರವಾಗಿ ಖಂಡಿಸಿದ. ಭಾಷಾಶಾಸ್ತ್ರದ ಲಕ್ಷ್ಯಗಳನ್ನು ಪುನರ್ನಿರ್ವಚಿಸಿದ. ಭಾಷಾಶಾಸ್ತ್ರದ ಪ್ರವಾಹ ಗತಿಯನ್ನು ಇನ್ನೊಂದು ಪಕ್ಕಕ್ಕೆ ತಿರುಗಿಸಿದ. ಇದನ್ನೇ ಭಾಷಾಶಾಸ್ತ್ರದಲ್ಲಿ ಚಾಮ್‌ಸ್ಕಿ ಕ್ರಾಂತಿ ಎನ್ನುತ್ತಾರೆ. ಇತರ ಶಾಸ್ತ್ರಗಳಲ್ಲಿ ನ್ಯೂಟನ್. ಐನ್‌ಸ್ಟೈನ್. ಫ್ರಾಯ್ಡ್. ಪಾವ್ಲಾವ್. ಮಾರ್ಗನ್. ಕಾರ್ಲ್ ಮಾರ್ಕ್ಸ್‌ರಂಥ ಶಾಸ್ತ್ರವೇತ್ತರಿಗೆ ಇರುವ ಗೌರವ ಚಾಮ್‌ಸ್ಕಿಗೆ ಭಾಷಾಶಾಸ್ತ್ರದಲ್ಲಿದೆ. ಇವರೆಲ್ಲರೂ ಆಯಾ ಶಾಸ್ತ್ರಗಳು ಒಂದು ಹೆಜ್ಜೆ ಮುಂದಿಡುವಂತೆ ಮಾಡಿದವರು.

ಇದಕ್ಕಿಂತ ಹಿಂದೆ ಭಾಷಾಶಾಸ್ತ್ರ ಇತರ ಶಾಸ್ತ್ರಗಳಿಂದ ಹೆಚ್ಚಾಗಿ ವಿಷಯಗ್ರಹಣ ಮಾಡುತ್ತಿತ್ತು. ಚಾಮ್‌ಸ್ಕಿಯ ಆಗಮನವಾದ ಮೇಲೆ ಭಾಷಾಶಾಸ್ತ್ರ ಇತರ ಶಾಸ್ತ್ರಗಳ ಮೇಲೆ ತನ್ನ ಪ್ರಭಾವವನ್ನು ಬೀರಲು ಸಮರ್ಥವಾಯಿತು. ಮುಖ್ಯವಾಗಿ ತತ್ತ್ವಶಾಸ್ತ್ರದ ಮೇಲೆ, ಮನಶ್ಶಾಸ್ತ್ರದ ಮೇಲೆ ಈತನ ಅಭಿಪ್ರಾಯಗಳ ಪ್ರಭಾವ ಅಪರಿಮಿತವಾಗಿದೆ. ಮಾನವ ವರ್ತನೆ ಮತ್ತು ಇತರ ಪ್ರಾಣಿವರ್ಗಗಳ ವರ್ತನೆಗಳ ಮಧ್ಯೆ ಗುಣಾತ್ಮಕವಾದ ಭೇದವಿದೆಯೆಂದೂ ಇತರ ಪ್ರಾಣಿಗಳ ವರ್ತನೆಯ ಮೇಲೆ ನಡೆಸಿದ ಸಂಶೋಧನೆ ಮಾನವ ವರ್ತನೆಯನ್ನು ಕುರಿತು ಹೇಳಲಾರದೆಂದೂ ಈತ ಪ್ರತಿಪಾದಿಸಿದ ಸಿದ್ಧಾಂತ ಮನಶ್ಶಾಸ್ತ್ರದಲ್ಲಿ ಕೂಡ ಸಂಚಲನೆಯನ್ನುಂಟುಮಾಡಿದೆ. ಚಾಮ್‌ಸ್ಕಿಗೆ ಗಣಿತಶಾಸ್ತ್ರ. ತರ್ಕಶಾಸ್ತ್ರ. ತತ್ತ್ವಶಾಸ್ತ್ರ. ಮನಶ್ಶಾಸ್ತ್ರಗಳಲ್ಲಿ ವಿಶೇಷವಾದ ಪಾಂಡಿತ್ಯವಿದೆ. 1967ರಿಂದ ಈತ ರಾಜಕೀಯ ವಿಷಯಗಳ ಮೇಲೆ ಕೂಡ ಸಂಶೋಧನ ಪ್ರಬಂಧಗಳನ್ನು ಬರೆಯುತ್ತಿದ್ದಾನೆ. ಇವನ ರಾಜಕೀಯ ಪ್ರಬಂಧಗಳನ್ನೆಲ್ಲ ಒಟ್ಟು ಸೇರಿಸಿ 1969ರಲ್ಲಿ ಒಂದು ಪುಸ್ತಕ ಪ್ರಕಟಿಸಲಾಯಿತು. ಇವನ ರಾಜಕೀಯಾಭಿಪ್ರಾಯಗಳಿಗೂ ಭಾಷಾಶಾಸ್ತ್ರ ಸಿದ್ಧಾಂತಗಳಿಗೂ ಒಂದೇ ತಾತ್ತ್ವಿಕ ದೃಕ್ಪಥ ಮೂಲವೆಂದು ಜಾನ್ ಲಯನ್ಸ್ ಎಂಬ ಭಾಷಾಶಾಸ್ತ್ರ ಪಂಡಿತನ ಅಭಿಪ್ರಾಯ. ಮಾನವರೆಲ್ಲರೂ ಒಂದೇ ಎಂದೂ ಮಾನವ ಜಾತಿಯನ್ನು ಇತರ ಜಂತುಗಳಿಗಿಂತ. ಯಂತ್ರಗಳಿಗಿಂತ ಭಿನ್ನವಾಗಿ ತಿಳಿಯಬೇಕೆಂದೂ ರಾಜಕೀಯದಲ್ಲೂ ಸಾಮಾಜಿಕ ಶಾಸ್ತ್ರಗಳಲ್ಲಿಯೂ ಮಾನವತ್ವಕ್ಕೇ ಪ್ರಾಧಾನ್ಯ ಕೊಡಬೇಕೆಂದೂ ಇವನ ವಾದ.


ಭಾಷೆ, ವ್ಯಾಕರಣ, ಭಾಷಾಸಿದ್ಧಾಂತ

ಒಂದು ಭಾಷೆಗೆ ರಚಿಸಿದ ವ್ಯಾಕರಣ ಆ ಭಾಷೆಯನ್ನು ಕುರಿತ ಸಿದ್ಧಾಂತ. ಸರ್ವಭಾಷೆಗಳಿಗೂ ಸರ್ವಭಾಷಾವ್ಯಾಕರಣಗಳಿಗೂ ಸಂಬಂಧಿಸಿದ ಸಿದ್ಧಾಂತ ಭಾಷಾಸಿದ್ಧಾಂತ. ಇದೇ ಭಾಷಾಶಾಸ್ತ್ರ. ಭಾಷಾಸಿದ್ಧಾಂತ. ವ್ಯಾಕರಣಗಳು ಪರಸ್ಪರ ಅಭಿವೃದ್ಧಿಗೆ ಪೋಷಕಗಳಾಗಿವೆ. ಭಿನ್ನ ಭಾಷೆಗಳಿಗೆ ರಚಿಸುವ ವ್ಯಾಕರಣಗಳು ಭಾಷಾಶಾಸ್ತ್ರ ನಿರ್ದೇಶಿಸುವ ಪದ್ಧತಿಯಲ್ಲಿರುತ್ತವೆ. ಭಿನ್ನ ಭಾಷೆಗಳ ಮೇಲೆ ನಡೆಸುವ ಪರಿಶೋಧನೆಗಳಿಂದಾಗಿ ಮಾನವಭಾಷೆಗಳನ್ನು ಕುರಿತು ನಮ್ಮ ಅವಗಾಹನೆ ಹೆಚ್ಚಿ ಭಾಷಾಶಾಸ್ತ್ರ ಸಿದ್ಧಾಂತಗಳು ವಿಸ್ತೃತವೂ ಪಟಿಷ್ಠವೂ ಆಗುತ್ತವೆ. ಭಾಷಾಶಾಸ್ತ್ರ ವ್ಯಾಕರಣಗಳ ವಿಷಯದಲ್ಲಿ ಮಾಡಬೇಕಾದ ಕೆಲಸಗಳನ್ನು ಕುರಿತು ಚಾಮ್‌ಸ್ಕಿಗೂ ಉಳಿದ ಶಾಸ್ತ್ರಜ್ಞರಿಗೂ ಅಭಿಪ್ರಾಯ ಭೇದಗಳಿವೆ.

ಭಾಷಾಶಾಸ್ತ್ರದ ಗುರಿಗಳು

ಒಂದು ಭಾಷೆಯಲ್ಲಿ ವಾಕ್ಯಗಳು ಇಂತಿಷ್ಟೇ ಇವೆಯೆಂದು ಯಾರೂ ಹೇಳಲಾರರು. ಪರಿಮಿತವಾದ ವಾಕ್ಯಸಮುದಾಯವನ್ನು ಆಧಾರ ಮಾಡಿಕೊಂಡು ಅವನ್ನು ಅಪರಿಮಿತ ಸಂಖ್ಯೆಯಲ್ಲಿರುವ ವಾಕ್ಯಗಳಿಗೆ ಅನುವರ್ತಿಸುವ ಹಾಗೆ ವ್ಯಾಕರಣ ಲಕ್ಷಣಗಳು ಹೇಳುತ್ತವೆ. ಈ ಸಂದರ್ಭದಲ್ಲಿ ಭಾಷಾಶಾಸ್ತ್ರ ಮಾಡ

ಬೇಕಾದ ಕೆಲಸಗಳು ಇವು: 1 ಭಾಷೆಯಲ್ಲಿರುವ ವಾಕ್ಯಸಮುದಾಯವನ್ನು ವ್ಯಾಕರಣಕ್ಕೆ ಅಳವಡಿಸುವ ಪದ್ಧತಿಗಳನ್ನು ಶಾಸ್ತ್ರ ಒದಗಿಸಬೇಕು. ಎಂದರೆ ಒಂದು ಭಾಷೆಯಲ್ಲಿರುವ ಧ್ವನಿಗಳನ್ನು, ಧ್ವನಿಮಾಗಳನ್ನು, ರೂಪಿಮಾಗಳನ್ನು, ರಚನೆಗಳನ್ನು ಕಂಡುಕೊಳ್ಳುವುದಕ್ಕೆ ನೆರವಾಗುವ ಯಾಂತ್ರಿಕವಾದ ಪದ್ಧತಿಗಳನ್ನು ಭಾಷಾಶಾಸ್ತ್ರ ಒದಗಿಸಿಕೊಡಬೇಕು. ಎಂದರೆ ಈ ಪದ್ಧತಿಗಳನ್ನು ಕ್ರಮವಾಗಿ ಅನುಸರಿಸಿದರೆ ನಮಗೆ ವ್ಯಾಕರಣವನ್ನು ಅಪ್ರಯತ್ನವಾಗಿ ಬರೆಯಲು ಸಾಧ್ಯವಾಗುವಂತಿರಬೇಕು. ಇದನ್ನೇ ಆವಿಷ್ಕಾರ ವಿಧಾನ (ಡಿಸ್ಕವರಿ ಪ್ರೊಸೀಜರ್) ಎನ್ನುತ್ತಾರೆ. 2 ವ್ಯಾಕರಣ ಹೇಗೋ ಸಿದ್ಧವಾಯಿತು ಎಂದುಕೊಳ್ಳೋಣ. ಆಗ ಈ ವ್ಯಾಕರಣ ಆ ಭಾಷೆಗೆ ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ಭಾಷಾಶಾಸ್ತ್ರ ನಿರ್ಣಯಿಸಬೇಕು. ಇದಕ್ಕೆ ವ್ಯಾಕರಣ, ವಾಕ್ಯಸಮುದಾಯ ಸಿದ್ಧವಾಗಿರಬೇಕು. ಆ ವ್ಯಾಕರಣ ಭಾಷೆಗೆ ಸರಿಯಾಗಿ ಇದೆಯೋ ಇಲ್ಲವೋ ಎಂಬುದನ್ನು ಆಗ ಶಾಸ್ತ್ರ ಹೇಳಬೇಕು. ಇದನ್ನೇ ನಿರ್ಣಯ ವಿಧಾನ (ಡಿಸಿಷನ್ ಪ್ರೊಸೀಜರ್) ಎನ್ನುತ್ತಾರೆ. 3 ಒಂದು ಭಾಷೆಗೆ ಕೆಲವು ವ್ಯಾಕರಣಗಳು ತಯಾರಾಗಿವೆಯೆಂದು ತಿಳಿದುಕೊಳ್ಳೋಣ. ಈ ಭಿನ್ನ ವ್ಯಾಕರಣಗಳು ಒಂದೇ ಭಾಷೆಯನ್ನು ಕುರಿತ ಭಿನ್ನ ಸಿದ್ಧಾಂತಗಳು. ಇವುಗಳಲ್ಲಿ ಯಾವುದು ಉತ್ತಮವಾದುದೆಂಬುದನ್ನು ಶಾಸ್ತ್ರ ಸ್ವಯಮೇವ ಹೇಳುವಂತಿರಬೇಕು. ಇದನ್ನೇ ಮೌಲ್ಯೀಕರಣ ಪದ್ಧತಿ (ಇವಾಲ್ಯುಯೇಷನ್ ಪ್ರೊಸೀಜರ್) ಎನ್ನುತ್ತಾರೆ. ಇದನ್ನು ಹೀಗೆ ನಿರೂಪಿಸಬಹುದು:



ಈ ಚಿತ್ರಗಳ ಮಧ್ಯದಲ್ಲಿರುವ ಚೌಕವನ್ನು ಒಂದು ಯಂತ್ರವಾಗಿ ಊಹಿಸಬಹುದು. ಎಡಪಕ್ಕದಲ್ಲಿರುವುದನ್ನು ಆದಾನವನ್ನಾಗಿ ಭಾವಿಸಬಹುದು. ಬಲಪಕ್ಕದಲ್ಲಿರುವುದನ್ನು ಯಂತ್ರ ಉತ್ಪತ್ತಿ ಮಾಡಿದ ಸಿದ್ಧವಸ್ತುವನ್ನಾಗಿ, ಪ್ರದಾನವನ್ನಾಗಿ ಭಾವಿಸಬಹುದು. ಈ ಯಂತ್ರವೇ ಭಾಷಾಶಾಸ್ತ್ರ.

ಮೇಲೆ ಹೇಳಿದ ಮೂರು ಕೆಲಸಗಳಲ್ಲಿ ಮೊದಲಿನದು ಬಲವತ್ತಮವಾದುದು. ಎರಡನೆಯದು ಬಲವತ್ತರವಾದುದು. ಮೂರನೆಯದು ಬಲಹೀನವಾದುದು. ನಿಜವಾಗಿ ನೋಡಿದರೆ ಶಾಸ್ತ್ರ ಮಾಡಬೇಕಾದುದು ಮೂರನೆಯದನ್ನೆ. ಮೊದಲ ಎರಡು ಕೆಲಸಗಳನ್ನು ಶಾಸ್ತ್ರ ಮಾಡಬೇಕೆಂದು ನಿರೀಕ್ಷಿಸುವುದು ಸರಿಯಲ್ಲ. ಯಾವ ಶಾಸ್ತ್ರವಾದರೂ ಎರಡು ಆಧಾರಕಲ್ಪನೆಗಳಲ್ಲಿ ಯಾವುದು ಶ್ರೇಷ್ಠವೋ ಅಷ್ಟನ್ನು ಹೇಳಬಲ್ಲದು. ಬಹಳ ಪ್ರಗತಿಯನ್ನು ಸಾಧಿಸಿದ ಭೌತಶಾಸ್ತ್ರಾದಿಗಳಲ್ಲಿ ಕೂಡ ಒಂದು ಪದಾರ್ಥದ ಗುಣಾತಿಶಯಗಳನ್ನು ಕಂಡುಕೊಳ್ಳುವುದಕ್ಕೆ ಸ್ವಯಂಚಲಿ ಸೂತ್ರಗಳು ಲಭಿಸಲಾರವು. ಇಂಥಿಂಥ ಪದ್ಧತಿಗಳನ್ನನುಸರಿಸಿ ಪ್ರಯೋಗಶಾಲೆಯಲ್ಲಿ ಪರಿಶೋಧನೆ ನಡೆಸಿದರೆ ಪರಮಾಣುಗಳಲ್ಲಿ ಎಲೆಕ್ಟ್ರಾನ್‌ಗಳು ಒಂದು ಕೇಂದ್ರದ ಸುತ್ತು ಪರಿಭ್ರಮಣ ಮಾಡುತ್ತವೆ ಎಂಬ ಸಂಗತಿ ತಿಳಿಯುತ್ತದೆಂದು

ಭೌತಶಾಸ್ತ್ರ ಹೇಳುವುದಿಲ್ಲ. ಹಾಗೆಯೇ ಯಾವುದೋ ನಿಯಮಗಳನ್ನು ಅನುಸರಿಸಿ ಪರಿಶೋಧನೆ ನಡೆಸಿದರೆ ಆ ಭಾಷೆಗೆ ಸರಿಯಾದ ವ್ಯಾಕರಣ ಬರುತ್ತದೆಂಬುದಾಗಿ ಭಾಷಾಶಾಸ್ತ್ರ ಹೇಳಬೇಕಾಗಿಲ್ಲ. ಅಂಥ ಸ್ವಯಂಚಲಿ ಪದ್ಧತಿಗಳನ್ನು ತಯಾರುಮಾಡುವುದು ಕೂಡ ಸಾಧ್ಯವಿಲ್ಲ. ನ್ಯೂಟನ್ ಗತಿಸೂತ್ರಗಳನ್ನಾಗಲಿ, ಐನ್‌ಸ್ಟೈನ್ ಸಾಪೇಕ್ಷ ಸಿದ್ಧಾಂತವನ್ನಾಗಲಿ ಒಂದು ನಿರ್ಣೀತ ಯಾಂತ್ರಿಕ ಪದ್ಧತಿಯನ್ನನುಸರಿಸಿ ಆವಿಷ್ಕರಿಸಲಿಲ್ಲ. ಅದು ಪೂರ್ತಿಯಾಗಿ ಅವರ ವೈಯಕ್ತಿಕ ಪ್ರತಿಭಾಮೂಲವಾದುದು. ಶಾಸ್ತ್ರಜ್ಞ ಒಂದು ಸಿದ್ಧಾಂತವನ್ನು ಪ್ರತಿಪಾದಿಸುತ್ತಾನೆ. ಅದಕ್ಕಿಂತ ಮೊದಲಿದ್ದ ಸಿದ್ಧಾಂತಗಳಿಗಿಂತ ಇದು ಉತ್ತಮವಾದುದೊ ಅಲ್ಲವೊ ಎಂಬುದನ್ನು ಶಾಸ್ತ್ರ ನಿರ್ಣಯಿಸುತ್ತದೆ. ಆ ಸಿದ್ಧಾಂತ ಶಾಸ್ತ್ರಜ್ಞನ ಮನಸ್ಸಿನಲ್ಲಿ ಯಾವಾಗಲೊ ಮಿಂಚಿನಂತೆ ತೋರಿಬರುತ್ತದೆ. ಅನಂತರವೇ ಅವಕ್ಕೆ ಸಂಬಂಧಿಸಿದ ಪ್ರಯೋಗಗಳು ಮತ್ತು ಸಾಕ್ಷ್ಯಗಳು.

ಚಾಮ್‌ಸ್ಕಿಗೆ ಪೂರ್ವದ ಭಾಷಾಶಾಸ್ತ್ರಜ್ಞರು ಈ ವಿಷಯವನ್ನು ಮರೆತು ಒಂದು ಭಾಷೆಗೆ ವ್ಯಾಕರಣ ರಚಿಸಲು ಸ್ವಯಂಚಲಿ ಪದ್ಧತಿಗಳನ್ನು ತಯಾರುಮಾಡುವುದಕ್ಕೆ ಪ್ರಯತ್ನಿಸಿದರು. ಒಂದು ಭಾಷೆಯ ಧ್ವನಿಸಾಮ್ಯ, ಪೂರಕಪ್ರಸಾರ ಮೊದಲಾದ ನಿಯಮಾವಳಿಗಳನ್ನು ಕ್ರಮವಾಗಿ ಅನುಸರಿಸಿ ಆ ಭಾಷೆಯ ಧ್ವನಿಮಗಳನ್ನು ಕಂಡುಕೊಳ್ಳಬಹುದೆಂದು ಅವರು ಭಾವಿಸಿದರು. ಈ ಪದ್ಧತಿಗಳಿಂದಾಗಿ ಒಂದೇ ಭಾಷೆಗೆ ಎರಡು ಮೂರು ರೀತಿಯ ಧ್ವನಿಮ ಸಮಾಮ್ನಾಯಗಳು ತಯಾರಾದುವು. ಅವುಗಳಲ್ಲಿ ಯಾವುದು ಉತ್ತಮವಾದುದೆಂಬುದನ್ನು ನಿರ್ಣಯಿಸುವ ಕೆಲಸ ಶಾಸ್ತ್ರದ್ದಲ್ಲವೆಂದು ಭಾವಿಸಿದರು. ಹೀಗೆಂದ ಮಾತ್ರಕ್ಕೆ ಆ ನಿಯಮಾವಳಿ ಪೂರ್ತಿ ತ್ಯಾಜ್ಯವೆಂಬ ಭಾವವಲ್ಲ. ಆದರೆ ಅವನ್ನು ಸೂಚನೆಗಳಾಗಿ ಗ್ರಹಿಸಬೇಕಲ್ಲದೆ ಸ್ವಯಂಚಲಿ ಪದ್ಧತಿಗಳೆಂಬುದಾಗಿ ಭಾವಿಸಬಾರದು.

ವ್ಯಾಕರಣ ರಚನೆಗೆ ಭಾಷಾವ್ಯವಹಾರಿ ಒಮ್ಮೊಮ್ಮೆ ಕೆಲವು ಸೂಚನೆಗಳನ್ನು ಮಾಡಬಹುದು. ಆ ಭಾಷೆಗೆ ಲಿಖಿತ ಚರಿತ್ರೆಯಿದ್ದರೆ ಇಂದಿನ ಭಾಷೆಗೆ ವ್ಯಾಕರಣ ಬರೆಯುವುದಕ್ಕೆ ಕೆಲವು ಸುಳುಹು ದೊರೆಯಬಹುದು. ಇವೆಲ್ಲವನ್ನೂ ಮೀರಿ, ಪರಿಶೋಧಕ ತನ್ನ ಪೂರ್ವಾನುಭವವನ್ನು, ಬುದ್ಧಿಶಕ್ತಿಯನ್ನು, ಪ್ರತಿಭೆಯನ್ನು ಉಪಯೋಗಿಸಿ ಆ ಭಾಷೆಯ ಲಕ್ಷಣಗಳನ್ನು ಕಂಡುಕೊಳ್ಳಬಹುದು. ಇವಾವುವನ್ನೂ ನಾವು ಭಾಷಾಶಾಸ್ತ್ರದ ಅಂಗಗಳಾಗಿ ಭ್ರಮಿಸಬಾರದು.

ಚಾಮ್‌ಸ್ಕಿಗೆ ಪೂರ್ವದ ಶಾಸ್ತ್ರಜ್ಞರು ವ್ಯಾಕರಣ ರಚನೆಗೆ ಯಾಂತ್ರಿಕ ಪದ್ಧತಿಗಳನ್ನು ತಯಾರು ಮಾಡುವುದಕ್ಕೆ ಪ್ರಯತ್ನಿಸಲು ಕಾರಣ, ಅವರ ಗಮನ ವಿಶೇಷವಾಗಿ ವೈಜ್ಞಾನಿಕ ನಿಷ್ಕೃಷ್ಟತೆಯ ಕಡೆಗೆ ಇದ್ದುದೇ ಆಗಿದೆ. ಭಾಷಾತತ್ತ್ವನಿರೂಪಣೆಯೇ ಹೆಚ್ಚು ಆವಶ್ಯಕವಾದುದು ಎಂಬುದನ್ನು ಅವರು ಗುರುತಿಸಲಿಲ್ಲ.

ಭಾಷಾಶಾಸ್ತ್ರದ ಲಕ್ಷ್ಯಗಳಲ್ಲಿ ಚಾಮ್‌ಸ್ಕಿಗೂ ಉಳಿದ ಶಾಸ್ತ್ರಜ್ಞರಿಗೂ ಇರುವ ಭಿನ್ನಾಭಿಪ್ರಾಯಗಳಿಗೆ ತಾತ್ತ್ವಿಕ ಹಿನ್ನೆಲೆ ಕೂಡ ಇದೆ.

ತಾತ್ತ್ವಿಕ ಹಿನ್ನೆಲೆ

ತತ್ತ್ವಶಾಸ್ತ್ರದಲ್ಲಿ ಹೇತುವಾದ, ಅನುಭವವಾದ ಎಂಬುದಾಗಿ ಎರಡು ವಾದಗಳಿವೆ. 17–18ನೆಯ ಶತಮಾನಗಳಲ್ಲಿ ಈ ಎರಡು ವಾದಗಳು ಪರಸ್ಪರ ಸಂಘರ್ಷಿಸಿದುವು. ಮಾನವವಿಜ್ಞಾನದ ಸಮುಪಾರ್ಜನೆಗೆ ಸಂಬಂಧಿಸಿದ ವಾದಗಳಿವು. ಮೊದಲನೆಯ ವಾದಕ್ಕೆ ದೇಕಾರ್ತ್, ಲೀಬ್ನಿಜ್ ಮೊದಲಾದವರು ಮೂಲಪುರುಷರು. ಎರಡನೆಯ ವಾದದ ಪ್ರತಿಪಾದಕರು ಲಾಕ್, ಬರ್ಕ್‌ಲೀ ಮೊದಲಾದವರು.

ಮಾನವ ಹುಟ್ಟುವಾಗ ಕೆಲವು ಸ್ವತಸ್ಸಿದ್ಧವಾದ ಭಾವಗಳೊಡನೆ (ಇನ್ನೇಟ್ ಐಡಿಯಾಸ್) ಹುಟ್ಟುವನೆಂದೂ, ವಿಜ್ಞಾನ ಜನ್ಮಸಿದ್ಧವಾದುದೆಂದೂ, ಅನುಭವವೆಂಬುದು ಆ ಭಾವಗಳಿಗೆ ಉದ್ದೀಪನ ಮಾತ್ರವೆಂದೂ ಹೇತುವಾದಿಗಳು ಹೇಳುತ್ತಾರೆ. ಸ್ವತಸ್ಸಿದ್ಧಭಾವಗಳು ಆಲಂಬನ ವಿಭಾವವೆಂದೂ, ಅನುಭವ ಉದ್ದೀಪನ ವಿಭಾವವೆಂದೂ ಅವರ ನಂಬಿಕೆ. ವಿಜ್ಞಾನ ಜನ್ಮಸಿದ್ಧವಾದುದೆಂದು ಅನುಭವವಾದಿಗಳು ಅಂಗೀಕರಿಸುವುದಿಲ್ಲ. ಅನುಭವವೇ ವಿಜ್ಞಾನಕ್ಕೆ ಮೂಲವೆಂದೂ, ಅನುಭವವೇ ವಿಜ್ಞಾನ

ವನ್ನು ಮನಸ್ಸಿನ ಮೇಲೆ ಮುದ್ರಿಸುತ್ತವೆಂದೂ ಅನುಭವವಾದಿಗಳು ಹೇಳುತ್ತಾರೆ. ತಾನು ಗ್ರಹಿಸುವ ವಿಜ್ಞಾನ ಸ್ವಭಾವವನ್ನು ಜನ್ಮಗತ ಸ್ವತಸ್ಸಿದ್ಧಭಾವಗಳು ಬಹಳಮಟ್ಟಿಗೆ ನಿರ್ಣಯಿಸುತ್ತವೆಯೆಂಬುದು ಹೇತುವಾದಿಗಳ ನಂಬಿಕೆ. ಗ್ರಹಿಸಲಿರುವ ವಿಜ್ಞಾನಕ್ಕೆ ಮಿತಿಗಳನ್ನು ವಿಧಿಸುವ ಶಕ್ತಿ ಯಾವುದೂ ಮಾನವನಲ್ಲಿ ಜನ್ಮತಃ ಇಲ್ಲವೆಂಬುದಾಗಿ ಅನುಭವವಾದಿಗಳು ಹೇಳುತ್ತಾರೆ. ಸ್ವತಸ್ಸಿದ್ಧವಾದ ಭಾವಗಳ ಉಪಸ್ಥಿತಿಗೆ ಅನುಭವದ ಪ್ರಾಧಾನ್ಯವನ್ನು ಹೇತುವಾದಿಗಳು ಒಪ್ಪಿಕೊಳ್ಳುತ್ತಾರೆ. ಆದರೆ ಅದೇ ಮೂಲವೆಂಬುದನ್ನು ಮಾತ್ರ ಒಪ್ಪಿಕೊಳ್ಳುವುದಿಲ್ಲ. ಹಾಗೆಯೇ ಜ್ಞಾನಸಮುಪಾರ್ಜನೆಗೆ ಮಾನವನ ಮನಸ್ಸು ಪೂರ್ವಭಾವಿಯಾಗಿ ಸಿದ್ಧವಾಗಿರಬೇಕೆಂಬುದನ್ನು ಅನುಭವವಾದಿಗಳು ಅಂಗೀಕರಿಸುತ್ತಾರೆ. ಆದರೆ ಅವುಗಳನ್ನು ಭಾವಗಳೆಂದು ಹೇಳುವುದಿಲ್ಲ. ಅರ್ಜಿಸಲಿರುವವಿಜ್ಞಾನ ಸ್ವಭಾವ ಮೊದಲೇ ನಿರ್ಣಯವಾಗಿರುತ್ತವೆಯೆಂದೂ ಅವರು ಒಪ್ಪಿಕೊಳ್ಳುವುದಿಲ್ಲ. ಈ ಎರಡು ವಾದಗಳವರು ಭಾಷಾ ಸಮುಪಾರ್ಜನೆಯನ್ನು ಕುರಿತು ಕೂಡ ಪ್ರಸ್ತಾಪಿಸಿದ್ದಾರೆ. ಭಾಷೆಗೆ (ಸರ್ವಭಾಷೆಗಳಿಗೆ ಎಂಬ ಅರ್ಥ) ಸಂಬಂಧಿಸಿದ ಸಾಮಾನ್ಯ ಲಕ್ಷಣಗಳು ಮಾನವನಿಗೆ ಜನ್ಮಸಿದ್ಧವಾಗಿಯೇ ಬರುತ್ತವೆಂದೂ. ಕಲಿತುಕೊಳ್ಳಬೇಕಾಗಿರುವ ಭಾಷೆಗಳ ವಿವರಗಳಲ್ಲಿ ಇರುವ ಭೇದಗಳನ್ನು ಮಾತ್ರವೇ ಮನುಷ್ಯ ಕಲಿತುಕೊಳ್ಳುತ್ತಾನೆ—ಎಂದೂ ಹೇತುವಾದ ಪ್ರತಿಪಾದಿಸುತ್ತದೆ. ಮಾನವ ಹುಟ್ಟುವಾಗ ಭಾಷೆಗಳನ್ನು ಕುರಿತು ಏನೂ ತಿಳಿದಿರುವುದಿಲ್ಲವೆಂದೂ. ಎಲ್ಲವನ್ನೂ ಶ್ರವಣೇಂದ್ರಿಯದ ಮೂಲಕ ಕೇಳುವುದರಿಂದ. ಅಭ್ಯಾಸಬಲದಿಂದ ಮಾತ್ರವೇ ಭಾಷೆಯನ್ನು ಕಲಿತುಕೊಳ್ಳುತ್ತಾನೆಂದೂ ಅನುಭವವಾದ ಹೇಳುತ್ತದೆ. ಭಾಷೆಯ ಸಾಮಾನ್ಯ ಲಕ್ಷಣಗಳನ್ನು ಕುರಿತು ಹೇತುವಾದ ಒತ್ತಿಹೇಳುತ್ತದೆ. ಈ ಲಕ್ಷಣಗಳನ್ನು ಸಾರ್ವತ್ರಿಕ ವ್ಯಾಕರಣ ವೆನ್ನಬಹುದು. ಅದು ಮನುಷ್ಯನಿಗೆ ಜನ್ಮಸಿದ್ಧವಾದುದೆಂದು ಹೇತುವಾದಿಗಳ ನಂಬಿಕೆ. ಭಾಷೆಗಳ ವೈವಿಧ್ಯಕ್ಕೆ ಅನುಭವವಾದಿಗಳು ಪ್ರಾಧಾನ್ಯವನ್ನು ಕೊಡುತ್ತಾರೆ. ಈ ಸಿದ್ಧಾಂತಗಳಿಗೂ ಮೊದಲೇ ಹೇಳಿದ ಭಾಷಾ ಸಂಪ್ರದಾಯಗಳಿಗೂ ಇರುವ ಸಾಮ್ಯ ಈಗಾಗಲೇ ಸ್ಪಷ್ಟ. ಈ ಅನುಭವವಾದದ ಪ್ರತಿರೂಪವನ್ನೇ ಮನಸ್ತತ್ತ್ವಶಾಸ್ತ್ರದಲ್ಲಿ ವರ್ತನಾವಾದವೆನ್ನುತ್ತಾರೆ. ಜ್ಞಾನಗ್ರಹಣ ಇಂದ್ರಿಯಗಳ ಮೂಲಕವೇ ನಡೆಯುತ್ತದೆಂದು ಈ ವಾದ ಹೇಳುತ್ತದೆ. ಭೌತಿಕ ಪ್ರಪಂಚದ ಪ್ರೇರಣೆಗಳಿಗೆ ಪ್ರಾಣಿಗಳು ಸ್ಪಂದಿಸುತ್ತವೆಂದೂ ಈ ಪ್ರೇರಣೆ ಸ್ಪಂದನಗಳು ಪ್ರಾಣಿಗಳಲ್ಲಿ ಮುದ್ರಿತವಾಗುತ್ತವೆಯೆಂದೂ. ಅದೇ ಅಭ್ಯಾಸಗಳಾಗಿ ಮಾರ್ಪಡುತ್ತವೆಂದೂ. ಈ ಅಭ್ಯಾಸಗಳೇ ಜ್ಞಾನವೆಂದೂ ವರ್ತನವಾದ ಹೇಳುತ್ತದೆ. ಭಾಷಾ ಸಂಪಾದನೆ ಇದಕ್ಕೆ ಭಿನ್ನವಾದುದಲ್ಲ ಎಂದು ಈ ವಾದವನ್ನು ನಂಬುವವರ ಅಭಿಪ್ರಾಯ. ಈ ವಾದವನ್ನು ಗಟ್ಟಿಯಾಗಿ ಸಮರ್ಥಿಸುವವರಲ್ಲಿ ಬಿ. ಎಫ್. ಸ್ಕಿನ್ನರ್ ಎಂಬ ಮನಶ್ಶಾಸ್ತ್ರಜ್ಞ ಪ್ರಸಿದ್ಧನಾದವನು. ಇವನು ಬರೆದ 'ವರ್ಬಲ್ ಬಿಹೇವಿಯರ್' ಎಂಬ ಗ್ರಂಥವನ್ನು ಸಮೀಕ್ಷಿಸುತ್ತಾ ಈ ವಾದವನ್ನು ಚಾಮ್ಸ್ಕಿ ಖಂಡಿಸಿದ. ಮಾನವರ ಜ್ಞಾನಸಮುಪಾರ್ಜನೆಯನ್ನು ಪ್ರೇರಣೆ–ಸ್ಪಂದನೆಗಳ ಮೂಲಕ ವಿವರಿಸುವುದು ಅಸಾಧ್ಯವೆಂಬುದಾಗಿ ಚಾಮ್ಸ್ಕಿ ವಾದಿಸಿದ. ಮಾನವರ ವರ್ತನೆಗೂ ಇತರ ಪ್ರಾಣಿಗಳ ವರ್ತನೆಗೂ ಮೌಲಿಕವಾದ ಭೇದವಿದೆಯೆಂದು ಚಾಮ್ಸ್ಕಿ ಪ್ರತಿಪಾದಿಸಿದ. ಈ ಭೇದ ಗುಣಾತ್ಮಕವಾದ್ದು ಎಂಬುದು ಅವನ ಉದ್ದೇಶ. ಮೇಲೆ ಹೇಳಿದ ಹೇತು–ಅನುಭವವಾದಗಳಲ್ಲಿ ಚಾಮ್ಸ್ಕಿ ಹೇತುವಾದವನ್ನು ಸಮರ್ಥಿಸುತ್ತಾನೆ. ಈ ವಾದವನ್ನು ಪುನರುದ್ಧರಿಸಿ ಅದಕ್ಕೆ ಭಾಷಾಶಾಸ್ತ್ರದಿಂದ ಹೊಸ ಬಲವನ್ನು ಸಂಪಾದಿಸಿಕೊಟ್ಟ ಗೌರವ ಚಾಮ್ಸ್ಕಿಗೆ ಸಲ್ಲುತ್ತದೆ.

ಸಾಧಾರಣವಾಗಿ ಮಕ್ಕಳು ಐದು ಅಥವಾ ಆರನೆಯ ವಯಸ್ಸಿಗೆ ತಮ್ಮ ಭಾಷೆಯನ್ನು ಪೂರ್ತಿಯಾಗಿ ಕಲಿತುಕೊಳ್ಳುತ್ತಾರೆ. ಎಂದರೆ ಶಬ್ದಸಮೂಹವನ್ನೆಲ್ಲ ಕಲಿತುಕೊಳ್ಳುತ್ತಾರೆಂದಲ್ಲ. ಆ ಭಾಷೆಯ ಮುಖ್ಯವಾದ ವ್ಯಾಕರಣಾಂಗಗಳನ್ನೆಲ್ಲ ಆ ವಯಸ್ಸಿಗೆ ಸ್ವಾಧೀನ ಮಾಡಿಕೊಳ್ಳುತ್ತಾರೆ. ಸರಿಯಾದ ಶಿಕ್ಷಣ ದೊರೆಯದೆ ಹೋದರೆ ಕೆಲವು ವಿದ್ಯೆಗಳನ್ನು ಕಲಿತುಕೊಳ್ಳದೆ ಹೋಗಬಹುದು. ಕೆಲವು ವಿದ್ಯೆಗಳನ್ನು ಕಲಿತುಕೊಂಡರೂ. ಅಭ್ಯಾಸವನ್ನನುಸರಿಸಿ ಅವುಗಳ ಸಾಧನೆಯಲ್ಲಿ ತರತಮ ಭೇದಗಳಿರಬಹುದು. ಆದರೆ ಯಾವ ಗುರುವೂ. ನಿಯತವಾದ ಶಿಕ್ಷಣಕ್ರಮವೂ ಇಲ್ಲದೆ ಮಕ್ಕಳೆಲ್ಲ ಸ್ವಭಾಷೆಯನ್ನು ತರತಮ ಭೇದಗಳಿಲ್ಲದೆ ಕಲಿತುಕೊಳ್ಳುತ್ತಾರೆ. ಕೆಲವು ಮಂದಿ ತಾಯಿತಂದೆಯರು ಮಕ್ಕಳಿಗೆ ಭಾಷಾವಿಷಯದಲ್ಲಿ ಶಿಕ್ಷಣ ಕೊಡಬಹುದು. ಕೆಲವು ಮಂದಿ ತಾಯಿತಂದೆಯರಿಗೆ ಶಿಕ್ಷಣ ಕೊಡುವ

ವ್ಯವಧಾನ ಇಲ್ಲದೆ ಹೋಗಬಹುದು. ಕೆಲವು ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕೆ ತಾಯಿತಂದೆಯರು ಇಲ್ಲದೆ ಹೋಗಬಹುದು. ಆದರೂ ಅವರೆಲ್ಲರೂ ಭಾಷಾವಿಷಯದಲ್ಲಿ ಮಾತ್ರ ಶಿಕ್ಷಣಕ್ಕೆ ಸಂಬಂಧವಿಲ್ಲದೆ ಸಮಾನವಾದ ಪ್ರತಿಭೆಯನ್ನು ತೋರಿಸಲು ಸಮರ್ಥರಾಗಿರುತ್ತಾರೆ. ಬುದ್ಧಿವಂತರು, ಬುದ್ಧಿಬಲ ಕಡಿಮೆ ಯವರು ಎಂಬುದಾಗಿ ನಾವು ಭಾವಿಸುವವರೆಲ್ಲರೂ ಭಾಷಾವಿಷಯದಲ್ಲಿ (ಎಂದರೆ ಭಾಷಾವ್ಯವಹಾರ ದಲ್ಲಿ) ಒಂದೇ ವಿಧವಾದ ಪರಿಣತಿ ತೋರ್ಪಡಿಸುತ್ತಾರೆ. ಭಾಷಾ ಸಾಮಾನ್ಯ ವಿಶ್ವಸೂತ್ರಗಳು ಹುಟ್ಟಿ ನಿಂದಲೇ ಬಾರದೆ ಹೋದರೆ ಇದು ಸಾಧ್ಯವಾಗುತ್ತಿರಲಿಲ್ಲ.

ವಿವಿಧ ಜೀವರಾಶಿಗಳಲ್ಲಿ ಮನುಷ್ಯರು ಮಾತ್ರವೇ ಮಾತನಾಡಬಲ್ಲವರಾಗಿದ್ದಾರೆ. ಮಾನವರನ್ನು ಅತಿ ಹೆಚ್ಚಾಗಿ ಹೋಲುವ ವಾನರ ಜಾತಿಗಳಿಗೆ ಭಾಷೆಯಿಲ್ಲ. ಉದಾಹರಣೆಗೆ ಚಿಂಪಾಂಜಿಗಳು ಸೈಕಲ್ ತುಳಿಯುವುದನ್ನೂ, ಸಿಗರೇಟು ಸೇದುವುದನ್ನೂ ನಮ್ಮಲ್ಲಿ ಹಲವರು ನೋಡಿರಬಹುದು. ಮಾನವರ ಅಭ್ಯಾಸಗಳನ್ನು ಬಹಳ ಮಟ್ಟಿಗೆ ಚಿಂಪಾಂಜಿಗಳಿಗೆ ಕಲಿಸಬಹುದು. ಆದರೆ ಮಾತನಾಡುವುದನ್ನು ಮಾತ್ರ ಕಲಿಸುವುದು ಸಾಧ್ಯವಿಲ್ಲ. ಕೆಲ್ಲಾಗ್ ದಂಪತಿಗಳು ಒಂದು ಚಿಂಪಾಂಜಿಯನ್ನು ತಂದು ಸಾಕಿ, ಅದರ ಮೇಲೆ ಪರಿಶೋಧನೆ ನಡೆಸಿ 1933ರಲ್ಲಿ 'ದಿ ಏಪ್ ಅಂಡ್ ದಿ ಚೈಲ್ಡ್' ಎಂಬ ಪುಸ್ತಕವನ್ನು ಬರೆದು ಪ್ರಕಟಿಸಿದರು. ಆ ಪ್ರಾಣಿಗೆ ಮನುಷ್ಯರ ಅಭ್ಯಾಸಗಳನ್ನು ಎಷ್ಟು ಬೇಗ ಕಲಿಸಲು ಸಾಧ್ಯವಾಯಿತು ಎಂಬುದನ್ನು ಆ ಪುಸ್ತಕದಲ್ಲಿ ಅವರು ವಿವರಿಸಿದ್ದಾರೆ. ಆದರೆ ಭಾಷೆಯನ್ನು ಮಾತ್ರ ಕಲಿಸಲಾರದೆ ಹೋದೆವು ಎಂಬುದನ್ನು ಒಪ್ಪಿಕೊಂಡಿದ್ದಾರೆ. ವಾನರಗಳು ಭಾಷೆಯನ್ನು ಕಲಿತುಕೊಳ್ಳದೆ ಹೋಗುವುದಕ್ಕೆ ಅವುಗಳ ಉಚ್ಚಾರಣಾವಯವಗಳ ಲೋಪ ಕಾರಣವಲ್ಲ. ವಾನರಗಳ ಉಚ್ಚಾರಣಾವಯವಗಳು ಮಾನವರು ಉಚ್ಚರಿಸಬಹುದಾದ ಧ್ವನಿಗಳನ್ನು ಉಚ್ಚರಿಸುವುದಕ್ಕೆ ಸಮರ್ಥವಾಗಿವೆಯೆಂದು ಹೂಟನ್ ಎಂಬ ಶಾಸ್ತ್ರಜ್ಞನ ಅಭಿಪ್ರಾಯ. ಮಾನವರಿಂದ ಕೆಲವು ಅಭ್ಯಾಸಗಳನ್ನು ಕಲಿತುಕೊಳ್ಳಬಲ್ಲ ಕಪಿಗಳು ಮಾನವರ ಭಾಷೆಯನ್ನು ಕಲಿತುಕೊಳ್ಳಲಾರವೆಂದರೆ ಭಾಷಾ ಸಾಮಾನ್ಯ ಸೂತ್ರಗಳು ಮನುಷ್ಯನಿಗೆ ಮಾತ್ರವೇ ಜನ್ಮತಃ ಬಂದಿವೆಯೆಂದೂ ಇತರ ಪ್ರಾಣಿಗಳಿಗೆ ಈ ಜನ್ಮಸಿದ್ಧ ಭಾವಗಳು ಇಲ್ಲವೆಂದೂ ಅರ್ಥವಾಗುತ್ತದೆ.

ಕೆಲವು ಮಕ್ಕಳಿಗೆ ಲೆಕ್ಕ ಸರಿಯಾಗಿ ಬಾರದೆ ಹೋಗಬಹುದು. ಕೆಲವರಿಗೆ ಭೂಗೋಳಶಾಸ್ತ್ರ ತಲೆಗೆ ಹತ್ತದೆ ಹೋಗಬಹುದು. ಕೆಲವರಿಗೆ ವಿದ್ಯೆಯೇ ಹತ್ತದೇ ಹೋಗಬಹುದು. ಎಂಥ ಬುದ್ಧಿಹೀನ ಹುಡುಗ ನಾದರೂ ಸ್ವಭಾಷೆಯಲ್ಲಿ ವ್ಯವಹರಿಸದೆ ಇರಲಾರನು. ಸಾಮಾನ್ಯವಾಗಿ ನಾವು ಅಂದುಕೊಳ್ಳುವ ಬುದ್ಧಿ ವಂತಿಕೆ ಸ್ವಭಾಷೆಯನ್ನು ಕಲಿತುಕೊಳ್ಳುವುದಕ್ಕೆ ಅಗತ್ಯವಾದರೆ ಭಾಷೆಯನ್ನು ಕಲಿತುಕೊಳ್ಳಲಾರದ ಬುದ್ಧಿ ಹೀನ ಮಕ್ಕಳು ಕೂಡ ಇದ್ದೇ ತೀರಬೇಕು. ಎಷ್ಟೋ ವಿಷಯಗಳಲ್ಲಿ ಮೊದ್ದುಮಕ್ಕಳು ಇರಬಹುದು, ಆದರೆ ಸ್ವಭಾಷೆಯನ್ನು ಕಲಿತುಕೊಳ್ಳಲಾರದ ಮೊದ್ದುಮಕ್ಕಳು ಇರುವಂತೆ ನಾವು ಕೇಳಿಲ್ಲ. ಇದರಿಂದ ಬುದ್ಧಿವಂತಿಕೆಗೂ ಭಾಷೆ ಕಲಿತುಕೊಳ್ಳುವುದಕ್ಕೂ ಸಂಬಂಧವಿಲ್ಲವೆಂಬುದು ವಿದಿತವಾಗುತ್ತದೆ. ಹಾಗಾದರೆ ಬುದ್ಧಿವಂತಿಕೆಗೆ ಅತೀತವಾದ, ಮಾನವ ಜಾತಿಗೇ ಪರಿಮಿತವಾದ, ಭಾಷೆಗೆ ಸಂಬಂಧಿಸಿದ ಒಂದು ಶಕ್ತಿ ಇದೆ ಎಂದಂತಾಯಿತು. ಮನುಷ್ಯ ತಾನು ಮುಂದೆ ಕಲಿಯಲಿರುವ ಭಾಷಾಸ್ವರೂಪವನ್ನು ನಿರ್ಣಯಿಸುವ ಸರ್ವಭಾಷಾ ಸಾಮಾನ್ಯ ವಿಶ್ವವ್ಯಾಕರಣದೊಡನೆಯೇ ಹುಟ್ಟಿದನೆಂಬುದು ಸ್ಪಷ್ಟ. ಈ ಶಕ್ತಿ ಬುದ್ಧಿ ವಂತಿಕೆಗೆ ಸಂಬಂಧವಿಲ್ಲದೆ ಮಾನವರೆಲ್ಲರಿಗೂ ಹುಟ್ಟಿನಿಂದಲೇ ಬಂದಿರುವುದಾಗಿದೆ. ಸರ್ವಭಾಷಾ ಸಾಮಾನ್ಯವಾದ ಒಂದು ಶಕ್ತಿ ಇದೆ ಎಂಬುದನ್ನು ನಮ್ಮ ವೈಯಾಕರಣರು ಮನಗಂಡಿದ್ದರು. ಎರಡನೆಯ ನಾಗವರ್ಮ ವಾಗ್ದೇವಿಯನ್ನು 'ಸರ್ವಭಾಷಾ ಸರಸ್ವತೀ' ('ಕರ್ನಾಟಕ ಭಾಷಾಭೂಷಣ'ದ ಪ್ರಾರಂಭದ ಶ್ಲೋಕ) ಎಂಬುದಾಗಿ ಸ್ತುತಿಸಿರುವುದು ತುಂಬ ಗಮನಾರ್ಹವಾದ ವಿಚಾರ.

ಕೆಲವು ಶತಮಾನಗಳಿಂದ ತತ್ತ್ವವೇತ್ತರೂ, ವೈಯಾಕರಣರೂ ಭಾಷೆಯನ್ನು ಕುರಿತು ಆಲೋಚಿ ಸುತ್ತಲೇ ಇದ್ದಾರೆ. ಆದರೂ ಭಾಷೆಯನ್ನು ಕುರಿತು ನಮಗೆ ತಿಳಿಯಬೇಕಾದ ವಿಚಾರಗಳು ಎಷ್ಟೋ ಇವೆ. ಯಾವ ಒಂದು ಭಾಷೆಯನ್ನೂ ಸಮಗ್ರವಾಗಿ ಅಳವಡಿಸಿದ ಸಂಪೂರ್ಣ ವ್ಯಾಕರಣ ಇಷ್ಟರವರೆಗೆ ಇಲ್ಲ. ಆದರೆ ಮಕ್ಕಳು ಭಾಷೆಗೆ ಸಂಪೂರ್ಣ ವ್ಯಾಕರಣ ನಿರ್ಮಿಸಿಕೊಳ್ಳಲು ಶಕ್ತ ರಾಗಿರುತ್ತಾರೆ; ಅತಿಕ್ಲಿಷ್ಟವಾದ ವ್ಯಾಕರಣ ನಿರ್ಮಾಣಕ್ಕೆ ಅಂತರ್ಗತ ಸೂತ್ರಗಳನ್ನು ನಿರ್ಮಿಸಿ

ಕೊಳ್ಳಬಲ್ಲವರಾಗಿರುತ್ತಾರೆ. ಇದಕ್ಕೆ ಕಾರಣ ಯಾವ ರೀತಿಯ ವ್ಯಾಕರಣ ನಿರ್ಮಾಣವಿದ್ದರೂ, ಭಾಷೆ ಮನುಷ್ಯ ಜಾತಿಗೆ ಮಾತ್ರ ಸಾಧ್ಯವೆಂಬುದನ್ನು ನಿರ್ಣಯಿಸುವ ವಿಶ್ವವ್ಯಾಕರಣ ಮಾನವರಿಗೆ ಜನ್ಮಸಿದ್ಧವಾಗಿರುವುದೇ ಆಗಿದೆ. ಅದಿಲ್ಲದಿದ್ದರೆ ಮನುಷ್ಯರು ಗಿಳಿಗಳ ಹಾಗೆ ಕೆಲವು ವಾಕ್ಯಗಳನ್ನು ಮಾತ್ರ ಕಂಠಪಾಠ ಮಾಡುತ್ತಿದ್ದರು. ಮಾನವರ ಭಾಷೆಯಲ್ಲಿ ವಾಕ್ಯಗಳ ಸಂಖ್ಯೆಗೆ ಗರಿಷ್ಠ ಪರಿಮಿತಿ ಇಲ್ಲವೆಂಬುದನ್ನು ಸೂಚಿಸುವ ವಿಶ್ವವ್ಯಾಕರಣ ಮಾನವರಿಗೆ ಜನ್ಮಸಿದ್ಧವಾಗಿರುವುದರಿಂದ. ಅದರ ಸಹಾಯದಿಂದ ತಾವು ಹುಟ್ಟಿದ ಸಮಾಜದಲ್ಲಿ ವ್ಯವಹರಿಸುವ ಭಾಷೆಗೆ ಅಲಿಖಿತ ವ್ಯಾಕರಣವನ್ನು ನಿರ್ಮಿಸಿಕೊಳ್ಳಲು ಶಕ್ತರಾಗುತ್ತಾರೆ. ಆದರೆ ಆ ವಿಶ್ವವ್ಯಾಕರಣವೂ ಮಾನವ ನಿರ್ಮಿಸಿಕೊಳ್ಳುವ ಅಲಿಖಿತ ವ್ಯಾಕರಣವೂ ಅತ್ಯಂತ ಅಮೂರ್ತ ಸ್ಥಿತಿಯಲ್ಲಿರುತ್ತವೆ. ಸಂಶೋಧಕರಿಗೆ ಅವುಗಳ ಸುಳಿವು ಸಿಕ್ಕುವುದಿಲ್ಲ. ವ್ಯವಹೃತ ವಾಕ್ಯಗಳ ಸಹಾಯದಿಂದ ಆ ಅಮೂರ್ತ ವ್ಯಾಕರಣಗಳ ಲಕ್ಷಣಗಳನ್ನು ತಿಳಿದುಕೊಳ್ಳಬೇಕಾಗಿರುವುದರಿಂದ ಲಿಖಿತ ವ್ಯಾಕರಣ ಕಷ್ಟಸಾಧ್ಯವಾಗುತ್ತದೆ.

ಮೇಲೆ ಸೂಚಿಸಿದ ಕಾರಣಗಳಿಂದಾಗಿ. ಭಾಷಾಸಮುಪಾರ್ಜನೆಗೆ ಅಗತ್ಯವಾದ ಸೂತ್ರಾವಳಿ ಮಾನವರಿಗೆ ಜನ್ಮಸಿದ್ಧವೆಂದೂ ಮಾನವಸಾಧ್ಯವಾದ ಭಾಷೆಗಳ ಸ್ವರೂಪವನ್ನು ಈ ಸೂತ್ರಾವಳಿ ನಿರ್ಣಯಿಸುತ್ತದೆಂದೂ ಪ್ರತಿಪಾದಿಸುವ ಮತವಾದಕ್ಕೆ ಬಲ ಬಂದಿದೆ.

ಭಾಷೆ-ಅದರ ಹುಟ್ಟು

ಭಾಷೆಯ ಹುಟ್ಟನ್ನು ಕುರಿತು 'ಪೂ ಪೂ' ವಾದವೆಂದೂ 'ಬೌ ವೌ' ವಾದವೆಂದೂ 'ಡಿಂಗ್-ಡಾಂಗ್' ವಾದವೆಂದೂ ಕೆಲವು ವಾದಗಳು ಪ್ರಚಾರದಲ್ಲಿವೆ. ಇವು ಯಾವುವೂ ಭಾಷೆಯ ಹುಟ್ಟನ್ನು ಸರಿಯಾಗಿ ಹೇಳಲಾರದೆ ಹೋದುವು. ಇವು ಭಾಷೆಯಲ್ಲಿ ಅತ್ಯಲ್ಪವಾಗಿರುವ ಧ್ವನ್ಯನುಕರಣಗಳನ್ನು ಸೂಚಿಸುವ ಪದಗಳಿಗೇ ಸೀಮಿತವಾಗಿವೆ. ಭಾಷೆಗಳಲ್ಲಿ ಸಂಕೀರ್ಣವಾದ ವಾಕ್ಯನಿರ್ಮಾಣ ಹೇಗೆ ಏರ್ಪಟ್ಟಿದೆಯೆಂದು ಹೇಳುವುದು ಈ ವಾದಗಳಿಗೆ ಸಾಧ್ಯವಾಗದ ಕೆಲಸ. ನಿಜವಾಗಿ ನೋಡಿದರೆ ಈ ವಾದಗಳನ್ನು ಭಾಷಾಶಾಸ್ತ್ರಜ್ಞರಾರೂ ಗಮನಕ್ಕೆ ತಂದುಕೊಳ್ಳುವುದಿಲ್ಲ.

ಇತರ ಪ್ರಾಣಿಗಳ ಅಭಿಪ್ರಾಯ ಪ್ರಕಟನ ಸಾಧನಗಳೊಡನೆ ಮಾನವಭಾಷೆಗಳನ್ನು ಹೋಲಿಸಿ ಆ ಸಾಧನಗಳ ಕ್ರಮವಾದ ವಿಕಾಸವೇ ಮಾನವರ ಭಾಷೆಯೆಂದು ಒಂದು ವಾದ ಕೂಡ ಇದೆ. ಇದನ್ನೇ ನಿರಂತರ ವಿಕಾಸವಾದ (ಕಂಟಿನ್ಯೂಯಸ್ ಥಿಯೊರಿ) ಎನ್ನಬಹುದು. ಮಾನವ ಕೆಲವು ಆದಿಮಜೀವಿಗಳಿಂದ ವಿಕಾಸಹೊಂದಿ ರೂಪುಗೊಂಡನೆಂದೂ, ಅವನ ಆಕಾರ, ಶರೀರನಿರ್ಮಾಣ, ಪ್ರವೃತ್ತಿ ಕೂಡ ಕ್ರಮವಾಗಿ ವಿಕಾಸಗೊಂಡು ಸಿದ್ಧವಾದುವೆಂದೂ ಡಾರ್ವಿನ್ ಪ್ರತಿಪಾದಿಸಿದ ವಿಕಾಸವಾದವನ್ನು ಸ್ಥೂಲವಾಗಿ ಶಾಸ್ತ್ರಜ್ಞರು ಅಂಗೀಕರಿಸಿದರು. ಆದ್ದರಿಂದ ಮಾನವನ ಭಾಷಾವ್ಯವಹಾರ ಕೂಡ ಅವನ ಪ್ರವೃತ್ತಿಭಾಗವೇ ಆಗಿರುವುದರಿಂದ ಭಾಷೆ ಕೂಡ ಇತರ ಪ್ರಾಣಿಗಳ ಅಭಿಪ್ರಾಯ ಪ್ರಕಟನ ಪದ್ಧತಿಗಳ ಕ್ರಮವಾದ ವಿಕಾಸವೇ ಆಗಿರಬೇಕೆಂದು ಈ ವಿಕಾಸವಾದಿಗಳ ನಂಬಿಕೆ. ಎಲ್ಲ ಪ್ರಾಣಿಗಳಿಗೂ ಅಭಿಪ್ರಾಯ ಪ್ರಕಟನೆ ಜೀವಿಸುವುದಕ್ಕೆ ಅತ್ಯಗತ್ಯ. ಮನುಷ್ಯ ಇತರ ಪ್ರಾಣಿಗಳಿಗಿಂತ ಹೆಚ್ಚು ಬುದ್ಧಿಶಕ್ತಿ ಇರುವವನಾದ್ದರಿಂದ ಅಧಿಕ ಉಪಯೋಗಕರವಾದ, ಸಮರ್ಥವಾದ ಸಾಧನವನ್ನು ರೂಪಿಸಿಕೊಂಡ ಎಂಬುದು ಈ ವಾದವನ್ನು ಪ್ರತಿಪಾದಿಸುವವರ ನಂಬಿಕೆ. ಆದರೆ ಬುದ್ಧಿವಂತಿಕೆಯನ್ನು ಅಳೆಯುವುದಕ್ಕೆ ಜೀವಶಾಸ್ತ್ರದಲ್ಲಿ ಸಾಧನಗಳಿಲ್ಲ. ಮಾನವರು ಭಾಷಾವ್ಯವಹಾರದಲ್ಲಿ ತೋರ್ಪಡಿಸುವ ಕಲಿಕೆಗೂ ಬುದ್ಧಿವಂತಿಕೆಗೂ ಸಂಬಂಧವಿಲ್ಲವೆಂಬುದನ್ನು ನಾವು ಮೊದಲೇ ನೋಡಿದ್ದೇವೆ. ಇತರ ಪ್ರಾಣಿಗಳ ಬುದ್ಧಿವಂತಿಕೆಯನ್ನು ಅಳೆದು ನಾವು ಕೊಡುವ ಅರ್ಥ ಸಾಪೇಕ್ಷವಾದುದು. ಮಾನವಜಾತಿಯ ದೃಷ್ಟಿಯಿಂದ ನಾವು ಕೊಡುವ ಅರ್ಥ ಸರ್ವಜಾತಿಗಳಿಗೂ ಅನ್ವಯಿಸದು. ವಿಕಾಸವಾದಿಗಳು, ಇತರ ಪ್ರಾಣಿಗಳಿಂದ ಯಾವ ಯಾವ ದಶೆಗಳಲ್ಲಿ ಭಾಷೆ ವಿಕಾಸವಾಗಿದೆಯೆಂದು ವಿವರಿಸದೆ ಸರ್ವಪ್ರಾಣಿಗಳ ಭಾವಪ್ರಕಟನ ಸಾಧನಗಳನ್ನು ಒಮ್ಮೆಗೇ ಮಾನವರ ಭಾಷೆಗಳೊಡನೆ ಹೋಲಿಸುತ್ತಾರೆ. ಉದಾಹರಣೆಗೆ ಪಕ್ಷಿಗಳು, ಜಲಚರಗಳು, ಜೇನುನೊಣಗಳು ಉಪಯೋಗಿಸುವ ಅಭಿಪ್ರಾಯ ಪ್ರಕಟನ ಪದ್ಧತಿಗಳಿಗೂ ಮಾನವರ ಭಾಷೆಗಳಿಗೂ ತಾರ್ಕಿಕವಾದ ಹೋಲಿಕೆ ಇರಬಹುದು. ಆದರೆ ಪರಿಣಾಮದಲ್ಲಿ ಅವು ಮಾನವ ಜಾತಿಗೆ ದೂರವಾದವು.

ಜೇನುನೊಣಗಳ ನೃತ್ಯ ಪದ್ಧತಿಗೂ ಮಾನವರ ಭಾಷೆಗಳಿಗೂ ಅಧಿಕ ಹೋಲಿಕೆ ಇರಬಹುದು. ಆದರೆ ಅವು ಧ್ವನಿಗಳನ್ನೇ ಉಪಯೋಗಿಸುವುದಿಲ್ಲ. ಹಾಗಿರುವಾಗ ಆ ಹೋಲಿಕೆಯಿಂದ ಪ್ರಯೋಜನವೇ ಇಲ್ಲ. ವಿಕಾಸದಲ್ಲಿ ಮಾನವರಿಗೆ ಹತ್ತಿರವಿರುವ ವಾನರ ಜಾತಿಗಳು ಗಿಬನ್, ಚಿಂಪಾಂಜಿ, ಗೊರಿಲ ಮುಂತಾದವು ಧ್ವನಿ ಸಂಕೇತಗಳಿಂದಲೇ ಭಾವಪ್ರಕಟನೆ ಮಾಡುತ್ತವೆ. ಆದರೆ ಅವುಗಳ ಕೂಗುಗಳು (ಧ್ವನಿಗಳು) ಒಂದು ಡಜನಿಗಿಂತ ಹೆಚ್ಚಿಗೆ ಇರಲಾರವು. ಉಳಿದವು ಆ ಧ್ವನಿಗಳ ಪುನರಾವೃತ್ತಿಯೇ. ಭಾಷೆಯಲ್ಲಿ ನಾವು ಉಪಯೋಗಿಸುವ ವಾಕ್ಯಗಳು (ಕೆಲವನ್ನು ಬಿಟ್ಟರೆ) ಬಹಳಮಟ್ಟಿಗೆ ಹೊಸವು. ಅಲ್ಲದೆ ಹಾಕೆಟ್ ಪ್ರತಿಪಾದನೆಯ ಪ್ರಕಾರ ಪ್ರಾಣಿಗಳ ಕೂಗುಗಳಿಗೆ ವ್ಯಾಕರಣವಿಲ್ಲ. ಆಕೃತಿನಿರ್ಮಾಣದ ದ್ವೈಧ (ಡ್ಯುಯಾಲಿಟಿ ಆಫ್ ಪ್ಯಾಟರ್ನಿಂಗ್) ಇಲ್ಲ. ಆದ್ದರಿಂದ ಧ್ವನಿಗಳನ್ನು ಉಚ್ಚರಿಸಬಲ್ಲ ಯಂತ್ರಾಂಗವಿದ್ದು ಕೂಡ ಅವುಗಳಿಗೆ ಭಾಷೆ ಇಲ್ಲ. ಅಲ್ಲದೆ ವಿಕಾಸಪಥದಲ್ಲಿ ವಾನರ ಜಾತಿಯನ್ನೂ ಮಾನವಜಾತಿಯನ್ನೂ ಜೋಡಿಸಬಲ್ಲ ಕೊಂಡಿ ಲಭಿಸಲಿಲ್ಲ. ಒಂದು ವೇಳೆ ಆ ಕೊಂಡಿ (ಆಧಾರ) ದೊರೆತರೂ ಭಾಷೆಯನ್ನು ಕುರಿತು ಸಾಕ್ಷ್ಯ ದೊರೆಯಲಾರದು. ವಾಸ್ತವವಾಗಿ ಮಾನವರ ಭಾಷೆಗಳು ಇತರ ಪ್ರಾಣಿಗಳ ಅಭಿಪ್ರಾಯ ಪ್ರಕಟನ ಪದ್ಧತಿಗಳಿಗಿಂತ ಮೌಲಿಕವಾಗಿ ಭಿನ್ನವಾದ್ದು. ಇದು ಕೇವಲ ತರತಮ ಭೇದವಲ್ಲ. ಭಾಷೆಯೊಂದೇ ಮಾನವಜಾತಿಯನ್ನು ಸರ್ವಜೀವರಾಶಿಗಳಿಂದ ಬೇರ್ಪಡಿಸುವ ಸ್ಪಷ್ಟವಾದ ಮಾನದಂಡ. ಇದನ್ನು ಮಾನವರು ಮಾನವರಾಗಿ ವಿಕಾಸಗೊಂಡಾಗಲೆ ಸಂಪಾದಿಸಿಕೊಂಡಿದ್ದಾರೆ. ಇದು ಮಾನವ ಜಾತಿಗೇ ದತ್ತವಾದ ವರ. ಇಲ್ಲಿ 'ದತ್ತ', 'ವರ' ಎಂಬ ಮಾತುಗಳು ಬಂದುದರಿಂದ ಭಗವದ್ದತ್ತವಾದ ವರವೆಂಬ ಅರ್ಥವಲ್ಲ. ಶಾಸ್ತ್ರದಲ್ಲಿ ಅತಿಮಾನವಶಕ್ತಿಗಳ ಪ್ರಸಕ್ತಿ ಇರುವುದಿಲ್ಲ. ಮಾನವರ ಭಾಷೆಗಳಿಗೆ ಮತ್ತು ಇತರ ಪ್ರಾಣಿಗಳ ಅಭಿಪ್ರಾಯ ಪ್ರಕಟನ ವಿಧಾನಗಳಿಗೆ ವಿಕಾಸ ಸಂಬಂಧವಿಲ್ಲ. ಇವನ್ನೇ ಖಂಡಸಿದ್ಧಾಂತ (ಡಿಸ್‌ಕಂಟಿನ್ಯುಯಸ್ ಥಿಯೊರಿ) ಎನ್ನುತ್ತಾರೆ.

ಸೃಜನಶಕ್ತಿ

ಭಾಷಾವ್ಯವಹಾರದಲ್ಲಿ ವ್ಯವಹಾರಿಗೆ ಸೃಜನಶಕ್ತಿ ಇದೆ. ಎಂದರೆ ವ್ಯವಹಾರದಲ್ಲಿ ವಕ್ತೃ ತಾನು ಪೂರ್ವದಲ್ಲಿ ಎಂದೂ ಪ್ರಯೋಗಿಸದ ಹೊಸ ವಾಕ್ಯಗಳನ್ನು ಪ್ರಯೋಗಿಸುತ್ತಿರುತ್ತಾನೆ. ಶ್ರೋತ ಆ ವಾಕ್ಯಗಳನ್ನು ಹಿಂದೆ ತಾನು ಎಂದೂ ಕೇಳದಿದ್ದರೂ ಅವುಗಳ ಅರ್ಥವನ್ನು ಗ್ರಹಿಸುತ್ತಾನೆ. ಪ್ರಾಣಿಗಳು ಹೊಸ ಹೊಸ ಕೂಗುಗಳನ್ನು ಸೃಷ್ಟಿಸಲಾರವು. ಅವು ಪರಿಮಿತಸಂಖ್ಯೆಯಲ್ಲಿರುವ ಕೂಗುಗಳನ್ನು ಅಥವಾ ಅರಚಾಟಗಳನ್ನು ಪುನಸ್ಸರಣೆ ಮಾಡುತ್ತವೆ. ವಾಕ್ಯಗಳ ಸಂಖ್ಯೆಗೆ ಗರಿಷ್ಠ ಪರಿಮಿತಿ ಇಲ್ಲ. ಒಂದು ವಾಕ್ಯ ಎಷ್ಟು ಉದ್ದ ಬೇಕಾದರೂ ಇರಬಹುದು. ಅದರ ದೀರ್ಘತೆಗೆ ಸೈದ್ಧಾಂತಿಕವಾಗಿ ಗರಿಷ್ಠ ಪರಿಮಿತಿ ಇಲ್ಲ. ಇದನ್ನೇ ಚಾಮ್‌ಸ್ಕಿ ಅನಂತತ್ವ (ಇನ್ಫಿನಿಟಿ) ಎನ್ನುತ್ತಾನೆ. ಇದು ಭಾಷೆಯ ಅತಿ ಪ್ರಧಾನವಾದ ಲಕ್ಷಣ. ಈ ಅನಂತತ್ವವೇ ಭಾಷೆಯನ್ನು ಉಳಿದ ಪ್ರಾಣಿಗಳ ಅರಚಾಟಗಳಿಂದ ಬೇರ್ಪಡಿಸುತ್ತದೆ.

ಭಾಷೆಯಲ್ಲಿ ಚಿಕ್ಕ ಚಿಕ್ಕ ವಾಕ್ಯಗಳಿರುವುದು ನಮ್ಮ ಅನುಭವ. ಹಾಗೆಯೇ ಪರಿಮಿತವಾದ ಜೀವನವಿರುವ ಭಾಷಾ ವ್ಯವಹಾರಿ ಪ್ರಯೋಗಿಸುವ ವಾಕ್ಯಗಳ ಸಂಖ್ಯೆ ಎಷ್ಟು ಅಧಿಕವಾಗಿದ್ದರೂ ಅದು ಪರಿಮಿತವೇ ಆಗುವುದಿಲ್ಲವೆ! ಹಾಗಿರುವಾಗ ಅನಂತತ್ವ ಎನ್ನುವುದನ್ನು ಭಾಷೆಗೆ ಪ್ರಧಾನ ಲಕ್ಷಣವಾಗಿ ಪ್ರತಿಪಾದಿಸುವುದು ಹೇಗೆ ಸಾಧ್ಯ?

ಪ್ರತಿಭೆ–ಪ್ರವೃತ್ತಿ

ಈ ಸಂದರ್ಭದಲ್ಲಿ ಭಾಷಾವ್ಯವಹಾರಿಗೆ ಅಂತರ್ಗತವಾಗಿ ಪರಿಮಿತಿಗಳಿಗತೀತವಾಗಿರುವ ಪ್ರತಿಭೆಯನ್ನೂ ಆತನಿಗೆ ಬಾಹ್ಯವಾದ ಭಾಷಾಪ್ರವೃತ್ತಿಯನ್ನೂ ಚಾಮ್‌ಸ್ಕಿ ಬೇರ್ಪಡಿಸುತ್ತಾನೆ. ಪ್ರವೃತ್ತಿ ವ್ಯವಹಾರಕ್ಕೆ ಸಂಬಂಧಿಸಿದುದು. ವ್ಯವಹಾರಕ್ಕೆ ಪರಿಮಿತಿಗಳಿವೆ. ಒಂದು ದೀರ್ಘವಾದ ವಾಕ್ಯವನ್ನು ಪ್ರಯೋಗಿಸಬೇಕಾದರೆ ವಕ್ತಾರನಿಗೆ ದಮ್ಮು ಸಾಲದೆ ಹೋಗಬಹುದು. ವಾಕ್ಯ ಮುಂದಕ್ಕೆ ಸಾಗುತ್ತಿರುವಾಗ ಹಿಂದೆ ಹೇಳಿದ್ದನ್ನು ಮರೆತುಬಿಡಬಹುದು. ಮಾತನಾಡುವಾಗ ವಾಕ್ಯವನ್ನು ಮಧ್ಯದಲ್ಲಿ ನಿಲ್ಲಿಸಿ

ಬೇರೆ ವಿಷಯವನ್ನು ಎತ್ತಿಕೊಳ್ಳಬಹುದು. ಕೆಲವು ಪರಿಸ್ಥಿತಿಯಲ್ಲಿ ಯಾರಾದರೂ ಅವನ ಬಾಯಿ ಮುಚ್ಚಿಸಬಹುದು. ಕೆಲವೊಮ್ಮೆ ತೊದಲಬಹುದು, ತಪ್ಪುಗಳನ್ನು ಮಾಡಬಹುದು. ತಡಬಡಿಸಬಹುದು. ಇವಲ್ಲದೆ ಅಷ್ಟು ದೀರ್ಘವಾದ ವಾಕ್ಯವನ್ನು ಉಪಯೋಗಿಸಬೇಕಾದ ಸಂದರ್ಭವೇ ಬಾರದಿರಬಹುದು. ಇವೆಲ್ಲ ಪ್ರವೃತ್ತಿಗೆ ಸಂಬಂಧಿಸಿದ ಪರಿಮಿತಿಗಳು. ಈ ಪರಿಮಿತಿಗಳಲ್ಲಿ ಕೆಲವು ಬರೆಯುವಾಗ ಇಲ್ಲದೆ ಹೋಗುವುದರಿಂದ, ಮಾತನಾಡುವ ವಾಕ್ಯಗಳಿಗಿಂತ ಬರೆಯುವ ವಾಕ್ಯಗಳು ದೀರ್ಘವಾಗಿರುವುದನ್ನು ಗಮನಿಸಬಹುದು. ಹಾಗೆಯೇ ಮನುಷ್ಯನ ಜೀವನ ಪರಿಮಿತವಾದರೂ ಅವನಿಗೆ ಸಾವು ಇಲ್ಲದಿರುವ ಮಾರ್ಗವನ್ನು ಕಂಡುಹಿಡಿದರೆ ಅವನ ಜೀವನ ಅನಂತವೇ ಆಗುತ್ತದೆ. ಆಗ ಅವನು ಉಪಯೋಗಿಸುವ ವಾಕ್ಯಗಳ ಸಂಖ್ಯೆಯೂ ಅನಂತವೆ. ಎಂದರೆ ಅನಂತವಾಕ್ಯಗಳನ್ನು ಸೃಷ್ಟಿಸಬಲ್ಲ ಪ್ರತಿಭೆ ಅವನಿಗಿದೆ ಎಂದಾಯಿತು. ಪರಿಮಿತಿಗಳು ಪ್ರವೃತ್ತಿಗೇ ಇವೆ. ಪ್ರತಿಭೆಗೆ ಇಲ್ಲ. ಪ್ರತಿಭೆ ಅಂತರ್ಗತವಾದುದು. ಮಾನಸಿಕವಾದುದು. ಪ್ರವೃತ್ತಿ ಭೌತಿಕವಾದುದು. ಪರಿಮಿತಿಗಳೂ ಭೌತಿಕವಾದವೇ. ಅಂತರ್ಗತವಾದ ಆತನ ವ್ಯಾಕರಣದಲ್ಲಿ ಅನಂತತ್ವವನ್ನು ಅನುಮತಿಸುವ ಯಂತ್ರಾಂಗವಿದೆ. ಈ ವ್ಯಾಕರಣ ಅಲಿಖಿತ. ಅಮೂರ್ತ. ಈ ಅಲಿಖಿತ, ಅಂತರ್ಗತ, ಅಮೂರ್ತ ವ್ಯಾಕರಣಕ್ಕೆ ಬಾಹ್ಯ ಸ್ವರೂಪವನ್ನು ಕೊಡುವುದೇ ವೈಯಾಕರಣ ಮಾಡಬೇಕಾದ ಕೆಲಸ. ವೈಯಾಕರಣ ಸೂತ್ರಿಸುವುದು ಮಾನಸಿಕವಾದ ಪ್ರತಿಭೆಯನ್ನು, ಪ್ರವೃತ್ತಿಯನ್ನಲ್ಲ. ಭಾಷಾಶಾಸ್ತ್ರ ನಿರ್ವಚಿಸುವುದು ಈ ಪ್ರತಿಭೆಯನ್ನೇ. ಆದ್ದರಿಂದ ಭಾಷಾಶಾಸ್ತ್ರ ಮಾನಸಿಕ ಜ್ಞೇಯ (ಮೆಂಟಲಿಸ್ಟಿಕ್) ಶಾಸ್ತ್ರ. ಭಾಷಾಶಾಸ್ತ್ರವನ್ನು ಚಾಮ್ಸ್ಕಿ ಮನಸ್ತತ್ತ್ವಶಾಸ್ತ್ರದಲ್ಲಿ ಒಂದು ಭಾಗವಾಗಿ ಪರಿಗಣಿಸುತ್ತಾನೆ.

ಭಾಷಾವ್ಯವಹಾರಿ ತನ್ನ ಭಾಷೆಗೆ ವ್ಯಾಕರಣವನ್ನು ನಿರ್ಮಿಸಿಕೊಳ್ಳುತ್ತಾನೆಂದು ಹೇಳಿದ್ದೇವೆ. ಇದನ್ನೇ ಅಲಿಖಿತ ವ್ಯಾಕರಣವೆಂದು ಇಲ್ಲಿ ವ್ಯವಹರಿಸಿದೆ. ಇದು ಅವನ ಪ್ರತಿಭಾಮೂಲವಾದ್ದು. ಪ್ರತಿಭೆ ವ್ಯಾಕರಣಮೂಲವಾದ್ದು ಎಂದರೂ ಎನ್ನಬಹುದು. ನಿಜವಾಗಿ ಎರಡೂ ಬೇರೆ ಬೇರೆಯಲ್ಲ. ಒಂದಕ್ಕೆ ಎರಡು ಹೆಸರುಗಳು. ಈ ಅಲಿಖಿತ ವ್ಯಾಕರಣ ಪ್ರತಿಪಾದನೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟವಲ್ಲ. ಭಾಷಾವ್ಯವಹಾರದಲ್ಲಿ ವ್ಯವಹಾರಿ ತೋರ್ಪಡಿಸುವ ಕೆಲವು ಶಕ್ತಿಗಳನ್ನು ಗಮನಿಸಿದರೆ ಈ ವಿಷಯ ವಿಶದವಾಗುತ್ತದೆ. ಅಂತರ್ಗತವಾದ ಅಲಿಖಿತ ವ್ಯಾಕರಣವನ್ನು ನಾವು ಪ್ರತಿಪಾದಿಸದೆ ಹೋದರೆ ಈ ಶಕ್ತಿಗಳಿಗೆ ಬೇರೆ ಗತಿಯಿಲ್ಲ. ಭಾಷಾಲಕ್ಷಣಗಳನ್ನು ಭಾಷಾವ್ಯವಹಾರಿ ವ್ಯಕ್ತರೂಪವಾಗಿ ಹೇಳಬಲ್ಲನೆಂದು ಈ ಪ್ರತಿಪಾದನೆಗೆ ಅರ್ಥವಲ್ಲ. ಹಾಗೆ ವ್ಯವಹಾರಿ ಹೇಳಬಲ್ಲನಾದರೆ ವ್ಯಾಕರಣ ಪರಿಶೋಧನೆಯೇ ಅನಗತ್ಯ. ಅವನ ಎಲ್ಲ ಭಾಷಾವ್ಯವಹಾರಗಳನ್ನು ಅವ್ಯಕ್ತವಾಗಿದ್ದುಕೊಂಡು ನಡೆಸುವುದು ಈ ವ್ಯಾಕರಣ ಎಂಬುದೇ ಇದರ ಅರ್ಥ.

ಭಾಷಾವ್ಯವಹಾರಿ, ಭಾಷಾ ಪರಿಜ್ಞಾನ

ಭಾಷಾವ್ಯವಹಾರಿಗೆ ತಾನು ವ್ಯವಹರಿಸುವ ಭಾಷೆಯನ್ನು ಕುರಿತು ಪೂರ್ತಿಯಾಗಿ ತಿಳಿದಿದೆ. ಒಂದು ವಾಕ್ಯದಲ್ಲಿ ಭಿನ್ನ ಪದಗಳ ವ್ಯಾಕರಣ ಸಂಬಂಧ ಅವನಿಗೆ ತಿಳಿದಿದೆ. ಅದು ತಿಳಿದಿರುವುದರಿಂದಲೇ ಅವನು ಸರಿಯಾಗಿ ವಾಕ್ಯನಿರ್ಮಾಣ ಮಾಡಬಲ್ಲವನಾಗಿರುತ್ತಾನೆ. ಭಿನ್ನ ವಾಕ್ಯಗಳ ಪರಸ್ಪರ ಸಂಬಂಧ ಅವನಿಗೆ ಗೊತ್ತು. ಒಂದು ವಾಕ್ಯಕ್ಕೆ ಅದರಲ್ಲಿರುವ ಪದಗಳ ವ್ಯಾಕರಣ ಸಂಬಂಧಗಳಲ್ಲಿ ಭಿನ್ನತ್ವವಿದ್ದರೆ ಅದರಿಂದಾಗಿ ಲಭ್ಯವಾಗುವ ಭಿನ್ನಾರ್ಥಗಳ ಪರಿಜ್ಞಾನ ಅವನಿಗಿರುತ್ತದೆ. ಸ್ಥೂಲದೃಷ್ಟಿಗೆ ಒಂದೇ ರೀತಿಯಾಗಿ ಕಾಣಿಸುವ ವಾಕ್ಯಗಳ ವ್ಯಾಕರಣಭೇದವನ್ನು ಅವನು ಗ್ರಹಿಸಬಲ್ಲ. ಭಿನ್ನವಾಕ್ಯಗಳು ಒಂದಕ್ಕೊಂದು ಪರಸ್ಪರ ವಿವರಣಾತ್ಮಕಗಳಾಗಿವೆಯೊ ಇಲ್ಲವೊ ಎಂಬುದನ್ನು ಅವನು ತಿಳಿಯಬಲ್ಲ. ವ್ಯಾಕರಣಸಮ್ಮತವಾದ ವಾಕ್ಯಗಳಿಗೂ ವ್ಯಾಕರಣ ವಿರುದ್ಧವಾದ ವಾಕ್ಯಗಳಿಗೂ ಇರುವ ಭೇದವನ್ನು ಅವನು ತಿಳಿಯುತ್ತಾನೆ. ವ್ಯಾಕರಣ ವಿರುದ್ಧವಾದ ವಾಕ್ಯಗಳಿಗೆ ವ್ಯಾಕರಣ ಸಮ್ಮತವಾದ ವಾಕ್ಯಗಳ ಸಹಾಯದಿಂದ ಅವನು ಅರ್ಥಗ್ರಹಣ ಮಾಡಬಲ್ಲ. ಈ ಶಕ್ತಿಗಳೆಲ್ಲ ಅವನಿಗೆ ಇವೆಯೆಂದಮೇಲೆ ತನ್ನ ಭಾಷೆಯನ್ನು ಕುರಿತು ಭಾಷಾವ್ಯವಹಾರಿಗೆ ಸಂಪೂರ್ಣ ಪರಿಜ್ಞಾನ ಇದ್ದಂತೆಯೇ ಸರಿ. ಇದನ್ನೇ ಪ್ರತಿಭೆ ಎಂದು ಪರಿವರ್ತನ

ಸಿದ್ಧಾಂತಕಾರರು ಹೇಳುತ್ತಾರೆ. ಈ ಪ್ರತಿಭಾಮೂಲವಾದುದೇ ಅಲಿಖಿತ ವ್ಯಾಕರಣ. ಈ ಶಕ್ತಿಗಳನ್ನು ಮನವರಿಕೆ ಮಾಡಿಕೊಳ್ಳಲು ಕನ್ನಡದಿಂದ ಕೆಲವು ಉದಾಹರಣೆಗಳನ್ನು ನೋಡೋಣ.

1 ಮುಚ್ಚಿಡುವುದಕ್ಕೇನಿದೆ?

ಎಂಬ ಈ ವಾಕ್ಯವನ್ನು ಪ್ರಯೋಗಿಸಿದಾಗ ಸಂದರ್ಭವನ್ನನುಸರಿಸಿ ಮೂರರ್ಥಗಳಿರುವುದು ಸಾಧ್ಯ. ಒಂದನೆಯದು ಮುಚ್ಚಿಡುವುದಕ್ಕೆ ಸಾಧನವೇನಿದೆ? ಎಂಬ ಪ್ರಶ್ನಾರ್ಥ. ಎರಡನೆಯದು ಮುಚ್ಚಿಡುವುದಕ್ಕೆ ಸಾಧನವಿಲ್ಲವೆಂಬ ಅರ್ಥ. ಮೂರನೆಯದು ಮುಚ್ಚಿಡಬೇಕಾದುದು ಏನೂ ಇಲ್ಲವೆಂಬ ಅರ್ಥ. ಮುಚ್ಚಿಡು ಎಂಬ ಕ್ರಿಯೆಯೊಡನೆ 'ಏನು' ಎಂಬ ಪ್ರಶ್ನಾರ್ಥಕ ಸರ್ವನಾಮ ಶಬ್ದವನ್ನು ಅನ್ವಯಿಸುವ ರೀತಿಯಲ್ಲಿರುವ ಭೇದದಿಂದಾಗಿ ಎರಡನೆಯ ಮತ್ತು ಮೂರನೆಯ ಅರ್ಥಗಳು ಹೊರಡುತ್ತವೆ. 'ಏನು' ಎಂಬ ಪ್ರಶ್ನಾರ್ಥಕ ಸರ್ವನಾಮ ಮೊದಲ ಎರಡು ಸಂದರ್ಭಗಳಲ್ಲಿ ಕರಣಾರ್ಥಕ. ಮೂರನೆಯ ಸಂದರ್ಭದಲ್ಲಿ ಕರ್ಮಾರ್ಥಕ. ಈ ಅರ್ಥಗಳನ್ನು ಅಂತರ್ಗತ ವ್ಯಾಕರಣದ ಮೂಲಕ ಭಾಷಾವ್ಯವಹಾರಿ ಗ್ರಹಿಸಬಲ್ಲ.

2 (ಅ) ಸೀತೆ ಪೆನ್ನಿನಿಂದ ಪರೀಕ್ಷೆ ಬರೆದಳು

(ಆ) ಸೀತೆ ಜ್ವರದಿಂದ ಪರೀಕ್ಷೆ ಬರೆದಳು

ಈ ಎರಡು ವಾಕ್ಯಗಳು ಸ್ಥೂಲದೃಷ್ಟಿಗೆ ಒಂದೇ ನಿರ್ಮಾಣರೀತಿಯಲ್ಲಿದ್ದಂತೆ ಕಂಡುಬರುತ್ತವೆ. ಆದರೆ ಮೊದಲನೆಯ ವಾಕ್ಯದಿಂದ "ಸೀತೆ ಪರೀಕ್ಷೆ ಬರೆದ ಪೆನ್ನು" ಎಂಬ ನಾಮಬಂಧವನ್ನು ನಿಷ್ಪನ್ನಮಾಡಿದಂತೆ ಎರಡನೆಯ ವಾಕ್ಯದಿಂದ "ಸೀತೆ ಪರೀಕ್ಷೆ ಬರೆದ ಜ್ವರ" ಎಂಬ ನಾಮಬಂಧವನ್ನು ನಿಷ್ಪನ್ನಮಾಡಲಾರೆವು. ಈ ಎರಡು ವಾಕ್ಯಗಳಲ್ಲಿ ಪ್ರಯುಕ್ತವಾದ 'ಇಂದ-ಬಂಧ'ದಲ್ಲಿ ಭೇದವಿದೆ. ಮೊದಲನೆಯ ವಾಕ್ಯದಲ್ಲಿ 'ಪೆನ್ನಿನಿಂದ' ಎಂಬ ಪದ ಕ್ರಿಯೆಗೆ ಅನ್ವಯಿಸುತ್ತದೆ. ಎರಡನೆಯ ವಾಕ್ಯದಲ್ಲಿ 'ಜ್ವರದಿಂದ' ಎಂಬ ಪದ ಕರ್ತೃವಿಗೆ ಅನ್ವಯಿಸುತ್ತದೆ. ಈ ಸಂಬಂಧವನ್ನು ತಿಳಿದಿರುವುದರಿಂದಲೇ ಭಾಷಾವ್ಯವಹಾರಿ ನಾಮಬಂಧಗಳ ನಿಷ್ಪತ್ತಿಯಲ್ಲಿ ಮೇಲೆ ಸೂಚಿಸಿದ ನಿಯಮವನ್ನು ಪಾಲಿಸುತ್ತಾನೆ.

3 (ಅ) ಅವನು ಸ್ನಾನಮಾಡಿ ಒಂದು ವಾರವಾಯಿತು

(ಆ) ಅವನು ಒಂದು ವಾರದ ಹಿಂದೆ ಸ್ನಾನ ಮಾಡಿದ್ದಾನೆ

ಸ್ಥೂಲದೃಷ್ಟಿಗೆ ಮೇಲಿನ ಎರಡು ವಾಕ್ಯಗಳಲ್ಲಿ ಭಿನ್ನ ವ್ಯಾಕರಣ ನಿರ್ಮಾಣವಿದ್ದಂತೆ ಕಂಡುಬರುತ್ತದೆ. ಮೊದಲನೆಯ ವಾಕ್ಯದಲ್ಲಿ ಎರಡು ಕ್ರಿಯೆಗಳಿವೆ. ಅದು ಸಂಶ್ಲಿಷ್ಟ ವಾಕ್ಯ. ಎರಡನೆಯದರಲ್ಲಿ ಒಂದೇ ಕ್ರಿಯೆ ಇದೆ. ಇದು ಅಶ್ಲಿಷ್ಟವಾಕ್ಯ. ಪ್ರಾಧಾನ್ಯ ವಿವಕ್ಷೆಯಲ್ಲಿ ಭೇದವಿದ್ದರೂ, ಪ್ರಧಾನಾರ್ಥ ಒಂದೆ. ವ್ಯಾಕರಣ ನಿಯಮಗಳಲ್ಲೂ ಸಾಮ್ಯವಿದೆ. ಎರಡರಲ್ಲೂ 'ವಾರ'ದ ಬದಲು 'ನಿನ್ನೆ'. 'ಮೊನ್ನೆ'. ಮೊದಲಾದ ಪದಗಳನ್ನು ಪ್ರಯೋಗಿಸುವುದು ಸಾಧ್ಯವಿಲ್ಲ. ಹಾಗೆಯೇ ನೈನ್ ಓ ಕ್ಲಾಕ್ ಎಂಬ ಅರ್ಥದಲ್ಲಿ 9 ಗಂಟೆಗಳು ಎಂಬುದಾಗಿ ಪ್ರಯೋಗಿಸುವುದಕ್ಕೆ ಸಾಧ್ಯವಿಲ್ಲ. ಇಂತಹ ಸಾಮಾನ್ಯ ಲಕ್ಷಣಗಳನ್ನು ತಿಳಿದಿರುವುದರಿಂದಲೇ ಭಾಷಾವ್ಯವಹಾರಿ ಮೇಲೆ ಹೇಳಿದ ನಾಮಪದಗಳನ್ನು ಆ ವಾಕ್ಯಗಳಲ್ಲಿ ಪ್ರಯೋಗಿಸುವುದಿಲ್ಲ.

4 (ಅ) ನನಗೆ ಸೈಕಲ್ ಗೊತ್ತು

(ಆ) ನನಗೆ ಕೃಷ್ಣಪ್ಪ ಗೊತ್ತು

ಮೊದಲನೆಯ ವಾಕ್ಯದಲ್ಲಿ 'ಗೊತ್ತು' ಎಂಬುದಕ್ಕೆ ಬದಲಾಗಿ 'ಬರುತ್ತದೆ' ಎಂಬ ಕ್ರಿಯಾಪದವನ್ನು ಪ್ರಯೋಗಿಸಬಹುದು. ಎರಡನೆಯ ವಾಕ್ಯದಲ್ಲಿ 'ಬರುತ್ತದೆ' ಎಂಬ ಕ್ರಿಯಾಪದವನ್ನು ಪ್ರಯೋಗಿಸಿ

'ನನಗೆ ಕೃಷ್ಣಪ್ಪ ಬರುತ್ತದೆ' ಎನ್ನುವುದು ಸಾಧ್ಯವಿಲ್ಲ. 'ಬರುತ್ತದೆ' ಎಂಬ ಕ್ರಿಯೆಯೊಡನೆ ಅಭ್ಯಸನಾರ್ಹವಾದ ನಾಮಪದಗಳೇ ಕರ್ತೃಪದ ಸ್ಥಾನದಲ್ಲಿ ಬರುತ್ತವೆ ಎಂದು ಅಂತರ್ಗತ ವ್ಯಾಕರಣದಲ್ಲಿ ನಿಯಮವಿರುವುದರಿಂದ ಭಾಷಾವ್ಯವಹಾರಿ ಆ ವಾಕ್ಯವನ್ನು ಪ್ರಯೋಗಿಸುವುದಿಲ್ಲ. ಎಂದರೆ ಪದಗಳ ಮಧ್ಯೆ ಇರುವ ಪರಸ್ಪರ ವ್ಯಾಕರಣ ಸಂಬಂಧಗಳು ಅವನಿಗೆ ತಿಳಿದಿದೆಯೆಂದೂ, ವ್ಯಾಕರಣ ಸಮ್ಮತವಾದ ವಾಕ್ಯಕ್ಕೂ ವ್ಯಾಕರಣವಿರುದ್ಧವಾದ ವಾಕ್ಯಕ್ಕೂ ಇರುವ ಭೇದ ತಿಳಿದಿದೆಯೆಂದೂ ಅರ್ಥ.

ವ್ಯಾಕರಣ ಸಮ್ಮತಿ

ವ್ಯಾಕರಣ ಸಮ್ಮತಿಯನ್ನು ಕುರಿತು ಇನ್ನೂ ಸ್ವಲ್ಪ ವಿವರವಾಗಿ ತಿಳಿದುಕೊಳ್ಳುವುದು ಅಗತ್ಯ. ಈ ಸಂದರ್ಭದಲ್ಲಿ ವ್ಯಾಕರಣವೆಂದರೆ ಭಾಷಾವ್ಯವಹಾರಿಯ ಮನಸ್ಸಿನಲ್ಲಿ ಅಜ್ಞಾತವಾಗಿರುವ ಅಲಿಖಿತ ಸೂತ್ರಗಳು ಮತ್ತು ನಿಯಮಗಳು. ಇವನ್ನು ಸ್ವಲ್ಪಮಟ್ಟಿಗಾದರೂ ಹಿಡಿದಿಡಬಲ್ಲ ಲಿಖಿತ ವ್ಯಾಕರಣಕ್ಕೂ ಈ ಪದ ಈ ರೀತಿಯಲ್ಲಿ ಪ್ರಯೋಗವಾಗಿದೆ. ವ್ಯಾಕರಣ ಸಮ್ಮತಿ ಎಂದರೆ ಈ ಎರಡು ವ್ಯಾಕರಣಗಳ ಸಮ್ಮತಿ ಎಂದು ಅರ್ಥಮಾಡಿಕೊಳ್ಳಬಹುದು. ಅಲಿಖಿತ ವ್ಯಾಕರಣಕ್ಕಿಂತ ಲಿಖಿತ ವ್ಯಾಕರಣ ಅಸಮಗ್ರವಾಗಿರುವುದರಿಂದ ಅಲಿಖಿತ ವ್ಯಾಕರಣ ಸಮ್ಮತಿ ಎಂಬ ಅರ್ಥವನ್ನು ಕೊಡುವುದೇ ಹೆಚ್ಚು ಸಮಂಜಸವಾಗಿದೆ.

ವ್ಯಾಕರಣ ಸಮ್ಮತಿ, ಭಾಷಾವ್ಯವಹಾರಿಯ ಸಮ್ಮತಿ ಒಂದೇ ಅಲ್ಲ. ವ್ಯಾಕರಣ ಸಮ್ಮತವಾದ ಒಂದು ವಾಕ್ಯ ಬಹಳ ದೀರ್ಘವಾದರೆ ಭಾಷಾವ್ಯವಹಾರಿ ಅರ್ಥಬೋಧೆಯಾಗಲಿಲ್ಲವೆಂದು ಅದನ್ನು ನಿರಾಕರಿಸಬಹುದು. ವ್ಯಾಕರಣ ವಿರುದ್ಧವಾದರೂ ಒಂದು ವಾಕ್ಯ ಅರ್ಥಬೋಧೆಯನ್ನು ಕೂಡಲೆ ಉಂಟುಮಾಡುವುದಾದರೆ ಭಾಷಾವ್ಯವಹಾರಿ ಅದನ್ನು ಅಂಗೀಕರಿಸಬಹುದು. ಕೆಲವು ಸ್ಪಷ್ಟವಾದ ಉದಾಹರಣೆಗಳ ವಿಷಯದಲ್ಲಿ ವ್ಯಾಕರಣವಿರುದ್ಧವಾದವುಗಳನ್ನು ಭಾಷಾವ್ಯವಹಾರಿ ಕೂಡಲೆ ಗುರುತಿಸಿ ನಿರಾಕರಿಸುತ್ತಾನೆ. "ನೀನು ಹೋಗಬಹುದು" ಎಂಬ ಅರ್ಥದಲ್ಲಿ "ಬಹುದು ನೀನು ಹೋಗ" ಎಂಬ ಪ್ರಯೋಗ ವ್ಯಾಕರಣವಿರುದ್ಧವಾದುದೆಂದು ಭಾಷಾವ್ಯವಹಾರಿ ಗುರುತಿಸಬಲ್ಲ. ಹಾಗೆಯೇ "ನಾಳೆ ನಮ್ಮ ಮನೆದಲ್ಲಿ ಹಬ್ಬ" ಎಂಬ ವಾಕ್ಯದಲ್ಲಿ 'ಮನೆದಲ್ಲಿ' ಎಂಬ ಪದರೂಪ ಸರಿಯಲ್ಲವೆಂದೂ 'ಮನೆಯಲ್ಲಿ' ಎಂಬುದೇ ಸರಿಯಾದ ರೂಪವೆಂದೂ ಭಾಷಾವ್ಯವಹಾರಿ ಹೇಳಬಲ್ಲ. ಪದಕ್ರಮವ್ಯತ್ಯಯ, ತಪ್ಪಾದ ಪ್ರತ್ಯಯ ವಿಧಾನ ಮುಂತಾದವುಗಳನ್ನು ಗುರುತಿಸುವಲ್ಲಿಯೂ ನಿರಾಕರಿಸುವಲ್ಲಿಯೂ ಭಾಷಾವ್ಯವಹಾರಿ ಆಲೋಚಿಸಬೇಕಾಗಿಲ್ಲ. ಆದರೆ ಭಿನ್ನ ಪದಗಳ ಪರಸ್ಪರ ವ್ಯಾಕರಣ ಸಂಬಂಧಗಳ ಉಲ್ಲಂಘನೆಯನ್ನು ಭಾಷಾವ್ಯವಹಾರಿ ಸಕಾರಣವಾಗಿ ಹೇಳುವಷ್ಟರ ಮಟ್ಟಿಗೆ ಗುರುತಿಸುವುದು ಕಷ್ಟ. ಮೊದಲು ಹೇಳಿದ ಪದಕ್ರಮವ್ಯತ್ಯಯವನ್ನು ಸಾಮಾನ್ಯ ಪರಿಸ್ಥಿತಿಗಳಲ್ಲಿ ಮಾತೃಭಾಷಾ ವ್ಯವಹಾರಿಗಳು ಮಾಡುವುದಿಲ್ಲ. ವ್ಯಾಕರಣ ಸಂಬಂಧವಾದ ಉಲ್ಲಂಘನೆಗಳನ್ನು ಒಮ್ಮೊಮ್ಮೆ ಮಾತ್ರ ಭಾಷಾವ್ಯವಹಾರಿಗಳು, ಲೇಖಕರು, ಕವಿಗಳು ಮಾಡುವುದಿದೆ.

ವ್ಯಾಕರಣವಿರುದ್ಧವಾದ ವಾಕ್ಯಗಳು ಪ್ರಯೋಗಾರ್ಹವಲ್ಲವೆಂದು ಹೇಳುವುದು ಇಲ್ಲಿ ಉದ್ದೇಶವಲ್ಲ. ಪ್ರಯೋಜನವನ್ನನುಸರಿಸಿ ವ್ಯಾಕರಣವಿರುದ್ಧವಾದ ವಾಕ್ಯಗಳನ್ನು ಒಮ್ಮೊಮ್ಮೆ ನಾವು ಪ್ರಯೋಗಿಸುವುದಿದೆ. ಪ್ರಯೋಗ ವ್ಯವಹಾರಕ್ಕೆ ಸಂಬಂಧಿಸಿದುದು. ಎಂದರೆ ಪ್ರವೃತ್ತಿಗತವಾದುದು. ವ್ಯವಹಾರಿಯ ಸಮ್ಮತಿ ಕೂಡ ಅಂಥದೇ. ಪ್ರಾಚೀನ (ಗ್ರಾಂಥಿಕ) ಭಾಷೆ ವ್ಯಾಕರಣಸಮ್ಮತವಾದುದೆಂದೂ ಆಧುನಿಕ (ವ್ಯವಹಾರ) ಭಾಷೆ ವ್ಯಾಕರಣವಿರುದ್ಧವಾದುದೆಂದೂ ಕೆಲವರು ಭಾವಿಸುವುದಿದೆ. ಇದಕ್ಕಾಗಿ ಅವರ ಶಿಕ್ಷಣ ಪದ್ಧತಿಯಿಂದಾಗಿ ಅವರಲ್ಲಿ ಬೇರೂರಿದ ನಿಶ್ಚಿತವಾದ ಅಭಿಪ್ರಾಯಗಳಿವೆ. ಇದೂ ಪ್ರವೃತ್ತಿಗೆ ಸಂಬಂಧಿಸಿದ್ದು. ಅಭಿರುಚಿ, ಆತಂಕ, ಪರಿಮಿತಿಗಳು ಪ್ರವೃತ್ತಿಗೇ ಇರುವಂಥವು.

ವ್ಯಾಕರಣ ಸಮ್ಮತಿ ಪ್ರತಿಭೆಗೆ ಸಂಬಂಧಿಸಿದ್ದು. ವ್ಯವಹಾರಿಯ ಸಮ್ಮತಿ ಪ್ರವೃತ್ತಿಗೆ ಸಂಬಂಧಿಸಿದ್ದು. ಇವು ಒಮ್ಮೊಮ್ಮೆ ಒಂದೇ ಇರಬಹುದು. ಭಿನ್ನವಾಗಿರುವುದೂ ವಿರಳವಲ್ಲ. ಭಾಷಾವ್ಯವಹಾರಿಯ ಪ್ರತಿಭಾ ನಿರೂಪಣೆಯನ್ನೇ ಲಿಖಿತ ವ್ಯಾಕರಣ ಮಾಡಬೇಕಾದುದು. ಆಗ ಪ್ರವೃತ್ತಿಯನ್ನು ಕೂಡ ಅರ್ಥ

ಮಾಡಿಕೊಳ್ಳುವುದು ಸುಲಭವಾಗುತ್ತದೆ. ಪ್ರವೃತ್ತಿ ಪ್ರತಿಭೆಯನ್ನಾಧರಿಸುತ್ತದೆ. ಪ್ರತಿಭೆಯನ್ನು ನಿರೂಪಿಸುವುದಕ್ಕೆ ಪ್ರವೃತ್ತಿ ಆಧಾರಗಳನ್ನು ಒದಗಿಸುತ್ತದೆ.

ಶಾಸ್ತ್ರ, ವ್ಯಾಕರಣಗಳು ಸಾಧಿಸಬೇಕಾದ ಸಮಗ್ರತೆ

ವ್ಯಾಕರಣಗಳೂ ಶಾಸ್ತ್ರಗಳೂ ಸಾಧಿಸಬೇಕಾದ ಸಮಗ್ರತೆಯನ್ನು ಮೂರು ವಿಧವಾಗಿ ವಿಭಜಿಸಬಹುದು: 1 ಒಂದು ಭಾಷೆಯಲ್ಲಿರುವ ವ್ಯಾಕರಣ ರಚನಾನುಕೂಲ ವಾಕ್ಯಗಳನ್ನು ಶೇಖರಿಸಿ, ಅವುಗಳನ್ನು ವರ್ಣ. ಪದಾಂಗದಂಥ ಚೌಕಟ್ಟುಗಳಿಗೆ ಸರಿಹೋಗುವಂತೆ ವಿಭಜಿಸಿ ಅಕ್ಷರಬದ್ಧ ಮಾಡುವುದು. ಹೀಗೆ ರೂಪುಗೊಂಡ ವ್ಯಾಕರಣ. ಪರಿಶೀಲನಸಮಗ್ರತೆಯನ್ನು ಸಾಧಿಸಿದೆ ಎನ್ನಬಹುದು. ಈ ಕೆಲಸ ಮೇಲುನೋಟಕ್ಕೆ ಸುಲಭವೆಂಬುದಾಗಿ ಕಂಡುಬಂದರೂ ಇದನ್ನು ಸಾಧಿಸುವುದು ಕೂಡ ಅಂದುಕೊಂಡಷ್ಟು ಸುಲಭವಲ್ಲ. ಭಾಷಾವ್ಯವಹಾರಿಯ ಪ್ರತಿಭೆ ಯಾವ ವಾಕ್ಯದಲ್ಲಿ ಪ್ರತಿಫಲಿಸುತ್ತದೆ, ಯಾವ ವಾಕ್ಯಗಳು ವ್ಯಾಕರಣ ರಚನಾರ್ಹತೆಯನ್ನು ಪಡೆದಿವೆ ಎಂಬುದನ್ನು ನಿರ್ಧರಿಸುವುದು ಕೂಡ ಸ್ವಲ್ಪ ಕಷ್ಟಸಾಧ್ಯವೇ ಆಗಿದೆ. ಒಮ್ಮೊಮ್ಮೆ ಶೇಖರಿಸಿದ ವಾಕ್ಯಗಳು ಬಹು ಸಂಖ್ಯೆಯಲ್ಲಿದ್ದರೂ. ವ್ಯವಹಾರಿಯ ಪ್ರತಿಭೆಯನ್ನು ಸಮಗ್ರವಾಗಿ ಪ್ರತಿಫಲಿಸದೆ ವ್ಯಾಕರಣರಚನೆಗೆ ಯೋಗ್ಯವಲ್ಲದಿರಬಹುದು, ಅಥವಾ ಅಸಮಗ್ರವಾಗಿರಬಹುದು. 2 ಒಂದು ವ್ಯಾಕರಣ ಭಾಷಾವ್ಯವಹಾರಿಯ ಪ್ರತಿಭೆಯನ್ನು, ಆತನ ಭಾಷಾ–ವ್ಯಾಕರಣ ಪರಿಜ್ಞಾನವನ್ನು ಸರಿಯಾಗಿ ವಿವರಿಸಿ, ಪರಿಶೀಲಿಸಿದ ವಾಕ್ಯಗಳಲ್ಲಿ ಅಂತರ್ನಿಹಿತವಾಗಿರುವ ನಿಯಮಾವಳಿಯನ್ನು ಸೂತ್ರ ಪದ್ಧತಿಯಲ್ಲಿ ನಿರ್ವಚಿಸಬಲ್ಲುದಾದರೆ ಆ ವ್ಯಾಕರಣ ವರ್ಣನ ಸಮಗ್ರತೆಯನ್ನು ಸಾಧಿಸಿದೆಯೆನ್ನಬಹುದು. ಈ ನಿಯಮಾವಳಿ ಪರಿಶೀಲಿಸಿದ ವಾಕ್ಯಗಳಿಗೇ ಪರಿಮಿತವಲ್ಲ. ವ್ಯವಹಾರಿಗೆ ಇರುವ ವ್ಯಾಕರಣ ಪರಿಜ್ಞಾನ ಸರ್ವಸ್ವವನ್ನು ಪ್ರತಿಬಿಂಬಿಸಬಲ್ಲುದಾಗಿರಬೇಕು. ಎಂದರೆ ಭಾಷಾವ್ಯವಹಾರಿಯ ಅಧೀನದಲ್ಲಿರುವ ಅಂತರ್ಗತ ವ್ಯಾಕರಣಕ್ಕೆ ಬಾಹ್ಯರೂಪವನ್ನು ಕಲ್ಪಿಸಬೇಕು. 3 ಪರಿಶೀಲನೆಗೆ ಒಳಗಾದ ವಾಕ್ಯಗಳನ್ನು ವ್ಯಾಕರಣಕ್ಕೆ ಅಳವಡಿಸುವಾಗ ವ್ಯಾಕರಣಗಳಲ್ಲಿ ಭಿನ್ನತ್ವವಿರಬಹುದು. ಅವುಗಳಲ್ಲಿ ಯಾವ ವ್ಯಾಕರಣ ಭಾಷಾವ್ಯವಹಾರಿಯ ಪ್ರತಿಭೆಯನ್ನು ಅಧಿಕವಾಗಿ ಪ್ರತಿಬಿಂಬಿಸಿದೆಯೊ ಅದನ್ನು ಎತ್ತಿ ತೋರಿಸಬಲ್ಲ ಭಾಷಾಸಿದ್ಧಾಂತ ವಿವರಣ ಸಮಗ್ರತೆಯನ್ನು ಸಾಧಿಸಿದೆಯೆನ್ನಬಹುದು. ವರ್ಣನ ಸಮಗ್ರತೆಯನ್ನು ಸಾಧಿಸಿದ ವ್ಯಾಕರಣಕ್ಕೆ ಸಹೇತುಕವಾದ, ಶಾಸ್ತ್ರೀಯವಾದ ವಿವರಣೆಯನ್ನು ಭಾಷಾಸಿದ್ಧಾಂತ ಕೊಡುತ್ತದೆ. ವರ್ಣನ ಸಮಗ್ರತೆಯನ್ನು ಸಾಧಿಸಿದ ವ್ಯಾಕರಣ ಸ್ವಭಾಷೆಯಲ್ಲಿ ವ್ಯವಹಾರಿಗೆ ಇರುವ ಪರಿಜ್ಞಾನವನ್ನು ಪ್ರತಿಬಿಂಬಿಸಿದರೆ, ಅಂಥ ವ್ಯಾಕರಣವನ್ನು ವ್ಯವಹಾರಿ ತನ್ನಲ್ಲಿ ನಿರ್ಮಿಸಿಕೊಳ್ಳಲು ಆತನಿಗಿರುವ ಶಕ್ತಿಗಳನ್ನು (ಇದು ಜನ್ಮಸಿದ್ಧವಾದುದೆಂದು ಹಿಂದೆಯೇ ಹೇಳಿದ್ದೇವೆ) ಭಾಷಾಸಿದ್ಧಾಂತ ಪ್ರತಿಬಿಂಬಿಸುತ್ತದೆ. ಎಂದರೆ ಭಾಷಾಸಿದ್ಧಾಂತವೂ, ಸ್ವಭಾಷಾ ವ್ಯಾಕರಣವೂ ವ್ಯವಹಾರಿಗೆ ಇವೆಯೆಂದಂತಾಯಿತು. ಆದ್ದರಿಂದ ವ್ಯವಹಾರಿಯಲ್ಲಿ ಅಂತರ್ಗತವಾಗಿರುವಂಥವುಗಳನ್ನು ಸಿದ್ಧಾಂತೀಕರಿಸುವುದೇ ಭಾಷಾಶಾಸ್ತ್ರವೂ ವ್ಯಾಕರಣವೂ ಮಾಡಬೇಕಾದ ಕೆಲಸಗಳು, ನಿಜವಾಗಿಯೂ ಇವೆರಡನ್ನೂ ಸಾಧಿಸುವುದು ಬಹು ಕಷ್ಟ. ವ್ಯವಹಾರಿಗಿರುವ ಸಿದ್ಧಾಂತವನ್ನೂ ವ್ಯಾಕರಣವನ್ನೂ ಇಂದ್ರಿಯಗಳ ಮೂಲಕ ಗ್ರಹಿಸಲಾರೆವು. ಭೌತಿಕ ಪರಿಕರಗಳ ಮೂಲಕ ಸಾಧಿಸುವುದು ಸಾಧ್ಯವೇ ಇಲ್ಲ. ಇವುಗಳನ್ನು ಸಾಧಿಸುವುದಕ್ಕೆ ಪ್ರತ್ಯಕ್ಷವಾದ, ಖಚಿತವಾದ ಮಾರ್ಗಗಳೂ ಇಲ್ಲ. ಇವು ನಿರಂತರವಾದ ಪರಿಶೋಧನೆಗಳ ಮೂಲಕ ಶಾಸ್ತ್ರಜ್ಞರು ಸಾಧಿಸಬೇಕಾದವು. ಇಷ್ಟರ ವರೆಗೆ ಯಾವ ಭಾಷೆಗೂ ವರ್ಣನ ಸಮಗ್ರತೆಯನ್ನು ಸಾಧಿಸಿದ ಸಂಪೂರ್ಣ ವ್ಯಾಕರಣವಿಲ್ಲ. ಭಾಷೆಯ ಒಂದೊಂದು ಅಂಶಗಳಿಗೆ ಮಾತ್ರ ಅನ್ವಯಿಸಿ ಅಂಥ ಪ್ರಯತ್ನಗಳು ಸವಿಸ್ತರವಾಗಿ ನಡೆದಿವೆ. ಹಾಗೆಯೇ ವಿವರಣ ಸಮಗ್ರತೆಯನ್ನು ಸಾಧಿಸಿದ ಭಾಷಾಸಿದ್ಧಾಂತ ಇಲ್ಲವೇ ಇಲ್ಲ. ಪರಿವರ್ತನಸಿದ್ಧಾಂತ ಆ ಮಾರ್ಗದಲ್ಲಿ ಸ್ವಲ್ಪ ವಿಜಯವನ್ನು ಸಾಧಿಸಿದೆ. ಈ ಸಿದ್ಧಾಂತ ಕೂಡ 1957ರಿಂದ ಇಷ್ಟರವರೆಗೆ ಎಷ್ಟೋ ಮಾರ್ಪಾಟುಗಳನ್ನು ಪಡೆದಿದೆ. ಇನ್ನೂ ಎಷ್ಟೋ ಮಾರ್ಪಾಟುಗಳು ಉಂಟಾಗಬಹುದು. ವ್ಯಾಕರಣವೂ ಶಾಸ್ತ್ರವೂ ಕ್ರಮವಾಗಿ ವರ್ಣನ ಸಮಗ್ರತೆಯನ್ನು, ವಿವರಣ ಸಮಗ್ರತೆಯನ್ನು ಲಕ್ಷ್ಯವಾಗಿಟ್ಟುಕೊಳ್ಳದೆ ಹೋದರೆ ಭಾಷಾ ಪರಿಶೋಧನೆ ಆಶಾದಾಯಕವಾಗಿರಲಾರದು.

ಚಾಮ್ಸ್‌ಕಿಗೆ ಪೂರ್ವದ ಶಾಸ್ತ್ರಜ್ಞರು ಮೊದಲನೆಯದಾಗಿ ಸೂಚಿಸಿದ ಪರಿಶೀಲನ ಸಮಗ್ರತೆಗೋಸ್ಕರವೇ ಶಕ್ತಿಯುಕ್ತಿಗಳನ್ನು ವೆಚ್ಚಮಾಡಿದರು. ತಾವು ಪರಿಶೀಲಿಸಿದ ವಾಕ್ಯಗಳನ್ನು ಪದಾಂಗಗಳಾಗಿ, ಅವಯವಿಗಳಾಗಿ ವ್ಯವಸ್ಥೆಗೊಳಿಸುವುದೇ ವ್ಯಾಕರಣ ಲಕ್ಷ್ಯವೆಂದು ಅವರು ಅಂದುಕೊಂಡಿದ್ದರು. ಭಾಷೆಯಲ್ಲಿ ಅಂತರ್ನಿಹಿತವಾಗಿ ಇರುವ ಸೂತ್ರಗಳನ್ನು ಕಂಡು ಹಿಡಿಯುವುದಕ್ಕೆ ಅವರು ಪ್ರಯತ್ನಿಸಲಿಲ್ಲ. ಅವರ ವ್ಯಾಕರಣ ಸಾಮಾನ್ಯವಾಗಿ ಅವರು ಶೇಖರಿಸಿದ ವಾಕ್ಯಗಳಿಗೇ ಪರಿಮಿತವಾಗಿತ್ತು. ವ್ಯವಹಾರಿಯ ಪ್ರತಿಭೆಗೆ ಬದಲು ಪ್ರವೃತ್ತಿಯನ್ನೇ ಧ್ಯೇಯವಾಗಿ ಇಟ್ಟುಕೊಂಡರು. ಪ್ರವೃತ್ತಿಯನ್ನು ಸಾಧಿಸಬೇಕಾದರೂ ಪ್ರತಿಭಾವರ್ಣನೆಯ ಮೂಲಕವೇ ಅದು ಸಾಧ್ಯವೆಂಬುದನ್ನು ಅವರು ಗಮನಿಸಲಿಲ್ಲ. ಒಂದು ಭಾಷೆಗೆ ಸಾಧ್ಯವಾದ ಎರಡು ಮೂರು ವ್ಯಾಕರಣಗಳಲ್ಲಿ ಶ್ರೇಷ್ಠವಾದುದು ಯಾವುದು ಎಂಬುದನ್ನು ಎತ್ತಿ ತೋರಿಸಬಲ್ಲ ಭಾಷಾಶಾಸ್ತ್ರವನ್ನು ನಿರ್ಮಿಸಿಕೊಳ್ಳಬೇಕಾದ ಅಗತ್ಯವನ್ನು ಕೂಡ ಅವರು ಮನಗಾಣಲಿಲ್ಲ. ಅಂಥ ಯಂತ್ರಾಂಗವೊಂದು ವ್ಯವಹಾರಿಗೆ ಇದೆಯೆಂಬುದನ್ನು ಅವರ ತತ್ತ್ವ ಅಂಗೀಕರಿಸುವುದಿಲ್ಲ. ಈ ಪರಿಸ್ಥಿತಿಗೆ ಕಾರಣ ಅನುಭವವಾದ ವರ್ತನವಾದಗಳ ಪ್ರಭಾವವೇ ಎಂಬುದನ್ನು ಹಿಂದೆಯೇ ಹೇಳಿದ್ದೇವೆ. ಹೇತುವಾದ ತತ್ತ್ವಮಾರ್ಗದಲ್ಲಿ ಮುಂದೆ ಸಾಗುವ ಪರಿವರ್ತನ ಸಿದ್ಧಾಂತ ವ್ಯವಹಾರಿಗಿರುವ ಸಿದ್ಧಾಂತ ವ್ಯಾಕರಣ ಪರಿಜ್ಞಾನವನ್ನು ಸಾಧಿಸುವುದಕ್ಕೆ ಹೊರಟಿರುವುದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದಲೇ ಈ ಸಿದ್ಧಾಂತಾನುಯಾಯಿಗಳ ಲಕ್ಷ್ಯಗಳು ವರ್ಣನ ಸಮಗ್ರತೆ ಮತ್ತು ವಿವರಣ ಸಮಗ್ರತೆ. ವ್ಯಾಕರಣ–ಭಾಷಾಸಿದ್ಧಾಂತ ಮಾಡಬೇಕಾದ ಕೆಲಸಗಳನ್ನು ಇನ್ನೂ ವಿವರವಾಗಿ ಈ ವಿಧವಾಗಿ ಹೇಳಬಹುದು:

ವ್ಯಾಕರಣ

1 ವ್ಯಾಕರಣಸಮ್ಮತವಾದ ವಾಕ್ಯಗಳೆಲ್ಲವನ್ನೂ ನಿಷ್ಪನ್ನಮಾಡಬೇಕು. ವ್ಯಾಕರಣವಿರುದ್ಧವಾದ ವಾಕ್ಯಗಳನ್ನು ನಿಷ್ಪನ್ನಮಾಡಬಾರದು.

2 ನಿಷ್ಪನ್ನ ವಾಕ್ಯಗಳಿಗೆ ಆಟೊಮ್ಯಾಟಿಕ್ ಆಗಿ ನಿರ್ಮಾಣ ವರ್ಣನೆ ಮಾಡಬೇಕು: ಎಂದರೆ ವಾಕ್ಯದಲ್ಲಿ ಪದಗಳ ಪರಸ್ಪರ ಸಂಬಂಧವನ್ನು ಕ್ರಮವಾಗಿ ನಿರ್ವಚಿಸಬೇಕು.

3 ಭಿನ್ನಾರ್ಥ ಬೋಧಕ ವಾಕ್ಯಗಳಿಗೆ ಯಾವ ವ್ಯಾಕರಣ–ಸಂಬಂಧಗಳ ಮೂಲಕ ಭಿನ್ನಾರ್ಥ ಬೋಧಕತೆ ಬಂದಿದೆಯೊ ಅದನ್ನು ವಿವರಿಸಬೇಕು: ಎಂದರೆ ಎಷ್ಟು ಅರ್ಥಗಳಿವೆಯೊ ಅಷ್ಟು ನಿರ್ಮಾಣ ವರ್ಣನೆಗಳನ್ನು ಕೊಡಬೇಕು.

4 ಒಂದಕ್ಕೊಂದು ವಿವರಣಪ್ರಾಯಗಳಾದ ಎರಡು ವಾಕ್ಯಗಳಲ್ಲಿ ಇರುವ ವ್ಯಾಕರಣ ಸಾಮಾನ್ಯವನ್ನು ನಿರೂಪಿಸಬೇಕು.

5 ಸ್ಥೂಲದೃಷ್ಟಿಗೆ ಒಂದೇ ವಿಧವಾಗಿ ಕಂಡುಬರುವ ವಾಕ್ಯಗಳಲ್ಲಿ ಇರುವ ವ್ಯಾಕರಣಭೇದವನು ನಿರೂಪಿಸಬೇಕು.

6 ವ್ಯಾಕರಣ ವಿರುದ್ಧವಾದ ವಾಕ್ಯಗಳು ಏಕೆ ವ್ಯಾಕರಣವಿರುದ್ಧವಾಗಿವೆ ಎಂಬುದನ್ನು ತೋರಿಸಿಕೊಡಬೇಕು. ವ್ಯಾಕರಣವಿರುದ್ಧವಾದ ವಾಕ್ಯಗಳಲ್ಲಿ ತಮ್ಮತಮ್ಮ ಭೇದಗಳನ್ನು ಅಳೆಯುವ ಪದ್ಧತಿಯನ್ನು ಕೂಡ ಸೂಚಿಸಬೇಕು. ವ್ಯಾಕರಣಸಮ್ಮತವಾದ ವಾಕ್ಯಗಳ ಸಹಾಯದಿಂದ ವ್ಯಾಕರಣ ವಿರುದ್ಧವಾದ ವಾಕ್ಯಗಳ ಅರ್ಥವಿವರಣೆಯನ್ನು ಮಾಡಬೇಕು. ಈ ಶಕ್ತಿಗಳೆಲ್ಲ ಸ್ವಭಾಷಾ ವಿಷಯದಲ್ಲಿ ಭಾಷಾವ್ಯವಹಾರಿಗೆ ಇವೆಯೆಂಬುದನ್ನು ಇದಕ್ಕಿಂತ ಮೊದಲೇ ಹೇಳಿದ್ದೇವೆ.

ಭಾಷಾಸಿದ್ಧಾಂತ

1 ವ್ಯಾಕರಣಸೂತ್ರವೆಂದರೇನೆಂಬುದನ್ನು ನಿರ್ವಚಿಸಬೇಕು.

2 ವ್ಯಾಕರಣದಲ್ಲಿ ಉಪಯೋಗಿಸುವ ಗುರುತುಗಳನ್ನು ಎಲ್ಲ ಭಾಷೆಗಳಿಗೂ ಅನುವರ್ತಿಸುವ ಹಾಗೆ ನಿರ್ವಚಿಸಬೇಕು. ಎಂದರೆ ನಾಮಬಂಧ, ಕ್ರಿಯಾಬಂಧ ಎಂಬುವುಗಳನ್ನು ಆಯಾ ಭಾಷೆಗೆ ಬೇರೆಬೇರೆಯಾಗಿ ಹೇಳದೆ ಸರ್ವ ಭಾಷಾ ಸಾಮಾನ್ಯವಾಗಿ ನಿರ್ವಚಿಸಬೇಕು.

3 ವ್ಯಾಕರಣ ಸ್ವರೂಪ ಸ್ವಭಾವಗಳನ್ನು ನಿರ್ಣಯಿಸಬೇಕು. ಮಾನವಭಾಷೆಗಳಿಗೆ ಸಾಧ್ಯವಾದ ವ್ಯಾಕರಣಗಳನ್ನು ನಿರ್ಣಯಿಸಬೇಕು.

4 ಒಂದು ಭಾಷೆಗೆ ಸಾಧ್ಯವಾದ ಎರಡು ಮೂರು ವ್ಯಾಕರಣಗಳಲ್ಲಿ ಯಾವುದು ಶ್ರೇಷ್ಠವಾದುದೊ ಅದನ್ನು ನಿರ್ಣಯಿಸಲಿಕ್ಕೆ ಯಾಂತ್ರಿಕ ಪದ್ಧತಿಯನ್ನು ಸೂಚಿಸಬೇಕು.

ಪುನರಾವೃತ್ತಿ ಸೂತ್ರಗಳು

ಮೇಲೆ ಹೇಳಿದವುಗಳನ್ನು ಸಾಧಿಸಬೇಕಾದರೆ ವ್ಯಾಕರಣ, ಶಾಸ್ತ್ರ ಹೇಗಿರಬೇಕು ಎಂಬ ಪ್ರಶ್ನೆ ಹುಟ್ಟುವುದು ಸಹಜ. ವಾಕ್ಯಗಳ ದೀರ್ಘತೆಗೆ ಪರಿಮಿತಿ ಇಲ್ಲವೆಂದು ಹಿಂದೆಯೇ ಹೇಳಿದ್ದೇವೆ. ಒಂದು ವಾಕ್ಯದಲ್ಲಿ ಇನ್ನೊಂದು ವಾಕ್ಯ ಸೇರಿಕೊಂಡಿರುವುದರಿಂದ ವಾಕ್ಯದ ಉದ್ದ ಹೆಚ್ಚಾಗುತ್ತದೆ. ಇದನ್ನು ಅನುಮತಿಸುವ ಸೂತ್ರಗಳು ವ್ಯಾಕರಣದಲ್ಲಿ ಇರಬೇಕು. ಒಂದು ಸೂತ್ರ ಪದೇ ಪದೇ ಅನಂತವಾಗಿ ಅನುವರ್ತಿಸುವುದು ಪುನರಾವೃತ್ತಿ. ಕನ್ನಡದಲ್ಲಿ ಕ್ರಿಯಾಪದಗಳ ಭೂತನ್ಯೂನರೂಪಗಳನ್ನು ಅನಂತವಾಗಿ ಉಪಯೋಗಿಸಿ ವಾಕ್ಯವನ್ನು ಬೆಳಸಬಹುದು. ಅನುಕರಣವಾಕ್ಯಗಳನ್ನು ಕೂಡ ಹಾಗೆಯೇ ಬೆಳಸಬಹುದು. ಉದಾಹರಣೆಗೆ ಕನ್ನಡ ಭಾಷೆಯ ವ್ಯಾಕರಣದಲ್ಲಿ ಈ ಕೆಳಗಿನ ಸೂತ್ರಗಳು ಇವೆಯೆಂದು ಭಾವಿಸೋಣ:

1 ವಾಕ → { ವಿಧಿ / ಪ್ರಶ್ನೆ / ನಿಷೇಧ } ನಾಮಬಂಧ–ಆಖ್ಯಾತಬಂಧ

2 ಆಖ್ಯಾತಬಂಧ→ (ಕಾರಕಬಂಧ) { ನಾಮಬಂಧ / ಕ್ರಿಯಾಬಂಧ / ವಿಶೇಷಣ }

3 ಕ್ರಿಯಾಬಂಧ→ (ನಾಮಬಂಧ) ಕ್ರಿಯಾಪದ

4 ನಾಮಬಂಧ → { ನಾಮ / ಸರ್ವನಾಮ / ವಾಕ್ಯ }


ಈ ಸೂತ್ರಗಳೆಲ್ಲವನ್ನೂ ಇಲ್ಲಿ ವಿವರಿಸುವುದು ಸಾಧ್ಯವಿಲ್ಲ. ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ್ದು ಮೊದಲು ಪ್ರಾರಂಭಿಸಿದ 'ವಾಕ್ಯ' ಎಂಬ ಚಿಹ್ನೆ ನಾಲ್ಕನೆಯ ಸೂತ್ರದಲ್ಲಿ ಬಲಭಾಗದಲ್ಲಿ ಬಂದಿರುವುದನ್ನು. ಬಲಭಾಗದಲ್ಲಿ ಬಂದ ಈ ಚಿಹ್ನೆಯ ಮೇಲೆ ಮೊದಲನೆಯ ಸೂತ್ರ ಪುನಃ ವರ್ತಿಸಿ ವಾಕ್ಯವನ್ನು ಪುನಃ ಆ ಸೂತ್ರದಲ್ಲಿ ಸೂಚಿಸಿದಂತೆ ಬಿಡಿಸುತ್ತದೆ. ಅನಂತರ ಉಳಿದ ಸೂತ್ರಗಳೆಲ್ಲ ಕೂಡಲೆ ವರ್ತಿಸುತ್ತವೆ. ನಾಲ್ಕನೆಯ ಸೂತ್ರದವರೆಗೆ ಬಂದಾಗ ಪುನಃ ಅದರಲ್ಲಿ 'ವಾಕ್ಯ'ವೆಂಬ ಚಿಹ್ನೆ ಇದ್ದರೆ ಪುನಃ ಮೊದಲಿನಿಂದ ಅವು ವರ್ತಿಸುತ್ತವೆ. ಹೀಗೆ ಸೂತ್ರಗಳೆಲ್ಲ ಎಷ್ಟು ಬಾರಿಯಾದರೂ ವರ್ತಿಸುವ ಅವಕಾಶವಿರುವುದರಿಂದ ವಾಕ್ಯ ಅನಂತವಾಗಿ ಬೆಳೆಯುತ್ತದೆ. ಎಡಭಾಗದ ಚಿಹ್ನೆಯೊಂದು ಒಂದಾನೊಂದು ನಿರ್ಣೀತ ಪ್ರದೇಶದಲ್ಲಿ ಬಲಭಾಗದಲ್ಲಿ ಕೂಡ ಬರುವುದರಿಂದ ಈ ಅವಕಾಶವುಂಟಾಗುತ್ತದೆ. ಅನಂತವಾದ ವಾಕ್ಯನಿರ್ಮಾಣಕ್ಕೆ

ಸೂತ್ರಗಳು ಅನಂತವಾಗಿ ವರ್ತಿಸಲು ಸಾಧ್ಯವಿರುವುದರಿಂದ ಈ ಅವಕಾಶ ಉಂಟಾಗುತ್ತದೆ. ಇಂಥ ಸೂತ್ರಗಳನ್ನು ಪುನರಾವೃತ್ತಿಸೂತ್ರಗಳೆನ್ನುತ್ತಾರೆ.

ಗುಪ್ತ ವ್ಯಕ್ತ ನಿರ್ಮಾಣಗಳು

ಮೇಲೆ ಸೂಚಿಸಿದ ಸೂತ್ರಗಳು ಪರಿವರ್ತನ ವ್ಯಾಕರಣದಲ್ಲಿ ವಾಕ್ಯ ಪರಿಚ್ಛೇದದ ಮೂಲ ವಿಭಾಗದಲ್ಲಿ ಬರುವ ಪದಬಂಧ ನಿರ್ಮಾಣ ಸೂತ್ರಗಳು. ಈ ಸೂತ್ರಗಳು ವಾಕ್ಯದಲ್ಲಿ ಪದಗಳ ವ್ಯಾಕರಣ ಸಂಬಂಧಗಳನ್ನು ನಿರ್ದೇಶಿಸುತ್ತವೆ. ಈ ಸೂತ್ರಗಳನ್ನು ಇನ್ನೂ ಕೆಲವು ರೀತಿಯ ಸೂತ್ರಗಳನ್ನು ಅನುವರ್ತಿಸಿದ ಮೇಲೆ ಬರುವ ವ್ಯಾಕರಣ ನಿರ್ಮಾಣವನ್ನು ಗುಪ್ತ ನಿರ್ಮಾಣ ಎನ್ನುತ್ತಾರೆ. ಇದರ ಮೇಲೆ ಪರಿವರ್ತನ ವಿಭಾಗದಲ್ಲಿ ಸೂತ್ರಗಳು ವರ್ತಿಸಿದಾಗ ಬರುವ ವ್ಯಾಕರಣ ನಿರ್ಮಾಣವನ್ನು ವ್ಯಕ್ತ ನಿರ್ಮಾಣ ಎನ್ನುತ್ತಾರೆ. ವಾಕ್ಯದಲ್ಲಿ ಅರ್ಥಕ್ಕೆ ಗುಪ್ತ ನಿರ್ಮಾಣದ್ದೇ ಪ್ರಧಾನ ಬಾಧ್ಯತೆ. ಪರಿವರ್ತನ ಸೂತ್ರಗಳು ವಾಕ್ಯಾರ್ಥವನ್ನು ಮಾರ್ಪಡಿಸಲಾರವು. ವ್ಯಕ್ತ ನಿರ್ಮಾಣದ ಮೇಲೆ ಧ್ವನಿಶಾಸ್ತ್ರೀಯ ವಿಭಾಗದಲ್ಲಿ ಸೂತ್ರಗಳು ವರ್ತಿಸಿದಾಗ ವಾಕ್ಯೋಚ್ಚಾರಣ ವಿಧಾನ ತಿಳಿಯುತ್ತದೆ. ಈ ಗುಪ್ತ ವ್ಯಕ್ತ ನಿರ್ಮಾಣಭೇದಗಳನ್ನು ಗುರುತಿಸುವುದು ವ್ಯಾಕರಣದಲ್ಲಿ ಅತಿ ಮುಖ್ಯವಾದ್ದೆಂದು ಚಾಮ್‌ಸ್ಕಿಯ ಅಭಿಪ್ರಾಯ.

ಒಂದು ವಾಕ್ಯದಲ್ಲಿ ಅಂತರ್ಗತವಾಗಿದ್ದು ಹೊರಗಡೆ ಥಟ್ಟನೆ ಹೊಳೆಯದಿರುವುದು ಗುಪ್ತ ನಿರ್ಮಾಣ. ಗುಪ್ತ ನಿರ್ಮಾಣವನ್ನು ಗುರುತಿಸುವುದು ವ್ಯಕ್ತ ನಿರ್ಮಾಣವನ್ನು ಕೊಡುವ ಸಾಕ್ಷ್ಯವನ್ನೆ ಆಧರಿಸುತ್ತದೆ. ಒಂದು ವಾಕ್ಯಕ್ಕೆ ವ್ಯಾಕರಣ ಸಂಬಂಧ ಮೂಲಕವಾದ ಅರ್ಥಭೇದಗಳಿದ್ದರೆ ಅದಕ್ಕೆ ಭಿನ್ನ ಗುಪ್ತನಿರ್ಮಾಣಗಳನ್ನು ಸೂಚಿಸಬೇಕು. ಎರಡು ವಾಕ್ಯಗಳು ಮೇಲೆ ಒಂದೇ ರೀತಿಯಾಗಿ ಕಂಡು ಬಂದರೂ ವ್ಯಾಕರಣ ಸಂಬಂಧಗಳಲ್ಲಿ ಭೇದ (ನಾಮೀಕರಣಾದಿಗಳಿಂದ) ಕಂಡುಬಂದರೆ ಭಿನ್ನ ಗುಪ್ತ ನಿರ್ಮಾಣಗಳನ್ನು ಗುರುತಿಸಬೇಕು. ಎರಡು ವಾಕ್ಯಗಳಲ್ಲಿ ಪ್ರಧಾನವಾಗಿ ಒಂದೇ ಅರ್ಥವಿದ್ದರೆ ಎರಡಕ್ಕೂ ಒಂದೇ ಗುಪ್ತನಿರ್ಮಾಣವನ್ನು ಸೂಚಿಸಬೇಕು. ಎರಡನ್ನೂ ಸೂಚಿಸಬೇಕಾಗಿ ಬಂದರೆ ಆ ಸಾಮಾನ್ಯವನ್ನು ಸೂಚಿಸಬೇಕು. ಗುಪ್ತ, ವ್ಯಕ್ತ ನಿರ್ಮಾಣಗಳ ಮಧ್ಯೆ ಇರುವ ಸಂಬಂಧಗಳನ್ನು ಕೆಳಗೆ ಕೊಟ್ಟಿರುವ ವಿಧಾನದಲ್ಲಿ ತೋರಿಸಬಹುದು.



ಇಲ್ಲಿ X ಗುಪ್ತ ನಿರ್ಮಾಣವನ್ನೂ Y ವ್ಯಕ್ತ ನಿರ್ಮಾಣವನ್ನೂ ಸೂಚಿಸುತ್ತವೆ.

ಪರಿಸ್ಥಿತಿ ಒಂದನೆಯ ಚಿತ್ರದಲ್ಲಿ ತೋರಿಸಿದಂತೆ ಇದ್ದರೆ ಗುಪ್ತ ವ್ಯಕ್ತ ನಿರ್ಮಾಣಭೇದಗಳನ್ನು ಗುರುತಿಸಬೇಕಾಗಿಲ್ಲ. ಆದರೆ ಉಳಿದ ಎರಡು ಪರಿಸ್ಥಿತಿಗಳೂ ಭಾಷೆಯಲ್ಲಿ ಇರುತ್ತವೆ. ಎರಡನೆಯ ಚಿತ್ರದಲ್ಲಿ ಒಂದು ಗುಪ್ತ ನಿರ್ಮಾಣಕ್ಕೆ ಎರಡು ವ್ಯಕ್ತ ನಿರ್ಮಾಣಗಳು ಸೂಚಿಸಲ್ಪಟ್ಟಿವೆ. ಮೂರನೆಯ

ಚಿತ್ರದಲ್ಲಿ ಎರಡು ಗುಪ್ತ ನಿರ್ಮಾಣಗಳಿಗೆ ಒಂದೇ ವ್ಯಕ್ತ ನಿರ್ಮಾಣ ಸೂಚಿಸಲ್ಪಟ್ಟಿದೆ. ಇವಕ್ಕೆ ಕೆಲವು ಉದಾಹರಣೆಗಳನ್ನು ನೋಡೋಣ:

1 ಬೇಂದ್ರೆಯವರು ನಾಯಿಮರಿಯ ಮೇಲೆ ಪದ್ಯ ಬರೆದರು.
2 ಬೇಂದ್ರೆಯವರು ನಾಯಿಮರಿಯನ್ನು ಕುರಿತು ಪದ್ಯ ಬರೆದರು.

ಮೇಲಿನ ಎರಡು ವಾಕ್ಯಗಳು ಮೇಲುನೋಟಕ್ಕೆ ಭಿನ್ನವಾಗಿವೆ. ಭಿನ್ನ ವಿಭಕ್ತಿಗಳು ಪ್ರಯೋಗವಾಗಿವೆ. ಆದರೆ ಬೋಧಿಸುವ ಕಾರಕ ಒಂದೇ. ಮೇಲೆ ಕೊಟ್ಟಿರುವ ಎರಡನೆಯ ಚಿತ್ರ ಸೂಚಿಸುವ ಪರಿಸ್ಥಿತಿಗೆ ಇದು ಉದಾಹರಣೆ.

ಅವನು ಕಾಫಿ ಕುಡಿದು ಪದ್ಯ ಬರೆಯಲಿಲ್ಲ.

ಈ ವಾಕ್ಯದಲ್ಲಿ ಎರಡು ಅರ್ಥಗಳು ಹೊರಡುತ್ತವೆ: (1) ಅವನು ಕಾಫಿ ಕುಡಿದ, ಆದರೆ ಪದ್ಯ ಬರೆಯಲಿಲ್ಲ. (2) ಅವನು ಪದ್ಯ ಬರೆದ. ಆದರೆ ಕಾಫಿ ಕುಡಿಯಲಿಲ್ಲ. ಇವು ಭಿನ್ನಾರ್ಥಗಳಾಗಿದ್ದರೂ ಇವು ಶಬ್ದಗಳಿಂದ ಹೊರಡಲಿಲ್ಲ; ನಿಷೇಧವನ್ನು ಸೂಚಿಸುವ ಶಬ್ದವನ್ನು ಅನ್ವಯಿಸುವ ರೀತಿಯಲ್ಲಿರುವ ಭೇದದಿಂದಾಗಿ ಬಂದಿದೆ. ನಿಷೇಧಾರ್ಥ ಬೋಧಕ ಶಬ್ದಾನ್ವಯ ಭೇದವನ್ನು ಸೂಚಿಸುವ ಭಿನ್ನ ಗುಪ್ತ ನಿರ್ಮಾಣಗಳ ಮೂಲಕ ಮೇಲೆ ಸೂಚಿಸಿದ ಎರಡರ್ಥಗಳು ಸಾಧ್ಯವಾಗಿವೆ.

1 ನಾನು ಕೃಷ್ಣಪ್ಪನೊಡನೆ ಹೋದೆ.
2 ನಾನು ಕೃಷ್ಣಪ್ಪನೊಡನೆ ಹೇಳಿದೆ.

ಈ ಎರಡು ವಾಕ್ಯಗಳು ಸ್ಥೂಲದೃಷ್ಟಿಗೆ ಒಂದೇ ವಿಧವಾಗಿದ್ದರೂ ಗುಪ್ತ ನಿರ್ಮಾಣದಲ್ಲಿ ಭೇದವಿದೆ. ಈ ಭೇದ ನಾಮೀಕರಣದಲ್ಲಿ ವ್ಯಕ್ತವಾಗುತ್ತದೆ. ಎರಡನೆಯ ವಾಕ್ಯದಿಂದ 'ನಾನು ಹೇಳಿದ ಕೃಷ್ಣಪ್ಪ' ಎಂಬ ನಾಮಬಂಧವನ್ನು ನಿಷ್ಪಾದಿಸಿದ ಹಾಗೆ ಮೊದಲನೆಯ ವಾಕ್ಯದಿಂದ "ನಾನು ಹೋದ ಕೃಷ್ಣಪ್ಪ" ಎಂಬುದಾಗಿ ನಿಷ್ಪಾದಿಸುವುದು ಸಾಧ್ಯವಿಲ್ಲ. ಮೊದಲನೆಯ ವಾಕ್ಯದಲ್ಲಿ 'ಕೃಷ್ಣಪ್ಪ' ಅಮುಖ್ಯ ಕರ್ತೃ. ಎರಡನೆಯ ವಾಕ್ಯದಲ್ಲಿ 'ಕೃಷ್ಣಪ್ಪ' ಅಮುಖ್ಯ ಕರ್ಮ. ಇದು ಮೂರನೆಯ ಚಿತ್ರದಲ್ಲಿ ಸೂಚಿಸಿದ ಪರಿಸ್ಥಿತಿಗೆ ಉದಾಹರಣೆ.

ಒಮ್ಮೊಮ್ಮೆ ವ್ಯಕ್ತ ನಿರ್ಮಾಣ ಕಂಡುಬಾರದಿರುವಾಗ ಅಂಥವನ್ನು ಗುಪ್ತ ನಿರ್ಮಾಣದಲ್ಲಿ ನಿರ್ದೇಶಿಸಬೇಕು. ಅಂಥ ನಿರ್ದೇಶ ಇಲ್ಲದೆ ಹೋದರೆ, ವ್ಯವಹಾರಿವಾಕ್ಯವನ್ನು ಅರ್ಥಮಾಡಿಕೊಳ್ಳುವ ರೀತಿಗೆ ವಿವರಣೆ ಕಲ್ಪಿಸಲು ನಮಗೆ ಸಾಧ್ಯವಾಗಲಾರದು.

ನಾಗವೇಣಿ ಬಟ್ಟೆ ಒಗೆಯುವುದನ್ನು ಪೂರ್ತಿಮಾಡಿದಳು.

ಈ ವಾಕ್ಯದಲ್ಲಿ 'ನಾಗವೇಣಿಯನ್ನು' ಎರಡು ಕ್ರಿಯೆಗಳಿಗೆ ಕರ್ತೃವಾಗಿ ಅರ್ಥಮಾಡಿಕೊಳ್ಳುತ್ತೇವೆ. ಮೇಲಿನ ವಾಕ್ಯ ಸಂಶ್ಲಿಷ್ಟವಾಕ್ಯ. ಎಂದರೆ ಒಂದು ವಾಕ್ಯದಲ್ಲಿ ಇನ್ನೊಂದು ವಾಕ್ಯ ಸೇರಿಕೊಂಡಿದೆ. ಗುಪ್ತ ನಿರ್ಮಾಣದಲ್ಲಿ ಈ ಎರಡು ವಾಕ್ಯಗಳನ್ನು ಸೂಚಿಸಿ, ಅವುಗಳ ಕರ್ತೃವನ್ನು ಕೂಡ ಸೂಚಿಸಬೇಕು. ಆಗ ವ್ಯವಹಾರಿ ಈ ವಾಕ್ಯವನ್ನು ಅರ್ಥಮಾಡಿಕೊಳ್ಳುವ ರೀತಿ ತಿಳಿಯುತ್ತದೆ.

ಮೇಲಿನ ಉದಾಹರಣೆಗಳಿಂದ ವಾಕ್ಯ ನಿರ್ಮಾಣದಲ್ಲಿ ಗುಪ್ತ ವ್ಯಕ್ತ ನಿರ್ಮಾಣಗಳ ಭೇದ ಅಗತ್ಯವೆಂದೂ ಅಂಥ ಭೇದವನ್ನು ಗುರುತಿಸಿದ ವ್ಯಾಕರಣವೇ ವ್ಯವಹಾರಿಯ ಪ್ರತಿಭೆಯನ್ನು ಸರಿಯಾಗಿ ಪ್ರತಿಫಲಿಸಬಲ್ಲುದೆಂದೂ ಸಿದ್ಧವಾಗುತ್ತದೆ. ಈ ವಿಧವಾದ ಭೇದವನ್ನು ಸಂಸ್ಕೃತ ವೈಯಾಕರಣರು ಕೂಡ ಗುರುತಿಸಿದಂತೆ ಕಾರಕ ವಿಭಕ್ತಿ ಸಂಬಂಧಗಳ ವ್ಯತ್ಯಯ ನಿರೂಪಣೆಯಿಂದ ನಾವು ಗ್ರಹಿಸಬಹುದು. ಗುಪ್ತ ವ್ಯಕ್ತ ನಿರ್ಮಾಣಗಳ ಸಂಬಂಧವನ್ನು ತಿಳಿಯಪಡಿಸುವಂಥವು ಪರಿವರ್ತನ ಸೂತ್ರಗಳು. ಗುಪ್ತ ನಿರ್ಮಾಣವನ್ನು ವ್ಯಕ್ತ ನಿರ್ಮಾಣವನ್ನಾಗಿ ಪರಿವರ್ತಿಸುವುದರಿಂದ ಇವುಗಳಿಗೆ ಆ ಹೆಸರು ಬಂದಿದೆ. ಇಂಥ ಸೂತ್ರಗಳಿರುವ ವ್ಯಾಕರಣವನ್ನು ಪರಿವರ್ತನ ವ್ಯಾಕರಣವೆನ್ನುತ್ತಾರೆ. ಈ ವ್ಯಾಕರಣರೂಪವನ್ನು ನಿರ್ವಚಿಸುವುದೇ ಪರಿವರ್ತನ ಸಿದ್ಧಾಂತ.

ಸೌಲಭ್ಯ ಹಾಗೂ ಸಂಕ್ಷಿಪ್ತತೆ

ಭಾಷೆಗಾಗಲಿ. ಭಾಷೆಯ ಒಂದು ಅಂಶಕ್ಕಾಗಲಿ ಸಾಧ್ಯವಾದ ವ್ಯಾಕರಣಗಳಲ್ಲಿ ಉತ್ತಮವಾದುದನ್ನು ಎತ್ತಿತೋರಿಸುವ ಕೆಲಸ ಭಾಷಾಸಿದ್ಧಾಂತವೆಂದು ಮೊದಲೇ ಹೇಳಿದ್ದೇವೆ. ಸೌಲಭ್ಯವೆಂಬ ಅಳತೆ ಗೋಲನ್ನು ಭಾಷಾಶಾಸ್ತ್ರ ಒದಗಿಸುತ್ತದೆ. ಈ ಸೌಲಭ್ಯವೆಂದರೆ ರಚನಾಸೌಲಭ್ಯವಲ್ಲ. ವ್ಯಾಕರಣ ರಚನೆ ಯಾವಾಗಲೂ ಕ್ಲಿಷ್ಟವಾದ್ದು. ಅದಕ್ಕೆ ಅಡ್ಡದಾರಿಗಳಿಲ್ಲ. ಈ ಸೌಲಭ್ಯವೆಂದರೆ ಪ್ರಕ್ರಿಯಾ ಸೌಲಭ್ಯ ವೆಂದರ್ಥ. ಪ್ರಕ್ರಿಯಾ ಸೌಲಭ್ಯವನ್ನೇ ಸಂಕ್ಷಿಪ್ತತೆಯೆಂದೂ ವ್ಯವಹರಿಸುತ್ತಾರೆ. ಸೌಲಭ್ಯ, ಸಂಕ್ಷಿಪ್ತತೆ ಎಂಬುವು ಭಾಷಾಶಾಸ್ತ್ರದಲ್ಲಿ ಸಮಾನಾರ್ಥಕಗಳು. ಒಂದೇ ವಿಷಯವನ್ನು ಎರಡು ವ್ಯಾಕರಣಗಳು, ಒಂದು ಭಾಷಾಸಿದ್ಧಾಂತ ಒದಗಿಸಿದ ಗುರುತುಗಳನ್ನು, ಸೂತ್ರಗಳನ್ನು ಉಪಯೋಗಿಸಿ ವ್ಯಾಕರಣಕ್ಕೆ ಅಳವಡಿಸಿದರೆ, ಯಾವ ವ್ಯಾಕರಣ ಕಡಿಮೆ ಗುರುತುಗಳನ್ನು, ಕಡಿಮೆ ಸೂತ್ರಗಳನ್ನು ಉಪಯೋಗಿಸಿದೆಯೊ ಅದು ಶ್ರೇಷ್ಠವಾದುದು. ಉದಾಹರಣೆಗೆ ಕೆಳಗೆ ಕೊಟ್ಟಿರುವ ಸೂತ್ರವನ್ನು ಪರಿಶೀಲಿಸಿ.

$$\text{ನಾಮಬಂಧ} \rightarrow \begin{Bmatrix} \text{ನಾಮ} \\ \text{ಸರ್ವನಾಮ} \\ \text{ವಾಕ್ಯ} \end{Bmatrix}$$

ಇದನ್ನೇ ಇನ್ನೊಂದು ವಿಧವಾಗಿಯೂ ಬರೆಯಬಹುದು:

1 ನಾಮಬಂಧ→ನಾಮ
2 ನಾಮಬಂಧ→ಸರ್ವನಾಮ
3 ನಾಮಬಂಧ→ವಾಕ್ಯ

ಎರಡನೆಯ ಪದ್ಧತಿಯಲ್ಲಿ ಮೂರು ಸೂತ್ರಗಳಲ್ಲಿ ಹೇಳಿದ್ದೂ ಮೊದಲನೆಯ ಪದ್ಧತಿಯಲ್ಲಿ ಒಂದು ಸೂತ್ರದಲ್ಲಿ ಹೇಳಿದ್ದೂ ಒಂದೇ ವಿಷಯ. ಆದರೆ ಮೊದಲನೆಯ ಪದ್ಧತಿ ಎರಡನೆಯ ಪದ್ಧತಿಗಿಂತ ಸಂಕ್ಷೇಪವಾದ್ದು. ಬ್ರಾಕೆಟ್‌ಗಳನ್ನು ಉಪಯೋಗಿಸಿದ್ದರಿಂದ ಈ ಸಂಕ್ಷಿಪ್ತತೆ ಸಾಧ್ಯವಾಯಿತು. ಹಾಗೆಯೆ ಕನ್ನಡ ವರ್ಣಗಳಿಗೆ ಸಂಬಂಧಿಸಿ. ಸಾಧ್ಯವಾಗಬಹುದಾದ ಈ ಸೂತ್ರಗಳನ್ನು ಕೇವಲ ವಿವರಣ ಸೌಕರ್ಯ ಕ್ಕೋಸ್ಕರ ಪರಿಶೀಲಿಸಿ:

1 $$\begin{Bmatrix} +\text{ಸ್ಪರ್ಶ} \\ +\text{ಕಂಠ್ಯ} \\ +\text{ಘೋಷ} \end{Bmatrix} \rightarrow \begin{Bmatrix} +\text{ಸ್ಪರ್ಶ} \\ +\text{ಕಂಠ್ಯ} \\ -\text{ಘೋಷ} \end{Bmatrix} /\text{—} \begin{Bmatrix} +\text{ಸ್ಪರ್ಶ} \\ +\text{ಕಂಠ್ಯ} \\ -\text{ಘೋಷ} \end{Bmatrix}$$

ಕನ್ನಡ (ಅಮುಮಾತಿನಲ್ಲಿ) ಸಂಧಿಯಲ್ಲಿ ಸ್ವರ ಲೋಪಾನಂತರ ಬರುವ ಸೂತ್ರ ಇದು. 'ಗ್' ವರ್ಣಕ್ಕೆ 'ಕ್' ವರ್ಣ ಪರವಾದಾಗ 'ಗ್' ವರ್ಣ 'ಕ್' ವರ್ಣವಾಗಿ ಮಾರ್ಪಡುತ್ತದೆ ಎಂಬುದು ಇದರ ಅರ್ಥ.

ಉದಾ: ಮಲಗಿ + ಕೋ→ಮಲಕ್ಕೋ.

2 $$\begin{Bmatrix} +\text{ಸ್ಪರ್ಶ} \\ +\text{ಕಂಠ್ಯ} \\ -\text{ಘೋಷ} \end{Bmatrix} \rightarrow \begin{Bmatrix} +\text{ಸ್ಪರ್ಶ} \\ +\text{ಕಂಠ್ಯ} \\ +\text{ಘೋಷ} \end{Bmatrix} /\text{—} \begin{Bmatrix} +\text{ಸ್ಪರ್ಶ} \\ +\text{ಕಂಠ್ಯ} \\ +\text{ಘೋಷ} \end{Bmatrix}$$

'ಕ್' ವರ್ಣಕ್ಕೆ 'ಗ್' ವರ್ಣ ಪರವಾದಾಗ 'ಕ್' ವರ್ಣ 'ಗ್' ವರ್ಣವಾಗಿ ಮಾರ್ಪಡುತ್ತದೆ ಎಂಬುದು ಇದರ ಅರ್ಥ.

ಉದಾ: ಬೆಳಕು + ಗಾಳಿ→ಬೆಳಗ್ಗಾಳಿ

ಇಂಥ ಸೂತ್ರಗಳೇ ಚ್>ಜ್; ಜ್>ಚ್; ತ್>ದ್; ದ್>ತ್ ಪ್>ಬ್: ಬ್>ಪ್ ಎಂಬ ಸೂತ್ರಗಳಿಗೂ ಅಗತ್ಯವಿದ್ದರೆ ಒಟ್ಟು 8 ಸೂತ್ರಗಳಾಗುತ್ತವೆ. ಈ ಸೂತ್ರಗಳಲ್ಲಿ ನಿಸ್ಸಂಶಯವಾಗಿ ಸಾಧಾರಣೀಕರಣ ಲೋಪಿಸಿದೆ. ಈ ಸಂಧಿಕಾರ್ಯಗಳನ್ನು ಕೆಳಗೆ ಸೂಚಿಸಿದ ವಿಧಾನದಲ್ಲಿ ಸಂಕ್ಷೇಪಿಸ ಬಹುದು.

$$\left[\pm \text{ ಘೋಷ} \right] \rightarrow \left[a \text{ ಘೋಷ} \right] / \left[\frac{\qquad}{+ \text{ ಸ್ಪರ್ಶ}} \right] \begin{bmatrix} +\text{ಸ್ಪರ್ಶ} \\ a\text{ಘೋಷ} \end{bmatrix}$$

ಇಲ್ಲಿ ಮೊದಲು ಸೂಚಿಸಿದ 8 ಸೂತ್ರಗಳಲ್ಲಿ ಹೇಳಿದ ವಿಷಯಗಳನ್ನು ಒಂದೇ ಸೂತ್ರದಲ್ಲಿ ಹೇಳಲಾಗಿದೆ. ಪರಸ್ಪರ್ಶ ಘೋಷವಾಗಿದ್ದರೆ ಪೂರ್ವಸ್ಪರ್ಶ ಘೋಷವಾಗುತ್ತದೆ: ಪರಸ್ಪರ್ಶ ಅಘೋಷ[—ಘೋಷ] ವಾಗಿದ್ದರೆ ಪೂರ್ವಸ್ಪರ್ಶ ಅಘೋಷವಾಗುತ್ತದೆ ಎಂದು ಮೇಲಿನ ಸೂತ್ರ ಹೇಳುತ್ತದೆ. a ಎಂಬೀ ಗುರುತು + ನ್ನೂ. —ನ್ನೂ ಕೂಡ ಸೂಚಿಸುತ್ತದೆ. ಆದರೆ ಬಾಣದ ಗುರುತಿಗೆ ಎಡಭಾಗದಲ್ಲಿರುವ ಗುರುತಿಗೆ ವಿರುದ್ಧವಾದ ಗುರುತಾಗಿ ಮಾತ್ರ ಇರುತ್ತದೆ ಎಂಬುದು ಇದರ ಅರ್ಥ. ಮೊದಲು ಹೇಳಿದ ಸೂತ್ರಗಳಿಗಿಂತ ಅನಂತರ ಹೇಳಿದ ಸೂತ್ರ ಸಂಕ್ಷೇಪವಾದುದೆಂದು ಸ್ಪಷ್ಟ. ಮೊದಲೇ ಹೇಳಿದಂತೆ ಒಂದು ಶಾಸ್ತ್ರ ಸಿದ್ಧಾಂತವನ್ನು ಅನುಸರಿಸಿ ರಚಿಸಲ್ಪಟ್ಟ ವ್ಯಾಕರಣಗಳಲ್ಲಿ ಮಾತ್ರವೇ ಈ ಸಂಕ್ಷಿಪ್ತತೆ ಸಾಧ್ಯವಾಗುತ್ತದೆ.

ಭಾಷಾ-ವ್ಯಾಕರಣ ಸಾಮಾನ್ಯಗಳು

ಭಾಷಾಸಿದ್ಧಾಂತ ವ್ಯಾಕರಣವನ್ನು ನಿರ್ವಚಿಸಿ ನಿರ್ಣಯಿಸುತ್ತದೆಂದು ಹಿಂದೆ ಹೇಳಿದ್ದೇವೆ. ಸರ್ವಭಾಷೆ ಗಳಿಗೂ ಸಂಬಂಧಿಸಿದ ಸಾಮಾನ್ಯ ವಿಷಯಗಳು ಭಾಷಾಸಿದ್ಧಾಂತದ ಒಂದು ಭಾಗವಾಗಿ ಪರಿಣಮಿಸು ತ್ತವೆ. ಪ್ರತಿ ಭಾಷೆಯಲ್ಲೂ ವಿಧಿ. ಪ್ರಶ್ನಾರ್ಥಕ. ಅನುಕರಣವಾಕ್ಯಗಳು, ನಾಮ, ಕ್ರಿಯಾಬಂಧಗಳು. ವ್ಯಂಜನಗಳು. ಸ್ವರಗಳು. ಸ್ಪರ್ಶಗಳು. ಅನುನಾಸಿಕಗಳು ಇರುತ್ತವೆ ಎಂದು ಭಾಷಾಶಾಸ್ತ್ರವೇ ಹೇಳುತ್ತದೆ. ಇವುಗಳನ್ನು ಭಾಷಾಸಾಮಾನ್ಯಗಳು ಎನ್ನುತ್ತಾರೆ. ಪ್ರತಿ ಭಾಷೆಯ ವ್ಯಾಕರಣದಲ್ಲಿಯೂ ಗುಪ್ತವ್ಯಕ್ತ ನಿರ್ಮಾಣಗಳನ್ನು ಬೇರ್ಪಡಿಸುವುದು ಅಗತ್ಯವೆಂದೂ ಗುಪ್ತ ನಿರ್ಮಾಣವನ್ನು ವ್ಯಕ್ತ ನಿರ್ಮಾಣವಾಗಿ ಪರಿವರ್ತಿಸುವ ಪರಿವರ್ತನ ಸೂತ್ರಗಳು ಇವೆಯೆಂದೂ. ಈ ಸೂತ್ರಗಳು ಅನುಕ್ರಮ ನಿಯತವಾದು ವೆಂದೂ ಇವು ವರ್ತುಲಕ್ರಮವರ್ತನೆಯಲ್ಲಿರುತ್ತವೆಂದೂ ಭಾಷಾಶಾಸ್ತ್ರವೇ ಹೇಳುತ್ತದೆ. ಇವುಗಳನ್ನು ವ್ಯಾಕರಣಸಾಮಾನ್ಯಗಳು ಎನ್ನುತ್ತಾರೆ. ಭಿನ್ನ ಭಾಷೆಗಳ ಮೇಲೆ ಪರಿಶೋಧನೆ ಬೆಳೆದಂತೆ ಆಯಾ ಭಾಷೆ ಗಳಿಗಾಗಲಿ. ಭಾಷಾ ವ್ಯಾಕರಣಗಳಿಗಾಗಲಿ ಪ್ರತ್ಯೇಕವೆನಿಸಿಕೊಂಡ ಎಷ್ಟೋ ವಿಷಯಗಳು ಸರ್ವಭಾಷಾ ಸಾಮಾನ್ಯಗಳಾಗಿ ಕಂಡುಬಂದು ಭಾಷಾಸಿದ್ಧಾಂತದ ಭಾಗವೇ ಆಗಿ ಪರಿಣಮಿಸುತ್ತವೆ. ಸರ್ವಭಾಷಾ ವ್ಯಾಕರಣ ಸಾಮಾನ್ಯಗಳು ಭಾಷಾಸಿದ್ಧಾಂತದಲ್ಲಿ ಸೇರಿ ಹೋಗುವುದರಿಂದ ಬೇರೆ ಬೇರೆ ಭಾಷಾ ವ್ಯಾಕರಣಗಳಲ್ಲಿ ಇವನ್ನು ಪ್ರಸ್ತಾಪಿಸುವ ಅಗತ್ಯವಿರುವುದಿಲ್ಲ.

ಈ ವಿಧವಾಗಿ ಭಿನ್ನ ಭಾಷೆಗಳ ಮೇಲೆ ಆಳವಾದ ಪರಿಶೋಧನೆ ನಡೆದಂತೆಲ್ಲ ವ್ಯಾಕರಣಗಳ ಮಧ್ಯೆ ಇರುವ ಅಂತರ ಕಡಿಮೆಯಾಗುತ್ತದೆ. ಇತ್ತೀಚೆಗೆ ಎಲ್ಲ ಭಾಷೆಗಳಿಗೂ ಒಂದೇ ಗುಪ್ತ ನಿರ್ಮಾಣ ಸಾಧ್ಯ ಎಂದು ಕೆಲವರು ಪ್ರತಿಪಾದಿಸುತ್ತಾರೆ. ಪರಿವರ್ತನಸೂತ್ರಗಳಲ್ಲಿ ಕೂಡ ಕೆಲವು ಸರ್ವವ್ಯಾಕರಣ ಸಾಮಾನ್ಯವಾದವುಗಳು ಇರಬಹುದು. ಉದಾಹರಣೆಗೆ ಪ್ರತ್ಯಕ್ಷಾನುಕೃತಿಯಲ್ಲಿ ಇರುವ ಉತ್ತಮ ಪುರುಷ ಸರ್ವನಾಮವನ್ನು ಪರೋಕ್ಷಾನುಕೃತಿಯಲ್ಲಿ ಪ್ರಥಮ ಪುರುಷವಾಗಿ ಪರಿವರ್ತಿಸುವ ಪರಿವರ್ತನ ಸೂತ್ರ ಸರ್ವವ್ಯಾಕರಣಸಾಮಾನ್ಯವಾಗಿ ಇರಬೇಕೆಂದು ಕೆಲವರು ಭಾವಿಸುತ್ತಾರೆ. ನಾಮೀಕರಣ ವಿಧಾನದಲ್ಲಿ ಟರ್ಕಿಷ್. ಜಾಪನೀಸ್. ದ್ರಾವಿಡ ಭಾಷೆಗಳ ಮಧ್ಯೆ ಎಷ್ಟೋ ಸಮಾನಧರ್ಮಗಳಿವೆ. ಈ ಭಾಷೆಗಳಲ್ಲಿ ಒಂದೇ ವಿಧವಾದ ಪರಿವರ್ತನಸೂತ್ರಗಳು ಅನೇಕ ಇರಬಹುದು. ಇದಲ್ಲದೆ ಈ ಭಾಷೆ ಗಳ ಪರಿವರ್ತನಸೂತ್ರಗಳಿಗೂ ಇಂಗ್ಲಿಷ್ ಮೊದಲಾದ ಭಾಷೆಗಳ ಪರಿವರ್ತನಸೂತ್ರಗಳಿಗೂ ಬಿಂಬ

ಪ್ರತಿಬಿಂಬ ಭಾವ ಇರುವಂತೆ ಕೂಡ ಇತ್ತೀಚೆಗಿನ ಪರಿಶೋಧನೆಗಳಿಂದ ತಿಳಿದುಬಂದಿದೆ. ಇದೆಲ್ಲ ಒಂದೇ ಭಾಷಾಸಿದ್ಧಾಂತದ ಪರಿಧಿಯಲ್ಲಿ ಸಂಶೋಧನೆ ಸಾಗಿದುದರಿಂದಲೇ ಸಾಧ್ಯವಾಯಿತು. ಆದ್ದರಿಂದ ಭಾಷಾಪರಿಶೋಧನೆಗಳಿಗೆ ಭಾಷಾಸಿದ್ಧಾಂತದ ಬಲ ಅಗತ್ಯ. ಹಾಗೆಯೆ ಈ ಪರಿಶೋಧನೆಗಳಿಂದ ಭಾಷಾಸಿದ್ಧಾಂತ ಕೂಡಾ ವಿಸ್ತೃತವೂ ಸಶಕ್ತವೂ ಆಗುತ್ತದೆ. ಇದರಿಂದ ಭಾಷೆ, ವ್ಯಾಕರಣಸಿದ್ಧಾಂತಗಳು ಒಂದನ್ನೊಂದು ಅವಲಂಬಿಸಿಕೊಂಡಿವೆ ಎಂಬುದು ಸಿದ್ಧವಾಗುತ್ತದೆ. ಭಾಷೆಗಳನ್ನು ಕುರಿತು ನಮ್ಮ ಜ್ಞಾನ ಹೆಚ್ಚುತ್ತಿರುವುದೇ ಈ ನಿರಂತರ ಪರಿಶೋಧನೆಗೆ ಫಲ[1].

[1] ಈ ಲೇಖನವನ್ನು ಸಿದ್ಧಪಡಿಸುವಲ್ಲಿ 'ಭಾಷಾಶಾಸ್ತ್ರಂಲೋ ಪರಿವರ್ತನ ಸಿದ್ಧಾಂತಂ' ಎಂಬ ತಮ್ಮ ತೆಲುಗು ಲೇಖನವನ್ನು ಉಪಯೋಗಿಸಿಕೊಳ್ಳುವಂತೆ ಅನುಮತಿಯಿತ್ತು ನೆರವಾದ ಡಾ. ಸಿ. ರಾಮರಾವ್ (ಉಸ್ಮಾನಿಯಾ ವಿಶ್ವವಿದ್ಯಾಲಯ) ಅವರಿಗೆ ನಾನು ತುಂಬ ಋಣಿಯಾಗಿದ್ದೇನೆ.

ಎ. ಎಸ್. ಧರಣೇಂದ್ರಯ್ಯ

ಅಪರಾಧಿ ವರ್ತನೆಯ ಸೈದ್ಧಾಂತಿಕ ಆಧಾರಗಳು[1]

ಒಂದು ಮನೋವೈಜ್ಞಾನಿಕ ಪರಿಶೀಲನೆ

ಸೈದ್ಧಾಂತಿಕ ಆಧಾರಗಳ ಅಗತ್ಯ

ವೈಜ್ಞಾನಿಕ ವ್ಯವಹಾರದಲ್ಲಿ ಸಿದ್ಧಾಂತ ಮತ್ತು ಮುನ್ಸೂಚನೆಗಳು ಒಂದನ್ನೊಂದು ಬಿಟ್ಟಿರಲಾರವು. ಹೀಗಿರುವಲ್ಲಿ, ಅಪರಾಧಿ ವರ್ತನೆಯ ಅಧ್ಯಯನಕ್ಕೆ ವೈಜ್ಞಾನಿಕ ಸ್ಥಾನಮಾನ ಸಿಗಬೇಕಾದರೆ, ಅದಕ್ಕೆ ಸಂಬಂಧಿಸಿದ ವಿವರಣೆ ಮತ್ತು ನಿಯಂತ್ರಣಗಳಿಗೆ ಸಮರ್ಪಕವಾದ ಸೈದ್ಧಾಂತಿಕ ಆಧಾರಗಳಿರಬೇಕಾದ ಅಗತ್ಯವಿದೆ. ಅಂಥ ಆಧಾರಗಳು ದೋಷಪೂರ್ಣವಾಗಿದ್ದರೆ ಅಪರಾಧಿ ವರ್ತನೆಯ ಬಗ್ಗೆ ತಪ್ಪುಮುನ್ಸೂಚನೆಗಳಿಗೂ ಅಸಮರ್ಪಕ ಸಾಮಾಜಿಕ ರಕ್ಷಣೆಗಳಿಗೂ ಕಾರಣವಾಗುವುದರಲ್ಲಿ ಸಂಶಯವಿಲ್ಲ.

ಅಪರಾಧಕೃತ್ಯಗಳಿಗೆ ವಿರುದ್ಧವಾಗಿರುವ ಸಾಮಾಜಿಕ ರಕ್ಷಣೆಗಳು ಇಂದು ಪ್ರಮುಖವಾಗಿ ನ್ಯಾಯ ಮತ್ತು ಸಾಮಾಜಿಕ ಸಂಸ್ಥೆಗಳ ರೂಪದಲ್ಲಿವೆ. ಅತ್ಯಾಧುನಿಕವೆನಿಸಿರುವ ಸಮಾಜಗಳಲ್ಲಿಯೇ ಆಗುತ್ತಿರುವ ಅಪರಾಧಕೃತ್ಯಗಳ ಸಂಖ್ಯೆ ವೈವಿಧ್ಯ ಮತ್ತು ತೀವ್ರತೆಗಳಲ್ಲಿ ಅತಿ ಹೆಚ್ಚಳ ಕಂಡುಬರುತ್ತಿರುವುದರಿಂದ ಸಾಮಾಜಿಕ ರಕ್ಷಣಾ ಸಂಸ್ಥೆಗಳ ಬುಡವೇ ಅಲುಗುತ್ತಿದೆ. ಇದರಿಂದಾಗಿ ಈ ಸಂಸ್ಥೆಗಳು ಕೈಗೊಂಡಿರುವ ಸಾಮಾಜಿಕ ರಕ್ಷಣೆಯ ಕಾರ್ಯಗಳೊಡನೆ ಪ್ರತ್ಯಕ್ಷ ಅಥವಾ ಪರೋಕ್ಷ ಸಂಪರ್ಕ ಹೊಂದಿರುವವರ ಮನಸ್ಸುಗಳಲ್ಲಿ, ಕಾರ್ಡಿನ ಮನೆಗಳೋಪಾದಿಯಲ್ಲಿ ಇಂದಿನ ಸಾಮಾಜಿಕ ರಕ್ಷಣಾ ವ್ಯವಸ್ಥೆಗಳು ಯಾವ ಕ್ಷಣದಲ್ಲಿ ಕುಸಿದು ಬೀಳುತ್ತವೋ ಎಂಬ ಭೀತಿ ತುಂಬಿದೆ. ಈ ಭೀತಿಗೆ ಪ್ರಮುಖ ಕಾರಣವೆಂದರೆ ನಾವು ರೂಪಿಸಿರುವ ಸಾಮಾಜಿಕ ರಕ್ಷಣಾವ್ಯವಸ್ಥೆಗಳಿಗೆ ಸಮರ್ಪಕವಾದ ಸೈದ್ಧಾಂತಿಕ ಆಧಾರಗಳಿಲ್ಲದಿರುವುದು. ಸಾಪೇಕ್ಷವಾಗಿ ಯುಕ್ತಾಯುಕ್ತವಾದ ಸೈದ್ಧಾಂತಿಕ ಆಧಾರಗಳ ಬೆಳಕಿನಲ್ಲಿ ಅಪರಾಧಿ ವರ್ತನೆಯ ಅಧ್ಯಯನ ನಡೆಸುವುದರಿಂದ ಅಂಥ ಭೀತಿಯಿಂದ ಪಾರಾಗಲು ಸಾಧ್ಯವಾಗುತ್ತದೆ. ಇಂದಿರುವ ಸಾಮಾಜಿಕ ರಕ್ಷಣಾವ್ಯವಸ್ಥೆಗಳನ್ನು ಪುನರ್‌ರಚಿಸಿ, ನಿರ್ದೇಶಿಸಲು ಅಂಥ ಆಧಾರಗಳು ಬಹುವಾಗಿ ನೆರವಾಗುತ್ತವೆ. ಈ ದೃಷ್ಟಿಯಿಂದ ನೋಡಿದಾಗ, ಇಂದಿನ ರಕ್ಷಣಾ ಇಲಾಖೆ ಮತ್ತು ನ್ಯಾಯಾಲಯಗಳಂಥ ಸಂಸ್ಥೆ 'ಕಾಯಕಲ್ಪ' ನಡೆಯಬೇಕಾದ ಅಗತ್ಯ ಕಂಡುಬರುತ್ತದೆ. ಅಂಥ ಯಾವುದೇ ಕಾಯಕಲ್ಪವನ್ನು ನಡೆಸುವಾಗ ಅಪರಾಧಿ ವರ್ತನೆಯ ಹಿನ್ನೆಲೆಯಲ್ಲಿರುವ ಸಾಮಾಜಿಕ ಸತ್ವಗಳ ಜೊತೆಗೆ ಮಾನಸಿಕ ಸತ್ವಗಳನ್ನೂ ಪರಿಗಣಿಸಬೇಕಾದ್ದು ಅತ್ಯಗತ್ಯ. ಈ ಪ್ರಯತ್ನದಲ್ಲಿ ಅಪರಾಧಿ ವರ್ತನೆಗಳ ಬಗ್ಗೆ ನಡೆಸಲಾಗಿರುವ ಕೆಲವು

---

[1] 'ರಾಷ್ಟ್ರೀಯ ಅಪರಾಧ ನಿವಾರಣಾ ಸಪ್ತಾಹ'ದ (1971) ಅಂಗವಾಗಿ ಧಾರವಾಡದ ಕರ್ನಾಟಕ ಕಾಲೇಜಿನ ಅಪರಾಧ ವಿಜ್ಞಾನ ವಿಭಾಗ ಏರ್ಪಡಿಸಿದ್ದ 'ಸಾಮಾಜಿಕ ರಕ್ಷಣೆಗಳು' (Social Defenses) ಎಂಬ ವಿಚಾರಗೋಷ್ಠಿಯಲ್ಲಿ ಲೇಖಕರು ಓದಿದ ಥಿಯೊರೆಟಿಕಲ್ ಫೌಂಡೇಷನ್ಸ್ ಆಫ್ ಕ್ರಿಮಿನಲ್ ಬಿಹೇವಿಯರ್ ಎಂಬ ಲೇಖನದ ಭಾಷಾನುವಾದ.

ಮನೋವೈಜ್ಞಾನಿಕ ಅಧ್ಯಯನಗಳು ನೆರವಾಗುವುದರಲ್ಲಿ ಅನುಮಾನವಿಲ್ಲ. ಒಟ್ಟಿನಲ್ಲಿ, ಅಪರಾಧ ಕೃತ್ಯಗಳ ನಿವಾರಣೆಗಾಗಿ ರೂಪಿಸುವ ಯಾವುದೇ ಸಾಮಾಜಿಕ ರಕ್ಷಣೆಯ ವ್ಯವಸ್ಥೆಗೂ ಮಾನವೀಯ ದೃಷ್ಟಿಯಿರಬೇಕಾದ್ದು ಅಪೇಕ್ಷಣೀಯ ಹಾಗೂ ಅಗತ್ಯ.

ಸಿದ್ಧಾಂತ ರೂಪಣೆಗೆ ಸಮರ್ಪಕ ವ್ಯಾಖ್ಯೆಯ ಅಗತ್ಯ

ಅಪರಾಧಿ ವರ್ತನೆಯ ಇತಿಮಿತಿಯನ್ನು ಅರಿತು, ಪರಿಣಾಮಕಾರಿಯಾದ ಸಾಮಾಜಿಕ ರಕ್ಷಣೆಗಳನ್ನು ಒದಗಿಸಲು ಸಮರ್ಪಕ ಸೈದ್ಧಾಂತಿಕ ಆಧಾರಗಳು ಎಷ್ಟು ಅಗತ್ಯವೋ, ಸೈದ್ಧಾಂತಿಕ ಚೌಕಟ್ಟಿನ ರೂಪಣೆಗೆ ಪ್ರಸ್ತುತ ಘಟನೆಯ ಯುಕ್ತಾಯುಕ್ತವಾದ ವ್ಯಾಖ್ಯೆಯೂ ಅಷ್ಟೇ ಅಗತ್ಯ. ಆದುದರಿಂದ, ಅಪರಾಧಿವರ್ತನೆಯನ್ನು ವಿವರಿಸಲು ಹಾಗೂ ನಿಯಂತ್ರಣ ಸಮಸ್ಯೆಯ ಬಗ್ಗೆ ವ್ಯವಹರಿಸಲು ಸಾಮಾನ್ಯವಾಗಿ ಇಂದು ಉಪಯೋಗಿಸಲಾಗುತ್ತಿರುವ ಪರಿಕಲ್ಪನೆಗಳನ್ನು ಪುನಃ ಪರಿಶೀಲಿಸುವ ಅಗತ್ಯವಿದೆ. ಅನೇಕವೇಳೆ 'ಅಪರಾಧ' 'ಅಪರಾಧಶೀಲತೆ' ಮತ್ತು 'ಅಪರಾಧಿ' ಎಂಬ ಶಬ್ದಗಳನ್ನು ಸಮಾನಾರ್ಥದಲ್ಲಿ ಬಳಸುವುದುಂಟು. ವೈವಿಧ್ಯಪೂರ್ಣವಾಗಿ, ಅಸಂಖ್ಯಾತ ಕ್ರಿಯೆಗಳನ್ನೊಳಗೊಂಡಿರುವ ಪ್ರಸ್ತುತ ಘಟನೆಯನ್ನು ವಿವರಿಸಲು, ಮೇಲೆ ಕೊಡಲಾದ ಯಾವುದೇ ಶಬ್ದಕ್ಕೆ ಸಾಮರ್ಥ್ಯವಿದೆಯೋ ಎಂಬುದು ಶಂಕಾಸ್ಪದ ವಿಷಯ. ಆದ್ದರಿಂದ ನಾವು ಬಳಸುವ ಪರಿಕಲ್ಪನೆಗಳಲ್ಲಿ ಸ್ಪಷ್ಟತೆ ಇರುವುದು ಅತ್ಯಾವಶ್ಯಕ.

ಅಪರಾಧಿ ವರ್ತನೆಯ ಬಗ್ಗೆ ವಿವಿಧ ಪರಿಣತರು ವಿವಿಧ ವ್ಯಾಖ್ಯೆಗಳನ್ನು ಕೊಟ್ಟಿದ್ದಾರೆ. ಅವರು ಉಪಯೋಗಿಸುವ ಒರೆಗಲ್ಲುಗಳಲ್ಲಿಯೂ ಭೇದವಿದೆ. ನ್ಯಾಯತಜ್ಞರು ಕಾಯಿದೆಯನ್ನು ಒರೆಗಲ್ಲಾಗಿ ಪರಿಗಣಿಸಿ ಅಪರಾಧಿ ವರ್ತನೆಯ ವ್ಯಾಖ್ಯೆಯನ್ನು ಕೊಡುತ್ತಾರೆ. ಆದರೆ ಯಾವುದೇ ಪ್ರಜಾಪ್ರಭುತ್ವ ಸಮಾಜದಲ್ಲಿ ಕಾಯಿದೆಗಳು ಪರಿಣಾಮಕಾರಿ ಅಲ್ಪಸಂಖ್ಯಾತ ಗುಂಪಿನ ಇಷ್ಟಾನಿಷ್ಟಗಳಿಗೆ ಅನುಗುಣವಾಗಿ ಕಾಲಕಾಲಕ್ಕೆ ಬದಲಾಗುತ್ತ ಹೋಗುವುದು ಸಹಜವಷ್ಟೆ. ತತ್ಪರಿಣಾಮವಾಗಿ ಇಂದು ಅಪರಾಧವೆಂದು ಪರಿಗಣಿತವಾದ ಕೃತ್ಯವೊಂದು ನಾಳೆ ಕಾಯಿದೆಯ ಬದಲಾವಣೆಯಿಂದಾಗಿ ಸ್ವೀಕೃತ ಕೃತ್ಯವೆನಿಸಬಹುದು. ಇದಕ್ಕೆ 'ಪಾನನಿರೋಧ'ವೇ ಜೀವಂತ ನಿದರ್ಶನ. ಹೀಗಾಗುವುದರಿಂದ, ಅಪರಾಧಿ ವರ್ತನೆಯ ನೈಜ ಸ್ವರೂಪವನ್ನು ತಿಳಿಸುವುದರಲ್ಲಿ ಕಾಯಿದೆಯ ಒರೆಗಲ್ಲು ಅಸಮರ್ಥವಾಗುತ್ತದೆ ಎಂಬುದು ಸಿದ್ಧವಾಗುತ್ತದೆ.

ಸಮಾಜಶಾಸ್ತ್ರಜ್ಞರು, ಸಮಾಜ–ಸಂಸ್ಕೃತಿ ಒರೆಗಲ್ಲಿಗೆ ಅನುಗುಣವಾಗಿ ಅಪರಾಧಿ ವರ್ತನೆಯ ವ್ಯಾಖ್ಯೆಯನ್ನು ಕೊಡಲು ಯತ್ನಿಸುತ್ತಾರೆ. ಆದರೆ ಅಸಂಖ್ಯಾತ ಉಪಸಂಸ್ಕೃತಿಗಳ ಸಂಗಮವೆನಿಸಿರುವ ಭಾರತೀಯ ಸಮಾಜದಲ್ಲಿ ಅಂಥ ಒರೆಗಲ್ಲು ನಿರುಪಯುಕ್ತವೆನಿಸಿದರೆ ಆಶ್ಚರ್ಯವಿಲ್ಲ.

ಮೇಲೆ ಹೇಳಲಾದ ಎರಡು ಒರೆಗಲ್ಲುಗಳೂ ವ್ಯಕ್ತಿಗೆ ಬಾಹ್ಯವಾಗಿದ್ದು, ಆತನ ಅಂತರಂಗ ಘಟನೆಗಳನ್ನು ಸಂಪೂರ್ಣವಾಗಿ ಕಡೆಗಣಿಸುವುದರಿಂದ ಅಸಮರ್ಪಕವೆನಿಸುವುದು ಸಹಜ. ಆದ್ದರಿಂದ ಯಾವುದೇ ಅಪರಾಧಿ ವರ್ತನೆಯ ವಿವರಣೆ ಸ್ಪಷ್ಟವಾಗಬೇಕಾದರೆ, ವ್ಯಕ್ತಿಯ ಪ್ರತ್ಯಾವರಣ ಸತ್ಯಗಳನ್ನು ಪರಿಗಣಿಸುವುದರ ಜೊತೆಜೊತೆಗೇ ಆತನ ವ್ಯಕ್ತಿತ್ವದಲ್ಲಿ ಸಮಾವೇಶವಾಗಿರುವ ಪ್ರೇರಕಶಕ್ತಿಗಳನ್ನೂ ಪರಿಗಣಿಸಬೇಕಾಗುತ್ತದೆ. ಅಂದರೆ, ಅಪರಾಧಿ ವರ್ತನೆಯ ವ್ಯಾಖ್ಯೆಯನ್ನು ಕೊಡುವಾಗ ಕಾಯಿದೆ, ಸಮಾಜ-ಸಂಸ್ಕೃತಿ ಮುಂತಾದ ಯಾವುದಾದರೂ ಸ್ವೀಕೃತ ಒರೆಗಲ್ಲಿನ ಆಧಾರದ ಮೇಲೆ ಅಪರಾಧ ಕೃತ್ಯಗಳನ್ನು ಅಳೆಯುವುದರ ಜೊತೆಗೆ, ವ್ಯಕ್ತಿಯ ಅಗತ್ಯಗಳು, ಉತ್ಕಾಂಕ್ಷೆಗಳು ಮತ್ತು ಆಚಾರ–ವಿಚಾರಗಳನ್ನು ಪರಿಗಣಿಸಲೇಬೇಕಾಗುತ್ತದೆ.

ಎರಡು ಪರಸ್ಪರ ವಿರುದ್ಧ ಸಿದ್ಧಾಂತಗಳು

ಅಪರಾಧಿ ವರ್ತನೆಯನ್ನು ವಿವರಿಸಲು ವಿವಿಧ ಪರಿಣತರು ಮುಂದಿಟ್ಟಿರುವ ಅನೇಕ ಸಿದ್ಧಾಂತಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಮೊದಲನೆಯದು ಕಲಿಯುವಿಕೆ ಮತ್ತು ಸಂಸ್ಕೃತೀಕರಣ ಸಿದ್ಧಾಂತ (ಲರ್ನಿಂಗ್ ಅಂಡ್ ಅಕಲ್ಚುರೇಷನ್ ಥಿಯೊರಿ) ಮತ್ತು ಅನುವಂಶೀಯತೆ ಸಿದ್ಧಾಂತ (ಹೆರೆ

ಡಿಟರಿ ಥಿಯೊರಿ). ಕೈರನ್‌ವೈನ್‌ಬರ್ಗ್2 ಹೇಳುವ ಹಾಗೆ, ಅಪರಾಧಿ ವರ್ತನೆಯನ್ನು ವಿವರಿಸಲು ಮುಂದಿಡಲಾಗಿರುವ ಆಧುನಿಕ ಸಮಾಜಶಾಸ್ತ್ರೀಯ ಸಿದ್ಧಾಂತಗಳು ಕಲಿಯುವಿಕೆ ಮತ್ತು ಸಂಸ್ಕೃತೀಕರಣ ಗಳಿಗೆ ಪ್ರಾಮುಖ್ಯ ನೀಡುತ್ತವೆ. ಈ ದೃಷ್ಟಿಕೋನದ ಪ್ರಕಾರ, ಅಪರಾಧಿ ಯಾವುದೋ ಒಂದು ವಿಕೃತ ಉಪಸಂಸ್ಕೃತಿಯ ಶಿಶು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಅಭಿಪ್ರಾಯ ಪೂರ್ವಾಗ್ರಹ ಪೀಡಿತ ವಾಗಿದೆಯೆಂದರೆ ತಪ್ಪಾಗಲಾರದು. ಯಾಕೆಂದರೆ ವಿಲೋಪನ ಸ್ಥಳ(ಡೆಲಿಂಕ್ವೆನ್ಸಿ ಏರಿಯ)ಗಳಲ್ಲಿಯ ವಿಲೋಪಿಗಳ (ಡೆಲಿಂಕ್ವೆಂಟ್ಸ್) ಮೇಲೂ ವಯಸ್ಕ ಅಪರಾಧಿಗಳ ಮೇಲೂ ಸಮಾಜಶಾಸ್ತ್ರಜ್ಞರು ನಡೆಸಿದ ಕ್ಷೇತ್ರಾಧ್ಯಯನಗಳೇ. ಅವರು ತಳೆದಿರುವ ನಿಲುವಿಗೆ ಆಧಾರ. ಆದರೆ ಅಂಥ ಅಧ್ಯಯನಗಳು, ಅಪರಾಧಿ ವರ್ತನೆಯ ಬೆಳವಣಿಗೆಯಲ್ಲಿ ಕಲಿಯುವಿಕೆ ವಹಿಸಬಹುದಾದ ಪ್ರಮುಖ ಪಾತ್ರದ ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತವೆಯಾದರೂ. ನಮ್ಮ ಮುಂದಿರುವ ವ್ಯಕ್ತಿ ಅಪರಾಧ ವರ್ತನೆಯನ್ನು ಸ್ವೀಕರಿಸಿದುದೇಕೆ? ಎಂಬ ಪ್ರಶ್ನೆಗೆ ಉತ್ತರಿಸುವಲ್ಲಿ ವಿಫಲವಾಗಿದೆ. ವಿಲೋಪನ ಸ್ಥಳಗಳಲ್ಲಿ ಸಾಂಪ್ರದಾಯಿಕ ವರ್ತನೆಗಳಿಗೆ ಅವಕಾಶಗಳು ಅಲ್ಪಸಂಖ್ಯೆಯಲ್ಲಿದ್ದರೂ ಕೆಲವರು ವಿಲೋಪಿಗಳಾಗದೆ ಉಳಿಯಲು ಕಾರಣವೇನು? ಅಲ್ಲದೆ ಮಧ್ಯಮವರ್ಗದ ಬಾಲಕ ಬಾಲಕಿಯರು ಅಧಿಕ ಸಂಖ್ಯೆಯಲ್ಲಿರುವ ಸ್ಥಳಗಳಲ್ಲಿ, ಸಾಂಪ್ರದಾಯಿಕ ವರ್ತನೆಗೆ ಅವಕಾಶಗಳು ಹೇರಳವಾಗಿದ್ದರೂ ಏಕೆ ಕೆಲವರು ವಿಲೋಪಿ ಒಡನಾಡಿಗಳನ್ನು ಅರಸಿಕೊಂಡು ಹೋಗಿ ಅವರೊಡನೆ ಬೆರೆಯುತ್ತಾರೆ? ಈ ಎರಡು ಕ್ಲಿಷ್ಟ ಪ್ರಶ್ನೆಗಳಿಗೆ ಉತ್ತರಿಸುವಲ್ಲಿ ಸಮಾಜಶಾಸ್ತ್ರೀಯ ಅಧ್ಯಯನಗಳು ಸಂಪೂರ್ಣವಾಗಿ ವಿಫಲವಾಗಿರುವುದು ಕಂಡುಬರುತ್ತದೆ. ವ್ಯಕ್ತಿಯಲ್ಲಿರುವ ಆಯ್ಕೆ–ಪ್ರತ್ಯಕ್ಷಜ್ಞಾನ (ಸೆಲೆಕ್ಟಿವ್ ಪರ್ಸೆಪ್ಷನ್) ಮತ್ತು ಆಯ್ಕಾನುಕ್ರಿಯೆಗಳಂಥ (ಸೆಲೆಕ್ಟಿವ್ ರೆಸ್ಪಾನ್ಸಸ್) ಮಾನಸಿಕ ವ್ಯಾಪಾರಗಳಿಗೆ ವಿಪರೀತ ಪ್ರತ್ಯಾವರಣವಾದಿಗಳು ಅಂಧರಾಗಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಮತ್ತೊಂದು ಗುಂಪಿನ ಸಿದ್ಧಾಂತಿಗಳು—ಪ್ರಮುಖವಾಗಿ ಜೀವಶಾಸ್ತ್ರಜ್ಞರು ಮತ್ತು ರೋಗ ಚಿಕಿತ್ಸಕರು (ವೈದ್ಯರು)—ಅಪರಾಧಿ ವರ್ತನೆಯನ್ನು ಅನುವಂಶೀಯ ಕಾರಕಾಂಶಗಳ ಮೂಲಕ ವಿವರಿಸಲು ಯತ್ನಿಸುತ್ತಾರೆ. ಈ ಗುಂಪಿಗೆ ಸಿಸಾರೆ ಲೋಂಬ್ರೋಸೋ ಮುಖ್ಯಸ್ಥ. ವೈದ್ಯರು, ಸಮಾಜಸುಧಾರಕರು, ದೈವವಾದಿಗಳು ಮುಂತಾದವರ ವ್ಯಕ್ತಿನಿಷ್ಠ ಕಪಿಮುಷ್ಟಿಯಿಂದ ಅಪರಾಧಿ ವರ್ತನೆಯ ಅಧ್ಯಯನವನ್ನು ವಿಮುಕ್ತಿಗೊಳಿಸಿದ ಖ್ಯಾತಿ ಅವನಿಗೆ ಸೇರಬೇಕು. ಆದರೂ ಆತ ತನ್ನದೇ ಆದ ಪೂರ್ವಾಗ್ರಹಕ್ಕೆ ತುತ್ತಾಗಿ. ಅನುವಂಶೀಯ ಕಾರಕಾಂಶಗಳ ಪ್ರಖರತೆಯಿಂದ ಭ್ರಮಿತನಾಗಿ ಸಮಾಜ–ಸಂಸ್ಕೃತಿಗಳ ವಾಸ್ತವ ಜಗತ್ತನ್ನೇ ಕಡೆಗಣಿಸುವ ತಪ್ಪು ಮಾಡಿದ.

ಲೋಂಬ್ರೋಸೋ ಮತ್ತು ಅವನ ಅನುಯಾಯಿಗಳು ಮುಂದಿಟ್ಟ ಸಿದ್ಧಾಂತ ಇತರ ಸ್ಥಳಗಳಿಗಿಂತ ವಿಲೋಪನ ಸ್ಥಳಗಳಲ್ಲಿ ಯಾಕೆ ಅಧಿಕ ಸಂಖ್ಯೆಯಲ್ಲಿ ಜನರು ಅಪರಾಧಿ ವರ್ತನೆಯನ್ನು ತೋರಿಸುತ್ತಾರೆ? ಎಂಬ ಮಹತ್ವಪೂರ್ಣ ಪ್ರಶ್ನೆಗೆ ಉತ್ತರಿಸುವಲ್ಲಿ ವಿಫಲವಾಯಿತು. ಅಂತೂ ಅಪರಾಧಿ ವರ್ತನೆಯ ಬಗ್ಗೆ ಮುಂದಿಡಲಾದ ಸಿದ್ಧಾಂತಗಳು ವಿಪರೀತ ದೃಷ್ಟಿಕೋನಗಳಿಂದ ಕೂಡಿರುವುದರಿಂದ. ಅವುಗಳ ಬೆಳಕಿನಲ್ಲಿ 'ಅಪರಾಧಿ ಹುಟ್ಟಿನಿಂದಾದವನೇ?' ಅಥವಾ 'ಪ್ರತ್ಯಾವರಣದ ಶಿಶುವೇ?' ಎಂಬ ಪ್ರಶ್ನೆಗೆ ಉತ್ತರಿಸಲು ಪ್ರಯತ್ನಿಸಿದರೆ ನಮ್ಮ ಶಕ್ತಿಸಾಮರ್ಥ್ಯಗಳು ಹಾಗೂ ಸಂಪನ್ಮೂಲಗಳು ನಿರರ್ಥಕ ವಾಗುವುದರಲ್ಲಿ ಸಂಶಯವಿಲ್ಲ.

ಒಂದು ಸಮಗ್ರ ಸಿದ್ಧಾಂತದ ಪೂರ್ವಕಲ್ಪಿತ ಮಾದರಿ

ಇಂದು ಅಪರಾಧಿ ವರ್ತನೆಯ ಅಧ್ಯಯನದಲ್ಲಿ ಅಭಿರುಚಿಯುಳ್ಳ ವಿಜ್ಞಾನಿಗಳು ಮೇಲೆ ಪ್ರಸ್ತಾಪಿಸಲಾದ ಎರಡು ಪರಸ್ಪರ ವಿರುದ್ಧ ಸಿದ್ಧಾಂತಗಳಿಗೆ ಮಾನ್ಯತೆ ಕೊಡುವ ಬದಲು. 'ವ್ಯಕ್ತಿ' ಹಾಗೂ 'ಸಂಸ್ಕೃತಿ'–

[2] S. Kiron Weinberg: *Theories of Criminality and Problems of Prediction*, in Stratton J. R. and R. M. Jerry (ed. 1968): *Prevention of Deliquency*, New York, MacMillan Co.

ಈ ಎರಡು ಅಂಶಗಳಿಗೂ ಅಗತ್ಯವಾದ ಮಹತ್ತ್ವವನ್ನು ಕೊಡುವುದರ ಮೂಲಕ ಅಪರಾಧಿ ವರ್ತನೆಯ ಒಂದು ಸಮಗ್ರ ಸಿದ್ಧಾಂತವನ್ನು ರೂಪಿಸಲು ಯತ್ನಿಸುತ್ತಿದ್ದಾರೆ.

"ಗೂರಲು ಲಕ್ಷಣಗಳುಳ್ಳ ರೋಗ(ಹೇ ಫೀವರ್)ವನ್ನುಂಟು ಮಾಡಲು ಪರಾಗ ಮತ್ತು ಒಂದು ರೀತಿಯ ದೇಹಾಕೃತಿ ಜತೆಗೂಡಿ ಕಾರ್ಯನಿರ್ವಹಿಸುವಂತೆ ಅಪರಾಧಿಯ ವರ್ತನೆಯು ಪೂರ್ವಚಿತ್ತ ಪ್ರವೃತ್ತಿಗಳ (ಪ್ರಿಡಿಸ್ಪೊಸಿಷನ್) ಬೆಳವಣಿಗೆಯಲ್ಲಿ ಮನೋಜನ್ಯ ಹಾಗೂ ಸಂಸ್ಕಾರಜನ್ಯ ಕಾರಕಾಂಶಗಳು ಒಂದು ಏಕೈಕ ಕಾರ್ಯಕಾರಣ ಪ್ರಕ್ರಿಯೆಯಲ್ಲಿ ಬೆಸುಗೆಯಾಗುತ್ತವೆ[3](ಕೊಹೆನ್). ಕೊಹೆನನ ಅಭಿಪ್ರಾಯವನ್ನು ನಾವು ಒಪ್ಪುವುದಾದರೆ, ನಮ್ಮ ಮುಂದಿರುವ ಪ್ರಮುಖ ಕಾರ್ಯವೆಂದರೆ ಮೇಲೆ ಹೇಳಲಾದ ಎರಡು ರೀತಿಯ ಕಾರಕಾಂಶಗಳು ಹೇಗೆ ಒಂದುಗೂಡಿ ಪರಸ್ಪರ ಪ್ರಭಾವವನ್ನು ಬೀರುತ್ತವೆ ಎಂಬುದನ್ನು ನಿರ್ಧರಿಸುವುದು. ಅಂಥ ಪರಸ್ಪರ ಪ್ರಭಾವ ಪ್ರಕ್ರಿಯೆಯ ಅಧ್ಯಯನವನ್ನು ನಡೆಸಿ ಅಪರಾಧಿ ವರ್ತನೆಯ ಒಂದು ಸಮರ್ಪಕ ಸೈದ್ಧಾಂತಿಕ ಚೌಕಟ್ಟನ್ನು ರೂಪಿಸಲು ಅನುಕೂಲವಾಗುವಂತೆ ವೈನ್‌ಬರ್ಗ್ ಒಂದು ಪೂರ್ವಕಲ್ಪಿತ ಮಾದರಿಯನ್ನು ಸೂಚಿಸುತ್ತಾನೆ. ಆ ಮಾದರಿಯ ಒಂದು ಸಂಕ್ಷಿಪ್ತರೂಪ ಹೀಗಿದೆ:

ಹೊಸ ಹೊಸ ವರ್ತನೆಗಳನ್ನು ಬೆಳೆಸಿಕೊಳ್ಳಲು ಸಾಮಾಜಿಕ ಸಂಬಂಧ ಒಂದು ಮಾರ್ಗ. ಯಾವುದೇ ವರ್ತನೆ ಸಾಮೂಹಿಕ ಮತ್ತು ವೈಯಕ್ತಿಕ ಅಂಶಗಳನ್ನು ಒಳಗೊಂಡಿರುತ್ತದೆ. ವರ್ತನೆಯ ಈ ಎರಡು ಅಂಶಗಳ ಮೇಲೂ ಸಾಮಾಜಿಕ ಸಂಬಂಧಗಳು ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ನಾವು ಮೊದಲು ತಿಳಿಯಬೇಕು.

ಸಾಮಾಜಿಕ ಸಂಬಂಧಗಳ ಅರ್ಥ, ಪ್ರಕಾರ ಮತ್ತು ಪ್ರೇರಣಾಶಕ್ತಿಗಳಲ್ಲಿ ಭೇದವಿರುತ್ತದೆ. ವ್ಯಕ್ತಿಗಳಲ್ಲಿ ಆಗುವ ಪರಸ್ಪರ ಸಾಹಚರ್ಯದಿಂದ ಅವರಿಗೆ ದೊರೆಯಬಹುದಾದ ಸಂತೃಪ್ತಿಗಳು, ಒಂದೇ ರೀತಿಯ ಅಗತ್ಯಗಳನ್ನು ಹೊಂದಿರುವವರಲ್ಲಿ ಪರಸ್ಪರ ಆಕರ್ಷಣೆ ಹಾಗೂ ಭಾವಸಾಮರಸ್ಯಗಳಿಗೆ ಕಾರಣವಾಗುತ್ತವೆ. ಆದರೆ ಮಕ್ಕಳಲ್ಲಿ ಸುರಕ್ಷಿತ ಭಾವನೆಗಳನ್ನು ಬೆಳೆಸುವುದರಲ್ಲೂ ಸಾಂಪ್ರದಾಯಿಕ ರೀತಿನೀತಿಗಳತ್ತ ಅವರಲ್ಲಿ ಆಳವಾದ ಭಾವನೆಗಳನ್ನು ಬೆಳೆಸುವುದರಲ್ಲೂ ಅಶಕ್ತವಾಗಿರುವ ಕುಟುಂಬಗಳು ಮತ್ತು ಇತರ ಸಮೂಹಗಳಿಂದ ಬರುವಂತೆ ಕಾಣುವ ಬಾಲಕ ಬಾಲಕಿಯರು, ವಿಲೋಪಿ ಒಡನಾಡಿಗಳನ್ನು ಆರಿಸಿಕೊಳ್ಳುವುದಕ್ಕೂ ಮೇಲೆ ಹೇಳಲಾದ ಅಗತ್ಯಗಳಿಗೂ ಸಂಬಂಧವಿರುವಂತೆ ತೋರುತ್ತದೆ. ಅಷ್ಟಲ್ಲದೆ, ಸುಲಭವಾಗಿ ಸಿಕ್ಕುವ ವಿಲೋಪಿ ಒಡನಾಡಿಗಳನ್ನು ಅಂಥ ಬಾಲಕ ಬಾಲಕಿಯರು ಸಂಧಿಸಿದಾಗ, ಸಂಪ್ರದಾಯಶರಣ ಒಡನಾಡಿಗಳಿಗೆ ತೋರಿಸುತ್ತಿದ್ದ ಒಲವಿಗಿಂತ ಹೆಚ್ಚಿನ ಒಲವನ್ನು ಅವರಲ್ಲಿ ತೋರಿಸುವಂತೆ ಕಾಣುತ್ತದೆ. ಆ ವಿಲೋಪಿ ಒಡನಾಡಿಗಳು ತಮ್ಮ ಮಾತು ಮತ್ತು ಕೃತಿಗಳಲ್ಲಿ ಇವರ ಮನಸ್ಸಿನ ಆಶಯಗಳನ್ನು ತೃಪ್ತಿಪಡಿಸುವುದೇ ಈ ಹೆಚ್ಚಿನ ಒಲವಿಗೆ ಕಾರಣ. ಆದರೆ ಅಂಥ ವಿಲೋಪಿ ಒಡನಾಡಿಗಳು ಸಿಕ್ಕದಿದ್ದಾಗ ಅಥವಾ ಇವರ ವೈಯಕ್ತಿಕ ಆಸೆ ಆಕಾಂಕ್ಷೆಗಳನ್ನು ಈಡೇರಿಸುವಲ್ಲಿ ಅವರು ವಿಫಲರಾದಾಗ, ಈ ಬಾಲಕ ಬಾಲಕಿಯರು ಸಾಂಪ್ರದಾಯಿಕ ರೀತಿಯಲ್ಲೇ ತಮ್ಮ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಒಟ್ಟಿನಲ್ಲಿ ಚಿಕ್ಕವರಲ್ಲಿ ಪ್ರಕಟವಾಗುವ ಅಪರಾಧಿ ವರ್ತನೆ ಭಾವಸುರಕ್ಷಿತತೆ (ಎಮೋಷನಲ್ ಸೆಕ್ಯೂರಿಟಿ), ಆತ್ಮೋನ್ನತಿ (ಸೆಲ್ಫ್-ಎನ್‌ಹಾನ್ಸ್‌ಮೆಂಟ್) ಅಥವಾ ಒಳತೊಳಲು-ನಿವಾರಣೆಯಂಥ ವ್ಯಕ್ತಿಗತ ಉದ್ದೇಶಗಳಿಗಾಗಿ, ಸುಲಭವಾಗಿ ಸಿಕ್ಕುವ ವಿಲೋಪಿ ಒಡನಾಡಿಗಳನ್ನು ಆರಿಸಿ, ಆರಿಸಿಕೊಳ್ಳುವುದರಿಂದ ಬೆಳೆಯುತ್ತದೆ. ಅಂಥ ವಿಲೋಪಿ ಒಡನಾಡಿಗಳಿಂದ ಮಕ್ಕಳು ಭಾವಾಭಿವ್ಯಕ್ತಿಗಳನ್ನು ಸ್ವೀಕರಿಸಲು ಮತ್ತು ಪ್ರಕಟಿಸಲು ಕಲಿಯುತ್ತಾರೆ.

ಗೊತ್ತಾದ ಒಂದು ಸಾಂಸ್ಕೃತಿಕ ಸನ್ನಿವೇಶದಲ್ಲಿ ವ್ಯಕ್ತಿತ್ವ ಸಂಘಟನೆಯನ್ನು ಸುಲಭವಾಗಿ ದೊರೆಯುವ ಒಡನಾಡಿ ಸಂಬಂಧಗಳೊಂದಿಗೆ ಸೇರಿಸುವ ಈ ಸಮಗ್ರ ವಿಧಾನ ಸಂಭಾವ್ಯ ವಿಲೋಪನದ (ಪೊಟೆನ್ಷಿಯಲ್ ಡೆಲಿಂಕ್ವೆನ್ಸಿ) ಮುನ್ಸೂಚಕಗಳನ್ನು ಒಳಗೊಂಡಿರಲು ಸಾಧ್ಯ. ಅಂಥ ಮುನ್ಸೂಚಕಗಳಲ್ಲಿ

[3] Cohen, A. K. (1955), *Delinquent Boys*, Glencoe, The Free Press.

ಸೇರಿರುವ ಪರಿವರ್ತನೆಗಳೆಂದರೆ: 1 ಅಗತ್ಯಗಳು ಹಾಗೂ ಉತ್ಕಾಂಕ್ಷೆಗಳು, ಕೌಟುಂಬಿಕ ಸಂಬಂಧಗಳು, ಒಡನಾಡಿಗಳೊಡನೆ ಸಂಬಂಧ ಬೆಳೆಸುವ ಶಕ್ತಿ ಮತ್ತು ವಿಲೋಪಿ ಅಥವಾ ಸಾಂಪ್ರದಾಯಿಕ ಒಡನಾಡಿಗಳ ಸನ್ನಿಧಿ ಮುಂತಾದ ಸ್ವತಂತ್ರ ಚರಗಳು (ಇಂಡಿಪೆಂಡೆಂಟ್ ವೇರಿಯಬಲ್ಸ್); 2 ಸಾಂಪ್ರದಾಯಿಕ ರೀತಿ ನೀತಿಗಳಲ್ಲಿ ದೊರೆಯುವ ತೃಪ್ತಿ ಅಥವಾ ಅತೃಪ್ತಿ ಮತ್ತು ವಿಲೋಪಿ ಅಥವಾ ಸಂಪ್ರದಾಯಬದ್ಧ ಒಡನಾಡಿಗಳು ಅಥವಾ ಅವಕಾಶಗಳಂಥ ಮಧ್ಯವರ್ತೀ ಚರಗಳು (ಇಂಟರ್‌ವೀನಿಂಗ್ ವೇರಿಯಬಲ್ಸ್) ಮತ್ತು 3 ಕೆಲವು ವಿಶಿಷ್ಟೀಕೃತ ಸಮಾಜವಿರೋಧಿ ಚಟುವಟಿಕೆಗಳಂಥ ಅವಲಂಬೀ ಚರಗಳು (ಡಿಪೆಂಡೆಂಟ್ ವೇರಿಯಬಲ್ಸ್).

ಮುನ್ಸೂಚಕಗಳು ಮತ್ತು ಪರಿವರ್ತ್ಯಗಳಿಂದ ಕೂಡಿರುವ ಮೇಲೆ ಹೇಳಿದ ಪೂರ್ವಕಲ್ಪಿತ ಮಾದರಿಯನ್ನು ಪ್ರಾಯೋಗಿಕ ಪರಿಶೀಲನೆಗೆ ಒಳಪಡಿಸುವುದು ಅಗತ್ಯ. ಅಂಥ ಪ್ರಾಯೋಗಿಕ ಪರಿಶೀಲನೆ ಏಕೈಕ ಸಂಶೋಧಕನ ಸಂಪನ್ಮೂಲಗಳಿಗೆ ನಿಲುಕಲಾರದು ಎಂದರೆ ತಪ್ಪಾಗಲಾರದು. ಆದ್ದರಿಂದ ಪರಿಣಾಮಕಾರಿಯಾದ ಸಾಮಾಜಿಕ ರಕ್ಷಣೆಗಳನ್ನು ಒದಗಿಸುವುದರಲ್ಲಿ ಆಸಕ್ತವಾಗಿರುವ ಸಾಮಾಜಿಕ ಸಂಸ್ಥೆಗಳೇ ಬೃಹತ್‌ಪ್ರಮಾಣದ ಸಂಶೋಧನ ಯೋಜನೆಯನ್ನು ಕಾರ್ಯಗತ ಮಾಡುವ ಹೊಣೆ ಹೊರಬೇಕಾಗುತ್ತದೆ. ಇದಕ್ಕಾಗಿ ರೂಪಿತವಾಗುವ ಯೋಜನೆಯಲ್ಲಿ ದೀರ್ಘಕಾಲಿಕ ಲಂಬನೋಟ (ಲಾಂಜಿಟ್ಯೂಡಿನಲ್) ಅಧ್ಯಯನಗಳೂ ತಾತ್ಕಾಲಿಕ ಸೀಳುನೋಟ (ಕ್ರಾಸ್ ಸೆಕ್ಷನಲ್) ಅಧ್ಯಯನಗಳೂ ಸಮಾವೇಶವಾಗಿರಬೇಕು. ಅಲ್ಲದೆ, ವ್ಯಕ್ತಿತ್ವ ಅಂಶಮಾಲೆಗಳು, ಪ್ರಕ್ಷೇಪಣ ತಂತ್ರಗಳು (ಪ್ರೊಜೆಕ್ಟಿವ್ ಟೆಕ್ನಿಕ್ಸ್) ಮತ್ತು ಇತರ ಮನೋಮಾಪನಗಳನ್ನು ಈ ಕಾರ್ಯಕ್ಕಾಗಿ ಬಳಸುವುದು ಅನಿವಾರ್ಯವಾಗುತ್ತದೆ. ಏಕೆಂದರೆ ಅಪರಾಧ ಪೂರ್ವಪ್ರವೃತ್ತಿಯನ್ನು ಕಂಡುಹಿಡಿಯಲು ಅಂಥ ಮಾಪನಗಳು ಬಹಳ ನೆರವು ನೀಡುತ್ತವೆ.

ಅಪರಾಧಿ ವರ್ತನೆಯ ಬಗ್ಗೆ ಅರ್ಥಪೂರ್ಣ ಮುನ್ಸೂಚನೆಗಳನ್ನು ಕೊಡಲು ಮತ್ತು ಸಾಮಾಜಿಕ ರಕ್ಷಣೆಗಳಿಗಾಗಿ ಪರಿಣಾಮಕಾರಿ ಮಾಪನಗಳನ್ನು ರೂಪಿಸಲು ನೆರವಾಗುವ ಸಮರ್ಪಕ ಅಪರಾಧಿ ವರ್ತನ ಸಿದ್ಧಾಂತಗಳನ್ನು ರೂಪಿಸಬೇಕಾದ್ದು ಅತ್ಯಂತ ಅಗತ್ಯ.

ವ್ಯಕ್ತಿವಿಕಾಸವನ್ನು ನಿರ್ಧರಿಸುವ ಮೂಲ ಕಾರಕಾಂಶಗಳೆಂದರೆ ಅನುವಂಶೀಯತೆ ಮತ್ತು ಪ್ರತ್ಯಾವರಣಗಳು. ಒಂದೇ ವಯೋಮಾನದ ವ್ಯಕ್ತಿಗಳಲ್ಲಿ ಕಂಡುಬರುವ ಹೋಲಿಕೆ ಹಾಗೂ ವ್ಯತ್ಯಾಸಗಳಿಗೂ ಇವೆರಡೇ ಮೂಲ ಕಾರಕಾಂಶಗಳಾಗಿವೆ. ಅನುಷಂಗಿಕ ಕಾರಕಾಂಶಗಳೆನಿಸಿದ. ಪರಿಪಕ್ವನ ಮತ್ತು ಕಲಿಯುವಿಕೆಗಳು ವ್ಯಕ್ತಿವಿಕಾಸದಲ್ಲಿ ವಹಿಸುವ ಸಾಪೇಕ್ಷ ಪಾತ್ರಗಳನ್ನೂ ಪರಿಗಣಿಸುವುದು ಉಚಿತ.

ವ್ಯಕ್ತಿ ವಿಕಾಸಕ್ಕೆ ಮತ್ತು ವ್ಯಕ್ತಿ ವ್ಯತ್ಯಾಸಗಳು ಮತ್ತು ಹೋಲಿಕೆಗಳಿಗೆ ಯಾವುದು ಪ್ರಮುಖವಾದುದು. ಅನುವಂಶೀಯತೆಯೋ ಅಥವಾ ಪ್ರತ್ಯಾವರಣವೋ?–ಎಂಬ ಪ್ರಶ್ನೆಗೆ ಉತ್ತರ ಕೊಡುವಾಗ. ಸಂಪೂರ್ಣವಾಗಿ ಅನುವಂಶೀಯತೆಯನ್ನೋ ಪ್ರತ್ಯಾವರಣವನ್ನೋ ಎತ್ತಿ ಹಿಡಿಯುತ್ತಿದ್ದ ಕಾಲವೂ ಇದ್ದಿತು. ಆಗ ಅನುವಂಶೀಯತೆಯ ಪ್ರತಿಪಾದಕರು ಮತ್ತು ಪ್ರತ್ಯಾವರಣ ಪ್ರತಿಪಾದಕರು ಎಂಬ ಎರಡು ಪರಸ್ಪರ ವಿರುದ್ಧ ಪಂಥಗಳೇ ಅಸ್ತಿತ್ವದಲ್ಲಿದ್ದುವು. ಈ ವಿಪರೀತ ಅಭಿಪ್ರಾಯವುಳ್ಳ ಪಂಥಗಳು ಇಂದು ಇಲ್ಲವೆಂದರೂ. ಯಾವುದಾದರೂ ಒಂದು ಕಾರಕಾಂಶ ಮತ್ತೊಂದಕ್ಕಿಂತ ಹೆಚ್ಚು ಪ್ರಮುಖವಾದುದು ಎಂಬ ಅಭಿಪ್ರಾಯವುಳ್ಳ ವಿದ್ಯಾ ಪರಿಣತರು ಇಲ್ಲದಿಲ್ಲ.

ಅನುವಂಶೀಯತೆ ಮತ್ತು ಪ್ರತ್ಯಾವರಣಗಳ ಪ್ರಾಮುಖ್ಯದ ಸಮಸ್ಯೆ ದೀರ್ಘವಾದುದೂ ಜಟಿಲವಾದುದೂ ಆಗಿರುವುದರಿಂದ. ಇದರ ಬಗ್ಗೆ ಜೀವವಿಜ್ಞಾನ. ಸಮಾಜಶಾಸ್ತ್ರ. ಮಾನವಶಾಸ್ತ್ರ. ಶಿಕ್ಷಣಶಾಸ್ತ್ರ. ಮನೋವಿಜ್ಞಾನ ಮುಂತಾದ ವಿವಿಧ ವಿದ್ಯಾಕ್ಷೇತ್ರಗಳಲ್ಲಿ ಅನೇಕ ಸಂಶೋಧನೆಗಳು ನಡೆದಿವೆ. ಈ ಸಂಶೋಧನೆಗಳಿಂದ ದೊರೆತಿರುವ ಫಲಿತಾಂಶಗಳು ಹಲವು ವೇಳೆ ಈ ಸಮಸ್ಯೆಯನ್ನು ಜಟಿಲಗೊಳಿಸುವುದೂ ಉಂಟು. ಕಾರಣ. ಎರಡು ಪಂಥದವರಿಗೂ ಅವರವರ ದೃಷ್ಟಿಯನ್ನು ಸಮರ್ಥಿಸಿಕೊಳ್ಳಲು ಅನುಕೂಲಕರವೆನಿಸುವ ಫಲಿತಾಂಶಗಳು ದೊರೆತಿರುವುದು. ಆದರೆ ಈ ಸಮಸ್ಯೆಗೆ ಸಂಬಂಧಿಸಿದಂತೆ, ಇತ್ತೀಚೆಗೆ ಕೆಲವು ಮುಕ್ತಮನಸ್ಸಿನ ಅಧ್ಯಯನಗಳು ನಡೆದಿವೆ. ಅವುಗಳಿಂದ ದೊರೆತ ತಥ್ಯಾಂಶಗಳು. ವ್ಯಕ್ತಿ ವಿಕಾಸ ಮತ್ತು ವಿವಿಧ ವ್ಯಕ್ತಿಗಳ ನಡುವಣ ಹೋಲಿಕೆ ವ್ಯತ್ಯಾಸಗಳನ್ನು ನಿರ್ಧರಿಸುವಲ್ಲಿ ಅನುವಂಶೀಯತೆ ಮತ್ತು ಪ್ರತ್ಯಾವರಣಗಳೆರಡೂ ತಮ್ಮ ಪಾತ್ರಗಳನ್ನು ಸಾಪೇಕ್ಷವಾಗಿ ನಿರ್ವಹಿಸುತ್ತವೆ ಎಂಬುದನ್ನು ಸ್ಪಷ್ಟಪಡಿಸಿವೆ[1].

—ಎ. ಎಸ್. ಧರಣೇಂದ್ರಯ್ಯ

---

1 ವಿಕಾಸ ಮನೋವಿಜ್ಞಾನ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಪು. 14.

ಡಾ. ಕೆ. ಪುಟ್ಟಸ್ವಾಮಯ್ಯ

ಸಮನ್ವಯೀಕರಣ ಮತ್ತು ನಿರುದ್ಯೋಗ

ಪ್ರವೇಶ

ಆಧುನಿಕ ಆರ್ಥಿಕ ಸಮಸ್ಯೆಗಳಲ್ಲಿ ಸಮನ್ವಯೀಕರಣಕ್ಕೆ ಅತ್ಯಂತ ಮಹತ್ತ್ವದ ಸ್ಥಾನವಿದೆ. ಕೈಗಾರಿಕೆಯಲ್ಲಿ ಆದಷ್ಟು ಮಟ್ಟಿಗೆ ಕಾರ್ಮಿಕ ಶ್ರಮದ ಉಳಿತಾಯವಾಗಬೇಕು ಮತ್ತು ಕಾರ್ಮಿಕರ ದುಡಿಮೆ ಪರಿಣಾಮಕಾರಿಯಾಗಬೇಕು ಎಂಬ ಉದ್ದೇಶದಿಂದ ಅನುಸರಿಸುವ ವಿಧಾನವೇ ಸಮನ್ವಯೀಕರಣ–ಎನ್ನುವುದಾದರೆ ಇದು ಕೈಗಾರಿಕಾ ಕ್ರಾಂತಿಯಷ್ಟೇ ಹಿಂದಿನದು. 19ನೆಯ ಶತಮಾನದಲ್ಲಿ ಯಾಂತ್ರೀಕರಣದಿಂದ ಉದ್ಭವಿಸಿರುವ ಎಲ್ಲ ಸಮಸ್ಯೆಗಳನ್ನೂ ಇಂಗ್ಲಿಷ್ ಅಭಿಜಾತ ಅರ್ಥಶಾಸ್ತ್ರಜ್ಞರು ಚರ್ಚಿಸಿದ್ದಾರೆ. ವಾಸ್ತವವಾಗಿ ಸಮನ್ವಯೀಕರಣ ಇನ್ನೂ ಹಿಂದಿನದು. ಏಕೆಂದರೆ. "ತಾಯಿ ತನ್ನ ಇತರ ಕೆಲಸಗಳಿಗೆ ತನ್ನ ಕೈಗಳನ್ನು ಬಿಡುವು ಮಾಡಿಕೊಳ್ಳುವ ಸಲುವಾಗಿ ತನ್ನ ಮಗುವನ್ನು ಬೆನ್ನಿಗೆ ಕಟ್ಟಿಕೊಂಡಿರುವುದುಂಟು. ಅವಳೂ ಸಮನ್ವಯೀಕರಣವನ್ನೆ ಅನುಸರಿಸುತ್ತಾಳೆಂದು ಹೇಳಬಹುದು."1

ಭಾರತದಲ್ಲಿ ಕಳೆದ ಕಾಲು ಶತಮಾನದಲ್ಲಿ ಮಾತ್ರ ಸಮನ್ವಯೀಕರಣ ಒಂದು ತಾಂತ್ರಿಕ ಪದ್ಧತಿಯಾಗಿ ಬೆಳೆದು ಬಂದಿದೆ. ಒಂದನೆಯ ಮಹಾಯುದ್ಧಾನಂತರ ಉದ್ಭವಿಸಿದ ನಿರಾಶಾಮಯ ವಾತಾವರಣದಲ್ಲಿ ಅದು 'ಆತ್ಮ–ಪರಿರಕ್ಷಣೆ'ಯ ಕೂಗಾಗಿತ್ತು. ಯುದ್ಧಾನಂತರದ ತೀವ್ರತರ ಕುಸಿತ ಮತ್ತು ಗೊಂದಲಗಳಿಂದ ಕೈಗಾರಿಕಾ ವ್ಯವಸ್ಥೆ ಅಸ್ತವ್ಯಸ್ತವಾಗುತ್ತಿತ್ತು. "ದುರ್ದಿನಗಳಿಗೆ ಈಡಾದ ಮನುಷ್ಯ ಆಗಾಗ ಸಮ್ಮೇಳನಗಳನ್ನು ಆಚರಿಸಲು ಕಲಿಯುವಂತೆ ಪ್ರಪಂಚದ ಪ್ರಭಾವೀ ಉದ್ಯಮಿಗಳು ಸಮನ್ವಯೀಕರಣದ ತತ್ತ್ವಗಳ ಉಪದೇಶ ಮತ್ತು ಆಚರಣೆಯ ಮೂಲಕ ತಮ್ಮ ಪಾಪ ಪರಿಹಾರ ಮಾಡಿಕೊಳ್ಳುವ ಮನೋಭಾವ ತಳೆದರು."2 ಜರ್ಮನಿಯಲ್ಲಿ ಈ ಕೂಗು ಮೊದಲು ಆರಂಭವಾಯಿತು. ಅದು 1926ರಲ್ಲಿ ಬಹಳ ಜನಾದರಣೀಯವಾಯಿತು. ಆಮೇಲೆ ಇದಕ್ಕೆ ಇತರ ಅನೇಕ ದೇಶಗಳು ಮತ್ತು ಅಂತರರಾಷ್ಟ್ರೀಯ ಸಭೆಗಳು ಮನ್ನಣೆ ಇತ್ತುವು. 1921ರಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ಸಂಭವಿಸಿದ ಮಂದಗತಿಯ ಸಮಯದಲ್ಲಿ ಈ ಶೈಶವ ಆಂದೋಲನಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯಿತು. ಮೂರನೆಯ ದಶಕದ ಆದಿಭಾಗದಲ್ಲಿ ಸಮನ್ವಯೀಕರಣ ತತ್ತ್ವ ಎಲ್ಲ ಕೈಗಾರಿಕೆಗಳಲ್ಲೂ ಸಾಮಾನ್ಯ ಮಾತಾಗಿತ್ತು. ಜಪಾನಿನಲ್ಲಿ ಸಮನ್ವಯೀಕರಣ ಚಳವಳಿ ತೀವ್ರವಾಯಿತು. ಇದರಿಂದಾಗಿ ಆ ದೇಶ ತಾಂತ್ರಿಕವಾಗಿ ಬಹಳ ಮುನ್ನಡೆಯಿತು. ವಾಣಿಜ್ಯದಲ್ಲೂ ಪ್ರಗತಿ ಸಾಧಿಸಿತು. ಜರ್ಮನಿಯ ಉದ್ಯಮಗಳೂ ಸಮನ್ವಯೀಕರಣದಿಂದ ಲಾಭ ಪಡೆದುವು. ಜರ್ಮನಿಯ ಗಮನಾರ್ಹ ಪ್ರಗತಿಯನ್ನು ನೋಡಿದ ಬ್ರಿಟನ್ ಮತ್ತು

---

1 ಬಿ. ಆರ್. ಶಣಾಯ್: '*Rationalization and Unemployment*', Illustrated Weekly of India, ಜನವರಿ ೨೩, ೧೯೫೫, ಪುಟ ೨೭

2 ಘೋಷ್ ಮತ್ತು ಓಂಪ್ರಕಾಶ್: 'Principles and Problems of Industrial Organisation', ೧೯೫೦, ಪುಟ ೩೯೮

ಇತರ ರಾಷ್ಟ್ರಗಳು ಬಹಳ ಸಂದಿಗ್ಧ ಪರಿಸ್ಥಿತಿಗೆ ಒಳಗಾದುವು. ಮುಕ್ತ ವ್ಯಾಪಾರ ನೀತಿಗೆ ಕಟ್ಟುಬಿದ್ದಿದ್ದ ಬ್ರಿಟನ್ ಅನೇಕ ಸುದರ್ಶನಗಳಲ್ಲಿ ಸಮನ್ವಯೀಕರಣದ ನೀತಿ ಅನುಸರಿಸಬೇಕಾಗಿ ಬಂತು. 1931ರ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಸಮನ್ವಯೀಕರಣ ಚಳವಳಿಗೆ ಗಮನಾರ್ಹ ಪ್ರಾಮುಖ್ಯ ದೊರಕಿತು. ಎರಡನೆಯ ಮಹಾಯುದ್ಧ ಅಂತ್ಯವಾದಾಗ ಇದಕ್ಕೆ ಎಲ್ಲ ದೇಶಗಳೂ ಲಕ್ಷ್ಯವಿತ್ತುವು. ಆದ್ದರಿಂದ "ಅದು ಒಂದು ನಿಷ್ಕೃಷ್ಟ ಕಾರ್ಯನೀತಿಯಾಗಿರುವುದಕ್ಕಿಂತ ಅಧಿಕವಾಗಿ ಒಂದು ನಿದರ್ಶಕ ಪಂತವಾಗಿತ್ತು." ಭಾರತದಲ್ಲಿ, ಇತ್ತೀಚಿನ ವರ್ಷಗಳಲ್ಲಿ, ಅದರಲ್ಲೂ ಪ್ರಥಮ ಪಂಚವಾರ್ಷಿಕ ಯೋಜನೆ ಜನ್ಮ ತಾಳಿದ ಮೇಲೆ, ಸಮನ್ವಯೀಕರಣ ನೀತಿಗೆ ಹೆಚ್ಚಿನ ಪ್ರಾಧಾನ್ಯ ಬಂದಿದೆ. ಈ ಲೇಖನದಲ್ಲಿ ಸಮನ್ವಯೀಕರಣದ ಪರಿಚಯ, ನಿರುದ್ಯೋಗಸಮಸ್ಯೆಯಲ್ಲಿ ಸಮನ್ವಯೀಕರಣದ ಪಾತ್ರ, ಸಮನ್ವಯೀಕರಣ ವಿಧಾನವನ್ನು ಕೈಗಾರಿಕೆಗಳು ಅನುಸರಿಸುತ್ತಿರುವುದಕ್ಕೆ ಕಾರಣಗಳು, ಸಮನ್ವಯೀಕರಣದ ಗುಣದೋಷಗಳು—ಇವನ್ನು ಚರ್ಚಿಸಲಾಗುತ್ತದೆ.

ಸಮನ್ವಯೀಕರಣದ ವ್ಯಾಖ್ಯೆ

ಸಮನ್ವಯೀಕರಣದ ವ್ಯಾಖ್ಯೆಯ ವಿಷಯದಲ್ಲಿ ಅರ್ಥಶಾಸ್ತ್ರಜ್ಞರಲ್ಲಿ ಸಂಪೂರ್ಣ ಒಮ್ಮತವಿರಲಿಲ್ಲ. "ಶ್ರಮ ಅಥವಾ ಸಾಮಗ್ರಿಗಳ ವಿಷಯದಲ್ಲಿ ಕನಿಷ್ಠ ಪ್ರಮಾಣದ ನಷ್ಟ ಮಾತ್ರ ಸಂಭವಿಸುವಂತೆ ನೋಡಿಕೊಳ್ಳುವ ಉದ್ದೇಶದಿಂದ ಏರ್ಪಡಿಸಿರುವ ತಂತ್ರ ವಿಧಾನ ಅಥವಾ ವ್ಯವಸ್ಥೆ" ಸಮನ್ವಯೀಕರಣ ಎಂಬುದಾಗಿ 1927ರಲ್ಲಿ ಜಿನೀವದಲ್ಲಿ ಸೇರಿದ ವಿಶ್ವ ಆರ್ಥಿಕ ಸಮ್ಮೇಳನ ಹೇಳಿದೆ. ಇದರಲ್ಲಿ ಕಾರ್ಮಿಕ ಶ್ರಮದ ವೈಜ್ಞಾನಿಕ ವ್ಯವಸ್ಥೆ, ಸಾಮಗ್ರಿಗಳ ಮತ್ತು ಉತ್ಪನ್ನಗಳ ಪ್ರಮಾಪೀಕರಣ, ವಿಧಾನಗಳ ಸರಳೀಕರಣ, ರವಾನೆ ಮತ್ತು ಮಾರುಕಟ್ಟೆ ಪದ್ಧತಿಯ ಸುಧಾರಣೆ—ಇವುಗಳೆಲ್ಲ ಸೇರುತ್ತವೆ."[3] ಇದು ಔದ್ಯಮಿಕ ಘಟಕಗಳ ವಿತ್ತೀಯ ಮತ್ತು ಸಂಘಟನೆಯ ಅಂಶಗಳಿಗೆ ಅನ್ವಯಿಸದೆಂಬುದು ಹೊರತು ಉಳಿದ ವಿಚಾರಗಳಲ್ಲಿ ವ್ಯಾಪಕವಾಗಿದೆ. ಇತರ ಕೆಲವು ವ್ಯಾಖ್ಯೆಗಳನ್ನು ಮುಂದೆ ಕೊಡಲಾಗಿದೆ: "ಉದ್ಯಮದ ಉತ್ಪಾದನೆಯ ಮತ್ತು ಅಭಿವೃದ್ಧಿಯ ವಿವೇಕಪೂರ್ಣ ನಿಯಂತ್ರಣ" ಎಂದು ರಾಬರ್ಟ್ ಬ್ರೂಕ್ಸ್ ಹೇಳುತ್ತಾರೆ. "ಉತ್ಪಾದನೆ ಮತ್ತು ವಿತರಣೆಗಳಲ್ಲಿ ಸಮಸ್ತರೀತಿಯ ಅಪವ್ಯಯ ಸಂಭವಿಸದಂಥ, ಯಾಂತ್ರಿಕ ಮತ್ತು ವೈಜ್ಞಾನಿಕ ತಿಳಿವಳಿಕೆಯನ್ನು ಸಂಪೂರ್ಣವಾಗಿ ಪ್ರಯೋಗಿಸುವಂಥ ಮತ್ತು ಈ ಉದ್ಯಮದಲ್ಲಿ ಎಲ್ಲ ಮುಖ್ಯಪಾಲುದಾರರ ಸಹಕಾರವನ್ನು ಪಡೆಯುವಂಥ ಪುನಸ್ಸಂಘಟನೆಯೇ ಸಮನ್ವಯೀಕರಣದ ಉದ್ದೇಶ" ಎಂಬುದಾಗಿ ಫಿಲಿಪ್ ಸ್ನೋಡನ್ ಹೇಳುತ್ತಾರೆ. ಉರ್ವಿಕ್ ತಮ್ಮ 'ಸಮನ್ವಯೀಕರಣದ ಅರ್ಥ' ಎಂಬ ಗ್ರಂಥದಲ್ಲಿ "ಅದು ಒಂದು ಮನೋಭಾವವೂ ಹೌದು, ಕಾರ್ಯಸಾಧನವೂ ಹೌದು" ಎಂದು ವರ್ಣಿಸಿದ್ದಾರೆ. "ವೈಜ್ಞಾನಿಕ ಪದ್ಧತಿಗಳ ಅನ್ವಯದ ಮೂಲಕ ಜಗತ್ತಿನ ಆರ್ಥಿಕ ಜೀವನದ ಮೇಲೆ ಇನ್ನೂ ವಿವೇಕಪೂರ್ಣವಾದ ನಿಯಂತ್ರಣ ಸಾಧ್ಯವಿದೆ ಮತ್ತು ಹಾಗೆ ಮಾಡುವುದು ಅಪೇಕ್ಷಣೀಯ ಎಂಬುದು ಇದರ ಧೋರಣೆ. ಕಾರ್ಯವಿಧಾನದ ದೃಷ್ಟಿಯಿಂದ ಹೇಳುವುದಾದರೆ, ಉತ್ಪಾದನೆ, ವಿತರಣೆ ಮತ್ತು ಅನುಭೋಗಗಳ ಸಂಘಟನೆಯಲ್ಲಿ ಮತ್ತು ನಿರ್ವಹಣೆಯಲ್ಲಿ ಉದ್ಭವಿಸುವ ಎಲ್ಲ ಸಮಸ್ಯೆಗಳಿಗೆ ವೈಜ್ಞಾನಿಕ ವಿಧಾನಗಳನ್ನು ಅನ್ವಯಿಸಬೇಕೆಂಬುದೇ ಆಗಿದೆ." ಫ್ಲಾರೆನ್ಸ್ ತಮ್ಮ 'ಔದ್ಯಮಿಕ ಸಂಘಟನೆಯ ತರ್ಕಬದ್ಧತೆ' ಎಂಬ ಗ್ರಂಥದಲ್ಲಿ ಒಂದೇ ಉದ್ಯಮದಲ್ಲಿ ಎಲ್ಲ ವ್ಯಾಪಾರ ಸಂಸ್ಥೆಗಳೂ ಒಂದು ಬಗೆಯ ಸಂಯುಕ್ತ ಕ್ರಮದ ಮೂಲಕ, ವೈಜ್ಞಾನಿಕ ಮತ್ತು ತರ್ಕಬದ್ಧರೀತಿಯಲ್ಲಿ, ಅಪವ್ಯಯವಾಗದಂತೆ ನೋಡಿಕೊಳ್ಳುವುದೇ ಸಮನ್ವಯೀಕರಣದ ಉದ್ದೇಶ" ಎಂದು ಹೇಳುತ್ತಾರೆ. ಹೀಗೆ ಸಮನ್ವಯೀಕರಣದಲ್ಲಿ ಸ್ಥೂಲವಾಗಿ ಎರಡು ಅಂಶಗಳು ಅಡಕವಾಗಿವೆ: ಒಂದು ತಾಂತ್ರಿಕ; ಇನ್ನೊಂದು ಸಾಮಾಜಿಕ. ಆದ್ದರಿಂದ ಸಮನ್ವಯೀಕರಣ ಜಾರಿಯಲ್ಲಿದೆಯೆಂದು ಯಾರಾದರೂ ಹೇಳಿದಾಗ ಈ ಎರಡೂ ಅಂಶಗಳನ್ನು ಏಕಕಾಲದಲ್ಲಿ ಗಮನದಲ್ಲಿಟ್ಟುಕೊಂಡೇ ಹೇಳಿರುವುದಾಗಿ ತಿಳಿಯಬೇಕು. ಅಲ್ಲದೆ

[3] ವರ್ಮ, ಉಮೇಶ್ವರ ಪ್ರಸಾದ್ : *Recent Industrial Problems*, ಪು. ೫೮

ಅವರ ಅಭಿಪ್ರಾಯವಲ್ಲಿ. ಸಮನ್ವಯೀಕರಣ ಸಮಸ್ಯೆಯನ್ನು ಸಂಪೂರ್ಣ ಉದ್ಯಮದ ದೃಷ್ಟಿಯಿಂದ ಪರಿಶೀಲಿಸಬೇಕು.

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಸಹ ಒಂದು ವ್ಯಾಖ್ಯೆ ನೀಡಿದೆ. ಅದರ ಅಭಿಪ್ರಾಯದಲ್ಲಿ ಸಮನ್ವಯೀಕರಣವೆಂದರೆ ಸಾಂಪ್ರದಾಯಿಕ ಕಾರ್ಯವಿಧಾನಗಳ, ರೂಢಿಯ ಪದ್ಧತಿಗಳ ಪ್ರಯೋಗ ಬಿಟ್ಟು ನಿಯಮಗಳ ಬದಲು ಸಾಧನಗಳನ್ನು ಅವುಗಳ ಸಾಧ್ಯತೆಗಳಿಗೆ ಅನುಕೂಲತಮ ರೀತಿಯಲ್ಲಿ ಹೊಂದಾವಣೆ ಮಾಡುವ ಉದ್ದೇಶದಿಂದ, ವೈಜ್ಞಾನಿಕ ಅಧ್ಯಯನ ಪದ್ಧತಿಯನ್ನನುಸರಿಸಿ, ಉಪಯುಕ್ತ ಫಲಿತಾಂಶಗಳನ್ನು ಪಡೆಯುವುದೇ ಆಗಿದೆ." ಎಸ್. ಎಲ್. ಶರ್ಮ ಅವರ ಅಭಿಪ್ರಾಯ ಕೂಡ ಇಂಥದೇ: "ಹೊಂದಾವಣೆಗಳನ್ನುಂಟುಮಾಡಲು. ಹೊಂದಾವಣೆಯಿಲ್ಲದ ಮತ್ತು ಸಮಸ್ಥಿತಿ ಕೆಡುವ ಸಂದರ್ಭಗಳನ್ನು ನಿರೋಧಿಸಲು ಮತ್ತು ಆರ್ಥಿಕ ವ್ಯವಸ್ಥೆಯನ್ನು ಪುನಃ ಸ್ಥಾಪಿಸಲು, ಆರ್ಥಿಕ ಸಾಮರ್ಥ್ಯಗಳನ್ನು ಸರಿಯಾದ ದಿಶೆಯಲ್ಲಿ ವಿವೇಕಪೂರ್ಣವಾಗಿ ಪ್ರಯೋಗಿಸುವುದು" ಸಮನ್ವಯೀಕರಣ ಎಂದು ಅವರು ಹೇಳುತ್ತಾರೆ.

ಯಾವ ಮುಖ್ಯ ಘಟಕಗಳು ಅತ್ಯಂತ ಸುಸಜ್ಜಿತವಾಗಿರುವುವೋ ಮತ್ತು ಉತ್ಪಾದನೆಯನ್ನು ದಕ್ಷರೀತಿಯಲ್ಲಿ ಕೈಗೊಳ್ಳಲು ಸಾಮರ್ಥ್ಯವುಳ್ಳವುಗಳಾಗಿರುವುವೋ ಆ ಘಟಕಗಳಲ್ಲಿ ಉತ್ಪಾದನೆಯನ್ನು ಕೇಂದ್ರೀಕರಿಸುವ ಮತ್ತು ಅಸಮರ್ಥವೂ ಅವನತವೂ ಆಗಿರುವ ಘಟಕಗಳನ್ನು ಮತ್ತು ಕಡಿಮೆ ಸಾಮರ್ಥ್ಯದ ಸಂಸ್ಥೆಗಳನ್ನು ಮುಚ್ಚುವ ಒಂದು ಕಾರ್ಯಯೋಜನೆಯನ್ನು ರೂಪಿಸುವುದು.

ಸಮನ್ವಯೀಕರಣದ ಉದ್ದೇಶ

"ಯುದ್ಧಭೂಮಿಯಲ್ಲಿ ಕಾರ್ಯನಿರತನಾಗಿರುವ ದಕ್ಷ ಸೇನಾಪತಿಯಂತೆ ಸಮನ್ವಯೀಕರಣವೂ ಕೆಲಸ ಮಾಡುತ್ತದೆ. ದುರ್ಬಲವೂ ಕ್ಷೀಣವೂ ಆದ ಘಟಕಗಳಿಗೆ ಬೆಂಬಲ ಕೊಡದೆ. ಕೆಲವೇ ಸುಸಜ್ಜಿತ, ಸುಸಂಘಟಿತ. ಪ್ರಬಲ ಮತ್ತು ಸಮರ್ಥ ಸಂಸ್ಥೆಗಳನ್ನು ಉತ್ತೇಜಿಸುವುದು ಅದರ ಉದ್ದೇಶ" ಎಂದು ಪ್ರೊ. ಯು. ಪಿ. ಶರ್ಮ ಹೇಳುತ್ತಾರೆ. ಯುದ್ಧದಲ್ಲಿ ಹೇಗೋ ಹಾಗೆ ಉದ್ಯಮಗಳಲ್ಲಿ ಕೂಡ ಕೇವಲ ಜನಸಂಖ್ಯೆಯಿಂದಲೇ ಉತ್ತಮ ಫಲಿತಾಂಶಗಳು ದೊರೆಯವು. ಬಲಶಾಲಿಗಳಿಂದ ಮಾತ್ರ ಅದು ದೊರೆಯಲು ಸಾಧ್ಯ."4 ಉದ್ಯಮದಲ್ಲಿರುವ ಸಾಮರ್ಥ್ಯಗಳನ್ನು ಪುನಃ ಹೊಂದಾವಣೆ ಮಾಡುವ ಮೂಲಕ. ಎಂದರೆ. ಅನಾವಶ್ಯಕವಾದ ಉದ್ಯಮಗಳನ್ನು ಮುಚ್ಚುವ ಮೂಲಕ ಮತ್ತು ಸರ್ಕಾರದ ಸಹಾಯದಿಂದ ಉದ್ಯಮಕೂಟಗಳನ್ನು ಕೊಳ್ಳುವುದರ ಮೂಲಕ ಸಮನ್ವಯೀಕರಣ ತನ್ನ ಮುಖ್ಯೋದ್ದೇಶವನ್ನು ಸಾಧಿಸಲು ಪ್ರಯತ್ನಿಸುತ್ತದೆ. ಹೀಗೆ ಉದ್ಯಮದ ಅರ್ಬುದ ವ್ಯಾಧಿಯ ವಿರುದ್ಧ ನಡಸುವ ವೇದನಾರೋಧಕ ಶಸ್ತ್ರಚಿಕಿತ್ಸೆಯೇ ಸಮನ್ವಯೀಕರಣ ಎಂದು ಹೇಳಬಹುದು."

ವೈಜ್ಞಾನಿಕ ಉತ್ಪಾದನ ವಿಧಾನಗಳನ್ನು ಅನುಸರಿಸುವ. ಉತ್ಪಾದನೆಯ ವಿತರಣೆ ಮತ್ತು ಅನುಭೋಗದ ಬೇರೆ ಬೇರೆ ಪದ್ಧತಿಗಳಿಗೆ ಉದ್ದೇಶಪೂರ್ವಕ ವ್ಯವಸ್ಥೆ ಮಾಡುವ ಮೂಲಕ, ಅಂತ್ಯದಲ್ಲಿ ಆರ್ಥಿಕ ಮತ್ತು ಔದ್ಯಮಿಕ ಚಟುವಟಿಕೆಗಳ ನಿಯಂತ್ರಣ ಸಾಧಿಸುವುದು ಇದರ ಧ್ಯೇಯ. "ಅಪಮಾರ್ಗದರ್ಶನ, ತಪ್ಪು ಗಣನೆ. ವೈಯಕ್ತಿಕ ಸ್ಪರ್ಧೆಗಳು ತಪ್ಪುದಾರಿ ಹಿಡಿಯುವುದು—ಇವುಗಳನ್ನೆಲ್ಲ ತೊಲಗಿಸಿ. ಔದ್ಯಮಿಕ ಶಕ್ತಿ ಮತ್ತು ಆರಂಭ ಶಕ್ತಿಗಳನ್ನು ಔದ್ಯಮಿಕ ಜನಾಂಗ ಅತ್ಯುತ್ತಮ ರೀತಿಯಲ್ಲಿ ಮತ್ತು ವೈಭವದಿಂದ ಪ್ರದರ್ಶಿಸುವಂತೆ ಮತ್ತು ಕೊನೆಯದಾಗಿ. ಉತ್ಪಾದನೆಯ ಖರ್ಚನ್ನು ಕಡಿಮೆ ಮಾಡಲು ದಕ್ಷತೆಯಿಂದ ಸೋದರಿಕೆಯ ಮತ್ತು ಲಾಭದಾಯಕವಾದ ಸ್ಪರ್ಧಾವೃಷ್ಟಿಯಿಂದ, ಆ ಜನಾಂಗ ತನ್ನ ಸಾಮರ್ಥ್ಯಗಳನ್ನು ಸಂಘಟಿಸಿಕೊಳ್ಳುವಂತೆ ಮಾಡಲು ಸಮನ್ವಯೀಕರಣ ಸಹಾಯಕವಾಗಿದೆ"5 ಎಂಬುದಾಗಿ ವರ್ಮ ಹೇಳಿದ್ದಾರೆ.

---

4 ವರ್ಮ, ಉಮೇಶ್ವರ ಪ್ರಸಾದ್ : *Recent Industrial Problems*, ಪು. ೫೮

5 ಅದೇ ಗ್ರಂಥ, ವರ್ಮ, ಯು. ಪಿ., ಪುಟ ೬೦

ಯಂತ್ರೌದ್ಯೋಗಿಕ ನಿರುದ್ಯೋಗ

ಆದರೂ ಸಮನ್ವಯೀಕರಣ ಕಡಿಮೆ ದಕ್ಷತೆಯ ಘಟಕಗಳನ್ನು ಬದಿಗಿಟ್ಟು ಹೆಚ್ಚು ಯಂತ್ರಸಾಧನಗಳ ಸ್ಥಾಪನೆಗೆ ಎಡೆ ಕೊಟ್ಟು ಯಂತ್ರೌದ್ಯೋಗಿಕ ನಿರುದ್ಯೋಗವನ್ನುಂಟುಮಾಡುವುದೆಂದು ಅದನ್ನು ಟೀಕಿಸಲಾಗಿದೆ. "ಸಮನ್ವಯೀಕರಣ ಔದ್ಯಮಿಕ ದಕ್ಷತೆಯನ್ನು ಸಾಧಿಸಬೇಕಾದಲ್ಲಿ. ಇದುವರೆಗೆ ಹತ್ತು ಜನರಿಂದ ಕೆಲಸ ಸಾಗಿಸುತ್ತಿದ್ದಲ್ಲಿ ನಾವು ಈಗ ಏಳು ಜನರಿಂದಲೇ ಅದನ್ನು ನೆರವೇರಿಸಲೆತ್ನಿಸಬೇಕು. ನಿರುದ್ಯೋಗ ನಿರ್ಮಾಣವೇ ಅದರ ಧ್ಯೇಯ."[6] 1921ರಲ್ಲಿ ಸರ್ ಹನ್ರಿ ಫೋರ್ಡರ ಉದ್ಯಮದಲ್ಲಿ ಪ್ರತಿದಿನ ಪ್ರತಿಯೊಂದು ಕಾರಿನ ತಯಾರಿಕೆಗೂ ಬೇಕಾಗುತ್ತಿದ್ದ ಕೆಲಸಗಾರರ ಸಂಖ್ಯೆಯನ್ನು 16ರಿಂದ 9ಕ್ಕೆ ಇಳಿಸಲು ಅವರಿಗೆ ಸಾಧ್ಯವಾಯಿತು. ಇಂಥ ಪುನಸ್ಸಂಘಟನೆಯಿಂದ—ಸಮನ್ವಯೀಕರಣದಿಂದ—ಸದಾ ಕೆಲವು ಕೆಲಸಗಾರರು ಉದ್ಯೋಗವನ್ನು ಬಿಟ್ಟು ಹೊರಗೆ ಹೋಗಬೇಕಾಗುತ್ತಿರುತ್ತದೆ. ಹೀಗೆ ಬಿಡುಗಡೆಯಾದ ಕಾರ್ಮಿಕರು ನಿರುದ್ಯೋಗಿಗಳಾಗುವುದರಿಂದ ಸಮನ್ವಯೀಕರಣ ಅನಿಷ್ಟ ಪರಿಣಾಮಕಾರಿ ವ್ಯವಸ್ಥೆಯೆಂದು ಪರಿಗಣಿಸಬಹುದು. ಆದರೆ ಈ ಉದ್ಯೋಗಗಳ ಪುನರ್ನಿಯಮಕ್ಕೆ ಅವಕಾಶ, ಏರ್ಪಾಡು ಮತ್ತು ಸೌಕರ್ಯಗಳಿದ್ದ ಪಕ್ಷದಲ್ಲಿ ಸಮನ್ವಯೀಕರಣದಿಂದ ತೊಂದರೆಯಾಗದು.

ಸಮನ್ವಯೀಕರಣದ ಅಂತಿಮ ಪರಿಣಾಮ ವಾಸ್ತವವಾಗಿ ನಿರುದ್ಯೋಗವೋ ಇಲ್ಲವೇ ಬಿಡುಗಡೆಯಾದ ಕಾರ್ಮಿಕರ ಪುನರ್ನಿಯಮವೋ ಎಂಬುದು ಸಮನ್ವಯೀಕರಣವನ್ನು ಯಾವ ಸಮಯದಲ್ಲಿ ಜಾರಿಗೆ ತರಲಾಗಿದೆಯೆಂಬುದನ್ನವಲಂಬಿಸಿದೆ.[7] ಸಮಯೋಚಿತವಾಗಿ ಸಮನ್ವಯೀಕರಣವನ್ನು ಜಾರಿ ಮಾಡಿದ ಪಕ್ಷದಲ್ಲಿ. ಬೆಲೆಗಳು ಏರುತ್ತಿದ್ದು ಉಜ್ವಲ ಭವಿಷ್ಯವಿರುವಲ್ಲಿ ಮತ್ತು ಬಳಕೆದಾರರಿಂದ ಹೆಚ್ಚು ಬೇಡಿಕೆ ಇರುವಲ್ಲಿ. ಬಿಡುಗಡೆ ಮಾಡಿದವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲು ಏನೂ ಕಷ್ಟವಾಗದು. ಅನುಭೋಗಿಗಳಿಂದ ತತ್ಕಾಲದಲ್ಲಿ ಬರುವ ಬೇಡಿಕೆ ಮತ್ತು ನಿರೀಕ್ಷಿತ ಭಾವೀ ಬೇಡಿಕೆಗಳನ್ನು ಪೂರೈಸುವ ಉದ್ದೇಶದಿಂದ ವ್ಯಾಪಾರಸ್ಥರು ಇನ್ನಷ್ಟು ಹಣವನ್ನು ಉದ್ಯಮದಲ್ಲಿ ವಿನಿಯೋಗಿಸುವಂತೆ ಅವರಿಗೆ ಪ್ರೋತ್ಸಾಹ ದೊರೆಯುತ್ತದೆ. ಇವೆಲ್ಲ ಕಾರಣಗಳಿಂದ ಉತ್ಪಾದನ ಪದ್ಧತಿಯ ಸುಧಾರಣೆಯಾಗಿ ತತ್ಪರಿಣಾಮವಾಗಿ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಹೆಚ್ಚುವುದು. ಆದರೆ ಬೆಲೆಗಳು ಇಳಿಮುಖವಾಗಿರುವಾಗ ಸಮನ್ವಯೀಕರಣವನ್ನು ಜಾರಿಗೆ ತಂದಲ್ಲಿ ನಿರುದ್ಯೋಗ ಪರಿಸ್ಥಿತಿ ಉಂಟಾಗಬಹುದು. ಏಕೆಂದರೆ ಅಂಥ ಕಾಲದಲ್ಲಿ ಉದ್ಯಮಗಳು ಮುಂದೆ ಬರುವ ಸಂಭವ ಕಡಿಮೆ. ಲಾಭ ಸಂಪಾದನೆಯ ಪ್ರಮಾಣವೂ ಕಡಿಮೆಯಾಗುತ್ತದೆ. ಉದ್ಯಮದ ವಾತಾವರಣ ನಿರುತ್ಸಾಹದಾಯಕವಾಗಿರುತ್ತದೆ. ಒಟ್ಟಿನಲ್ಲಿ ಉದ್ಯಮ ನಡೆಸುವವರ ದೃಷ್ಟಿ ಮತ್ತು ಪ್ರವೃತ್ತಿ ಇದ್ದಮಟ್ಟಿಗೆ ಸೀಮಿತವಾಗುವುದೆಂದರೆ. 'ಭವಿಷ್ಯದ ಬೇಡಿಕೆಗಳ ವಿಷಯದಲ್ಲಿ ಅವರು ವಿವೇಕಪೂರ್ಣ ನಿರೀಕ್ಷೆ' ಮಾಡುವುದು ವಿರಳವಾಗುವುದು ಮತ್ತು ವ್ಯಾಪಾರ ಮತ್ತು ಉದ್ಯಮಗಳಲ್ಲಿ ಸರ್ವಸಾಮಾನ್ಯ ಮಾಂದ್ಯ ಪರಿಸ್ಥಿತಿಯುಂಟಾಗಿರುವುದರಿಂದಾಗಿ ಅವರಿಗೆ ವಿನಿಯೋಜಿಸಲು ಮತ್ತು ಉತ್ಪಾದನ ಕಾರ್ಯ ಮಾಡಲು ಮನಸ್ಸಿರುವುದಿಲ್ಲ. ಉದ್ಯಮವನ್ನು ಕೈಗೊಳ್ಳಲು ಸರಿಯಾದ ಸಾಧನಸಾಮಗ್ರಿಗಳನ್ನು ಪಡೆದಿರುವುದಿಲ್ಲ. ಕೆಲಸದಿಂದ ಬಿಡುಗಡೆಯಾದ ಕಾರ್ಮಿಕರಿಗೆ ಪುನಃ ಕೆಲಸ ಸಿಗುವ ಬದಲು ಅವರು ನಿರುದ್ಯೋಗಿಗಳಾಗಿಯೇ ಇರಬೇಕಾಗುವ ಪರಿಸ್ಥಿತಿ ಬರುತ್ತದೆ.

ಭಾರತದಲ್ಲಿ ಸಮನ್ವಯೀಕರಣ

ತಾಂತ್ರಿಕ ಪ್ರಗತಿಯ ಮತ್ತು ಕೈಗಾರಿಕಾಭಿವೃದ್ಧಿಯ ಸಂಬಂಧವಾದ ಅಪ್ರಚುರ ಮತ್ತು ಸವೆದ ಯಂತ್ರಸಾಧನಗಳ ಬದಲು ಅಧಿಕ ಸಾಮರ್ಥ್ಯವುಳ್ಳ ಉತ್ತಮ ಯಂತ್ರಗಳ ಪ್ರತಿಷ್ಠಾಪನ ಮಾಡುವುದು ತಾಂತ್ರಿಕ ಪ್ರಗತಿಯ ಮತ್ತು ಕೈಗಾರಿಕಾಭಿವೃದ್ಧಿಯ ಒಂದು ಸಲ್ಲಕ್ಷಣ. ಕೈಗಾರಿಕಾ ಸಮಸ್ಯೆಗಳನ್ನು ಬಗೆ

---

[6] ರಾಬಿನ್ಸನ್: 'The Structure of Competitive Industry', ಪು. ೭

[7] ಅದೇ, ವರ್ಮ, ಯು. ಪಿ., ಪುಟ ೬೬

[illegible] ಅದು ವಿವೇಕಪೂರ್ಣವಾದ ಮತ್ತು ವೈಜ್ಞಾನಿಕ ದೃಷ್ಟಿಯಿಂದ ಅತ್ಯಾವಶ್ಯಕವಾದ ಒಂದು ಕಾರ್ಯಕ್ರಮವಾಗಿದೆ. ಈ ವಿಷಯವಾಗಿ ಯಾವ ವ್ಯಕ್ತಿಯೇ ಆಗಲಿ, ಮಧ್ಯಕಾಲೀನ ಮತ್ತು ಪ್ರಗತಿ ವಿರುದ್ಧ ವಾದಗಳನ್ನು ಮುಂದೊತ್ತಲಪೇಕ್ಷಿಸುವುದಿಲ್ಲ. ಯಂತ್ರ ವಿಜ್ಞಾನದಿಂದ ಮತ್ತು ವೈಜ್ಞಾನಿಕ ಪ್ರಗತಿಯಿಂದ ಭಾರತದ ಕೈಗಾರಿಕಾಕರಣಕ್ಕೆ ಪೂರ್ಣ ಪ್ರಯೋಜನ ಲಭಿಸಬೇಕೆಂಬುದೇ ಎಲ್ಲರ ಅಪೇಕ್ಷೆಯಾಗಿದೆ.

ಭಾರತದ ಉದ್ಯಮಗಳಲ್ಲಿ ಸಮನ್ವಯೀಕರಣದ ಅಗತ್ಯ

ಭಾರತದ ಉದ್ಯಮಗಳು ಬಹಳ ಮಟ್ಟಿಗೆ ಹಳೆಯ ಮತ್ತು ಸಾಂಪ್ರದಾಯಿಕ ರೀತಿಯಲ್ಲೇ ಇವೆ. ಪೂರ್ವ ಕಲ್ಪನೆ, ಧೈರ್ಯ ಸಾಹಸಗಳ ಅಭಾವಗಳಿಂದ ಕೈಗಾರಿಕೆಗಳ ಪ್ರಗತಿಗೆ ಅಡಚಣೆಯುಂಟಾಗಿದೆ. 1930ರ ಅನಂತರದ ಒಂದು ದಶಕದಲ್ಲಿ ವಿದೇಶಿ ಸ್ಪರ್ಧೆಯಿಂದಾಗಿಯೂ ಅಗ್ಗದ ಸರಕಿನ ದಾಳಿಯಿಂದಾಗಿಯೂ ಭಾರತದ ಉದ್ಯಮಗಳು ಸಮನ್ವಯೀಕರಣವನ್ನು ಸ್ವಲ್ಪಮಟ್ಟಿಗೆ ಅನುಸರಿಸುವುದು ಅವಶ್ಯವಾಯಿತು. ಆದರೆ ಇದು ವ್ಯಾಪಕವಾಗಲಿಲ್ಲ. ಅಲ್ಲಷ್ಟು ಇಲ್ಲಷ್ಟು ಅನುಷ್ಠಾನಕ್ಕೆ ಬಂದಿದೆಯಷ್ಟೆ. ಭಾರತದಲ್ಲಿ ಸಮನ್ವಯೀಕರಣವನ್ನು ಅನುಸರಿಸುವುದು ಏಕೆ ಅಪೇಕ್ಷಣೀಯವೆಂಬುದನ್ನು ವಾರಿಯರ್ ಹೀಗೆ ಹೇಳಿದ್ದಾರೆ:

1 ಸಮನ್ವಯೀಕರಣದಿಂದ ಪಾಶ್ಚಾತ್ಯ ದೇಶಗಳು ಸಾಧಿಸಿದ ಫಲಗಳು ಅತ್ಯಂತ ಗಮನಾರ್ಹ. ಇವು ಸಮನ್ವಯೀಕರಣದ ಪರವಾಗಿ ನಿರ್ಧಾರಕ ಫಲಿತಾಂಶಗಳಾಗಿವೆ.

2 ಸಮನ್ವಯೀಕರಣ ವ್ಯವಸ್ಥೆಗೆ ಅನುಸಾರವಾದ ಉದ್ಯಮಸಂಘಟನೆ ಮಾನವನ ವಿವೇಕದ ಪರಾಕಾಷ್ಠೆಯ ಕುರುಹು.

3 ಸಂಪೂರ್ಣವಾಗಿ ವೈಯಕ್ತಿಕವಾದ ಮತ್ತು ಸ್ಪರ್ಧಾತ್ಮಕವಾದ ಆರ್ಥಿಕ ವ್ಯವಸ್ಥೆಯಲ್ಲಿ, ನಷ್ಟ ಸಂಭವದ ವಿಪತ್ತನ್ನು ಸಮನ್ವಯೀಕರಣದಿಂದ ಪರಿಣಾಮಕಾರಿಯಾಗಿ ತಡೆಯಬಹುದು.

4 ಸಮನ್ವಯೀಕರಣ ನಿಸ್ಸಂದೇಹವಾಗಿ ಏಕಸ್ವಾಮ್ಯ. ನಿರುದ್ಯೋಗ ಮತ್ತು ವೈಜ್ಞಾನಿಕ ವಿಧಾನಗಳಿಗೆ ಎಡೆಕೊಟ್ಟು ಕಾರ್ಮಿಕರಿಗೆ ದೈಹಿಕ ಮತ್ತು ಮಾನಸಿಕ ಶ್ರಮವನ್ನುಂಟು ಮಾಡುತ್ತದೆ. ಆದರೆ ಈ ವ್ಯವಸ್ಥೆಯ ಪರವಾಗಿ ವಾದಿಸುವವರು ನಿರುದ್ಯೋಗ ಪರಿಸ್ಥಿತಿ ಕ್ಷಣಿಕ ಸ್ವಭಾವ ಮಾತ್ರದ್ದಾಗಿದೆಯೆಂದು ಅಭಿಪ್ರಾಯ ಪಡುತ್ತಾರೆ.

ಕೊನೆಯದಾಗಿ, ಸಮನ್ವಯೀಕರಣವನ್ನು ಸರಿಯಾಗಿ ಪರಿಶೀಲಿಸಿದಲ್ಲಿ, ಅದು ಉದ್ಯಮ ಕ್ಷೇತ್ರದಲ್ಲಿ ಸಂಭವಿಸಿದ ಒಂದು ಭವ್ಯ ಆಂದೋಲನವಾಗಿದೆ; ಅದನ್ನು ಸಾಂಸ್ಕೃತಿಕ ಇತಿಹಾಸದ ನವಜಾಗೃತಿಯೊಂದಿಗೆ ಮತ್ತು ಸುಧಾರಣೆಯೊಂದಿಗೆ ಹೋಲಿಸಬಹುದು. ಅಲ್ಲಿ ಆರ್ಥಿಕ ಸಾಧನಸಾಮಗ್ರಿಗಳನ್ನು ಪರಮಾವಧಿ ಉತ್ಪಾದಕ ಫಲಿತಾಂಶಗಳು ದೊರೆಯುವಂತೆ ಉಪಯೋಗಿಸುವುದು ಮತ್ತು ನಷ್ಟ ಸಂಭವಿಸದಂತೆ ನೋಡಿಕೊಳ್ಳುವುದು ಸಮನ್ವಯೀಕರಣದ ಆರ್ಥಿಕತತ್ತ್ವವಾಗಿದೆ.

ಈ ಕಾರಣಗಳಿಂದಾಗಿ ನಮ್ಮ ಔದ್ಯಮಿಕ ವ್ಯವಸ್ಥೆಯಿಂದ ಈಗ ದೊರೆಯುತ್ತಿರುವ ಉತ್ಪಾದನೆಗಿಂತ ಹೆಚ್ಚು ಉತ್ಪಾದನೆ ಮಾಡುವ ಸಾಮರ್ಥ್ಯವನ್ನು ಅದಕ್ಕೆ ಒದಗುವಂತೆ ಮಾಡಲು ಸಮನ್ವಯೀಕರಣವನ್ನು ಅನುಸರಿಸಬೇಕೆಂದು ವಾದಿಸಲಾಗಿದೆ.

ಕಾನ್‌ಪುರದ ಹತ್ತಿ ಗಿರಣಿಗಳಲ್ಲಿ ಏಳು ಹತ್ತಿ ಗಿರಣಿಗಳು ಸಮನ್ವಯೀಕರಣದ ಕಾರ್ಯಕ್ರಮವನ್ನು ಜಾರಿಗೆ ತಂದಿವೆ; ಮತ್ತು ಅಹಮದಾಬಾದಿನ ಕೆಲವು ಗಿರಣಿಗಳೂ ಸ್ವಯಂಚಾಲಿತ ಮಗ್ಗಗಳಲ್ಲಿ ಇದನ್ನು ಪ್ರಾರಂಭಿಸಿವೆ. ಹತ್ತಿಬಟ್ಟೆ ಉದ್ಯಮದ ಮಟ್ಟಿಗೆ ಹೇಳುವುದಾದರೆ 2,00,000

ಸಂಸ್ಥೆಯ ಪ್ರಬಲ ಕಾರ್ಮಿಕವಲಯದಲ್ಲಿ ಸೇಕಡ ಸು. 8ರಷ್ಟು ಕಾರ್ಮಿಕರು ಕೆಲಸ ಕಳೆದುಕೊಂಡು ನಿರುದ್ಯೋಗಿಗಳಾದುದೇನೋ ಸಹಜ. ಈ ನಿರುದ್ಯೋಗ ಪರಿಸ್ಥಿತಿಯನ್ನೆದುರಿಸಬೇಕಾಗಿದ್ದರೂ ಉದ್ಯಮದ ಆಧುನೀಕರಣ ಅಪೇಕ್ಷಣೀಯವೆಂಬುದು ವಿತ್ತ ಮಂತ್ರಿಗಳ ಅಭಿಮತವಾಗಿತ್ತು. ಈ ಸಮಸ್ಯೆಯ ಯಥಾರ್ಥ ಸ್ವರೂಪದ ಅರಿವು ಅವರಿಗಿತ್ತು. ಉದ್ಯಮದ ಉದ್ದೇಶಿತ ಆಶ್ವಾಸನೆಗಳು ಈಡೇರಬೇಕಾಗಿದ್ದಲ್ಲಿ. ಎಂದರೆ ಸ್ಥೂಲವಾಗಿ ಹೇಳುವುದಾದರೆ. ಕಾರ್ಮಿಕರು ಉತ್ಪಾದನೆಗೆ ಅನುಸಾರವಾಗಿ ಸಂಭಾವನೆ ಪಡೆಯಬೇಕಾಗಿದ್ದಲ್ಲಿ ಮತ್ತು ಉದ್ಯಮದ ಬಂಡವಾಳದ ಉತ್ಪಾದಕತೆ ಕಾರ್ಮಿಕ ಶ್ರಮಕ್ಕಿಂತ ಅಧಿಕವಾಗಿ ಆಗಬೇಕಾಗಿದ್ದಲ್ಲಿ. ಅಗತ್ಯವಾದ ಹೊಂದಾವಣಿಗಳು ಹೊಸ ಸಾಹಸೋದ್ಯಮದ ನಷ್ಟಗಳಿಗೆ ಸರಿತೂಗುವಂತಿರಬೇಕು. ಇಂಥ ಪರಿಸ್ಥಿತಿಯಲ್ಲಿ ಹೀಗೆ ನಿರುದ್ಯೋಗಿಗಳಾದ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗುವಂಥ ಮತ್ತು ಇನ್ನೂ ಹೆಚ್ಚು ಕೆಲಸ ಕೊಡಲು ಸಾಧ್ಯವಾಗುವಂಥ ಔದ್ಯಮಿಕ ಉತ್ತೇಜನ ದೊರೆಯುತ್ತದೆ. ಸಮನ್ವಯೀಕರಣ ಸಮರ್ಪಕವಾಗಿರುವುದೆಂದು ಮತ್ತು ಯಾವುದೇ ಕಾರ್ಮಿಕ ಸಮಸ್ಯೆ ಉದ್ಭವಿಸುವುದಿಲ್ಲವೆಂದು ಆಶ್ವಾಸನೆ ಕೊಡದಿದ್ದಲ್ಲಿ. ಈ ಉತ್ತೇಜನ ದೊರೆಯಲು ಸಾಧ್ಯವಿಲ್ಲ ಮತ್ತು ಕಾರ್ಮಿಕರಿಗೆ ಕೆಲಸ ಕೊಡಲು ಸಾಧ್ಯವಿರದು. ಪ್ರಥಮ ಪಂಚವಾರ್ಷಿಕಾವಧಿಯಲ್ಲೇ "ಈ ಸಮಸ್ಯೆಯನ್ನೆದುರಿಸಬೇಕಾದ ಪಕ್ಷದಲ್ಲಿ ಆಮೇಲೆ ಅದನ್ನು ಎದುರಿಸುವ ಮೊದಲು ಆದಷ್ಟೂ ಶೀಘ್ರವಾಗಿ ಅಭಿವೃದ್ಧಿಯ ಮೊದಲ ಹಂತದಲ್ಲೆ ಎದುರಿಸುವುದೇ ಉತ್ತಮ"ವೆಂದು8 ಯೋಜಕರು ಅಭಿಪ್ರಾಯಪಟ್ಟರು. ನಮ್ಮ ವಿಸ್ತೃತವಾಗುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ರಾಷ್ಟ್ರದ ಆರ್ಥಿಕಾಭಿವೃದ್ಧಿಯ ಬಗ್ಗೆ ಪಂಚವಾರ್ಷಿಕ ಯೋಜನೆಗಳ ಅಂತಿಮ ಗುರಿಯಾಗಿರುವ ಕೈಗಾರಿಕಾಕರಣ ಸಮಗ್ರ ರಾಷ್ಟ್ರದಲ್ಲೇ ನಡೆಯಬೇಕಾಗಿರುವ ಸಂದರ್ಭದಲ್ಲಿ. ಸಮನ್ವಯೀಕರಣ ವ್ಯವಸ್ಥೆಯನ್ನು ಆದಷ್ಟು ಶೀಘ್ರವಾಗಿ ಅನುಸರಿಸಬೇಕೆಂದು ಸಹ ಅವರು ಅಭಿಪ್ರಾಯಪಟ್ಟಿದ್ದರು. ಆದರೆ ಸಮನ್ವಯೀಕರಣದ ಕಾರ್ಯಯೋಜನೆಗಳನ್ನು ಅತ್ಯಂತ ಎಚ್ಚರಿಕೆಯಿಂದ ಕಾರ್ಯಾನ್ವಿತಗೊಳಿಸಬೇಕು. ಇಲ್ಲದಿದ್ದರೆ. ನಮ್ಮ ಆರ್ಥಿಕ ವ್ಯವಸ್ಥೆಯನ್ನೇ ಅವು ತಲೆಕೆಳಗಾಗಿ ಮಾಡಿ. ಉತ್ಪಾದಕರ ಮತ್ತು ಕಾರ್ಮಿಕರ ಸಾಮಾನ್ಯ ಹಿತರಕ್ಷಣೆಯಾಗುವ ಬದಲು ದಿಗ್ಭ್ರಾಂತಿಗೊಳಿಸುವಂಥ ಸಮಸ್ಯೆಗಳನ್ನು ತಂದೊಡ್ಡುವ ಸಂಭವವಿದೆಯೆಂಬುದನ್ನು ಎಷ್ಟು ಮಾತ್ರಕ್ಕೂ ಮರೆಯಬಾರದು. "ಮಾನವ ಸಂಬಂಧಿ ಸಮಸ್ಯೆ ತಲೆದೋರುವುದು ಸಮನ್ವಯೀಕರಣದಲ್ಲೇ."9

ಭಾರತದ ಉದ್ಯಮಗಳ ಸಮನ್ವಯೀಕರಣ ಅಗತ್ಯವೆಂದು ಅನೇಕ ಸಮಿತಿಗಳು10 ಅಭಿಪ್ರಾಯಪಟ್ಟಿದ್ದರೂ. ಅನೇಕ ವರ್ಷಗಳ ತರುವಾಯ. ಸ್ವಯಂಚಾಲಿತ ಮಗ್ಗಗಳನ್ನಳವಡಿಸುವ ಮೂಲಕ ಹತ್ತಿ ಗಿರಣಿ ಉದ್ಯಮದಲ್ಲಿ ಉತ್ಪಾದನೆಯ ಸಮನ್ವಯೀಕರಣ ಅಗತ್ಯವೆಂಬುದು 1953–54ರ ಹತ್ತಿ ಜವಳಿ ಸಮಿತಿಯವರ ಗಮನ ಸೆಳೆಯಿತು. 1954ರ ಸಣಬಿನ ವಿಚಾರಣಾ ಆಯೋಗವೂ ಸಣಬು ಉದ್ಯಮದಲ್ಲಿ ಹಳೆಯ ಯಂತ್ರಗಳ ಬದಲು ಆಧುನಿಕ ಯಂತ್ರಗಳನ್ನು ಅಳವಡಿಸಿ ಸಮನ್ವಯೀಕರಣ ಮಾಡುವ ವಿಷಯವನ್ನು ಒತ್ತಿ ಹೇಳಿತು. ಕಲ್ಲಿದ್ದಲು ಉದ್ಯಮದ ಕಾರ್ಯನಿರ್ವಾಹಕ ಪಕ್ಷದ 1950ರ ವರದಿ ಸಹ ಸಣ್ಣ ಕಲ್ಲಿದ್ದಲು ಗಣಿಗಳನ್ನು ಸಮಾಮೇಳನಗೊಳಿಸಿ ತನ್ಮೂಲಕ ದೊಡ್ಡ ಘಟಕಗಳನ್ನೇರ್ಪಡಿಸುವ ಮತ್ತು ಹೆಚ್ಚು ಯಾಂತ್ರೀಕರಣ ಮಾಡುವ ಮೂಲಕ ಸಮನ್ವಯೀಕರಣವನ್ನು ಆಚರಣೆಗೆ ತರಬೇಕೆಂದು ಸಲಹೆ ಮಾಡಿದೆ.

---

[8] Rationale of Rationalization, Eastern Economist, ಏಪ್ರಿಲ್ ೨, ೧೯೫೪ ಪುಟ ೫೫೦

[9] Rationalization of Industries, The Mysore Economic Review, ನವಂಬರ್ ೧೯೫೪, ಪುಟ ೪

[10] e.g. Tariff Board on the Cotton Textile Industry in 1932 and the Industrial Development Committee in 1951

ಸಮನ್ವಯೀಕರಣದ ಪ್ರಗತಿಯನ್ನು ಸುಗಮಗೊಳಿಸುವ ಸಲುವಾಗಿ ನಿಯೋಜಕರ ಮತ್ತು ಕಾರ್ಮಿಕರ ಪ್ರತಿನಿಧಿಗಳ ಮಧ್ಯೆ ನಡೆದ ಒಪ್ಪಂದದ ಪರಿಣಾಮವಾಗಿ. ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಅನೇಕ ತತ್ತ್ವಗಳನ್ನು ಪ್ರತಿಪಾದಿಸಲಾಯಿತು. "ಕಾರ್ಮಿಕರ ಹಿತದೃಷ್ಟಿಯಿಂದ ಕೆಲವು ರಕ್ಷಣೆಗಳ ಆಧಾರದ ಮೇಲೆ. ಎಂದರೆ: 1 ಎಲ್ಲಿ ಸಕ್ರಮ ವ್ಯವಸ್ಥೆಯನ್ನು ಅನುಸರಿಸಲು ಉದ್ದೇಶಿಸಲಾಗುವುದೋ ಅಲ್ಲಿ ಹೊಸತಾಗಿ ಉದ್ಯೋಗಕ್ಕೆ ಸೇರಿಸಿಕೊಳ್ಳುವುದನ್ನು ನಿಲ್ಲಿಸಬೇಕು. 2 ನೌಕರಿಗೆ ಭಂಗ ಬಾರದಂತೆ ಮತ್ತು ನೌಕರರ ಉಪಲಬ್ಧಿಗಳು ಕಡಿಮೆಯಾಗದಂತೆ, ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲ. ಇತರ ಇಲಾಖೆಗಳಲ್ಲಿ ಹೆಚ್ಚುವರಿ ಕಾರ್ಮಿಕರಿಗೆ ಕೆಲಸವನ್ನು ಕೊಡಬೇಕು. 3 ಕೆಲಸದಿಂದ ತೆಗೆದುಹಾಕಲಾದ ಕೆಲಸಗಾರರಿಗೆ ಇತರ ಉದ್ಯೋಗದ ಸಂಬಂಧವಾಗಿ ತರಬೇತು ಸೌಲಭ್ಯಗಳನ್ನು ನೀಡಬೇಕು. ತರಬೇತು ಕಾರ್ಯಯೋಜನೆಯನ್ನು ಸರ್ಕಾರದವರು, ಕಾರ್ಮಿಕರು ಮತ್ತು ಉದ್ಯೋಗದಾತರು ಒಟ್ಟಾಗಿ ರೂಪಿಸಬೇಕು. ತರಬೇತಿನ ಕಾಲದಲ್ಲಿ, ಕಾರ್ಮಿಕರ ಪೋಷಣೆಯ ಜವಾಬ್ದಾರಿ ನಿರ್ವಾಹಕರದಾಗಬೇಕು. ಆದರೆ ತರಬೇತಿನ ಖರ್ಚನ್ನು ಸರ್ಕಾರ ವಹಿಸಬೇಕು. 4 ಸರ್ಕಾರ ಕೈಗೊಳ್ಳಲಾದ ಬೇರೆ ಬೇರೆ ಪರಿಯೋಜನಗಳಲ್ಲಿ ಹೆಚ್ಚುವರಿ ಕಾರ್ಮಿಕ ಶ್ರಮವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು. ಈ ರಕ್ಷಣಾಧಾರಗಳ ಮೇಲೆ ಸಮನ್ವಯೀಕರಣವನ್ನು ಕಾರ್ಯಾನ್ವಿತಗೊಳಿಸಬೇಕು[11]. "ಅಧಿಕ ಮಜೂರಿ. ಉತ್ತಮ ಜೀವನ ಮಟ್ಟ ಮುಂತಾದ ರೀತಿಯಲ್ಲಿ ಸಮನ್ವಯೀಕರಣದ ಲಾಭಗಳಲ್ಲಿ ಪಾಲುಗೊಳ್ಳುವ ಬಗ್ಗೆ ಉತ್ತೇಜನ"[12] ನೀಡಬೇಕೆಂದು ಸಹ ಹೇಳಲಾಯಿತು. ಸಮಸ್ತ ಸಂದರ್ಭಗಳಲ್ಲೂ ಈ ತತ್ತ್ವಗಳನ್ನು ತಪ್ಪದೆ ಪಾಲಿಸಬೇಕೆಂದೂ ಅವುಗಳನ್ನು ಯಾವ ಧ್ಯೇಯದಿಂದ ಪ್ರತಿಪಾದಿಸಲಾಯಿತೋ ಅದೇ ಧ್ಯೇಯಸಾಧನೆಗೆ ಅನ್ವಯಿಸಬೇಕೆಂದೂ ಅಭಿಪ್ರಾಯಪಡಲಾಯಿತು. ಈ ವಿಷಯವನ್ನಿಲ್ಲಿ ಒತ್ತಿ ಹೇಳಬೇಕಾದ್ದು ಅಗತ್ಯ. ಏಕೆಂದರೆ ಸಕ್ರಮ ವ್ಯವಸ್ಥೆಯ ಸಂಬಂಧವಾದ ಚರ್ಚೆಗಳಲ್ಲಿ. ಉದ್ಯೋಗದಾತರು ಮತ್ತು ಕಾರ್ಮಿಕರು ಕೆಲವು ವೇಳೆ ಮೇಲೆ ಹೇಳಿದ ತತ್ತ್ವಗಳನ್ನು ಉಪೇಕ್ಷಿಸಿರುವ ಸಂದರ್ಭಗಳು ಕಂಡುಬಂದಿವೆ. ಔದ್ಯಮಿಕ ನ್ಯಾಯಾಧಿಕರಣದವರು ತಮ್ಮ ತೀರ್ಪುಗಳನ್ನು ಕೊಡುವಾಗ, ಸಮ್ಮತಿ ನೀಡಲಾದ ಈ ಏರ್ಪಾಡುಗಳಿಗೆ ತಕ್ಕ ಗಮನ ಕೊಡಬೇಕಾದ್ದು ಅತ್ಯಗತ್ಯ. ಹೆಚ್ಚುತ್ತಿರುವ ನಿರುದ್ಯೋಗದ ಈ ಸಂದರ್ಭದಲ್ಲಿ. ಸಮನ್ವಯೀಕರಣದ ವಿಷಯದಲ್ಲಿ ಕಾರ್ಮಿಕರು ಪ್ರತಿಕೂಲ ಮನೋಭಾವ ತಳೆಯುವ ಸಂಭವವಿದೆ. ಈಗಿರುವ ಉತ್ಪಾದನ ತಂತ್ರಗಳನ್ನು ಸ್ಥಗಿತಗೊಳಿಸುವುದು. ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ವ್ಯವಸ್ಥೆಯ ಹಿತದೃಷ್ಟಿಯಿಂದ. ಸರಿಯಲ್ಲ. ಆದ್ದರಿಂದ "ನಿರುದ್ಯೋಗಕ್ಕೆ ಎಡೆ ಕೊಡದಿದ್ದರೆ ಕಾರ್ಮಿಕರೊಂದಿಗೆ ಸಮಾಲೋಚನೆ ನಡೆಸಿದ ತರುವಾಯ, ಕೆಲಸ ಮಾಡುವ ಪರಿಸ್ಥಿತಿಗಳನ್ನು ಸುಧಾರಿಸಿದ ತರುವಾಯ ಮತ್ತು ಕಾರ್ಮಿಕರಿಗೆ ಲಾಭಗಳಲ್ಲಿ ಗಣನೀಯ ಪಾಲನ್ನು ಕೊಡಲು ಆಶ್ವಾಸನೆಯಿತ್ತ ಮೇಲೆ"[13] ಸಮನ್ವಯೀಕರಣವನ್ನು ಅನುಸರಿಸಬೇಕು.

ಅಭಿವೃದ್ಧಿ ಹೊಂದದ ದೇಶಗಳಿಗೆ ಸಂಬಂಧಿಸಿದ ಒಂದು ವಿಚಾರ ಇಲ್ಲಿ ಪರಿಶೀಲನಾರ್ಹ. ಇಂಥ ದೇಶಗಳಲ್ಲಿ ಕಡಿಮೆ ವೆಚ್ಚದಲ್ಲಿ ಕಾರ್ಮಿಕ ಶ್ರಮ ದೊರೆಯುವುದರಿಂದ ಮತ್ತು ಬಂಡವಾಳದ ಅಭಾವವಿರುವುದರಿಂದ ಉತ್ಪಾದನ ವಿಧಾನಗಳು ಬಂಡವಾಳ ಪ್ರಧಾನವಾದವುಗಳಾಗಿರದೆ ಕಾರ್ಮಿಕ ಪ್ರಧಾನವಾದವುಗಳಾಗಿರುತ್ತವೆಂದು ಹೇಳಲಾಗಿದೆ. ಈ ಕಾರಣದಿಂದ. ಇಲ್ಲಿ ಸಮನ್ವಯೀಕರಣ ಅನಗತ್ಯವೆಂದು ಹೇಳಲಾಗಿದೆ. ಇದು ಸರಿಯೇ ಎಂದು ಪರಿಶೀಲಿಸಬೇಕಾಗಿದೆ.

---

[11] The First Five Year Plan, 1951–56, Summary of Recommendations, ಪುಟ ೧೦೭

[12] ಅದೇ ಗ್ರಂಥ, ಪುಟ ೧೦೭

[13] Report of the Second Five Year Plan, ೧೯೫೬, ಪುಟ ೫೮೧.

ಸಮಸ್ಯೆಯನ್ನು ಕುರಿತು ನಮ್ಮ ದೇಶಕ್ಕೆ ಸಂಬಂಧಿಸಿದಂತೆ ಈಗ ನಾವು ಎರಡು ಪ್ರಶ್ನೆಗಳನ್ನು ಪರಿಶೀಲಿಸಬೇಕಾಗಿದೆ. ನಿರುದ್ಯೋಗದ ಪ್ರವೃತ್ತಿಗಳು ಮುಂದೆ ತೀವ್ರ ಪರಿಣಾಮಕಾರಿಯಾದವುಗಳೆ? ಈ ದೇಶದಲ್ಲಿ ಸಮನ್ವಯೀಕರಣವನ್ನು ನಿಷೇಧಿಸುವ ಉದ್ದೇಶದಿಂದ ಕೈಕೊಂಡಿರುವ ಶ್ರಮಪ್ರಧಾನ ವಿಧಾನಗಳು ಸ್ವಾಭಾವಿಕವೆ ಮತ್ತು ಸೂಕ್ತವೆ? ಇವೆರಡು ಪ್ರಶ್ನೆಗಳಿಗೂ ಸ್ಪಷ್ಟವಾಗಿ ಮತ್ತು ನಿಸ್ಸಂದೇಹವಾಗಿ 'ಇಲ್ಲ' ಎಂದು ಉತ್ತರ ಕೊಡಬಹುದು. ಸಮನ್ವಯೀಕರಣ ಇವನ್ನು ನಿಧಾನವಾಗಿಯೇ ಜಾರಿಗೆ ತರಬೇಕು. ಇದು ಅನಿವಾರ್ಯ. ಪ್ರಧಾನತಃ ಸಮನ್ವಯೀಕರಣಕ್ಕೆ ಒಳಪಟ್ಟ ಹತ್ತಿ ಜವಳಿ ಕೈಗಾರಿಕೆಯ ಆಧುನೀಕರಣಕ್ಕೆ ಈಗ ಅಂದಾಜು ಮಾಡಿದಂತೆ ಸುಮಾರು 300–350 ಕೋಟಿ ರೂಪಾಯಿಗಳು ಬೇಕಾಗುವುದು. ನಾನಾ ಮಗ್ಗಗಳ ಬದಲಾಗಿ ಸ್ವಯಂಚಾಲಿತ ಮಗ್ಗಗಳನ್ನು ಅಳವಡಿಸುವ ಒಂದೇ ಒಂದು ಕಾರ್ಯಕ್ರಮಕ್ಕೆ ಇನ್ನೂ ಅಧಿಕ ವೆಚ್ಚವಾಗುವುದೆಂದು ಕಾಣಬರುತ್ತದೆ. ಈ ವೆಚ್ಚವನ್ನು ಹಲವು ವರ್ಷಗಳ ಅವಧಿಯಲ್ಲಿ ಹರಡಬೇಕಾಗುತ್ತದೆ.

ಅತ್ಯಂತ ಜನನಿಬಿಡವಾದ ಈ ದೇಶದಲ್ಲಿ ಶ್ರಮಸಾಂದ್ರ ವಿಧಾನಗಳು ಸ್ವಾಭಾವಿಕವಾಗಿರುವುದೆಂದ ಮಾತ್ರಕ್ಕೆ ಸಮನ್ವಯೀಕರಣವನ್ನು ಈ ಕಾರಣದಿಂದಾಗಿ ನಿಷೇಧಿಸಬೇಕೆಂದು ಎಂದಿಗೂ ಅರ್ಥಮಾಡಲು ಸಾಧ್ಯವಿಲ್ಲ. ಬಂಡವಾಳಸಾಂದ್ರ ವಿಧಾನಗಳಿಗಿಂತ ಶ್ರಮಸಾಂದ್ರ ವಿಧಾನಗಳಿಗೆ ಎಷ್ಟರ ಮಟ್ಟಿಗೆ ವೆಚ್ಚ ಕಡಿಮೆಯಾಗುವುದೋ ಅಷ್ಟರಮಟ್ಟಿಗೆ ಶ್ರಮಸಾಂದ್ರ ವಿಧಾನಗಳನ್ನು ಅನುಸರಿಸಬಹುದು. ಇಂಥ ಪರಿಸ್ಥಿತಿ ಇರುವ ವರೆಗೂ ಸಮನ್ವಯೀಕರಣ ಪ್ರಶ್ನೆಯೇ ಉದ್ಭವಿಸದು. ಆದರೆ ಈ ಪರಿಸ್ಥಿತಿ ಒಮ್ಮೆ ಬದಲಾಯಿತೆಂದರೆ, ಶ್ರಮಸಾಂದ್ರ ವಿಧಾನಗಳು ಇನ್ನು ಮುಂದೆ ಎಂದೂ ಕಡಿಮೆ ವೆಚ್ಚದಾಯಕವಾಗಿಲ್ಲದಿದ್ದಲ್ಲಿ ಮತ್ತೆ ಸಮನ್ವಯೀಕರಣದ ಅಗತ್ಯ ಗೋಚರವಾಗುತ್ತದೆ. "ಸುಲಭ ಮಜೂರಿಗೆ ಕಾರ್ಮಿಕರು ಸಿಗುತ್ತಾರೆಂದು ಕಾರಣದಿಂದ ಕಾರ್ಮಿಕರನ್ನು ನೇಮಕ ಮಾಡಬೇಕೆಂದು ಹೇಳುವುದು ಒಂದು ರೀತಿಯಾದರೆ, ಸುಲಭ ಮಜೂರಿಗೆ ಕಾರ್ಮಿಕರು ದೊರೆಯಲಿ ದೊರೆಯದಿರಲಿ, ಕಾರ್ಮಿಕರನ್ನು ನೇಮಕ ಮಾಡಬೇಕೆಂದು ಹೇಳುವುದು ಇನ್ನೊಂದು ರೀತಿ. ಇದನ್ನೇ ಬೇರೆ ಮಾತಿನಲ್ಲಿ ಹೀಗೆ ಹೇಳಬಹುದು: "ಸಮನ್ವಯೀಕರಣ ಅವಶ್ಯವಾಗಿರುವುದೆಂದು ತೋರಿದಲ್ಲೆಲ್ಲ ಮತ್ತು ಅದನ್ನು ಅನುಸರಿಸುವುದು ಸಾಧ್ಯವಿದೆಯೆಂದು ಕಂಡುಬಂದಲ್ಲೆಲ್ಲ ಅಥವಾ ಅದನ್ನು ಅನುಸರಿಸಬೇಕೆಂದು ಉದ್ದೇಶಿಸಿರುವಲ್ಲೆಲ್ಲ ಅದನ್ನು ಕಾರ್ಯಾನ್ವಯಗೊಳಿಸಲು ಅನುಮತಿ ನೀಡಲೇಬೇಕು."[14]

ಯೋಜನಾ ಆಯೋಗದವರು ಆಗಿಂದಾಗ ಈ ವಿಷಯವನ್ನು ಪರಿಶೀಲಿಸುತ್ತಾರೆ. ಸಮನ್ವಯೀಕರಣದಿಂದ ಕಾರ್ಮಿಕರ ಸ್ಥಳಾಂತರವಾಗುವ ನಿರೀಕ್ಷೆಯಿರುವ ಸಂದರ್ಭಗಳಲ್ಲಿ ಹೊಸದಾಗಿ ಕೆಲಸಕ್ಕೆ ಭರ್ತಿಮಾಡಿಕೊಳ್ಳುವುದನ್ನು ನಿಲ್ಲಿಸಬೇಕೆಂದೂ ಅಗತ್ಯವಿದ್ದಲ್ಲಿ ಕೊನೆಗೆ ನೇಮಕವಾದವರನ್ನು ಮೊದಲು ಕೆಲಸದಿಂದ ತೆಗೆದುಹಾಕಬೇಕೆಂದೂ ಸಲಹೆ ಮಾಡಿದ್ದಾರೆ. ಆದರೆ ಸಂಬಂಧಪಟ್ಟ ವ್ಯಕ್ತಿಗಳಿಗೆ ಬಾಧಕ ಉಂಟಾಯಿತೆಂದು ಸಾಮಾಜಿಕ ಕಾರ್ಯನೀತಿಗೆ ಅನುಗುಣವಾಗಿ ಅದನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡುವಲ್ಲಿ ಸಮನ್ವಯೀಕರಣವನ್ನು ಸಂಪೂರ್ಣವಾಗಿ ನಿಷೇಧಿಸುವುದಾಗಲಿ ನಿರೋಧಿಸುವುದಾಗಲಿ ತಪ್ಪು ಮತ್ತು ಹಾಗೆ ಮಾಡುವುದು ದೇಶದ ಸಾಮಾನ್ಯ ಹಿತದೃಷ್ಟಿಗೆ ವಿರುದ್ಧವಾದದ್ದು. ಜನರ ಸಂಪೂರ್ಣ ಹಿತದೃಷ್ಟಿಯಿಂದ ಅನುಸರಿಸಬೇಕಾದ ಅತ್ಯಂತ ವಿವೇಕಪೂರ್ಣ ಮಾರ್ಗ ಯಾವುದೆಂದರೆ ಸಮನ್ವಯೀಕರಣವನ್ನು ಅಂಗೀಕರಿಸುವುದು ಮತ್ತು ಅದರಿಂದಾಗಿ ಉಂಟಾಗುವ ನಿರುದ್ಯೋಗದ ಪರಿಣಾಮಗಳನ್ನು ಕಡಿಮೆ ಮಾಡಲು ಸುವ್ಯವಸ್ಥಿತ ರೀತಿಯಲ್ಲಿ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವ ಕಾರ್ಯಕ್ರಮವನ್ನು ಕೈಗೊಳ್ಳುವುದು.

ಸಾಮಾನ್ಯವಾಗಿ ಭಾರತದಲ್ಲಿ ಇಂದು ವ್ಯವಸ್ಥಾಪಕರು ಸಮನ್ವಯೀಕರಣದ ಪರವಾಗಿದ್ದಾರೆಂದೂ ಕಾರ್ಮಿಕರು ಅದನ್ನು ವಿರೋಧಿಸುತ್ತಾರೆಂದೂ ಹೇಳಬಹುದು. ಉತ್ಪಾದನೆಯಲ್ಲಿ ನಷ್ಟವಾಗದಂತೆ ನೋಡಿಕೊಳ್ಳುವುದು. ಒಟ್ಟು ಉತ್ಪಾದನೆಯನ್ನು ಹೆಚ್ಚಿಸುವುದು ಮತ್ತು ದಕ್ಷತೆಯನ್ನು ಉತ್ತಮಗೊಳಿಸುವುದು ಇವೆಲ್ಲ ಸಮನ್ವಯೀಕರಣದ ಉದ್ದೇಶಗಳು. ಈ ಕಾರಣದಿಂದಲೇ ಸಾಮಾನ್ಯವಾಗಿ

---

[14] Rationale of Rationalization, Eastern Economist, ಏಪ್ರಿಲ್ ೧೯೫೪, ಪುಟ ೫೫೦.

ಉತ್ಪಾದಕರು ಇದನ್ನು ಸಮರ್ಥಿಸುತ್ತಾರೆ. ಸಮನ್ವಯೀಕರಣದಿಂದ ನಿರುದ್ಯೋಗ ಸಂಭವಿಸುವುದೆಂಬ ಅಥವಾ ಸಹಜವಾಗಿ ಅಧಿಕಸಂಖ್ಯೆಯಲ್ಲಿ ಕಾರ್ಮಿಕರು ನಿರುದ್ಯೋಗಿಗಳಾಗುವರೆಂಬ ಭೀತಿಯಿಂದಾಗಿ ಕಾರ್ಮಿಕ ವರ್ಗ ಇದನ್ನು ಪ್ರತಿಭಟಿಸುತ್ತದೆ. ಕಾಲಹರಣ ಮಾಡುವುದನ್ನು ಅಥವಾ ಶ್ರಮವನ್ನು ವ್ಯಥಾ ತಡೆಗಟ್ಟುವ ಉದ್ದೇಶದಿಂದ ಸಂಘಟನೆಯಲ್ಲಿ ಅಥವಾ ವಿಧಾನದಲ್ಲಿ ಮಾಡಲಾದ ಯಾವುದೇ ಬದಲಾವಣೆಯಿಂದ ತತ್‌ಕ್ಷಣ ಕೆಲವು ಕಾರ್ಮಿಕರು ಉದ್ಯೋಗವನ್ನು ಕಳೆದುಕೊಳ್ಳಬೇಕಾಗುತ್ತದೆ. ಬಂಡವಾಳದ ಅಭಾವವಿದ್ದು, ಕಾರ್ಮಿಕರು ಹೆಚ್ಚಾಗಿರುವ ಭಾರತದಲ್ಲಿ ಅಧಿಕ ಬಂಡವಾಳ ವಿನಿಯೋಜಿಸಿ ಕಡಿಮೆ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವ ಯಾವುದೇ ಉತ್ಪಾದನ ವಿಧಾನಗಳನ್ನು ಅನುಸರಿಸ ಕೂಡದು ಎಂಬುದು ಕಾರ್ಮಿಕ ಧುರೀಣರ ಸಾಮಾನ್ಯ ಅಭಿಪ್ರಾಯ. ಅಲ್ಲದೆ, ಸಮನ್ವಯೀಕರಣದಿಂದ ಹೆಚ್ಚು ದಕ್ಷತೆಯುಂಟಾಗುವುದೆಂದು, ದರಗಳು ಕಡಿಮೆಯಾಗುವುವೆಂದು, ಜೀವನಮಟ್ಟ ಏರುವುದೆಂದು, ಮತ್ತು ಇದರಿಂದ ಅಧಿಕ ಉದ್ಯೋಗಾವಕಾಶ ಉಂಟಾಗುವುದೆಂದು ಒಪ್ಪಿದಲ್ಲಿ ಇವು ಹೆಚ್ಚು ಕಡಿಮೆ ದೀರ್ಘಾವಧಿಯ ಪರಿಣಾಮಗಳು ಎಂಬುದಾಗಿ ಅಭಿಪ್ರಾಯಪಡಲಾಗಿದೆ. ಕೇನ್ಸ್ ಹೇಳುವ ಅತಿ ದೀರ್ಘಕಾಲ ಜೀವಿಸುವವರಾದರೂ ಯಾರು? ಆದ್ದರಿಂದ ದೀರ್ಘಾವಧಿಯಲ್ಲಿ ಅಧಿಕ ಉದ್ಯೋಗಾವಕಾಶಗಳು ಲಭಿಸುವುವೆಂಬ ವಾದದಿಂದ, ಪ್ರಸ್ತುತ ನಿರುದ್ಯೋಗವನ್ನೆದುರಿಸುತ್ತಿರುವ ಕಾರ್ಮಿಕರಿಗೆ ಯಾವ ರೀತಿಯ ಸಮಾಧಾನವೂ ದೊರೆಯದು. ಆದ್ದರಿಂದ ಸಮನ್ವಯೀಕರಣ ಈ ಕೂಡಲೇ ಸಂಭವಿಸುವ ಮತ್ತು ದೀರ್ಘಾವಧಿಯ ಪರಿಣಾಮಗಳ ನಡುವೆಯ ತಿಕ್ಕಾಟದಲ್ಲಿ, ರಾಜ್ಯ ಅಥವಾ ಇತರ ಪ್ರಾಧಿಕಾರ ವರ್ಗ ಮುಂದೆ ಬಂದು ನಿರುದ್ಯೋಗಿಗಳಿಗೆ ಪರಿಹಾರವನ್ನೊದಗಿಸದ ಹೊರತು ಅಥವಾ ಅವರ ಉದ್ಯೋಗದ ಸಂಬಂಧದಲ್ಲಿ ಬೇರೇನಾದರೂ ಏರ್ಪಾಟುಗಳನ್ನು ಮಾಡದ ಹೊರತು ಈ ಕೂಡಲೆ ಸಂಭವಿಸುವ ಅಪಾಯಗಳನ್ನು ಕಾರ್ಮಿಕರು ಗಣನೆಗೆ ತೆಗೆದುಕೊಳ್ಳುವುದು ಸಹಜವೇ ಆಗಿದೆ.

ಆದಕಾರಣ, ಎಲ್ಲ ಪಕ್ಷಗಳ ಹಿತದೃಷ್ಟಿಯಿಂದ ಒಂದು ಸಂಧಾನ ಅಗತ್ಯ. ಬೇರೆ ಬೇರೆ ಉದ್ಯಮಗಳಲ್ಲಿ ಸಮನ್ವಯೀಕರಣದ ವಿಧಾನಗಳನ್ನು ಅನುಸರಿಸದಿದ್ದಲ್ಲಿ, ಉತ್ಪಾದನ ವೆಚ್ಚವನ್ನು ಸ್ಪರ್ಧೆಯ ಮಟ್ಟಕ್ಕೆ ಅನುಸಾರವಾಗಿ ಇಳಿಸಲು ಸಾಧ್ಯವಾಗದೆಂಬ ವಿಷಯವನ್ನು ಕಾರ್ಮಿಕವರ್ಗದವರು ತಿಳಿದುಕೊಳ್ಳಬೇಕು. ಪ್ರತಿ ಉದ್ಯಮದಲ್ಲೂ ದೀರ್ಘಕಾಲದ ವರೆಗೆ ಉದ್ಯೋಗದ ಉನ್ನತಮಟ್ಟವನ್ನು ಇಟ್ಟುಕೊಂಡುಬರುವುದು, ಉದ್ಯೋಗಾವಕಾಶಗಳಲ್ಲಿ ಪ್ರತಿಯೊಂದನ್ನೂ ಉತ್ತಮಪಡಿಸುವುದು ಮತ್ತು ಸಾಮಾನ್ಯ ಜೀವನ ಮಟ್ಟವನ್ನು ಹೆಚ್ಚಿಸುವುದು—ಇವೆಲ್ಲ ಭಾರತದ ಉದ್ಯಮದ ಅತ್ಯುನ್ನತ ಮಟ್ಟದ ಅಭಿವೃದ್ಧಿಯನ್ನೇ ಆಧರಿಸಿವೆ. ದಕ್ಷತೆಯ ಅಂಥ ಅತ್ಯುನ್ನತ ಮಟ್ಟವನ್ನು ಮುಟ್ಟಲು ಸಮನ್ವಯೀಕರಣ ವಿಧಾನಗಳ ಮೂಲಕವೇ ಸಾಧ್ಯ. ಆದರೆ ಕಾರ್ಮಿಕರು ಶಂಕೆ ಪಡುವುದರಲ್ಲೂ ನ್ಯಾಯವಿದೆಯೆಂದು ವ್ಯವಸ್ಥಾಪಕರು ತಿಳಿದುಕೊಳ್ಳಬೇಕು. ಆದ್ದರಿಂದ ನಿರುದ್ಯೋಗ ತೀವ್ರತೆಯನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸುವಂಥ ರೀತಿಯಲ್ಲಿ ವಿವಿಧೋದ್ಯಮಗಳಲ್ಲಿ ಈ ವ್ಯವಸ್ಥೆಯ ಗತಿಯನ್ನು ರಾಜ್ಯ ನಿಯಂತ್ರಿಸುವುದು ಅಗತ್ಯ. ಅನೇಕ ಸಂದರ್ಭಗಳಲ್ಲಿ ನಿರುದ್ಯೋಗ ಪರಿಸ್ಥಿತಿ ಅನಿವಾರ್ಯವೆಂದು ಕಂಡು ಬಂದರೂ ಸರ್ಕಾರದವರು, ವ್ಯವಸ್ಥಾಪಕರ ಮತ್ತು ಕಾರ್ಮಿಕರ ಸಹಕಾರ ಪಡೆದು, ನಿರುದ್ಯೋಗಿಗಳ ಪುನರ್ವಸತಿಯ ವಿಷಯವಾಗಿ ನಿರುದ್ಯೋಗ ವೇತನವನ್ನು ಕೊಡುವ ಮೂಲಕ ಮತ್ತು ಅಂಥ ಕಾರ್ಮಿಕರ ಇತರ ಕೆಲಸಗಳ ಬಗ್ಗೆ ಸೌಕರ್ಯಗಳನ್ನು ಒದಗಿಸುವ ಮೂಲಕ ತಕ್ಕ ಕಾರ್ಯಯೋಜನೆಗಳನ್ನು ಸೂತ್ರೀಕರಿಸಬೇಕು.

ಕ್ರಮೇಣ ಸಮನ್ವಯೀಕರಣ ಅಪೇಕ್ಷಣೀಯ ಸದ್ಭಾವದಿಂದ ಮತ್ತು ಒಮ್ಮತದಿಂದ, ಸಾವಿರಾರು ಕಾರ್ಮಿಕರನ್ನು ಉದ್ಯೋಗದಿಂದ ತೆಗೆದುಹಾಕದೆ, ಸಮನ್ವಯೀಕರಣವನ್ನು ಕ್ರಮೇಣ ತರಲು ಸಾಧ್ಯವಿದೆ. ನಿರ್ಯಾತ ಮಾರುಕಟ್ಟೆಯಲ್ಲಿ ವ್ಯಾಪಾರವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಸಹ ಉದ್ಯಮದ ಸಮನ್ವಯೀಕರಣ ಅಗತ್ಯ. ನಿರ್ಯಾತ ಮಾರುಕಟ್ಟೆಯಲ್ಲಿ ವ್ಯಾಪಾರವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರದಿದ್ದಲ್ಲಿ—ಭಾರತದಲ್ಲಿ ಉತ್ಪಾದನೆಯಾಗುವ ಹತ್ತಿ ಜವಳಿಯಲ್ಲಿ ಸೇಕಡ 30ರಷ್ಟು ನಿರ್ಯಾತ ಮಾರುಕಟ್ಟೆಯನ್ನು ಪ್ರವೇಶಿಸುತ್ತದೆ—ಸುಮಾರು ಒಂದು ಲಕ್ಷ ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುತ್ತಾರೆ.

ಮಗ್ಗಗಳ ಸ್ವಯಂಚಲೀಕರಣಕ್ಕೆ ಅನುಮತಿ ಕೊಟ್ಟರೂ, ಶೇಕಡ ಇಪ್ಪತ್ತರಷ್ಟು ಮಗ್ಗಗಳನ್ನು ಮಾತ್ರ ಹಾಗೆ ಪರಿವರ್ತನೆ ಮಾಡಬಹುದಷ್ಟೆ. ಸ್ವಯಂಚಾಲಿತ ಮಗ್ಗಗಳಲ್ಲಿ ಕೆಲವು ನಮೂನೆ ಬಟ್ಟೆಗಳನ್ನು ಮಾತ್ರ ನೇಯಿಸಲು ಸಾಧ್ಯವಾಗಿರುವ ಕಾರಣ, ದೇಶದ ನಾನಾ ಬಗೆಯ ಬೇಡಿಕೆಗಳನ್ನು ಅವುಗಳಿಂದ ಪೂರೈಸಲು ಸಾಧ್ಯವಿಲ್ಲ. ಆದ್ದರಿಂದ, ಸ್ವಯಂಚಾಲನವನ್ನೇರ್ಪಡಿಸುವುದರಿಂದ ಶೇಕಡ 1.8 ಲಕ್ಷ ಜನರು ನಿರುದ್ಯೋಗಿಗಳಾಗುತ್ತಾರೆಂಬ ವಾದ ಆಧಾರರಹಿತವಾದುದು. ಅವಕ್ಕೆ ಬದಲು ಯಂತ್ರಗಳ ಆಧುನಿಕೀಕರಣದಿಂದ, ವಾಸ್ತವವಾಗಿ ಕೆಲಸದ ಭಾರ ಕಡಿಮೆಯಾಗಿ, ಕೆಲಸದ ಪರಿಸ್ಥಿತಿಯಲ್ಲಿ ಸುಧಾರಣೆಯಾಗುತ್ತದೆ.

ಸಮನ್ವಯೀಕರಣದಿಂದ ತತ್‌ಕ್ಷಣದಲ್ಲಿ ನಿರುದ್ಯೋಗ ಸಂಭವಿಸಿದರೂ, ಸ್ವಲ್ಪ ಅವಧಿಯ ತರುವಾಯ ಅದರಿಂದ ಅಂತಿಮವಾಗಿ ದೇಶದ ಆರ್ಥಿಕ ಕ್ಷೇತ್ರದ ಪ್ರತಿಯೊಂದು ವಿಭಾಗದಲ್ಲೂ ಉತ್ತಮ ಆರ್ಥಿಕ ಪರಿಸ್ಥಿತಿಗಳು ಉಂಟಾಗುವುವು. ಸಮನ್ವಯೀಕರಣ ಕೈಗಾರಿಕಾ ನಿರ್ವಹಣೆಯ ಸಂಬಂಧವಾಗಿ ವೈಚಾರಿಕ ಕ್ರಾಂತಿಯನ್ನುಂಟು ಮಾಡುವುದು ಅಲ್ಲದೆ ನಮ್ಮ ಉದ್ಯಮಿಗಳು ತಮ್ಮ ಮನೋಭಾವವನ್ನು ಸಂಪೂರ್ಣವಾಗಿ ಬದಲಾಯಿಸುವಂತೆ ಮಾಡುವುದು. ಸರ್ಕಾರದ ಪ್ರಸ್ತುತ ಸಮನ್ವಯೀಕರಣ ಕಾರ್ಯನೀತಿಯನ್ನು "ಅಪ್ರತಿಹತ ಸಮನ್ವಯೀಕರಣ"ದ ಕಾರ್ಯನೀತಿ ಎಂದು ಹೇಳಬಹುದು. ಸರ್ಕಾರ ಕೈಗಾರಿಕೆಯ ಕ್ಷೇತ್ರದಲ್ಲಿ ತಾಂತ್ರಿಕ ವಿಧಾನಗಳನ್ನು ಕಾರ್ಯಾನ್ವಿತಗೊಳಿಸಿದೆ. ಅದೇ ಕಾಲದಲ್ಲಿ ನಿರುದ್ಯೋಗ ಹೆಚ್ಚದಂತೆ ಎಚ್ಚರಿಕೆಯನ್ನು ವಹಿಸಿದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದುಕಲು ಸಮನ್ವಯೀಕರಣ ಬೇಕೇಬೇಕು. ಅದೊಂದು ಅಂತರರಾಷ್ಟ್ರೀಯ ಘಟನೆ ಮತ್ತು ಬೆಲೆ ಮತ್ತು ಗುಣಗಳು ಜಗತ್ತಿನ ಮಾರುಕಟ್ಟೆಯಲ್ಲಿಯ ನಿರ್ಣಾಯಕ ಅಂಶಗಳು. ಸಮನ್ವಯೀಕರಣದಿಂದ ಸಂಭವಿಸಬಹುದಾದ ತಾತ್ಕಾಲಿಕ ನಿರುದ್ಯೋಗ ಪರಿಸ್ಥಿತಿಯನ್ನು ನಾವು ಎದುರಿಸಬೇಕಾದುದು ಉತ್ತಮ ಮಾರ್ಗವೇ ಅಥವಾ ಸಮನ್ವಯೀಕರಣವನ್ನು ಅನುಸರಿಸದೆ ನಿರಂತರ ನಿರುದ್ಯೋಗ ಮತ್ತು ದಾರಿದ್ರ್ಯ ಪರಿಸ್ಥಿತಿಯನ್ನನುಭವಿಸುವುದು ಯುಕ್ತವೇ ಎಂಬುದನ್ನು ನಿರ್ಣಯಿಸಬೇಕಾಗಿದೆ.

ಯು. ಪಿ. ಉಪಾಧ್ಯಾಯ
ಸುಶೀಲಾ ಉಪಾಧ್ಯಾಯ

ಕ್ರಮಬದ್ಧ ಅಧ್ಯಯನ[1]

ನಮ್ಮ ವಿದ್ಯಾಭ್ಯಾಸ ಪದ್ಧತಿಯಲ್ಲಿ ಹಲವಾರು ಲೋಪದೋಷಗಳಿವೆಯೆಂದೂ, ನಮ್ಮ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ಕೆಳಗಿಳಿಯುತ್ತ ಹೋಗುವುದನ್ನು ತಡೆಗಟ್ಟಿ ಶಿಕ್ಷಣ ಫಲಕಾರಿಯಾಗುವಂತೆ ಮಾಡಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಶಿಕ್ಷಣತಜ್ಞರು ಹೇಳುತ್ತಲೇ ಇದ್ದಾರೆ. ಆದರೆ ಯಾವ ಯಾವ ಘಟ್ಟದಲ್ಲಿ (ಸ್ತರದಲ್ಲಿ) ಮತ್ತು ಯಾವ ಯಾವ ಅಂಶಗಳಲ್ಲಿ ಶೈಕ್ಷಣಿಕ ಅವನತಿಯನ್ನು ತಡೆಗಟ್ಟಬೇಕು? ಪಠ್ಯವಸ್ತುವಿನಲ್ಲಿಯೆ (ಸಿಲಬಸ್). ಪಠ್ಯ ಯೋಜನೆಯಲ್ಲಿಯೆ (ಕರಿಕ್ಯುಲಂ ಪ್ಲಾನಿಂಗ್), ಪಠ್ಯಸಾಮಗ್ರಿ ಹಾಗೂ ಪಠ್ಯಪುಸ್ತಕಗಳ ರಚನೆಯಲ್ಲಿಯೆ, ಪರೀಕ್ಷಣ ವ್ಯವಸ್ಥೆಯಲ್ಲಿಯೆ? ಎಂದು ಯೋಚಿಸುತ್ತ ಹೋದರೆ ಈ ಎಲ್ಲ ಅಂಶಗಳಲ್ಲಿಯೂ ಎಲ್ಲ ಘಟ್ಟಗಳಲ್ಲಿಯೂ ನಮ್ಮ ವಿದ್ಯಾಭ್ಯಾಸ ಪದ್ಧತಿಯಲ್ಲಿ ಪರಿವರ್ತನೆಯಾಗಬೇಕೆಂದು ಮನವರಿಕೆಯಾಗುತ್ತದೆ. ವಿದ್ಯಾಕ್ಷೇತ್ರದಲ್ಲಿ ಈಗ ತಾನೆ ಪ್ರಚಾರವಾಗುತ್ತಿರುವ ಕ್ರಮಬದ್ಧ ಅಧ್ಯಯನ ವ್ಯವಸ್ಥೆ ನಮಗೆ ಹೊಸ ಬೆಳಕನ್ನು ಕೊಡುವುದರಲ್ಲಿ ಸಾಕಷ್ಟು ಸಮರ್ಥವಾಗಬಹುದು ಎಂಬುದು ಈಗ ಪ್ರತಿಯೊಬ್ಬ ಶಿಕ್ಷಣತಜ್ಞನೂ ಗಮನಿಸಬೇಕಾದ ವಿಚಾರ. ಈ ಹೊಸ ಪದ್ಧತಿ ನಮ್ಮ ವಿದ್ಯಾಕ್ಷೇತ್ರದಲ್ಲಿಯ ಕೊರತೆಗಳನ್ನು ಬಗೆಹರಿಸುವುದರಲ್ಲಿ ಎಷ್ಟರ ಮಟ್ಟಿಗೆ ಸಹಾಯಕವಾಗಬಹುದು ಎಂದು ವಿವೇಚಿಸುವುದೇ ಈ ಲೇಖನದ ಉದ್ದೇಶ.

ನಮ್ಮ ಶಿಕ್ಷಣ ಪದ್ಧತಿಯಲ್ಲಿ ಕಂಡುಬರುವ ಮುಖ್ಯವಾದ ದೋಷವೆಂದರೆ ವಿದ್ಯಾರ್ಥಿಗಳ ಮಾನಸಿಕ ಪ್ರೌಢತೆಗೆ ಹಾಗೂ ಗ್ರಹಣಶಕ್ತಿಗೆ ಅನುಗುಣವಾದ. ಅಧ್ಯಯನದ ಸೌಕರ್ಯಕ್ಕನುಸಾರವಾಗಿ ಹಂತಹಂತವಾಗಿ ವಿಭಾಗಿಸಲ್ಪಟ್ಟಿರುವ ಮತ್ತು ಕ್ಲಿಷ್ಟತೆಗೆ ಅನುಸಾರವಾಗಿ ಯೋಜಿತವಾದ ಪಠ್ಯಪುಸ್ತಕ ಹಾಗೂ ಇತರ ಸಾಮಗ್ರಿಗಳ ಅಭಾವ. ವಿದ್ಯಾರ್ಥಿಗಳ ಆವಶ್ಯಕತೆಗಳನ್ನು ಗಮನಿಸದೆ ಲೇಖಕನ ಸೌಕರ್ಯ ಹಾಗೂ ಕಲ್ಪನೆಗಳಿಗನುಸಾರವಾಗಿ ಶಿಕ್ಷಣ ಸಾಮಗ್ರಿಗಳು ತಯಾರಿಸಲ್ಪಟ್ಟಿವೆ. ನಮ್ಮ ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಆವಶ್ಯಕತೆಗಳನ್ನು ಪೂರೈಸುವ ಸಾಧನಗಳಾಗುವ ಬದಲು ಶಿಕ್ಷಣ ಸಾಮಗ್ರಿಗಳನ್ನು ಹೊರುವ ಉಪಕರಣಗಳಾಗಿ ಮಾತ್ರ ನಿಂತಿವೆ. ವಿಮರ್ಶೆ ಎಂದರೆ ಏನೆಂಬುದೇ ಅರಿಯದ, ಆರನೆಯ ತರಗತಿಯ ಮಗುವಿನ ಪಠ್ಯಪುಸ್ತಕದಲ್ಲಿ ಸಾಹಿತ್ಯ ವಿಮರ್ಶೆಯ ಗುಣದೋಷಗಳು ಎಂಬ ಪಾಠವನ್ನು ನಾವು ಕಾಣಬಹುದು. ಮೊದಲ ಹೆಜ್ಜೆಯೇ ಅರ್ಥವಾಗದ ಹುಡುಗರು ಮುಂದಿನ ಹೆಜ್ಜೆಯನ್ನು ಹೇಗೆ ಗ್ರಹಿಸಿಯಾರು? ಕಲಿಸಿದ ಪಾಠವನ್ನು ವಿದ್ಯಾರ್ಥಿಗಳು ಗ್ರಹಿಸಿದರೇ, ಆ ಜ್ಞಾನವನ್ನು ಉಪಯೋಗಿಸಿಕೊಳ್ಳಬಲ್ಲರೇ ಎಂಬುದನ್ನು ತಿಳಿಯಲು ನಮ್ಮ ಪರೀಕ್ಷಾಪದ್ಧತಿ ಸಹಾಯಕವಾಗುವುದರ ಬದಲು ಅವರ ಜ್ಞಾಪಕ ಶಕ್ತಿಯನ್ನು ಪರೀಕ್ಷಿಸಿ ನೌಕರಿಗೆ ದಾರಿತೋರಿಸುವ ಉಪಕರಣವಾಗಿದೆ. ಕಲಿತ ಪಾಠವನ್ನು ಕೂಡಲೆ ಪರೀಕ್ಷಿಸಿ ತಮ್ಮ ತಪ್ಪುಗಳನ್ನು ಮನಗಂಡು ಪಾಠದ ಪುನರಾವರ್ತನೆ ಮಾಡಿ ಹಂತ

---

1 ಪ್ರೋಗ್ರಾಮ್ಡ್ ಲರ್ನಿಂಗ್

ದಂತಾಗಿ ಮುಂದುವರಿಯುವ ಸೌಕರ್ಯ ನಮ್ಮ ವಿದ್ಯಾರ್ಥಿಗಳಿಗೆ ಸಿಗುತ್ತಿಲ್ಲ. ಅಂತಿಮ ಪರೀಕ್ಷೆಯಲ್ಲಿ ಪಡೆಯುವ ಅಂಕವೆ ಆತನ ಯೋಗ್ಯತೆಯ ಅಳತೆಗೋಲಾಗಿದೆ.

ನಮ್ಮ ವಿದ್ಯಾಭ್ಯಾಸ ಪದ್ಧತಿಯಲ್ಲಿ ಅನುಸರಿಸುವ ಭಾಷಣ, ಪ್ರದರ್ಶನ ಹಾಗೂ ಮನೆಪಾಠಗಳ ಪದ್ಧತಿಯಲ್ಲಿಯೂ ಹಲವು ದೋಷಗಳಿವೆ. ಭಾಷಣ ಪದ್ಧತಿಯಿಂದ ವಿದ್ಯಾರ್ಥಿಗಳು ನಿಷ್ಕ್ರಿಯರಾಗುತ್ತಾರೆ. ಅವರು ದೈಹಿಕವಾಗಿ ತರಗತಿಯಲ್ಲಿದ್ದರೂ ಅವರ ಮನಸ್ಸು ಇನ್ನೆಲ್ಲಿಯಾದರೂ ಚಲಿಸುತ್ತಿರಬಹುದು. ಹೀಗಾಗಿ ಏಕಾಗ್ರತೆಯಿಂದ ಪಾಠ ಗ್ರಹಿಸಲು ಅವರು ಅಸಮರ್ಥರಾಗುತ್ತಾರೆ. ಪ್ರದರ್ಶನ (ಡೆಮಾನ್‌ಸ್ಟ್ರೇಷನ್) ಪದ್ಧತಿಯನ್ನು ಫಲಕಾರಿಯಾಗಿ ಮಾಡಲಿಕ್ಕೆ ಬೇಕಾದ ಸೌಕರ್ಯಗಳು ನಮ್ಮಲ್ಲಿಲ್ಲ. ನಮ್ಮ ಗೃಹಪಾಠ ಪದ್ಧತಿಯೂ ಫಲಕಾರಿಯಾಗಿಲ್ಲ. ವಿದ್ಯಾರ್ಥಿಗಳು ಇನ್ನೊಬ್ಬರ ಕೈಯಿಂದ ಅಭ್ಯಾಸಗಳನ್ನು ಬರೆಸಿಕೊಂಡು ಬರಬಹುದು. ವಿದ್ಯಾರ್ಥಿಗಳು ಬರೆದದ್ದನ್ನು ತಿದ್ದಿಕೊಡುವ ವ್ಯವಸ್ಥೆಯೂ ನಮ್ಮಲ್ಲಿ ಸರಿಯಾಗಿಲ್ಲ.

ನಮ್ಮ ತರಗತಿಗಳಲ್ಲಿ ತೀಕ್ಷ್ಣಬುದ್ಧಿಯುಳ್ಳವರೂ ಸಾಮಾನ್ಯಬುದ್ಧಿಯುಳ್ಳವರೂ ಮಂದಬುದ್ಧಿಯುಳ್ಳವರೂ ಬೆರೆತಿರುತ್ತಾರೆ. ಈ ಮೂರು ಸ್ತರಗಳ ವಿದ್ಯಾರ್ಥಿಗಳಿಗೂ ಒಂದೇ ವೇಗದಲ್ಲಿ ಮತ್ತು ಒಂದೇ ರೀತಿಯ ಶಿಕ್ಷಣ ಕೊಡಲಾಗುತ್ತಿದೆ. ಇದರಿಂದಾಗಿ ಬುದ್ಧಿಶಾಲಿಗಳು ನಿಷ್ಕ್ರಿಯರಾಗಿ ಬೇಸರಪಡುವುದನ್ನೂ ಮಂದಬುದ್ಧಿಯುಳ್ಳವರು ಅವಸರದ ಪಾಠದ ಮುಂದುವರಿಕೆಗೆ ಆತಂಕಗಳನ್ನುಂಟು ಮಾಡುವುದನ್ನೂ ನಾವು ಕಾಣಬಹುದು.

ನಮ್ಮ ಶಿಕ್ಷಣದ ಬೇರೆ ಬೇರೆ ಹಂತಗಳನ್ನು ಬೇರೆ ಬೇರೆ ವಿದ್ಯಾತಜ್ಞರು ತಮ್ಮದೇ ಆದ ರೀತಿಯಲ್ಲಿ ರೂಪಿಸಿರುವುದರಿಂದ ಒಂದು ಹಂತಕ್ಕೂ ಮತ್ತೊಂದು ಹಂತಕ್ಕೂ ಸರಿಯಾದ ಹೊಂದಾವಣೆ ಇರುವುದಿಲ್ಲ. ಇದರಿಂದಾಗಿ ಎರಡು ಸ್ತರಗಳೊಳಗಿನ ಅಂತರ ಹೆಚ್ಚಾಗಿ ವಿದ್ಯಾರ್ಥಿಗಳ ಪ್ರಗತಿ ಕುಂಠಿತವಾಗುತ್ತದೆ.

ಹೀಗೆ ದೋಷಪೂರ್ಣವಾದ ನಮ್ಮ ವಿದ್ಯಾಭ್ಯಾಸ ಪದ್ಧತಿಯನ್ನು ಸಾಕಷ್ಟು ಸುಧಾರಿಸಿ ಆಕರ್ಷಕ ಮತ್ತು ಫಲಕಾರಿ ಆಗುವಂತೆ ಮಾಡಲು ಪ್ರಯತ್ನಿಸಿದ ಕೀರ್ತಿ 'ಕ್ರಮಬದ್ಧ ಅಧ್ಯಯನ ಪದ್ಧತಿ'ಗೆ ಸಲ್ಲುತ್ತದೆ. ಹಲವಾರು ವಿದ್ಯಾತಜ್ಞರ ಹಾಗೂ ಮನಶ್ಶಾಸ್ತ್ರಜ್ಞರ ಹಲವಾರು ವರ್ಷಗಳ ಸಂಶೋಧನೆಯ ಫಲವಾಗಿ ಈ ಪದ್ಧತಿ ರೂಪುಗೊಂಡಿದೆ. ಕ್ರಮಬದ್ಧ ಅಧ್ಯಯನವೆಂದರೆ ಅಧ್ಯಯನ ಸಾಮಗ್ರಿಗಳನ್ನು ಅನುಕ್ರಮವಾಗಿ ತಯಾರುಮಾಡಿ, ಕಲಿಯುವವರ ಸೌಕರ್ಯಕ್ಕನುಸಾರವಾಗಿ ಚಿಕ್ಕ ಚಿಕ್ಕ ಖಂಡಗಳಲ್ಲಿ ವಿಂಗಡಿಸಿ ಅವನ್ನು ಒಂದು ನಿಯಂತ್ರಿತ ಅನುಕ್ರಮದಲ್ಲಿಟ್ಟು, ಶಿಕ್ಷಣ ಮತ್ತು ಪರೀಕ್ಷಣ ಕ್ರಿಯೆ ಒಟ್ಟಿಗೆ ನಡೆದು, ಬೇಕಾಗಿ ಬಂದಾಗ ಅಲ್ಲಲ್ಲೇ ಪುನರಾವರ್ತನಕ್ರಿಯೆ ನಡೆಸಿ ಮುಂದಿನ ಹೆಜ್ಜೆ ಇಡುವ ಕ್ರಮ. ಇದನ್ನು ಸ್ವಾಧ್ಯಯನ ಪದ್ಧತಿ ಎಂದೂ ಕರೆಯಬಹುದು. ಅಧ್ಯಾಪಕ ತೆರೆಯ ಮರೆಯಲ್ಲಿದ್ದುಕೊಂಡು ವಿದ್ಯಾರ್ಥಿಯ ಕಲಿಕೆಯನ್ನು ನಿರ್ದೇಶಿಸುತ್ತಾನೆ. ಅದಕ್ಕನುಸಾರವಾಗಿ ವಿದ್ಯಾರ್ಥಿ ತನ್ನ ಕಾರ್ಯಕ್ರಮಗಳನ್ನು ತಾನೇ ರೂಪಿಸಿಕೊಂಡು ತನ್ನ ಪರೀಕ್ಷಣ ಕ್ರಿಯೆಯನ್ನು ತಾನೇ ಮಾಡಿಕೊಂಡು ಮುಂದುವರಿಯುತ್ತಾನೆ. ಅವರವರ ಯೋಗ್ಯತೆ ಸಾಮರ್ಥ್ಯಗಳಿಗನುಸಾರವಾಗಿ ವಿದ್ಯಾರ್ಥಿಗಳು ಮುಂದುವರಿಯಲು ಸಮರ್ಥರಾಗುತ್ತಾರೆ. ಬುದ್ಧಿವಂತ ವಿದ್ಯಾರ್ಥಿ ಇತರರು ತನ್ನ ಮಟ್ಟಕ್ಕೆ ಬರುವ ವರೆಗೆ ಕಾಯಬೇಕಾಗಿಲ್ಲ ಮತ್ತು ಮಂದಮತಿಗಳು ಪಾಠವನ್ನು ಶೀಘ್ರವಾಗಿ ಅರ್ಥಮಾಡಿಕೊಂಡು ಇತರ ವಿದ್ಯಾರ್ಥಿಗಳ ಮಟ್ಟವನ್ನು ಮುಟ್ಟಲು ಚಡಪಡಿಸಬೇಕಾಗಿಲ್ಲ.

ಆಧುನಿಕ ಯುಗದಲ್ಲಿ ಯಂತ್ರಗಳ ಪ್ರಭಾವ ಮಾನವ ಜೀವನದ ಮೇಲೆ ಎಷ್ಟರ ಮಟ್ಟಿಗೆ ಆಗಿದೆ ಎಂಬುದು ನಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ಮಾನವ ಜೀವನದ ಸರ್ವಕ್ಷೇತ್ರದಲ್ಲಿಯೂ ಪ್ರಭಾವ ಬೀರಿದ ಯಂತ್ರ ವಿಜ್ಞಾನ ನಮ್ಮ ವಿದ್ಯಾಕ್ಷೇತ್ರದಲ್ಲಿಯೂ ತನ್ನ ಕೈಚಳಕವನ್ನು ತೋರಿಸಿದೆ. ಕ್ರಮಬದ್ಧ ಶಿಕ್ಷಣ ಪದ್ಧತಿಯಲ್ಲಿ ಪಾಠಗಳನ್ನು ಯಂತ್ರಗಳ ಮೂಲಕ ಬೋಧಿಸುವ ಹಾಗೂ ವಿದ್ಯಾರ್ಥಿ ಸರಿಯಾದ ಉತ್ತರಗಳನ್ನು ಕೊಟ್ಟರೆ ಮಾತ್ರ ಯಂತ್ರ ಮುಂದಕ್ಕೆ ಚಲಿಸಿ ಮುಂದಿನ ಪಾಠವನ್ನು ತೋರಿಸುವ ವ್ಯವಸ್ಥೆಯ ಮೂಲಕ ವಿದ್ಯಾರ್ಥಿಗಳಲ್ಲಿ ಸ್ವಾಧ್ಯಯನ ಪ್ರವೃತ್ತಿಯನ್ನು ಬೆಳೆಸುವ ವಿಧಾನಗಳಿವೆ.

ಕ್ರಮಬದ್ಧ ಶಿಕ್ಷಣಪದ್ಧತಿಯ ಬಗ್ಗೆ 1926ರಿಂದ ಸಂಶೋಧನೆಗಳು ನಡೆಯುತ್ತಿವೆ. ಅಮೆರಿಕದ ಒಹೈಯೋ ಸ್ಟೇಟ್ ವಿಶ್ವವಿದ್ಯಾಲಯದ ಮನೋವಿಜ್ಞಾನದ ಪ್ರಾಧ್ಯಾಪಕ ಡಾ. ಪ್ರೆಸೆ 1926ರಲ್ಲಿ ಒಂದು ಯಂತ್ರವನ್ನು ಕಂಡುಹಿಡಿದ. ವಿದ್ಯಾರ್ಥಿಯ ಜ್ಞಾನಸಾಧನೆಗಳನ್ನು ಪರೀಕ್ಷಿಸುವ ಶಕ್ತಿ ಈ ಯಂತ್ರಕ್ಕಿದೆ ಎಂಬುದನ್ನು ಅವನು ಸಾಧಿಸಿಕೊಟ್ಟ. ಅಧ್ಯಾಪಕನಿಂದ ಅಥವಾ ಪುಸ್ತಕದಿಂದ ಹುಡುಗ ಸೂಚನೆಗಳನ್ನು ಗ್ರಹಿಸಿದ ಮೇಲೆ ಅವರಲ್ಲಿರುವ ಪ್ರಶ್ನೆಗಳಿಗೆ ಕೊಟ್ಟಿರುವ ನಾಲ್ಕೈದು ಉತ್ತರಗಳಲ್ಲಿ ತನ್ನ ಮನಸ್ಸಿಗೆ ಸರಿಯೆಂದು ತೋರಿದ ಉತ್ತರದ ಮುಂದಿನ ಮೊಳೆಯನ್ನು ಒತ್ತುತ್ತಾನೆ. ಉತ್ತರ ಸರಿಯಾದರೆ ಮಾತ್ರ ಯಂತ್ರ ಚಲಿಸಿ ಮುಂದಿನ ಪ್ರಶ್ನೆಯನ್ನು ತೋರಿಸುತ್ತದೆ. ಈ ವಿಧಾನದಿಂದ ಕಲಿಯುವವರಿಗೆ ತಾವು ಮಾಡುವ ತಪ್ಪು ಕೂಡಲೇ ಗೊತ್ತಾಗುತ್ತದೆ. ಈ ವಿಧಾನ ಎಷ್ಟು ಪರಿಣಾಮಕಾರಿಯಾಗಿದೆ ಎಂದು ನೋಡಲಿಕ್ಕೆ ಪರಂಪರಾಗತ ಶಿಕ್ಷಣ ಪದ್ಧತಿಯಲ್ಲಿ ಕಲಿತ ಹುಡುಗರನ್ನೂ ಈ ಪದ್ಧತಿಯಲ್ಲಿ ಕಲಿತ ಹುಡುಗರನ್ನೂ ತೌಲನಿಕವಾಗಿ ನೋಡಿದರು. ಆಗ ಈ ಹೊಸ ಪದ್ಧತಿ ಹೆಚ್ಚು ಪ್ರಭಾವಕಾರಿಯಾಗಿ ಕಂಡುಬಂತು. ಈ ಪದ್ಧತಿಯನ್ನು ಆಗಿನ ಶಿಕ್ಷಣತಜ್ಞರು ಬಹಳವಾಗಿ ಅನುಮೋದಿಸಿದರು. ಮನೋವೈಜ್ಞಾನಿಕ ತತ್ತ್ವಗಳ ಅಡಿಪಾಯದ ಮೇಲೆ ರೂಪಿತವಾದ ಈ ಪದ್ಧತಿ ಮುಂದಿನ ಸಂಶೋಧನೆಗಳಿಗೆ ಮಾರ್ಗದರ್ಶನ ನೀಡಿತು.

ಪ್ರೆಸೆಯ ಗೆಳೆಯನಾದ ಪೀಟರ್‌ಸನ್ 1931ರಲ್ಲಿ, ಲಿಟರ್ 1934ರಲ್ಲಿ ಮತ್ತು ಏಂಜಲ್ 1948ರಲ್ಲಿ ಶೋಧನೆಗಳನ್ನು ನಡೆಸಿ, ಪ್ರತಿಯೊಂದು ಪ್ರಶ್ನೆಗೂ ಸರಿ ಅಥವಾ ತಪ್ಪು ಉತ್ತರ ಯಾವುದು ಎಂದು ವಿದ್ಯಾರ್ಥಿಗಳಿಗೆ ಗೊತ್ತಾದರೆ ಅವರ ಶಿಕ್ಷಣದಲ್ಲಿ ಇನ್ನೂ ಹೆಚ್ಚು ಅಭಿವೃದ್ಧಿಯಾಗುವುದು ಎಂಬ ತತ್ತ್ವಕ್ಕೆ ಪುಷ್ಟಿ ನೀಡಿದರು. ಇದೇ ಸಂದರ್ಭದಲ್ಲಿ ಡಾ. ಬಿ. ಎಫ್. ಸ್ಕಿನ್ನರ್ ಎಂಬ ಪ್ರಸಿದ್ಧ ಮನಶ್ಶಾಸ್ತ್ರಜ್ಞ ಕೆಲವು ಪ್ರಾಣಿಗಳ ಮೇಲೆ ಪ್ರಯೋಗ ನಡೆಸಿ ಪ್ರಾಣಿಗಳಿಗೂ ತಾನು ಮಾಡುವ ಕೆಲಸದ ಬಗ್ಗೆ ಸರಿ ಯಾವುದು ತಪ್ಪು ಯಾವುದು ಎಂಬ ವಿಚಾರ ಗೊತ್ತಾದರೆ ಅವಕ್ಕೂ ಕೆಲಸ ಮಾಡಲಿಕ್ಕೆ ಸ್ಫೂರ್ತಿ ದೊರಕುತ್ತದೆ ಎಂದು ಸಾರಿದ. ಇದರಿಂದ ಮೇಲಿನ ಸಿದ್ಧಾಂತಕ್ಕೆ ಮೆರುಗು ಕೊಟ್ಟಂತಾಯಿತು.

ಈ ಸಂಶೋಧನೆಗಳ ಪರಿಣಾಮವಾಗಿ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕವಾದ ಬದಲಾವಣೆಗಳನ್ನು ಸೂಚಿಸಲಾಯಿತು. ನಾವು ಕಲಿಸಬೇಕಾದ ಅಂಶಗಳನ್ನು ಚಿಕ್ಕ ಚಿಕ್ಕ ಘಟಕಗಳಾಗಿ ವಿಂಗಡಿಸಿ ಅವನ್ನು ಕ್ಲಿಷ್ಟತೆಯ ತೀವ್ರತೆಗನುಸಾರವಾಗಿ ಜೋಡಿಸಿಕೊಳ್ಳಬೇಕು. ಪ್ರತಿಯೊಂದು ಹಂತದಲ್ಲೂ ಒಂದೊಂದು ಘಟಕವನ್ನು ವಿದ್ಯಾರ್ಥಿಯ ಮುಂದಿಟ್ಟು ಆತ ಅದನ್ನು ಸರಿಯಾಗಿ ಗ್ರಹಿಸಿದನೇ ಎಂದು ಪರೀಕ್ಷಿಸಬೇಕು. ಈ ಒಂದೊಂದು ಹೆಜ್ಜೆಗೆ ಚೌಕಟ್ಟು (ಫ್ರೇಂ) ಎನ್ನುತ್ತಾರೆ. ಇದರಿಂದ ವಿದ್ಯಾರ್ಥಿಗಳಿಗೆ ಸರಿಯಾದ ಪ್ರಚೋದನೆ ದೊರೆತು ಅದರಿಂದ ಪ್ರತಿಕ್ರಿಯೆಯನ್ನು ಪಡೆಯಲೂ ಸರಿಯಾದ ಉತ್ತರ ಕೊಡಲು ಅಸಮರ್ಥರಾದಾಗ ಪುನರಾವರ್ತನೆ, ಅತಿಕಲಿಕೆ ಮುಂತಾದ ವ್ಯವಸ್ಥೆಗಳ ಮೂಲಕ ಕಲಿತು ಮುಂದೆ ಹೋಗುವ ವಿಧಾನಗಳನ್ನನುಸರಿಸಲೂ ಸಹಾಯವಾಗುತ್ತದೆ.

ಕ್ರಮಬದ್ಧ ಶಿಕ್ಷಣದ ವಿಧಾನಗಳನ್ನು 'ರೇಖಾಮಾದರಿ' (ಲೀನಿಯಾರ್ ಪ್ರೋಗ್ರಾಂ) ಮತ್ತು 'ಶಾಖಾಮಾದರಿ' (ಬ್ರಾಂಚಿಂಗ್ ಪ್ರೋಗ್ರಾಂ) ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಸ್ಕಿನ್ನರ್ ಪ್ರಚಾರಕ್ಕೆ ತಂದ ವಿಧಾನಕ್ಕೆ ರೇಖಾಮಾದರಿ ಎಂದೂ ಕ್ರೌಡರ್ 1958ರಲ್ಲಿ ರೂಪಿಸಿದ ವಿಧಾನಕ್ಕೆ ಶಾಖಾಮಾದರಿ ಎಂದೂ ಹೆಸರು. ರೇಖಾಮಾದರಿಯಲ್ಲಿ ಒಂದೊಂದು ಪುಟದಲ್ಲಿ ಒಂದೊಂದು ಚೌಕಟ್ಟು ಇರುತ್ತದೆ. ಪ್ರಶ್ನೆಗಳ ಉತ್ತರಗಳನ್ನು ಮುಚ್ಚಿ ಇಡಲಾಗುತ್ತದೆ. ಸರಿಯಾದ ಉತ್ತರ ಕೊಟ್ಟ ಮೇಲೆ ಅವನು ಮುಂದುವರಿಯುವಂತೆ ಮಾಡುತ್ತದೆ. ಶಾಖಾಮಾದರಿಯಲ್ಲಿ ವಿದ್ಯಾರ್ಥಿ ತಪ್ಪಾದ ಉತ್ತರವನ್ನು ಕೊಟ್ಟರೆ ಆತನನ್ನು ಬೇರೊಂದು ಚೌಕಟ್ಟಿನ ಕಡೆಗೆ ಕೊಂಡೊಯ್ದು ಆತ ಮಾಡಿದ ತಪ್ಪನ್ನು ತಿಳಿಸಿ, ಪುನರಾವರ್ತನೆ ಮಾಡಿಸಿ, ಮುಂದಿನ ಹಂತಕ್ಕೆ ಕೊಂಡೊಯ್ಯುವ ವ್ಯವಸ್ಥೆಯಿದೆ. ಈ ವ್ಯವಸ್ಥೆ ಎಲೆಕ್ಟ್ರಾನಿಕ್ ಯಂತ್ರಗಳ ಮೂಲಕ ನಡೆಯುತ್ತದೆ.

ಕ್ರಮಬದ್ಧ ಶಿಕ್ಷಣದ ಕಾರ್ಯಕ್ರಮ ಹಾಗೂ ಚೌಕಟ್ಟುಗಳನ್ನು ತಯಾರಿಸುವುದಕ್ಕೆ ಮುಂಚೆ ಸಾಕಷ್ಟು ಯೋಜನೆ, ಪ್ರಯೋಗಗಳನ್ನು ನಡೆಸಬೇಕಾಗುತ್ತದೆ. ಪಠ್ಯವಿಷಯವನ್ನು ಹಂತಹಂತವಾಗಿ ವಿಂಗಡಿಸಿ, ಚಿಕ್ಕ ಚಿಕ್ಕ ಘಟಕಗಳನ್ನಾಗಿ ಮಾಡಿ ಚೌಕಟ್ಟುಗಳನ್ನೂ ಪರೀಕ್ಷಣ ಸಾಮಗ್ರಿಗಳನ್ನೂ ತಯಾರು

ಮಾಡಬೇಕು. ಪೂರ್ವ ಪರೀಕ್ಷೆಯ ಮೂಲಕ (ಪ್ರಿ-ಟೆಸ್ಟ್) ವಿದ್ಯಾರ್ಥಿಯ ತಿಳಿವಳಿಕೆಯ ಮಟ್ಟವನ್ನು ಅಳೆದು ಅವರು ಆ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಮರ್ಥರಾಗಿರುವರೋ ಎಂದು ನೋಡಿ ಅದಕ್ಕನುಸಾರವಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಅಮೇಲೆ ಅವನ್ನು ಒಂದು ಕ್ಲಾಸಿನ ವಿದ್ಯಾರ್ಥಿಗಳ ಮೇಲೆ ಪ್ರಯೋಗಿಸಿ (ಟ್ರೈ-ಔಟ್) ಅದರಲ್ಲಿ ಕಂಡುಬರುವ ಕುಂದುಕೊರತೆಗಳನ್ನು ಗಮನಿಸಿ ತಿದ್ದುಪಡಿಗಳನ್ನು (ರಿವಿಜನ್) ಮಾಡಬೇಕು. ಆಗ ಆ ಕಾರ್ಯಕ್ರಮ ಕ್ರಮಬದ್ಧ ಶಿಕ್ಷಣಕ್ಕೆ ಸಿದ್ಧವಾಗುತ್ತದೆ. ಹೀಗೆ ಸಿದ್ಧವಾದ ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಗೆ ಕೊಟ್ಟರೆ ಅವರು ತಮ್ಮಷ್ಟಕ್ಕೆ ತಾವೇ ಅದನ್ನು ಉಪಯೋಗಿಸಿಕೊಂಡು ಮುಂದುವರಿಯುತ್ತಾರೆ. ಅವರವರ ಮೇಧಾಶಕ್ತಿಗನುಸಾರವಾಗಿ ತಮ್ಮದೇ ಆದ ವೇಗದಲ್ಲಿ ಮುನ್ನಡೆಯುತ್ತಾರೆ. ಅಧ್ಯಾಪಕ ಮಾಡಬೇಕಾದ ಕೆಲಸಗಳನ್ನೆಲ್ಲ ಈ ಕ್ರಮಬದ್ಧ ಪಾಠಗಳು ಹಾಗೂ ಯಂತ್ರಗಳು ಮಾಡುವುದರಿಂದ ಈ ಕಾರ್ಯಕ್ರಮ ತುಂಬ ಲಾಭದಾಯಕವೆನ್ನಬಹುದು. ಆದರೂ ಈ ಕಾರ್ಯಕ್ರಮದ ಹಿನ್ನೆಲೆಯಲ್ಲಿ ನಿಂತು ತೆರೆಯ ಮರೆಯ ಸೂತ್ರಧಾರನಂತೆ ಅಧ್ಯಾಪಕನೇ ಅದನ್ನು ನಿರ್ದೇಶಿಸಬೇಕು ಎಂಬುದನ್ನು ಮರೆಯಬಾರದು. ಅಧ್ಯಾಪಕ ನಿವೃತ್ತನಾಗುವಂತೆ ಕ್ರಮಬದ್ಧ ಶಿಕ್ಷಣ ಮಾಡುವುದಿಲ್ಲ. ಅದು ಅವನ ದಕ್ಷತೆಯನ್ನು ಹೆಚ್ಚಿಸುವ ಸಾಧನವಾಗುತ್ತದೆ.

ಎಚ್. ಜಿ. ಹನುಮಪ್ಪ

ಉತ್ಪಾದನ ವೆಚ್ಚಗಳು

ಅರ್ಥಶಾಸ್ತ್ರಜ್ಞ ಹಣವೆಚ್ಚಕ್ಕಿಂತಲೂ (ಮನಿ ಕಾಸ್ಟ್) ಹೆಚ್ಚಾಗಿ ಅವಕಾಶವೆಚ್ಚದ (ಆಪರ್ಚುನಿಟಿ ಕಾಸ್ಟ್) ಬಗ್ಗೆ ಹೆಚ್ಚು ಆಸಕ್ತನಾಗಿರುತ್ತಾನೆ. ಅಂದರೆ ಒಂದು ಘಟಕ (ಉತ್ಪಾದನ ಘಟಕ) ಅದರ ಅತ್ಯುತ್ತಮ ಅನ್ಯರೀತಿಯ ಉತ್ಪನ್ನದಲ್ಲಿ (ಆಲ್ಟರ್ನೇಟಿವ್ ಔಟ್‌ಪುಟ್) ಎಷ್ಟನ್ನು ಗಳಿಸಬಹುದು ಎಂಬುದನ್ನೆ ಆತ ಸದಾ ಲೆಕ್ಕ ಮಾಡುತ್ತಿರುತ್ತಾನೆ. ಅರ್ಥಶಾಸ್ತ್ರಜ್ಞ 'ಲಾಭಗಳು' ಹಾಗೂ ಕೆಲವು ಘಟಕಗಳನ್ನು ಅಲ್ಪ ಕಾಲಾವಧಿಯಲ್ಲಿ ಅನ್ಯ ಉಪಯೋಗಕ್ಕೆ ವರ್ಗಾಯಿಸಲು ಅರ್ಥಶಾಸ್ತ್ರಜ್ಞನಿಗೆ ಅಸಾಧ್ಯವಾದಾಗ, ಉತ್ಪಾದನೆಯನ್ನು ಯಾವ ಪ್ರಮಾಣದ ವರೆಗೂ ಕೊಂಡೊಯ್ಯಬೇಕು ಎಂಬ ಭಾವನೆಗಳಿಗೆ ವೆಚ್ಚಗಳು ಎಂಬ ಭಾವನೆ ಸಂಬಂಧಿಸಿದೆ.

ಅವಕಾಶ ವೆಚ್ಚಗಳು ಹಾಗೂ ಲಾಭ

ವ್ಯಾಪಾರಸ್ಥರಿಗೆ ಎರಡು ಪ್ರಮುಖ ವೆಚ್ಚಗಳಿರುತ್ತವೆ. ಅವು 1 ಪ್ರತ್ಯಕ್ಷವೆಚ್ಚಗಳು (ಎಕ್ಸ್‌ಪ್ಲಿಸಿಟ್ ಕಾಸ್ಟ್ಸ್) ಹಾಗೂ 2 ನಿಹಿತ ವೆಚ್ಚಗಳು (ಇಂಪ್ಲಿಸಿಟ್ ಕಾಸ್ಟ್ಸ್). ನಾವು ವೆಚ್ಚಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡುವಾಗ ವ್ಯಾಪಾರಸ್ಥನಿಗೆ ನಿಹಿತ ವೆಚ್ಚಗಳೂ ಇರುತ್ತವೆ ಎಂಬುದನ್ನು ಗಮನಿಸುತ್ತೇವೆ. ಏಕೆಂದರೆ ಆತ ತನ್ನ ಸ್ವಂತ ಬಂಡವಾಳ ಹಾಗೂ ಶ್ರಮವನ್ನು ವ್ಯಯಮಾಡಿರುತ್ತಾನೆ. ಇವೆರಡೂ ಆತನಿಗೆ ಅನ್ಯ ಉತ್ಪಾದನ ಮಾರ್ಗಗಳಲ್ಲಿ ಫಲವನ್ನು ನೀಡಬಲ್ಲ ಸಾಮರ್ಥ್ಯ ಹೊಂದಿರುತ್ತವೆ. ಉದಾ: ಒಬ್ಬ ವ್ಯಾಪಾರಸ್ಥ ತನ್ನ ಉಳಿತಾಯದಲ್ಲಿ 500 ರೂಪಾಯಿಗಳನ್ನು ಬಂಡವಾಳವಾಗಿ ಹೂಡಿದಾಗ. ಒಂದು ವರ್ಷದ ಅನಂತರ ಆತನ ಆಯ 5,000 ರೂಪಾಯಿಗಳಾಗಿ. ಅದರಲ್ಲಿ ಆತನ ವ್ಯಯ 3,500 ರೂಪಾಯಿಗಳಷ್ಟಾದರೆ. ಸ್ವಾಭಾವಿಕವಾಗಿಯೇ ಆತನ ಆ ವರ್ಷದ ಲಾಭ 1.500 ರೂಪಾಯಿಗಳೆಂದಾಗುತ್ತದೆ. ಆದರೆ ಅರ್ಥಶಾಸ್ತ್ರಜ್ಞ ಇದನ್ನು ಒಪ್ಪುವುದಿಲ್ಲ. ಇದಕ್ಕೆ ಕಾರಣ. ಈಗಾಗಲೇ ಹೇಳಿರುವಂತೆ, ಅರ್ಥಶಾಸ್ತ್ರಜ್ಞ ಹಣವೆಚ್ಚಕ್ಕಿಂತಲೂ ಅವಕಾಶವೆಚ್ಚದಲ್ಲಿ ಹೆಚ್ಚು ಆಸಕ್ತನಾಗಿರುತ್ತಾನೆ. 3,500 ರೂಪಾಯಿಗಳ ವ್ಯಯ ಪ್ರತ್ಯಕ್ಷ ವೆಚ್ಚವಾದರೆ ಆತನ 500 ರೂಪಾಯಿಗೆ ಸೇ. 7ರಂತೆ ಬಡ್ಡಿ ಸಿಗುವುದೆಂದು ಭಾವಿಸಿ. ಅದರಂತೆಯೇ ಆತನ ನಿರ್ವಹಣ ಶ್ರಮಕ್ಕೆ 900 ರೂಪಾಯಿಗಳು ಬೇರೆಡೆಯಲ್ಲಿ ಸಂಬಳದ ರೂಪದಲ್ಲಿ ದೊರೆಯಬಹುದೆಂದುಕೊಳ್ಳಬಹುದು. ಇದು ಇಲ್ಲಿಗೆ ನಿಲ್ಲುವುದಿಲ್ಲ. ವ್ಯಾಪಾರಸ್ಥನ ವ್ಯವಹಾರ ಅನಿಶ್ಚಿತತೆಯ ಮೂಲಕ ಸ್ವಲ್ಪಮಟ್ಟಿಗೆ ನಷ್ಟದ ಅಪಾಯಕ್ಕೆ ಒಳಗಾಗಿರುತ್ತದೆ. ಆತ ಮತ್ತೊಬ್ಬರಲ್ಲಿ ದುಡಿಯುವ ವ್ಯಕ್ತಿಯಾದರೆ ಈ ನಷ್ಟದ ಅಪಾಯದ ಭಯ ಆತನಿಗೆ ಅಷ್ಟಾಗಿ ಇರುವುದಿಲ್ಲ. ಆದ್ದರಿಂದ ಈ ವ್ಯಾಪಾರಸ್ಥ ತನ್ನ ಸ್ವಂತ ವ್ಯಾಪಾರವನ್ನು ಹೂಡಲು ಸಿದ್ಧನಾಗುವ ಮುನ್ನ ಅಂದರೆ ಉದ್ಯಮಿಯಾಗುವ ಮುನ್ನ ಕನಿಷ್ಠ ಪಕ್ಷ ವರ್ಷಕ್ಕೆ 65 ರೂಪಾಯಿಗಳಷ್ಟು ಲಾಭವನ್ನಾದರೂ ನಿರೀಕ್ಷಿಸಬೇಕು. (ಇದನ್ನು ಪ್ರಸಾಮಾನ್ಯ ಲಾಭ [ನಾರ್ಮಲ್ ಪ್ರಾಫಿಟ್] ಎಂದು ಕರೆಯಬಹುದು)* ಆತ ಕನಿಷ್ಠ ಮಟ್ಟದ

* ಇಲ್ಲಿ ಉಪಯೋಗಿಸಿರುವ ಸಂಖ್ಯೆಗಳಿಗೆಲ್ಲ ನಮ್ಮ ಉದಾಹರಣೆಯಲ್ಲಿ ಬರುವ ವ್ಯಾಪಾರಸ್ಥನ ೫೦೦ ರೂಪಾಯಿಯ ಮೂಲ ಹೆಚ್ಚುವರಿ ಬಂಡವಾಳವನ್ನೇ ಆಧಾರವಾಗಿಟ್ಟುಕೊಳ್ಳಲಾಗಿದೆ.

ಲಾಭವನ್ನು ಗಳಿಸದಿದ್ದಲ್ಲಿ, ಆತನಿಗೆ ಎರಡು ಮಾರ್ಗಗಳು ಉಳಿಯುತ್ತವೆ: ಬೇರೊಂದು ವ್ಯಾಪಾರ ಮಾರ್ಗವನ್ನು ಹಿಡಿಯುವುದು. ಇಲ್ಲವೇ ಸಂಬಳಕ್ಕೆ ಬೇರೊಂದು ಅಂಗಡಿಯ ನಿರ್ವಾಹಕನಾಗಿ ಕೆಲಸ ಮಾಡುವುದು. ಹೀಗಾಗಿ, ಇಲ್ಲಿ ಮತ್ತೊಂದು ವಿಧವಾದ ವೆಚ್ಚಕ್ಕೆ (ಪ್ರಸಾಮಾನ್ಯ ಲಾಭ) ಅವಕಾಶ ನೀಡಬೇಕಾಗುತ್ತದೆ. ಇತರ ಎಲ್ಲ ಘಟಕಗಳಿಗೂ ಅವುಗಳ ಅವಕಾಶ ವೆಚ್ಚಗಳನ್ನು ಪಾವತಿ ಮಾಡಿದ ಅನಂತರ ಒಂದು ನಿರ್ದಿಷ್ಟ ಕೈಗಾರಿಕೆಯಲ್ಲಿರುವ ಉದ್ಯಮಿಯನ್ನು ಅದರಲ್ಲಿ ಉಳಿಸುವ ಕನಿಷ್ಠ ಆದಾಯ ಇದು. ಪ್ರಸಾಮಾನ್ಯ ಲಾಭವನ್ನು ಒಂದು ವೆಚ್ಚವಾಗಿ ಪರಿಗಣಿಸುವುದರ ಕಾರಣವೇನೆಂದರೆ: ಅದನ್ನು ಪೂರೈಸದಿದ್ದರೆ ಯಾವುದೇ ವ್ಯಾಪಾರ ಕ್ಷೇತ್ರಕ್ಕೂ ಉದ್ಯಮಿಗಳನ್ನು ಒದಗಿಸುವುದು ಅಸಾಧ್ಯವಾಗುತ್ತದೆ.

ಆದ್ದರಿಂದ ವಿವಿಧ ರೀತಿಯ ವೆಚ್ಚಗಳು ಈ ಕೆಳಗಿನಂತೆ ಇರುತ್ತವೆ: ಪ್ರತ್ಯಕ್ಷ ವೆಚ್ಚಗಳು, ನಿಹಿತ ವೆಚ್ಚಗಳು ಹಾಗೂ ಪ್ರಸಾಮಾನ್ಯ ಲಾಭ. ಈ ಎಲ್ಲ ವೆಚ್ಚಗಳನ್ನು ಪೂರೈಸಿದ ಅನಂತರ ಇನ್ನೇನಾದರೂ ವಿಶೇಷವಾಗಿ ಉಳಿದಿದ್ದರೆ ಅದು ಅಸಾಮಾನ್ಯ (ಅಬ್ನಾರ್ಮಲ್), ಅಧಿಸಾಮಾನ್ಯ (ಸೂಪರ್ ನಾರ್ಮಲ್) ಅಥವಾ ಶುದ್ಧ (ಪ್ಯೂರ್) ಲಾಭವಾಗುತ್ತದೆ. ನಾವು ಈಗಾಗಲೇ ತೆಗೆದುಕೊಂಡಿರುವ ಉದಾಹರಣೆಯಂತೆ ಅದು ಹೀಗಿರುತ್ತದೆ:

	ರೂ.ಗಳು	ರೂ.ಗಳು
ಒಟ್ಟು ಆಯ	—	5.000
ಒಟ್ಟು ವೆಚ್ಚಗಳು, ಪ್ರತ್ಯಕ್ಷ	3,500	
ನಿಹಿತ	935	4,500
ಪ್ರಸಾಮಾನ್ಯ ಲಾಭ	65	
ಅಸಾಮಾನ್ಯ ಲಾಭ	—	500

ನಮ್ಮ ಪ್ರಸಕ್ತ ವಿಶ್ಲೇಷಣೆಯ ಸಲುವಾಗಿ ಈ ಮೇಲಿನ ವೆಚ್ಚಗಳನ್ನು ಸ್ಥಿರವೆಚ್ಚಗಳು (ಫಿಕ್ಸೆಡ್ ಕಾಸ್ಟ್ಸ್) ಮತ್ತು ಚಲ ವೆಚ್ಚಗಳು (ವೇರಿಯಬಲ್ ಕಾಸ್ಟ್ಸ್) ಎಂದು ವರ್ಗೀಕರಿಸಬಹುದು.

ಸ್ಥಿರ ವೆಚ್ಚಗಳು ಉದ್ಯಮದ ಉತ್ಪಾದನೆಗೆ ತಕ್ಕಂತೆ ನೇರ ಪ್ರಮಾಣದಲ್ಲಿ ಬದಲಾಯಿಸುವುದಿಲ್ಲ. ಅವು ಕಟ್ಟಡಗಳು, ಯಂತ್ರಗಳು, ಸಾಧನಗಳು ಇಂಥ ಅವಿಭಾಜ್ಯ ಘಟಕಗಳ ಮೇಲಾಗುವ ವೆಚ್ಚಗಳಾಗಿವೆ. ಅವು ತಾಂತ್ರಿಕ ಹಾಗೂ ಇತರ ಕಾರಣಗಳಿಂದಾಗಿ ಉದ್ಭವಿಸುತ್ತವೆ. ಇಂಥ ಘಟಕಗಳನ್ನು ಒಂದು ನಿರ್ದಿಷ್ಟ ಪರಿಮಾಣ ಇಲ್ಲವೆ ಮೊತ್ತದಲ್ಲಿ ಉಪಯೋಗಿಸಲೇಬೇಕಾಗಿದ್ದು ಅವನ್ನು ಯಾವ ರೀತಿಯ ಚಲವೆಚ್ಚವೂ ಇರದಂತೆ ಉಪಯೋಗಿಸಬಹುದು. ಉತ್ಪಾದನೆ ಇಲ್ಲದಿದ್ದರೂ ಸ್ಥಿರವೆಚ್ಚಗಳಿಗೆ ಗುರಿಯಾಗಬೇಕಾಗುತ್ತದೆ ಹಾಗೂ ಉತ್ಪಾದನೆ ತೀವ್ರವಾಗಿ ಏರಿದರೂ ಅವು ಮಾತ್ರ ಸ್ಥಿರವಾಗಿರುತ್ತವೆ.

ಚಲವೆಚ್ಚಗಳು ಉತ್ಪಾದನೆಯ ಪರಿಮಾಣದೊಂದಿಗೆ ನೇರ ಸಂಬಂಧ ಹೊಂದಿರುವ ವೆಚ್ಚಗಳಾಗಿರುತ್ತವೆ. ಅವು ಚಲ ಘಟಕಗಳ ವೆಚ್ಚಗಳಾಗಿರುತ್ತವೆ. ಉದಾ: ಕಾರ್ಯನಿರತ ಕಾರ್ಮಿಕರು, ಕಚ್ಚಾ ವಸ್ತುಗಳು, ಯಂತ್ರಗಳನ್ನು ನಡೆಸಲು ಬೇಕಾಗಿರುವ ವಿದ್ಯುತ್, ಯಂತ್ರಸಾಮಗ್ರಿಯ ಸವೆತ–ಮುರಿತ (ವೇರ್ ಅಂಡ್ ಟೇರ್). ಉತ್ಪಾದನೆ ಇಲ್ಲದ ಕಡೆ ಚಲವೆಚ್ಚಗಳೂ ಇಲ್ಲ; ಉತ್ಪಾದನೆ ಏರಿದಂತೆ ಚಲ ವೆಚ್ಚಗಳೂ ಏರುತ್ತಿರುತ್ತವೆ.

ಸ್ಥಿರ ಹಾಗೂ ಚಲ ವೆಚ್ಚಗಳ ನಡುವೆ ಒಂದು ಸ್ಪಷ್ಟ ಹಾಗೂ ಸಂಪೂರ್ಣ ಗೆರೆ ಎಳೆಯುವುದು ಕಷ್ಟ. ಇವುಗಳ ವ್ಯತ್ಯಾಸ ಈ ಕೆಳಗೆ ನೀಡಿರುವಂತೆ ಸಹಜವಾಗಿ ಮನಸ್ಸಿನಲ್ಲಿ ಎಣಿಕೆ ಹಾಕಿಕೊಳ್ಳುವ ಕಾಲಾವಧಿಯನ್ನು ಅವಲಂಬಿಸಿರುತ್ತದೆ. ಪ್ರಸಕ್ತ ಉತ್ಪಾದನೆ ಲಾಭದಾಯಕವಾಗಿ ಇಲ್ಲದಿದ್ದರೆ ಉದ್ಯಮಿ ಉತ್ಪತ್ತಿಯನ್ನು ಕಡಿಮೆಗೊಳಿಸಬೇಕಾಗುತ್ತದೆ. ಮೊದಲಿಗೆ ಇದರಿಂದ ಕಾರ್ಮಿಕರಿಗೆ ಅತಿರಿಕ್ತಕಾಲ (ಓವರ್‌ಟೈಂ) ದುಡಿಮೆ ನಿಲ್ಲುತ್ತದೆ: ಅವಶ್ಯವಿದ್ದರೆ ಕಾರ್ಮಿಕರನ್ನು ವಾರಗೂಲಿಯ ಮೇಲೆ ನಿಯಮಿಸಲಾಗುತ್ತದೆ. ಕಾಲ ಸಂದಂತೆ, ಹೆಚ್ಚು ಹೆಚ್ಚು ಘಟಕಗಳು ಚಲ ಘಟಕಗಳಾಗುತ್ತವೆ—ಆಡಳಿತ ಸಿಬ್ಬಂದಿ,

ಮಾರಾಟ ಸಿಬ್ಬಂದಿ, ಸಂಶೋಧಕ ಸಿಬ್ಬಂದಿ, ಇಷ್ಟಾದ ಮೇಲೂ ಆಯ ವ್ಯಯಗಳನ್ನು ಸಮರ್ಥಿಸಲಾರದೆ ಹೋದರೆ, ಅವರನ್ನೂ ಸಹ ಕೆಲಸದಿಂದ ವಜಾ ಮಾಡಲಾಗುತ್ತದೆ. ಒಂದು ಘಟಕವನ್ನು ಪರಸ್ಪರ ಬದಲಾಯಿಸಬೇಕೇ ಬೇಡವೇ ಎಂಬುವರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಂಡ ಕೂಡಲೇ ಅದು ಚರ ಘಟಕವಾಗುತ್ತದೆ. ಹಾಗಾದಾಗ ಆ ಘಟಕದ ಅನ್ಯ ಉಪಯೋಗಗಳನ್ನು ಸಹ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಕಡೆಗೆ ಯಂತ್ರಗಳನ್ನು ಸಹ ಬದಲಾಯಿಸಬೇಕಾಗುತ್ತದೆ; ಅವೂ ಸಹ ಚರ ವೆಚ್ಚಗಳಾಗಿವೆ. ಈಗ ನಿರ್ಣಯಿಸಬೇಕಾಗಿರುವ ವಿಷಯವೆಂದರೆ ವ್ಯಾಪಾರದಲ್ಲೇ ಉಳಿಯುವುದು ಲಾಭದಾಯಕವೇ ಅಲ್ಲವೇ ಎನ್ನುವುದು.

ಸ್ಥಿರ ಹಾಗೂ ಚರ ಘಟಕಗಳ ಮತ್ತು ವೆಚ್ಚಗಳ ನಡುವಣ ವ್ಯತ್ಯಾಸ ಎರಡು ರೀತಿಗಳಲ್ಲಿ ಉಪಯೋಗಕಾರಿ. ಮೊದಲನೆಯದಾಗಿ, ಆರ್ಥಿಕ ವಿಶ್ಲೇಷಣೆಯಲ್ಲಿ, ನಾವು ಪರಿಗಣಿಸಿರುವ ಕಾಲಾವಧಿಯನ್ನು ಬದಲಾಯಿಸುತ್ತ ಹೋದಂತೆಲ್ಲ ಪೂರೈಕೆಯ ಪರಿಸ್ಥಿತಿಯಲ್ಲಿ ಉದ್ಭವಿಸುವ ವ್ಯತ್ಯಾಸಗಳ ನಡುವಣ ಭೇದಗಳನ್ನು ಕಂಡುಹಿಡಿಯಲು ಅದು ಒಂದು ಸಾಧನವಾಗಿದೆ. ಅರ್ಥಶಾಸ್ತ್ರಜ್ಞ ಕಾಲವನ್ನು 'ಅಲ್ಪಾವಧಿ' ಹಾಗೂ 'ದೀರ್ಘಾವಧಿ' ಎಂಬುದಾಗಿ ವಿಂಗಡಿಸಿದ್ದಾನೆ. ಕಡೆಯ ಪಕ್ಷ ಒಂದಾದರೂ ಸ್ಥಿರ ಘಟಕವಿರುವ ಕಾಲವನ್ನು ಅಲ್ಪಾವಧಿ ಎಂದು ಹೇಳಲಾಗುತ್ತದೆ. ಕಾರ್ಮಿಕರನ್ನು ನಿಯತ ಕಾಲಕ್ಕಿಂತಲೂ ಹೆಚ್ಚು ದುಡಿಸಿ, ಹೆಚ್ಚು ಕಚ್ಚಾ ಸಾಮಗ್ರಿಯನ್ನು ಉಪಯೋಗಿಸಲು ಸಾಧ್ಯವಿದ್ದರೂ, ಸ್ಥಿರ ಯಂತ್ರ ವ್ಯವಸ್ಥೆ ಹಾಗೂ ಸಂಘಟನೆಯನ್ನು ಬದಲಾಯಿಸಲು ಕಾಲ ಸಾಕಾಗುವುದಿಲ್ಲ. ಈ ಪ್ರಕಾರ, ಅಲ್ಪಾವಧಿಯಲ್ಲಿ ಕೆಲವು ಘಟಕಗಳು ಸ್ಥಿರವಾಗಿರುವುದರಿಂದ, ಒಬ್ಬ ಉದ್ಯಮಿ ಒಂದು ನಿರ್ದಿಷ್ಟ ಉತ್ಪನ್ನಕ್ಕಾಗಿ ಅವುಗಳ ಅತ್ಯುತ್ತಮ ಸಂಯೋಜನೆಯನ್ನು ಸಾಧಿಸುವುದು ಕಷ್ಟ. ಹೀಗಿರುವಾಗ, ದೀರ್ಘಾವಧಿ ಪೂರೈಕೆಯನ್ನು ಸಾಕಷ್ಟು ಹೊಂದಿಸಿಕೊಳ್ಳುವಷ್ಟು ಹಾಗೂ ಕೇವಲ ಚರ ಘಟಕಗಳನ್ನಷ್ಟೆ ಅಲ್ಲದೆ ಸ್ಥಿರ ಘಟಕಗಳನ್ನೂ ಮಾರ್ಪಡಿಸುವಷ್ಟು ದೀರ್ಘದ್ದಾಗಿರುತ್ತದೆ; ಆದ್ದರಿಂದ, ಇಲ್ಲಿ, ಬೇಡಿಕೆಯಲ್ಲಾಗುವ ಬದಲಾವಣೆಗೆ ಪೂರೈಕೆ ಸಂಪೂರ್ಣ ಪ್ರತಿಕ್ರಿಯೆ ನೀಡಬಲ್ಲದು. ಅಂದರೆ, ಮತ್ತೊಮ್ಮೆ ಅತ್ಯುತ್ತಮ ರೀತಿಯಲ್ಲಿ ಘಟಕಗಳನ್ನು ಸಂಯೋಜಿಸಬಹುದು ಹಾಗೂ ಒಂದು ನಿರ್ದಿಷ್ಟ ಬೆಲೆಗೆ ಹೆಚ್ಚು ಪೂರೈಕೆ ನೀಡಬಹುದು.

ಎರಡನೆಯದಾಗಿ ಒಬ್ಬ ಉದ್ಯಮಿ ಅಲ್ಪಾವಧಿಯಲ್ಲಿ ಉತ್ಪಾದನೆಯನ್ನು ಮುಂದುವರಿಸಬೇಕೇ ಬೇಡವೇ ಎಂಬುದನ್ನು ಗಣನೆಗೆ ತೆಗೆದುಕೊಂಡಾಗ ಸ್ಥಿರ ಹಾಗೂ ಚರವೆಚ್ಚಗಳ ನಡುವಣ ವ್ಯತ್ಯಾಸ ಮೂಲಭೂತವಾಗುತ್ತದೆ. ದೀರ್ಘಾವಧಿಯಲ್ಲಿ ಸ್ಥಿರ ಹಾಗೂ ಚರದ ಸಕಲ ಉತ್ಪಾದನ ವೆಚ್ಚಗಳೂ ಸೇರಿಕೊಂಡಿರಬೇಕು. ಆದರೆ ಅಲ್ಪಾವಧಿಯಲ್ಲಿ ಉತ್ಪಾದನೆ ಸೊನ್ನೆಯಾಗಿದ್ದರೂ ಸ್ಥಿರ ವೆಚ್ಚಗಳು ಮಾತ್ರ ಹಾಗೇ ಇರುತ್ತವೆ. ಉತ್ಪಾದನೆ ಆರಂಭವಾಗುವುದಕ್ಕಿಂತ ಮೊದಲೇ ಆ ದಘೂತಿ ಘಟಕಗಳನ್ನು ಹೊಂದಿರುವುದು ಅವಶ್ಯವಾದ್ದರಿಂದ ಅವುಗಳ ವೆಚ್ಚವನ್ನು ಒಮ್ಮೆಗೇ ವಹಿಸಬೇಕಾಗುತ್ತದೆ. ಉತ್ಪಾದನೆಯನ್ನು ನಿಲ್ಲಿಸುವುದರ ಮೂಲಕ ಕೇವಲ ಚರವೆಚ್ಚವನ್ನು ಮಾತ್ರ ಉಳಿಸಿದಂತೆ ಆಗುತ್ತದೆ. ಹಾಗೂ ಒಂದು ಪಕ್ಷ ಇವನ್ನೇನಾದರೂ ಆಯದ ಮೂಲಕ ಮರಳಿ ಪಡೆಯುವುದಾದರೆ ಉದ್ಯಮಿ ಉತ್ಪಾದನೆಯನ್ನು ಮುಂದುವರಿಸುತ್ತಾನೆ. ಈ ವೆಚ್ಚಗಳಿಗಿಂತ ಹೆಚ್ಚಾಗಿ ಆತನೇನಾದರೂ ಗಳಿಸಿದರೆ ಅವು ಆತನ ಸ್ಥಿರವೆಚ್ಚಗಳ ಭಾರವನ್ನೆ ಹೊರಲು ಸ್ವಲ್ಪಮಟ್ಟಿಗೆ ನೆರವಾಗುತ್ತವೆ.

ಉತ್ಪಾದನೆ ಹೆಚ್ಚಾದಂತೆಲ್ಲ ವೆಚ್ಚಗಳು ಹೇಗೆ ವರ್ತಿಸುತ್ತವೆ ?

ಒಬ್ಬ ಉದ್ಯಮಿ ಸಾಧ್ಯವಾದಷ್ಟು ಲಾಭಗಳನ್ನು ಪಡೆಯಬೇಕೆಂಬ ಉದ್ದೇಶ ಹೊಂದಿರುವುದರಿಂದ ಆತ ಘಟಕಗಳ ಭೌತ ಪರಿಮಾಣ (ಫಿಸಿಕಲ್ ಕ್ವಾಂಟಿಟಿ) ಹಾಗೂ ಅವುಗಳ ಫಲದ ಬಗ್ಗೆ ಅಷ್ಟಾಗಿ ಗಮನಿಸದೆ ಅವು ಹಣದ ರೂಪದಲ್ಲಿ ನೀಡಬಹುದಾದ ಪರಿಮಾಣದ ಬಗ್ಗೆ ಹೆಚ್ಚು ಆಸಕ್ತನಾಗಿರುತ್ತಾನೆ. ಅನಂತರ ಆತನ ವಿಭಿನ್ನ ಉತ್ಪನ್ನಗಳನ್ನು ಪಡೆಯಲು ವ್ಯಯಗಳ ಹಾಗೂ ಆಯಗಳ ನಡುವಣ ನೇರ ಸಂಬಂಧವನ್ನು ಅರಿತುಕೊಳ್ಳುವುದರಿಂದ ಆತ ಯಾವ ಪರಿಮಾಣದ ಉತ್ಪನ್ನ ಗರಿಷ್ಠ ಲಾಭ ನೀಡಬಲ್ಲದೆಂಬುದನ್ನು ನಿರ್ಣಯಿಸಲು ಸಾಧ್ಯವಾಗುತ್ತದೆ. ಮುಂದೆ ನೀಡಿರುವ ಕೋಷ್ಟಕವನ್ನು ನೋಡಿ:

ಕೋಷ್ಟಕ 1

ಕಾರ್ಮಿಕರ ಸಂಖ್ಯೆ ಬದಲಾದಂತೆಲ್ಲ ಆಲೂಗಡ್ಡೆಯ ಉತ್ಪನ್ನದಲ್ಲಿ ಆಗಬಹುದಾದ ಏರುಪೇರುಗಳು

ಒಂದು ನಿರ್ದಿಷ್ಟ ಪರಿಮಾಣದ ಭೂಮಿಯ ಮೇಲೆ ನೇಮಿಸಲಾಗಿರುವ ಜನರ ಸಂಖ್ಯೆ	ಬೆಳೆ (ಕ್ವಿಂಟಾಲುಗಳಲ್ಲಿ)		
	ಒಟ್ಟು ಉತ್ಪನ್ನ	ಸರಾಸರಿ ಉತ್ಪನ್ನ	ಸೀಮಾಂತ ಉತ್ಪನ್ನ
1	1	1	1
2	8	4	7
3	27	9	19
4	40	10	13
5	$47\frac{1}{2}$	$9\frac{1}{2}$	$7\frac{1}{2}$
6	54	9	$6\frac{1}{2}$
7	60	$8\frac{4}{7}$	6
8	65	$8\frac{1}{8}$	5
9	69	$7\frac{2}{3}$	4
10	71	$7\frac{1}{10}$	2
11	71	$6\frac{5}{11}$	0
12	66	$5\frac{1}{2}$	—5

ಕೋಷ್ಟಕಕ್ಕೆ ಟಿಪ್ಪಣಿ :

(ಅ) ಒಟ್ಟು ಉತ್ಪನ್ನ = ಸಕಲ ಉದ್ಯೋಗನಿರತ ಘಟಕಗಳೂ ಕೂಡಿ ನೀಡಿರುವ ಒಟ್ಟು ಬೆಳೆ (ಕ್ವಿಂಟಾಲುಗಳಲ್ಲಿ)


(ಆ) ಸರಾಸರಿ ಉತ್ಪನ್ನ = ಪ್ರತಿ ವ್ಯಕ್ತಿಯಿಂದ ಆಗುವ ಬೆಳೆ

$$\text{ಆದ್ದರಿಂದ ಅದು} = \frac{\text{ಒಟ್ಟು ಉತ್ಪನ್ನ}}{\text{ನೇಮಿಸಿರುವ ವ್ಯಕ್ತಿಗಳ ಸಂಖ್ಯೆ}}$$

(ಇ) ಸೀಮಾಂತ ಉತ್ಪನ್ನವೆಂಬುದು ಕಾರ್ಮಿಕರ ಸೀಮಾಂತ ಬೆಳೆಗೆ ಸಂಬಂಧಿಸಿದ್ದು ಹಾಗೂ ಅದು ಕಾರ್ಮಿಕರ ಸಂಖ್ಯೆಯನ್ನು ಒಬ್ಬೊಬ್ಬ ಹೆಚ್ಚುವರಿ ವ್ಯಕ್ತಿಯಿಂದ ಅಧಿಕಗೊಳಿಸುವುದರ ಮೂಲಕ ಒಟ್ಟು ಉತ್ಪನ್ನಕ್ಕೆ ಕೂಡಿಕೊಳ್ಳುವ ಪರಿಮಾಣಕ್ಕೆ ಸಮನಾಗಿರುತ್ತದೆ.

(ಈ) ಸರಾಸರಿ ಉತ್ಪನ್ನಕ್ಕೂ ಸೀಮಾಂತ ಉತ್ಪನ್ನಕ್ಕೂ ನಡುವೆ ಮೂಲಭೂತ ಸಂಬಂಧವಿದೆ. ಸೀಮಾಂತ ಉತ್ಪನ್ನ ಸರಾಸರಿ ಉತ್ಪನ್ನಕ್ಕೆ ಸಮನಾಗಬೇಕಾದರೆ ಎರಡನೆಯದು ಗರಿಷ್ಠತೆ ಮುಟ್ಟಬೇಕು (ಚಿತ್ರ 1ನ್ನು ನೋಡಿ). ಈ ಸಂಬಂಧ ಅನಿವಾರ್ಯವಾಗಿ ಆಗುತ್ತದೆ. ಸರಾಸರಿ ಉತ್ಪನ್ನಕ್ಕಿಂತ ಸೀಮಾಂತ ಉತ್ಪನ್ನ ಹೆಚ್ಚಾಗಿರುವ ತನಕ ಹೆಚ್ಚಿನ ಕಾರ್ಮಿಕ ಏಕಮಾನದಿಂದ (ಅಡಿಷನಲ್ ಯೂನಿಟ್ ಆಫ್ ಲೇಬರ್) ಉಂಟಾಗುವ ಪ್ರತಿಫಲ

(ರಿಟರ್ನ್) ಈಗಾಗಲೇ ಉದ್ಯೋಗನಿರತರಾಗಿರುವ ಎಲ್ಲ ಶ್ರಮಿಕರ ಸರಾಸರಿ ಉತ್ಪನ್ನವನ್ನು ಹೆಚ್ಚಿಸುತ್ತದೆ. ಮತ್ತೊಂದೆಡೆ, ಸೀಮಾಂತ ಉತ್ಪನ್ನವೇನಾದರೂ ಸರಾಸರಿ ಉತ್ಪನ್ನ ಮಟ್ಟಕ್ಕಿಂತ ಕಡಿಮೆಯಾದರೆ ಕೂಡಲೆ ಹೆಚ್ಚಿನ ಕಾರ್ಮಿಕ ಸರಾಸರಿ ಉತ್ಪನ್ನವನ್ನು ಕೆಳಗಿಳಿಸುತ್ತಾನೆ. ಆದ್ದರಿಂದಲೇ ಈ ಸರಾಸರಿ ಉತ್ಪನ್ನ ಏರದೆಯೂ ಇಳಿಯದೆಯೂ ಇದ್ದಾಗ, ಅದರ ಗರಿಷ್ಠ ಮಟ್ಟದಲ್ಲಿ, ಸೀಮಾಂತ ಉತ್ಪನ್ನ ಸರಾಸರಿ ಉತ್ಪನ್ನಕ್ಕೆ ಸಮನಾಗಿರುತ್ತದೆ (MR = AR).



ಚಿತ್ರ ೧


ಆದ್ದರಿಂದ ನಮ್ಮ ಪ್ರಥಮ ಕಾರ್ಯವೇನೆಂದರೆ, ಉತ್ಪನ್ನ ಬದಲಾದಂತೆಲ್ಲ ಹೇಗೆ ಈ ವೆಚ್ಚಗಳು ಬದಲಾಗುತ್ತವೆ ಎಂಬುದನ್ನು ಕಂಡುಹಿಡಿಯುವುದು. ಘಟಕಗಳನ್ನು ಕೊಳ್ಳುವಲ್ಲಿ ಪರಿಪೂರ್ಣ ಪೈಪೋಟಿ ಇರುವುದೆಂದು ಭಾವಿಸಿಕೊಳ್ಳೋಣ. ಅಂದರೆ ಪ್ರತಿ ಸಂಸ್ಥೆಯ ಬೇಡಿಕೆಯನ್ನೂ ಒಟ್ಟು ಪೂರೈಕೆಗೆ ಹೋಲಿಸಿದರೆ ಎಷ್ಟೊಂದು ಕಡಿಮೆಯಾಗಿರುವುದೆಂದರೆ, ಅಂಥ ಬೇಡಿಕೆಯಲ್ಲಾಗುವ ಯಾವುದೇ ಬದಲಾವಣೆಯೂ ಈ ಘಟಕಗಳ ಬೆಲೆಗಳ ಮೇಲೆ ಪರಿಣಾಮ ಬೀರಲಾರದು.

ಅಲ್ಪಾವಧಿಯಲ್ಲಿ ಸ್ಥಿರ ಘಟಕಗಳಿರುವುದು ಸ್ವತಃಸಿದ್ಧ ಸತ್ಯವಾಗಿದೆ. ಹಾಗೂ ಇಳಿಮುಖ ಪ್ರತಿಫಲ ನಿಯಮದಲ್ಲಿ (ಲಾ ಆಫ್ ಡಿಮಿನಿಷಿಂಗ್ ರಿಟರ್ನ್ಸ್) * ಉತ್ಪನ್ನ ಏರಿಸಲು ಒಂದು ಚರ ಘಟಕ

* ಘಟಕಗಳನ್ನು ಒಂದು ಪರಿಮಿತಿಗಿಂತ ಮೇಲಕ್ಕೆ ಏರಿಸಿದರೆ ಅದರಿಂದ ಸರಾಸರಿ ಹಾಗೂ ಸೀಮಾಂತ ಉತ್ಪನ್ನ ಕಡಿಮೆಯಾಗುವುದೇ ವಿನಾ ಏರುವುದಿಲ್ಲ.

ವನ್ನು (ವೇರಿಯಬಲ್ ಫ್ಯಾಕ್ಟರ್) ಒಂದು ಸ್ಥಿರ ಘಟಕಕ್ಕೆ (ಫಿಕ್ಸೆಡ್ ಫ್ಯಾಕ್ಟರ್) ಅನ್ವಯಿಸಿ ಪ್ರಯೋಗಿಸಿದರೆ, ಸ್ವಲ್ಪ ಕಾಲದ ವರೆಗೂ ಅದು ಸೀಮಾಂತ ಉತ್ಪನ್ನವನ್ನು ಏರಿಸಬಲ್ಲದಾದರೂ ಕೊನೆಗೆ ಇಳಿಕೆಯಲ್ಲಿ ಅಂತ್ಯಗೊಳ್ಳುತ್ತದೆ.

ಇದು ಉತ್ಪನ್ನ ವಿಸ್ತರಿಸಿದಂತೆಲ್ಲ ಹೇಗೆ ವೆಚ್ಚಗಳ ಮೇಲೆ ಪರಿಣಾಮ ಬೀರುತ್ತದೆ? ಇಲ್ಲಿ ಎರಡು ಘಟಕಗಳನ್ನು ಉಪಯೋಗಿಸಲಾಗುತ್ತಿದೆ ಹಾಗೂ ಅವುಗಳಲ್ಲಿ ಒಂದು ಸ್ಥಿರ ಘಟಕ ಎಂದಿಟ್ಟುಕೊಂಡರೆ ಚರ ಘಟಕದ ಪ್ರತಿ ಹೆಚ್ಚುವರಿ ಏಕಮಾನದ (ಯೂನಿಟ್) ವೆಚ್ಚ ಒಂದೇ ಆಗಿದ್ದು, ಪ್ರತಿ ಹೆಚ್ಚುವರಿ ಘಟಕದಿಂದ ಪಡೆಯಲ್ಪಟ್ಟ ಉತ್ಪನ್ನ ಹೆಚ್ಚಾಗಿದ್ದರೆ, ಚರ ಘಟಕಕ್ಕೆ ವಿನಿಯೋಗಿಸುತ್ತಿರುವ ಯಾವುದೇ ಹೆಚ್ಚುವರಿ ವೆಚ್ಚಕ್ಕೆ ಉದ್ಯಮಿ ಹೆಚ್ಚಿನ ಉತ್ಪನ್ನ ಪಡೆಯುತ್ತಿದ್ದಾನೆ ಎಂಬುದು ಸ್ಥಿರಪಡುತ್ತದೆ. ಅಂದರೆ



ಚಿತ್ರ ೨ : ಪ್ರತಿಫಲ ಮತ್ತು ವೆಚ್ಚಗಳ ನಡುವಿನ ಸಂಬಂಧ

ಉತ್ಪನ್ನ ವಿಸ್ತರಿಸಿದಂತೆಲ್ಲ ಉತ್ಪನ್ನದ ಪ್ರತಿ ಹೆಚ್ಚುವರಿ ಏಕಮಾನದ ಮೇಲೆ ಆಗುವ ವೆಚ್ಚ ಕಡಿಮೆಯಾಗುತ್ತದೆ. ಚರ ಘಟಕದ ಸೀಮಾಂತ ಉತ್ಪನ್ನದಲ್ಲಿ ಇಳಿಕೆಯಾದಾಗ ಉತ್ಪನ್ನದ ಹೆಚ್ಚುವರಿ ಏಕಾಂಶದ ವೆಚ್ಚ (ಕಾಸ್ಟ್ ಆಫ್ ಆ್ಯನ್ ಅಡಿಷನಲ್ ಯೂನಿಟ್ ಆಫ್ ಔಟ್‌ಪುಟ್) ಏರುತ್ತದೆ. (ಕೋಷ್ಟಕ 1ನ್ನು ಇಳಿಮುಖ ಪ್ರತಿಫಲಗಳಿಗೆ ಉಪಯೋಗಿಸಿಕೊಳ್ಳಬಹುದು). ಉತ್ಪನ್ನದ ಒಂದು ಹೆಚ್ಚುವರಿ ಏಕಾಂಶದ ಉತ್ಪಾದನ ವೆಚ್ಚಕ್ಕೆ ಸೀಮಾಂತ ವೆಚ್ಚ (ಮಾರ್ಜಿನಲ್ ಕಾಸ್ಟ್) ಎಂದು ಹೆಸರು. ಮೇಲಿನ ನಿರ್ಣಯಗಳನ್ನು ಚಿತ್ರದ ರೂಪದಲ್ಲೂ ತೋರಿಸಬಹುದು (ಚಿತ್ರ ೨).

ವೆಚ್ಚ ತಪ್ಸೀಲುಗಳು

ಕೋಷ್ಟಕ 2 ಉತ್ಪನ್ನ ಹಾಗೂ ವೆಚ್ಚಗಳ ನಡುವಣ ಸಂಬಂಧಗಳನ್ನು ಸ್ಪಷ್ಟಪಡಿಸುತ್ತದೆ. ಊಹೆಗಾಗಿ ಇಟ್ಟುಕೊಂಡಿರುವ, ಹೊಲಿಗೆ ಯಂತ್ರಗಳನ್ನು ಮಾಡುವ ಒಂದು ಸಂಸ್ಥೆಯ ಈ ಅಂಕಿ ಅಂಶಗಳನ್ನು ಸಾಕಷ್ಟು ಸರಳವಾಗಿಡಲು ಪ್ರಯತ್ನಿಸಲಾಗಿದೆ. ಸ್ಥಿರ ವೆಚ್ಚಗಳು (FC) ರೂ 1,000 ಆಗುತ್ತವೆ ಹಾಗೂ ಚರ ಘಟಕಗಳನ್ನು ಕೂಡಿಸಿದಂತೆ ಉತ್ಪನ್ನ ಏರುತ್ತ ಹೋಗುತ್ತದೆ. ಮೊದಲಿಗೆ ಹೆಚ್ಚುತ್ತಿರುವ ಸೀಮಾಂತ ಉತ್ಪನ್ನ (ಮಾರ್ಜಿನಲ್ ಪ್ರಾಡಕ್ಟ್) ಇರುತ್ತದೆ; ಇದರಿಂದಾಗಿ MC (ಸೀಮಾಂತ ವೆಚ್ಚ) ಕಡಿಮೆಯಾಗುತ್ತಿರುತ್ತದೆ. ಇದು ಸುಮಾರು 75 ಯಂತ್ರಗಳನ್ನು ಉತ್ಪಾದಿಸುವ ವರೆಗೂ ಸರಾಸರಿ ಮೊತ್ತ ವೆಚ್ಚದ (ATC) ಮೇಲೆ ತನ್ನ ಪರಿಣಾಮ ಬೀರುತ್ತಿರುತ್ತದೆ. ಅಲ್ಲಿಂದಾಚೆಗೆ, ಸ್ಥಿರ ಘಟಕಗಳನ್ನು ಹೆಚ್ಚು ತೀವ್ರವಾಗಿ ಉಪಯೋಗಿಸುವುದರಿಂದ ಇಳಿಮುಖ ಪ್ರತಿಫಲಗಳು (ಡಿಮಿನಿಷಿಂಗ್ ರಿಟರ್ನ್ಸ್) ATC ರೇಖೆಯನ್ನು ಏರುವಂತೆ ಮಾಡುತ್ತವೆ.

ಕೋಷ್ಟಕ 2

ಹೊಲಿಗೆ ಯಂತ್ರಗಳ ಸಂಸ್ಥೆಯ ವೆಚ್ಚಗಳು (ರೂ.ಗಳಲ್ಲಿ)

ವರ್ಷಂಪ್ರತಿ ಉತ್ಪನ್ನ (ಏಕಮಾನಗಳಲ್ಲಿ)	ಸ್ಥಿರ ವೆಚ್ಚ (FC)	ಒಟ್ಟು ಚರ ವೆಚ್ಚ (FVC)	ಒಟ್ಟು ವೆಚ್ಚ (TC)	ಸೀಮಾಂತ ವೆಚ್ಚ (MC)	ಸರಾಸರಿ ಸ್ಥಿರವೆಚ್ಚ (AFC)	ಸರಾಸರಿ ಚರವೆಚ್ಚ (AVC)	ಸರಾಸರಿ ಒಟ್ಟು ವೆಚ್ಚ (ATC)
0	1000	—	—				
10	1000	200	1200	20	100	20	120
20	1000	340	1340	14	50	17	67
30	1000	440	1440	10	$33\frac{1}{3}$	$14\frac{2}{3}$	48
40	1000	540	1540	10	25	$13\frac{1}{2}$	$38\frac{1}{2}$
50	1000	675	1675	$13\frac{1}{2}$	20	$13\frac{1}{2}$	$33\frac{1}{2}$
60	1000	860	1860	$18\frac{1}{2}$	$16\frac{2}{3}$	$14\frac{1}{3}$	31
70	1000	1100	2100	24	$14\frac{2}{7}$	$15\frac{5}{7}$	30
80	1000	1400	2400	30	$12\frac{1}{2}$	$17\frac{1}{2}$	30
90	1000	1790	2790	39	$11\frac{1}{9}$	$19\frac{8}{9}$	31
100	1000	2300	3300	51	10	23	33
110	1000	2960	3960	66	$9\frac{1}{9}$	$26\frac{8}{9}$	36
120	1000	3800	4800	84	$8\frac{1}{3}$	$31\frac{2}{3}$	40

ಕೋಷ್ಟಕದ ಟಿಪ್ಪಣಿ:

1 n ಏಕಮಾನಗಳ TC = n ಏಕಮಾನಗಳ FC + VC

2 nCಯು ಉತ್ಪನ್ನದ ಹೆಚ್ಚುವರಿ ಏಕಮಾನವನ್ನು ಉತ್ಪಾದಿಸಲು ವಹಿಸಬೇಕಾದ ಅಧಿಕತಮ ವೆಚ್ಚ. ಅಂದರೆ n ಏಕಮಾನದ MC = n ಏಕಮಾನಗಳ TC–n–C ಏಕಮಾನಗಳ TC. ಇಲ್ಲಿ ಉತ್ಪನ್ನವನ್ನು 10ರ ಏಕಮಾನಗಳಲ್ಲಿ ತೋರಿಸಿರುವುದರಿಂದ ಒಟ್ಟು ವೆಚ್ಚಗಳಲ್ಲಿನ ವ್ಯತ್ಯಾಸವನ್ನು 10ರಿಂದ ಭಾಗಿಸಬೇಕಾಗುತ್ತದೆ.

3 n ಏಕಮಾನಗಳ $AFC = \frac{FC}{n}$

4 ಏಕಮಾನಗಳ $AVC = \frac{n \text{ ಏಕಮಾನಗಳ } TVC}{n}$

5 $ATC = \frac{n \text{ ಏಕಮಾನಗಳ } TC}{n}$

6 MC ಹಾಗೂ ATC ಹಾಗೂ AVCಗಳು ಸೀಮಾಂತ ಉತ್ಪನ್ನ ಹಾಗೂ ಸರಾಸರಿ ಉತ್ಪನ್ನಗಳ ಹೊಂದಿರುವ ಸಂಬಂಧವನ್ನೇ ಹೊಂದಿವೆ; ಅಂದರೆ ATC ಹಾಗೂ AVC ತಮ್ಮ ಕನಿಷ್ಠದಲ್ಲಿದ್ದಾಗ MC ಅವೆರಡನ್ನೂ ಛೇದಿಸುತ್ತದೆ.

ಈ ರೇಖೆಯನ್ನು ಒಂದು ನಕ್ಷೆಯ ಮೇಲೆ ಮೂಡಿಸಬಹುದು (ಚಿತ್ರ 3).


ರೇಖೆಗಳ ನಡುವಣ ಈ ಕೆಳಗಿನ ಸಂಬಂಧಗಳನ್ನು ನಾವು ಗಮನದಲ್ಲಿಡಬೇಕು:

1 AFC ಹಾಗೂ AVCಯನ್ನು ಒಟ್ಟಾಗಿ ಸೇರಿಸಿದರೆ ATC ಸಿಗುತ್ತದೆ.

2 AFCಯು ಆಯತಾಕಾರದ ಅತಿ ಪರವಲಯ (ರೆಕ್ಟಾಂಗ್ಯುಲರ್ ಹೈಪರ್‌ಬೋಲ) ಎಂದರೆ AFCX ಉತ್ಪಾದನೆಯ ಏಕಮಾನಗಳು = K (ಒಂದು ನಿಯತಾಂಕ).

3 AVC ಹಾಗೂ ATC ಎರಡೂ ರೇಖೆಗಳನ್ನು ಅವು ತಮ್ಮ ಕನಿಷ್ಠ ಬಿಂದುವಿನಲ್ಲಿದ್ದಾಗ MC ರೇಖೆ ಛೇದಿಸುತ್ತದೆ.

4 ಕನಿಷ್ಠ AVC ಕನಿಷ್ಠ ATCಗಿಂತಲೂ ಕಡಿಮೆ ಪರಿಮಾಣದ ಉತ್ಪಾದನೆಯಲ್ಲಿ ಜಾರಿಗೆ ಬರುತ್ತದೆ. ಚರ ಘಟಕಕ್ಕೆ ದೊರಕುವ ಪ್ರತಿಫಲ ಗರಿಷ್ಠದಲ್ಲಿದ್ದಾಗ ಮಾತ್ರ AVC ಕನಿಷ್ಠದಲ್ಲಿರುತ್ತದೆ. ಆದರೆ ನಾವು ATCಯನ್ನು ಪರಿಗಣಿಸುತ್ತಿರುವಾಗ ಸ್ಥಿರ ಘಟಕದ (ಫಿಕ್ಸೆಡ್ ಫ್ಯಾಕ್ಟರ್) ವೆಚ್ಚವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಹಾಗೂ AVC ಏರಲು ಆರಂಭಿಸಿದ ಅನಂತರವೂ AFC ಕಡಿಮೆಯಾಗುತ್ತಲೇ ಇರುತ್ತದೆ. AFCಯ ಇಳಿಕೆ AVCಯ ಏರಿಕೆಗಿಂತ ಹೆಚ್ಚಿನ ಗತಿಯಲ್ಲಿದ್ದರೆ, ATCಯ ಇಳಿಕೆ ಮುಂದುವರಿಯುತ್ತಲೇ ಇರುತ್ತದೆ.



ಚಿತ್ರ ೩: ವೆಚ್ಚರೇಖೆಗಳು

ವೆಚ್ಚನಿರ್ಣಯ ವ್ಯವಸ್ಥೆಯ ಆವಶ್ಯಕತೆ

ವೈಜ್ಞಾನಿಕ ವೆಚ್ಚನಿರ್ಣಯ ವ್ಯವಸ್ಥೆಯಿಂದ ಕೈಗಾರಿಕಾ ಸಂಸ್ಥೆಗಳಿಗೆ ವಿಶೇಷವಾದ ಅನುಕೂಲವಿದೆ. ಉತ್ಪತ್ತಿ ಹೆಚ್ಚಿಸಲೂ ಮಾರುಕಟ್ಟೆಯ ಆಗುಹೋಗುಗಳನ್ನು ವಿಶದವಾಗಿ ಅವಲೋಕಿಸಿ ಪದಾರ್ಥ ಎದುರಿಸಬೇಕಾಗಿರುವ ಸ್ಪರ್ಧೆಯನ್ನು ಗಣನೆಗೆ ತೆಗೆದುಕೊಂಡು ಉತ್ಪತ್ತಿಯ ಮಾರಾಟದ ಬೆಲೆಯನ್ನು ನಿಗದಿಮಾಡಲೂ ಈ ಪದ್ಧತಿ ಸಹಾಯ ಮಾಡುತ್ತದೆ. ಇದರಿಂದಾಗಿ ಉದ್ಯಮ ತನ್ನ ನಿವ್ವಳ ಲಾಭವನ್ನು ಹೆಚ್ಚಿಸಿಕೊಳ್ಳುವುದೇ ಅಲ್ಲದೆ ಉದ್ಯಮದ ಪ್ರಗತಿಯ ದೃಷ್ಟಿಯಿಂದ ಇನ್ನೂ ಕೆಲವು ಮುಖ್ಯವಿಷಯಗಳ ಮೇಲೆ ಸಾಕಷ್ಟು ಮಾಹಿತಿ ದೊರಕಿಸಲು ಅನುಕೂಲವಾಗುತ್ತದೆ. ಅವು ಯಾವುವೆಂದರೆ:

1 ಉತ್ಪತ್ತಿಯ ವೆಚ್ಚದ ಹಂತಹಂತದ ನಿರ್ಣಯ

2 ಪ್ರಮಾಣಿತ ರೂಢಿಯ ಮಟ್ಟದ ಅನುಸರಣೆ .

3 ತಯಾರಿಕೆಯ ವಿಧಾನದಲ್ಲಿ ಬದಲಾವಣೆ ಮಾಡಿ ವೆಚ್ಚ ಇಳಿಸುವ ಯತ್ನ

4 ಉನ್ನತ ಮಟ್ಟದ ಸಂಶೋಧನೆಯ ಫಲವಾಗಿ ಭವಿಷ್ಯದ ಪ್ರಗತಿಯ ಬಗ್ಗೆ ಸ್ಥಾಪಿಸಿಕೊಳ್ಳಬೇಕಾದ ಯೋಜನೆಯ ರೂಪುರೇಷೆಗಳನ್ನು ಗೊತ್ತುಪಡಿಸಿಕೊಳ್ಳುವ ಸಾಧ್ಯಾಸಾಧ್ಯತೆ

5 ಭವಿಷ್ಯದಲ್ಲಾಗಬೇಕಾದ ತಯಾರಿಕೆ ಪ್ರಗತಿ, ಉತ್ಪತ್ತಿಯ ಹೆಚ್ಚಳ ಮತ್ತು ಲಾಭ ನಿರೀಕ್ಷೆಯ ಆಧಾರದ ಮೇಲೆ ಹೂಡಬೇಕಾಗಿರುವ ಬಂಡವಾಳದ ಬಗ್ಗೆ ತೀರ್ಮಾನ

6 ಅತಿ ಹೆಚ್ಚಿನ ಲಾಭ ಗಳಿಸಲು ಅನುಸರಿಸಬೇಕಾದ ಮಾರ್ಗ ಯಾವುದು ಎನ್ನುವುದರ ಬಗ್ಗೆ ನಿರ್ಣಯ[1]

ಸಿ. ಎಂ. ಮುನಿರಾಮಪ್ಪ

---

[1] ಮಾನವಿಕ ಕರ್ನಾಟಕ, ಸಂ. ೧, ಸಂ. ೨, ಪು. ೨೮

ಪ್ರಭುಸ್ವಾಮಿ

ಸೋವಿಯೆತ್ ದೇಶದ ವ್ಯವಸಾಯ ನೀತಿ

ಸೋವಿಯೆತ್ ದೇಶದಲ್ಲಿ ಬಹಳ ಕಾಲದಿಂದಲೂ ವ್ಯವಸಾಯೋತ್ಪನ್ನ ಸಮಸ್ಯೆ ದೇಶದ ಆರ್ಥಿಕ ಸಮಸ್ಯೆಗಳ ಪೈಕಿ ಪ್ರಮುಖ ಸ್ಥಾನ ಪಡೆದಿದೆ. ಇಂದಿಗೂ ಸೋವಿಯತ್ ದೇಶ ವ್ಯವಸಾಯೋತ್ಪನ್ನದಲ್ಲಿ ಸ್ವಯಂಪರಿಪೂರ್ಣತೆಯನ್ನು ಪಡೆದಿಲ್ಲ. ಲೆನಿನ್ ಕಾಲದಿಂದ ಪ್ರಾರಂಭವಾಗಿ ಕ್ರುಶ್ಚೋಫ್ ಅಧಿಕಾರಾವಧಿ ಪೂರ್ತಾ ಸೋವಿಯತ್ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿತ್ತು. ಕ್ರುಶ್ಚೋಫರಂತೂ ತಮ್ಮ ಅಧಿಕಾರಾವಧಿಯಲ್ಲಿ ವ್ಯವಸಾಯದ ಪ್ರಗತಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದ್ದರು. ಆದರೆ ಕೊನೆಯಲ್ಲಿ ಕ್ರುಶ್ಚೋಫ್ ಅಧಿಕಾರತ್ಯಾಗಕ್ಕೆ ಅಪರ ವ್ಯವಸಾಯ ನೀತಿಯೇ ಕಾರಣವಾಯಿತು. ಈ ಲೇಖನದಲ್ಲಿ ಸೋವಿಯೆತ್ ದೇಶದ ವ್ಯವಸಾಯ ಸಮಸ್ಯೆಗಳನ್ನು ಪರಿಶೀಲಿಸಿ, ಆ ದೇಶದ ಇಂದಿನ ವ್ಯವಸಾಯ ಪರಿಸ್ಥಿತಿಗೆ ಅಲ್ಲಿಯ ನಾಯಕತ್ವ ಎಷ್ಟರ ಮಟ್ಟಿಗೆ ಕಾರಣವಾಗಿದೆ ಎಂಬುದನ್ನು ಚರ್ಚಿಸಲಾಗುತ್ತದೆ.

ಈಗ ಇರುವ ಪರಿಸ್ಥಿತಿಯನ್ನು ನಾವು ವಿಮರ್ಶಿಸಬೇಕಾದರೆ ಸೋವಿಯೆತ್ ಕ್ರಾಂತಿಯಾದಾಗಿನಿಂದ ಆ ದೇಶದಲ್ಲಿ ವ್ಯವಸಾಯದಲ್ಲಿ ಉಂಟಾದ ಬದಲಾವಣೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು.

ಕ್ರಾಂತಿಯಾದ ಮೇಲೆ ಬಾಲ್‌ಷೆವಿಕ್ ಪಕ್ಷ ಮಾರ್ಕ್ಸ್ ತತ್ತ್ವವನ್ನು ಆಚರಣೆಗೆ ತರಲು ಹೊರಟಿತು. ಅದರ ಪ್ರಕಾರ ಭೂಮಿಯನ್ನು ಯಾರೂ ಸ್ವಂತ ಆಸ್ತಿಯೆಂದು ಪರಿಗಣಿಸುವಂತೆ ಇರಲಿಲ್ಲ. ಅದರ ಬದಲು ಭೂಮಿ ಸರ್ಕಾರದ ಸೊತ್ತು ಎಂದು ಘೋಷಿಸಿತು. ಆದರೆ ಅನೇಕರಿಗೆ ಇದು ಅಸಮಾಧಾನ ಉಂಟುಮಾಡಿತು. ಆದಾಗ್ಯೂ ತನ್ನ ನೀತಿಯನ್ನು ಕಾರ್ಯರೂಪಕ್ಕೆ ತರಲು ಈ ಕೆಳಗೆ ಕಂಡಂತೆ ಸೋವಿಯತ್ ಸರ್ಕಾರ, ಲೆನಿನ್ ಮತ್ತು ಸ್ಟಾಲಿನರ ಅಧಿಕಾರಾವಧಿಯಲ್ಲಿ ಕಾರ್ಯಕ್ರಮಗಳನ್ನು ಕೈಗೊಂಡಿತು:

ಕಾಲಾವಧಿ	ಕೈಗಾರಿಕೆ ವ್ಯಾಪಾರಗಳಲ್ಲಿ ಅನುಸರಿಸಿದ ಕಾರ್ಯಕ್ರಮ	ವ್ಯವಸಾಯದಲ್ಲಿ ಅನುಸರಿಸಿದ ಕಾರ್ಯಕ್ರಮ
1917–20	1 ಕೈಗಾರಿಕೆಗಳನ್ನು ರಾಷ್ಟ್ರೀಕರಿಸಿತು.	1 ಕೆಳದರ್ಜೆ ಜನರಿಗೆ ಮಾನ್ಯತೆ ಕೊಟ್ಟಿತು.
	2 ಖಾಸಗಿ ವ್ಯಾಪಾರವನ್ನು ಪ್ರತಿಬಂಧಿಸಿತು.	2 ಭೂಮಾಲೀಕರ ಹೆಚ್ಚಿಗೆ ಜಮೀನನ್ನು ಮುಟ್ಟುಗೋಲು ಹಾಕಿಕೊಂಡಿತು.
1921–28	1 ಕೈಗಾರಿಕೆಗಳನ್ನು ವಿಕೇಂದ್ರೀಕರಿಸಿತು.	1 ಧಾನ್ಯಗಳ ಮೇಲೆ ತೆರಿಗೆ ವಿಧಿಸಿ ರೈತರಿಂದ ಹಣ ವಸೂಲು ಮಾಡಲಾಗುತ್ತಿತ್ತು.
	2 ವಸ್ತುವನ್ನು ಉತ್ಪತ್ತಿ ಮಾಡಿದ ಪ್ರಮಾಣಕ್ಕೆ ಅನುಗುಣವಾಗಿ ಪ್ರತಿ ಕಾರ್ಮಿಕನ	2 ನಿರ್ಬಂಧ ರಹಿತ ಮಾರುಕಟ್ಟೆ ವ್ಯವಸ್ಥೆ ಇತ್ತು. ಅದರ ಪರಿಣಾಮ

ಕಾಲಾವಧಿ	ಕೈಗಾರಿಕೆ ವ್ಯಾಪಾರಗಳಲ್ಲಿ ಅನುಸರಿಸಿದ ಕಾರ್ಯಕ್ರಮ	ಕೈಗಾರಿಕೆ ವ್ಯಾಪಾರಗಳಲ್ಲಿ ಅನುಸರಿಸಿದ ಕಾರ್ಯಕ್ರಮ
	ಕೂಲಿ ನಿರ್ಧರಿಸಲಾಗುತ್ತಿತ್ತು.	ವಾಗಿ ಆಹಾರ ಧಾನ್ಯಗಳ ಬೆಲೆ ಏರುತ್ತಲೇ ಹೋಯಿತು.
	3 ಸ್ವಲ್ಪ ಮಟ್ಟಿಗೆ ವ್ಯಾಪಾರ ನಡೆಸಲು ಖಾಸಗಿ ಜನರಿಗೆ ಅವಕಾಶ ನೀಡಿತು.	
	4 ಪುನಃ ಹಣದ ಚಲಾವಣೆಯನ್ನು ಪ್ರಾರಂಭಿಸಲಾಯಿತು.	
1928-32	ಉದ್ದೇಶಪೂರ್ವಕವಾಗಿ ಕೈಗಾರಿಕೆಗಳನ್ನು ಬೆಳೆಸಲಾಯಿತು.	ಸಾಮೂಹಿಕ ಬೇಸಾಯ ಪದ್ಧತಿಯನ್ನು ಜಾರಿಗೆ ತರಲಾಯಿತು.
1933-53	ರಾಷ್ಟ್ರೀಕರಣ ಪೂರ್ಣಗೊಂಡಿತು.	ಕುಲಕ್ ರೈತ ವರ್ಗದವರೊಡನೆ ಹೋರಾಟ ನಡೆಸಿ ಸಾಮೂಹಿಕ ಬೇಸಾಯ ಪದ್ಧತಿಯನ್ನು ಮತ್ತೆ ವಿಸ್ತರಿಸಲಾಯಿತು.

ಸೋವಿಯೆಟ್ ದೇಶದ ಚರಿತ್ರೆಯಲ್ಲಿ ಸ್ಟಾಲಿನರ ಅಧಿಕಾರಾವಧಿ ಬಹಳ ಮಹತ್ವಪೂರಿತವಾದುದು. ಸ್ಟಾಲಿನ್ 30 ವರ್ಷಕಾಲ ಅಧಿಕಾರ ನಡೆಸಿದರು. ಈ ಕಾಲದಲ್ಲೇ ಈಗಿನ ಸೋವಿಯೆಟ್ ಆಡಳಿತ ರೂಪುಗೊಂಡಿತು. ಸ್ಟಾಲಿನ್ ಅಧಿಕಾರಕ್ಕೆ ಬಂದಾಗ ಸೋವಿಯೆಟ್ ದೇಶ ಹಿಂದುಳಿದ ವ್ಯವಸಾಯ ದೇಶವಾಗಿತ್ತು. 2.5 ಕೋಟಿ ರೈತ ಕುಟುಂಬಗಳು ಆರ್ಥಿಕ ವ್ಯವಸ್ಥೆಯಲ್ಲಿ ಪರಿಣಾಮಕಾರಿಯಾದ ಪಾತ್ರ ವಹಿಸುತ್ತಿದ್ದುವು. ಸ್ಟಾಲಿನ್ 1953ರಲ್ಲಿ ಸಾಯುವ ವೇಳೆಗೆ ಆ ದೇಶ ಪ್ರಪಂಚದಲ್ಲೇ ಬಲಯುತವಾದ ಎರಡನೇ ಕೈಗಾರಿಕಾ ದೇಶವಾಗಿ ಪರಿವರ್ತನೆಗೊಂಡಿತ್ತು. ಅದನ್ನು ಕೈಗಾರಿಕಾ ರಾಷ್ಟ್ರವನ್ನಾಗಿ ಪರಿವರ್ತಿಸಲು ವ್ಯವಸಾಯ ಕ್ಷೇತ್ರದಲ್ಲಿ ಬಲಾತ್ಕಾರವನ್ನು ಪ್ರಯೋಗಿಸಲಾಯಿತು. ಸಣ್ಣ ಹಿಡುವಳಿಯನ್ನು ರದ್ದುಗೊಳಿಸಿ ರೈತರು ಸಾಮೂಹಿಕ ವ್ಯವಸಾಯ ಕ್ಷೇತ್ರಗಳಲ್ಲಿ ಕೆಲಸ ಮಾಡುವಂತೆ ಮಾಡಲಾಯಿತು. ಸೋವಿಯೆಟ್ ದೇಶವನ್ನು ಮುಖ್ಯವಾದ ಕೈಗಾರಿಕಾ ರಾಷ್ಟ್ರವನ್ನಾಗಿ ಪರಿವರ್ತಿಸುವುದರ ಮೂಲಕ ಅದನ್ನು ಬಲಿಷ್ಠ ರಾಷ್ಟ್ರವನ್ನಾಗಿ ಮಾಡುವುದೇ ಸ್ಟಾಲಿನ್ನರ ಗುರಿ ಆಗಿದ್ದಿತು. ಕೈಗಾರಿಕಾ ರಾಷ್ಟ್ರವನ್ನಾಗಿ ಮಾಡಲು ಬೇಕಾಗಿದ್ದ ಬಂಡವಾಳವನ್ನು ವ್ಯವಸಾಯಗಾರರಿಂದ ಪಡೆಯಬೇಕು. ಅದಕ್ಕಾಗಿ ಅವರು ಉತ್ಪಾದಿಸುವ ವಸ್ತುಗಳಿಗೆ ನಿಗದಿಯಾದ ಬೆಲೆ ಕೊಟ್ಟು ಕೊಂಡು ಅದನ್ನು ಮಾರುಕಟ್ಟೆಯಲ್ಲಿ ಅಧಿಕ ಬೆಲೆಗೆ ಮಾರಿ ಬಂದ ಲಾಭವನ್ನು ಕೈಗಾರಿಕೆಗಳ ಬೆಳವಣಿಗೆಯಲ್ಲಿ ಬಂಡವಾಳವನ್ನಾಗಿ ಉಪಯೋಗಿಸಬೇಕು. ಈ ಗುರಿಯಿಟ್ಟುಕೊಂಡು ವ್ಯವಸಾಯಗಾರರಿಗೆ ಬಹಳ ಕಡಿಮೆ ಬೆಲೆ ಬರುವಂತೆ ಮಾಡಲಾಯಿತು. ಒಂದು ಉದಾಹರಣೆ ಕೊಡುವುದಾದರೆ, 1936ರಲ್ಲಿ ಸೋವಿಯೆಟ್ ಸರ್ಕಾರ ಸಾಮೂಹಿಕ ವ್ಯವಸಾಯ ಕೇಂದ್ರದಿಂದ 100 ಕಿಜಿ. ರೈ ಧಾನ್ಯವನ್ನು 13 ರೂಬಲ್‌ಗಳಿಗೆ ಕೊಂಡು ಅದರ ಮೇಲೆ ತಾನು 80 ರೂಬಲ್ ತೆರಿಗೆ ಹಾಕಿ ಅದನ್ನು ಹಿಟ್ಟಿನ ಗಿರಣಿಗಳಿಗೆ 93 ರೂಬಲ್‌ಗಳಿಗೆ ಮಾರಿತು.[1]

ಸ್ಟಾಲಿನ್ ಸರ್ಕಾರದ ನೀತಿಯ ಪರಿಣಾಮವಾಗಿ ಲಕ್ಷಾಂತರ ರೈತರು ಜಮೀನು ಕಳೆದುಕೊಂಡರು. ತಮ್ಮ ಸ್ವಾತಂತ್ರ್ಯ ನಷ್ಟವಾಯಿತೆಂದು ರೈತರು ಪ್ರತಿಭಟಿಸಿದರು. ಅವರು ಲೂಟಿ ಮತ್ತು ಇತರ ಹಿಂಸಾತ್ಮಕ ಕಾರ್ಯ ಕೈಗೊಂಡರು. ದನಕರುಗಳನ್ನು ಕೊಂದರು. ಜಮೀನುಗಳಲ್ಲಿದ್ದ ಕಟ್ಟಡಗಳನ್ನು ನಾಶಮಾಡಿದರು. ಸರ್ಕಾರದ ಅಧೀನದಲ್ಲಿ ಕೆಲಸ ಮಾಡಲು ನಿರಾಕರಿಸಿ ಸರ್ಕಾರದ ಧೋರಣೆ ನಿಷ್ಫಲವಾಗುವಂತೆ ಮಾಡಲು ಯತ್ನಿಸಿದರು. ಆದರೆ ಸಾವಿರಾರು ರೈತರು ಕೊಲ್ಲಲ್ಪಟ್ಟರು. ಜಮೀನಿನಲ್ಲಿ ಕೆಲಸ ಮಾಡುವುದಿಲ್ಲ ಎಂದವರನ್ನು ಶ್ರಮಜೀವಿಗಳ ಶಿಬಿರಕ್ಕೆ ಕಳುಹಿಸಿ ಅವರನ್ನು ಜೀತಗಾರರನ್ನಾಗಿ ಬಳಸಿ

[1] H. Schwartz: *The Soviet Economy Since Stalin*, Page 17

ಕೊಳ್ಳಲಾಯಿತು. ಸ್ಟಾಲಿನ್ ಇಷ್ಟು ಕ್ರೌರ್ಯದಿಂದ ವರ್ತಿಸಿದ್ದು ಏಕೆಂದರೆ ಅವರಿಗೆ ರೈತರ ಮೇಲೆ ಸಂಪೂರ್ಣ ಹತೋಟಿ ಬೇಕಿತ್ತು. ಸಾಮೂಹಿಕ ವ್ಯವಸಾಯ ಕೇಂದ್ರಗಳ ಮೂಲಕ ರೈತರನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಬಹಳ ಸುಲಭವಾಗಿತ್ತು. 2.5 ಕೋಟಿ ರೈತ ಕುಟುಂಬಗಳನ್ನು 2.5 ಲಕ್ಷ ಸಾಮೂಹಿಕ ವ್ಯವಸಾಯ ಕೇಂದ್ರಗಳಲ್ಲಿ ಅಳವಡಿಸಲಾಯಿತು. ಸಾಮೂಹಿಕ ವ್ಯವಸಾಯ ಕೇಂದ್ರಗಳು ಸ್ಥಾಪಿತವಾದ ಮೇಲೆ ರೈತರು ಸರ್ಕಾರದ ಆಜ್ಞೆಯನ್ನು ತಪ್ಪದೆ ಪಾಲಿಸುವಂತೆ ಮಾಡಲು ಟ್ರಾಕ್ಟರ್ ಕೇಂದ್ರಗಳನ್ನು ಸ್ಟಾಲಿನ್ ಸ್ಥಾಪಿಸಿದರು. ಸಾಮೂಹಿಕ ಕೇಂದ್ರಗಳಲ್ಲೇ ಆಗಲಿ ಉಳಿದ ಜಮೀನಿನಲ್ಲೇ ಆಗಲಿ ಬೆಳೆ ಬಂದ ಕೂಡಲೇ ರೈತರು ಸರ್ಕಾರ ನಿಗದಿಪಡಿಸಿರುವಷ್ಟು ಧಾನ್ಯಗಳನ್ನು ಮೊದಲು ಸರ್ಕಾರಕ್ಕೆ ಒಪ್ಪಿಸಬೇಕಾಗಿತ್ತು. ದೇಶಾದ್ಯಂತ ಇದ್ದ ಟ್ರಾಕ್ಟರ್ ಕೇಂದ್ರಗಳಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ್ದ ಅಧಿಕಾರಿಗಳಿದ್ದರು. ಈ ಅಧಿಕಾರಿಗಳು ರೈತರು ಮಾಡುತ್ತಿದ್ದ ಕಾರ್ಯಗಳನ್ನು ಕೂಲಂಕಷವಾಗಿ ನೋಡಿಕೊಂಡು ಅವರು ಸರ್ಕಾರದ ಆಜ್ಞೆಗಳನ್ನು ಅನುಸರಿಸುವಂತೆ ಮಾಡುತ್ತಿದ್ದರು. ಆದರೆ ಹೊರಗಡೆಯವರಿಗೆ ಟ್ರಾಕ್ಟರ್ ಕೇಂದ್ರಗಳು ವ್ಯವಸಾಯಗಾರರಿಗೆ ಸಹಾಯ ಮಾಡಲು ಇವೆ ಎಂಬುದಾಗಿ ಕಾಣುತ್ತಿದ್ದುವು. ಇಂತಹ ಪರಿಸ್ಥಿತಿಯಿಂದ ರೈತರಲ್ಲಿ ಉತ್ಸಾಹ ಕಡಿಮೆಯಾಗಿ ಸರ್ಕಾರದ ವಿಷಯವಾಗಿ ವಿರೋಧ ಭಾವನೆ ಬೆಳೆಯಿತು. ವ್ಯವಸಾಯದ ಉತ್ಪನ್ನ ಕಡಿಮೆ ಆಯಿತು. ಸ್ಟಾಲಿನ್ ತಮ್ಮ ಅಧಿಕಾರಾವಧಿಯಲ್ಲಿ ವ್ಯವಸಾಯವನ್ನು ನಿರ್ಲಕ್ಷಿಸಿ ಕೈಗಾರಿಕಾಭಿವೃದ್ಧಿಯನ್ನು ಎಷ್ಟರ ಮಟ್ಟಿಗೆ ಸಾಧಿಸಿದರು ಎಂಬುದು ಈ ಕೆಳಗೆ ಕಂಡುಬರುವ ಯಾದಿಗಳಿಂದ ತಿಳಿಯುತ್ತದೆ:

ಯಾದಿ 1

ಭಾರಿ ಗಾತ್ರದ ಕೈಗಾರಿಕೆಗಳ ಉತ್ಪಾದನೆ[1]

ವಸ್ತು		1924	1952
ಉಕ್ಕು	ದಶಲಕ್ಷ ಮೆಟ್ರಿಕ್ ಟನ್	1.0	34.5
ಕಲ್ಲಿದ್ದಲು	”	12.7	300.9
ಪೆಟ್ರೋಲಿಯಂ	”	6.1	47.3
ಸಿಮೆಂಟ್	”	0.4	13.9
ವಿದ್ಯುಚ್ಛಕ್ತಿ	ಶತಕೋಟಿ ಕಿವಾ.ಗಳಲ್ಲಿ	1.6	119.1

ಯಾದಿ 2

ಕೃಷಿ ಉತ್ಪಾದನೆ[2]

(ದಶಲಕ್ಷ ಟನ್‌ಗಳಲ್ಲಿ)

	1913	1940	1952
ಗೋದಿಯ ಉತ್ಪನ್ನ ಈಗಿನ ಯು.ಎಸ್.ಎಸ್. ಆರ್. ಪ್ರದೇಶದಲ್ಲಿ	86	95.5	92

ಮೇಲ್ಕಂಡ ಯಾದಿಗಳನ್ನು ನೋಡಿದರೆ ಸೋವಿಯೆತ್ ದೇಶದ ಪ್ರಮುಖ ಕೈಗಾರಿಕೆಗಳಲ್ಲಿ ಅಗಾಧ ಪ್ರಗತಿ ಕಂಡುಬರುತ್ತದೆ. ಆದರೆ ಪ್ರಮುಖ ಆಹಾರ ಬೆಳೆಯಾದ ಗೋದಿಯಲ್ಲಿ ಪ್ರಗತಿ ಬಹಳ

---

[1] H. Schwartz: *The Soviet Economy Since 1917*, ಪು. 30

[2] ಅದೇ

ಕಡಿಮೆಯಾಗಿತ್ತು. ಸ್ಟಾಲಿನ್ ಅಧಿಕಾರಾವಧಿಯ ಕೊನೆಯ 5 ವರ್ಷಗಳ ಅವಧಿಯಲ್ಲಿ (1949–1953) ವ್ಯವಸಾಯದ ಉತ್ಪನ್ನ ನೋಡಿದರಂತೂ ಇನ್ನೂ ಬಹಳ ನಿರಾಶೆಯಾಗುತ್ತದೆ. ಗೋಧಿಯ ಸರಾಸರಿ ಬೆಳೆ ಕೇವಲ 80.9 ದಶಲಕ್ಷ ಟನ್‌ಗಳಿದ್ದು. ಇದನ್ನು 1909–13ರ ಅವಧಿಯಲ್ಲಿದ್ದ ಉತ್ಪಾದನೆಗೆ ಹೋಲಿಸಿದರೆ ಸೇಕಡ 10ರಷ್ಟು ಮಾತ್ರ ಹೆಚ್ಚಿತ್ತು ಎಂದು ತಿಳಿಯುತ್ತದೆ. ಇದೇ ರೀತಿ 1916ರಲ್ಲಿ 58.4 ದಶಲಕ್ಷ ದನಕರುಗಳು ಇದ್ದುವು. ಇವುಗಳ ಸಂಖ್ಯೆ 1953ರ ವೇಳೆಗೆ 56.6 ದಶಲಕ್ಷಕ್ಕೆ ಇಳಿದಿತ್ತು. ಆದರೆ ಇದೇ ಅವಧಿಯಲ್ಲಿ ಜನಸಂಖ್ಯೆ 16 ಕೋಟಿಗಳಿಂದ 19 ಕೋಟಿಗೆ ಏರಿತ್ತು. ಇದನ್ನು ನೋಡಿದರೆ ಸೋವಿಯೆತ್ ದೇಶದ ಆಹಾರ ಸಮಸ್ಯೆ ಎದ್ದು ಕಾಣುತ್ತದೆ. ವ್ಯವಸಾಯ ಕ್ಷೇತ್ರದಲ್ಲಿ ಪ್ರಗತಿ ಕಾಣಬರದೆ ಇದ್ದುದಕ್ಕೆ ಕಾರಣಗಳಿವು: 1 ವ್ಯವಸಾಯದ ವಿಷಯದಲ್ಲಿ ಸ್ಟಾಲಿನ್ ಅನುಸರಿಸಿದ ಧೋರಣೆ. 2 ರೈತರಿಗೆ ಅವರು ಬೆಳೆದ ಬೆಳೆಗಳಿಗೆ ನ್ಯಾಯವಾದ ಬೆಲೆಯನ್ನು ಕೊಡದೆ ಹೋದದ್ದು. 3 ವ್ಯವಸಾಯದ ಕಾರ್ಯಗಳಿಗೆ ಬಂಡವಾಳ ಒದಗಿಸದೆ ಹೋದದ್ದು. 4 ಬಲಾತ್ಕಾರವಾಗಿ ಸಾಮೂಹಿಕ ವ್ಯವಸಾಯವನ್ನು ಜಾರಿಗೆ ತಂದದ್ದು.

ಪ್ರಾಧ್ಯಾಪಕ ಗ್ರಿಗರಿ ಗ್ರಾಸ್‌ಮನ್‌ರವರು ಸ್ಟಾಲಿನರ ಕಾಲದಲ್ಲಿ ಸೋವಿಯೆತ್ ವ್ಯವಸಾಯದಲ್ಲಿದ್ದ ಶೋಚನೀಯ ಪರಿಸ್ಥಿತಿಗೆ ಕಾರಣಗಳನ್ನು ಹೀಗೆ ವಿವರಿಸಿದ್ದಾರೆ: "ಸಾಮಾನ್ಯವಾಗಿ ಎಲ್ಲವೂ ತಪ್ಪಾಗಿತ್ತು: ಯೋಜನೆ. ವ್ಯವಸ್ಥಾಪಕತ್ವ. ಆಡಳಿತ. ಬೆಲೆ ನಿರ್ಧಾರ. ತೆರಿಗೆ ವಿಧಾನ. ವ್ಯವಸಾಯದ ಉಪಕರಣಗಳ ಪ್ರಯೋಗ. ವ್ಯವಸಾಯ ನಿರತ ಕೂಲಿಗಾರರು. ವಿತರಣೆ ಪದ್ಧತಿ ಮತ್ತು ಪ್ರೋತ್ಸಾಹ ಕೊಡುತ್ತಿದ್ದ ವಿಧಾನಗಳು"[4].

II

ಸ್ಟಾಲಿನ್ ನಿಧನವಾದ ಮೇಲೆ (1953) ಸೋವಿಯೆತ್ ದೇಶದ ಹೊಸ ನಾಯಕರು ವ್ಯವಸಾಯದ ರಂಗದಲ್ಲಿ ಕೆಲವು ಸುಧಾರಣೆಗಳನ್ನು ತಂದು ಜನರನ್ನು ತೃಪ್ತಿಪಡಿಸಬೇಕೆಂದು ನಿರ್ಧರಿಸಿ ಈ ಕೆಳಗೆ ಕಂಡ ನೀತಿಗಳನ್ನು ಅನುಸರಿಸುವುದಾಗಿ ಘೋಷಿಸಿದರು: 1 ಪ್ರಮುಖ ಕೈಗಾರಿಕೆಗಳ ಉತ್ಪನ್ನ ಹೆಚ್ಚಿಸುವುದರ ಜೊತೆಗೆ ಅನುಭೋಗ ವಸ್ತು ಉತ್ಪನ್ನವನ್ನು ಕೂಡ ಹೆಚ್ಚಿಸುವುದು. 2 ರೈತರಿಗೆ ಉತ್ಸಾಹದಾಯಿ ಬರುವಂತೆ ಮಾಡಲು ಅವರು ಬೆಳೆದ ಬೆಳೆಗಳಿಗೆ ಅಧಿಕ ಬೆಲೆ ನಿಗದಿ ಮಾಡುವುದು 3 ರೈತರ ವರಮಾನದ ಮೇಲೆ ಹಾಕುತ್ತಿದ್ದ ತೆರಿಗೆಗಳನ್ನು ಕಡಿಮೆ ಮಾಡುವುದು. 4 ವ್ಯವಸಾಯದ ಅಭಿವೃದ್ಧಿಗಾಗಿ ಅಧಿಕ ಬಂಡವಾಳ ಒದಗಿಸಲಾಗುವುದು ಮತ್ತು ಯಂತ್ರೋಪಕರಣಗಳನ್ನು ಬಳಸಲಾಗುವುದು. 5 ರೈತರು ಕಡ್ಡಾಯವಾಗಿ ಸರ್ಕಾರಕ್ಕೆ ಕೊಡಬೇಕಾಗಿದ್ದ ಆಹಾರ ಧಾನ್ಯಗಳ ಮೊತ್ತವನ್ನು ಕಡಿಮೆ ಮಾಡಲಾಗುವುದು. 6 ಸಾಮೂಹಿಕ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿದ್ದ ರೈತರು ತಮ್ಮ ಸ್ವಂತ ಜಮೀನುಗಳನ್ನು ಹೊಂದಿರುವುದನ್ನು ಸರ್ಕಾರ ಒಪ್ಪಿಕೊಳ್ಳುವುದು. 7 ರೈತರು ಹೊಂದಿದ್ದ ದನಕರುಗಳನ್ನು ಅವರ ಸ್ವಂತ ಆಸ್ತಿ ಎಂದು ಪರಿಗಣಿಸಲಾಗುವುದು.

ಆದರೆ ಮೇಲ್ಕಂಡ ಗುರಿಗಳನ್ನು ಸಾಧಿಸಲಾಗಲಿಲ್ಲ. 1952ರಲ್ಲಿ 92 ದಶಲಕ್ಷ ಟನ್‌ಗಳಷ್ಟು ಇದ್ದ ಧಾನ್ಯಗಳ ಉತ್ಪನ್ನ 1953ರಲ್ಲಿ 82.5 ದಶಲಕ್ಷ ಟನ್‌ಗಳಿಗೆ ಇಳಿದುದ್ದರಿಂದ ಸೋವಿಯೆತ್ ನಾಯಕರ ಕೀರ್ತಿಗೆ ಚ್ಯುತಿ ಬಂತು. 1953ರ ಉತ್ಪನ್ನ ಜಾರ್ ಚಕ್ರವರ್ತಿಗಳ ಕಾಲದಲ್ಲಿ (1917ಕ್ಕೆ ಮುಂಚೆ) ಇದ್ದ ಉತ್ಪನ್ನಕ್ಕಿಂತಲೂ ಕಡಿಮೆಯಾಗಿತ್ತು. ಜೊತೆಗೆ ಸೋವಿಯೆತ್ ದೇಶ ಅದುವರೆಗೆ ಪೂರ್ವ ಯೂರೋಪಿನ ಕಮ್ಯುನಿಸ್ಟ್ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದ್ದ ಧಾನ್ಯದ ಮೊತ್ತವನ್ನು ಕಡಿಮೆ ಮಾಡಬೇಕಾಯಿತು. ಇದರಿಂದ ಸ್ಟಾಲಿನ್ ಸತ್ತ ಅನಂತರ ಬಂದ ಸೋವಿಯೆತ್ ನಾಯಕರಿಗೆ ಗೌರವ ಕಡಿಮೆಯಾಗುತ್ತ ಬಂತು.

ಇಂಥ ಪರಿಸ್ಥಿತಿಯಿಂದ ಸೋವಿಯತ್ ವ್ಯವಸಾಯೋತ್ಪನ್ನವನ್ನು ಮೇಲಕ್ಕೆತ್ತಲು ಕ್ರುಶ್ಚೋಫ್

---

[3] ಅದೇ, ಪು.–31

[4] ಅದೇ, ಪು.–32

ಹೊಸ ಭೂಮಿಯನ್ನು ವ್ಯವಸಾಯಕ್ಕೆ ಅಳವಡಿಸುವ ಯೋಜನೆಯನ್ನು ರೂಪಿಸಿದರು. ವೋಲ್ಗಾ ನದಿಯ ಪ್ರದೇಶದಲ್ಲಿ ಮತ್ತು ಸೈಬೀರಿಯ ಪ್ರಾಂತ್ಯದಲ್ಲಿ ಉಪಯೋಗಿಸದೆ ಉಳಿದಿರುವ ಅಗಾಧ ಜಮೀನುಗಳನ್ನು ವ್ಯವಸಾಯಕ್ಕೆ ಅಳವಡಿಸಿದರೆ ಸುಮಾರು 30 ದಶಲಕ್ಷ ಎಕರೆಗಳಷ್ಟು ಜಮೀನಿನಲ್ಲಿ ಕೂಡಲೇ ಧಾನ್ಯ ಬೆಳೆಯಬಹುದೆಂದು ಘೋಷಿಸಿದರು. ಇದರಿಂದ ಸೋವಿಯೆತ್ ದೇಶದಲ್ಲಿ ಧಾನ್ಯ ಉತ್ಪನ್ನ ವಾರ್ಷಿಕವಾಗಿ 20 ದಶಲಕ್ಷ ಟನ್‌ಗಳಷ್ಟು ಏರುವುದೆಂದು ತಿಳಿಸಿದರು. ಈ ಪ್ರದೇಶದಲ್ಲಿ ಒಂದು ಕೊರತೆ ಮಾತ್ರ ಇತ್ತು. ಅಲ್ಲಿ ಪ್ರಕೃತಿಯ ವೈಪರೀತ್ಯಗಳು ಬಹಳವಾಗಿದ್ದುವು. ಆಗಾಗ್ಗೆ ಅತಿವೃಷ್ಟಿ ಮತ್ತು ಅನಾವೃಷ್ಟಿ ಸಂಭವಿಸುತ್ತಿದ್ದುವು. ಆದ್ದರಿಂದ ಯೋಜನಾ ಆಯೋಗ ಆ ಪ್ರದೇಶದ ಅಭಿವೃದ್ಧಿಗೆ ಹಣ ಸಾಲದೆಂದು ತಿಳಿಸಿ ಆ ಪ್ರದೇಶದ ಅಭಿವೃದ್ಧಿಯನ್ನು ವಿರೋಧಿಸಿತು. ಆದರೆ 1954ರಲ್ಲಿ ಒಳ್ಳೆ ಮಳೆ ಬಿದ್ದುದರಿಂದ ಹೊಸ ಪ್ರದೇಶದಲ್ಲಿ ಧಾನ್ಯಸಂಪತ್ತು ಹೆಚ್ಚಾಗಿ ಬಂದಿತು. ಇದರಿಂದ ಉತ್ಸಾಹಿತರಾದ ಕ್ರುಶ್ಚೋಫ್ ತಮ್ಮ ಯೋಜನೆಯನ್ನು ಮುಂದುವರಿಸಿದರು. 1962ರ ವೇಳೆಗೆ 100 ದಶಲಕ್ಷ ಎಕರೆಗಳಷ್ಟು ಭೂಮಿ ವ್ಯವಸಾಯಕ್ಕಾಗಿ ದೊರೆಯುವಂತೆ ಮಾಡಲಾಯಿತು. ವಿಶ್ವದ ಚರಿತ್ರೆಯಲ್ಲಿ ಇಂತಹ ಒಂದು ಸಾಧನೆ ಅತ್ಯಲ್ಪ ಅವಧಿಯಲ್ಲಿ ನಡೆದದ್ದು ಕ್ರುಶ್ಚೋಫ್ ಕಾಲದಲ್ಲಿ. ಇದಕ್ಕಾಗಿ ವೆಚ್ಚ ಮಾಡಿದ ಬಂಡವಾಳದ ಮೊತ್ತ 300 ಕೋಟಿ ರೂ.ಗಳಿಗಿಂತಲೂ ಅಧಿಕವಾಗಿತ್ತು. ಸಾವಿರಾರು ರೈತರು ಯೂರೋಪ್ ಖಂಡದ ಭಾಗದಲ್ಲಿರುವ ಸೋವಿಯೆತ್ ಪ್ರದೇಶಗಳಿಂದ ಹೊಸ ಭೂಮಿಗಳನ್ನು ರಚಿಸಿರುವ ಸೈಬೀರಿಯಾ ಮತ್ತು ಕಜಕ್‌ಸ್ತಾನ್ ಪ್ರದೇಶಗಳಿಗೆ ಕಳುಹಿಸಲ್ಪಟ್ಟರು. ಆದರೆ ಹೊಸ ಪ್ರದೇಶದಲ್ಲಿ ವಾಯುಗುಣ ಹಿತಕರವಾಗಿರಲಿಲ್ಲ. ಪ್ರಕೃತಿಯ ವೈಪರೀತ್ಯ ಬಹಳವಾಗಿತ್ತು. ವಿಪರೀತ ಚಳಿ ಅಥವಾ ಸೆಕೆಯನ್ನು ತಡೆಯಲಾರದೆ ಅನೇಕ ರೈತರು ಕೋಪೋದ್ರಿಕ್ತರಾಗಿ ಸ್ವಲ್ಪ ಕಾಲದಲ್ಲೇ ಆ ಪ್ರದೇಶವನ್ನು ಬಿಟ್ಟು ಹೊರಟು ಬಂದರು. ಅದರ ಪರಿಣಾಮವಾಗಿ ಕ್ರುಶ್ಚೋಫ್ ನಿರೀಕ್ಷಿಸಿದಷ್ಟು ಆ ಪ್ರದೇಶದಿಂದ ಪ್ರತಿಫಲ ದೊರೆಯಲಿಲ್ಲ.

ಈ ಮಧ್ಯೆ ಅಮೆರಿಕ ಮತ್ತು ಸೋವಿಯೆತ್ ದೇಶಗಳ ಮಧ್ಯೆ ಜಲಜನಕ ಬಾಂಬು ಮತ್ತು ಅಂತರ ವಲಯ ಕ್ಷಿಪಣಿಗಳ ತಯಾರಿಕೆಯಲ್ಲಿ ಪೈಪೋಟಿ ಪ್ರಾರಂಭವಾಯಿತು. ಅದರ ಪರಿಣಾಮವಾಗಿ ಸೋವಿಯೆತ್ ಸರ್ಕಾರ ಪುನಃ ಕೈಗಾರಿಕಾಭಿವೃದ್ಧಿಗೆ ಹೆಚ್ಚು ಬಂಡವಾಳ ಹೂಡಲು ಮತ್ತು ಗಮನ ಕೊಡಲು ಪ್ರಾರಂಭಿಸಿತು.

ಕ್ರುಶ್ಚೋಫ್ ಅಧಿಕಾರಾವಧಿಯಲ್ಲಿ ಕೈಗಾರಿಕೆ ಮತ್ತು ವ್ಯವಸಾಯ ಕ್ಷೇತ್ರಗಳಲ್ಲಿ ನಡೆದ ಪ್ರಗತಿಯನ್ನು ವೀಕ್ಷಿಸಿದರೆ ಪುನಃ ವ್ಯವಸಾಯದ ಪ್ರಗತಿ ಹಿಂದೆ ಬಿತ್ತು ಎಂದು ಯಾದಿ 3 ಮತ್ತು 4ರಿಂದ ತಿಳಿದುಬರುತ್ತದೆ.

ಯಾದಿ 3

ಮುಖ್ಯ ಕೈಗಾರಿಕೆಗಳ ಉತ್ಪಾದನೆ[5]

ವಸ್ತು	ಪರಿಮಾಣ	1958	1964
ಕಬ್ಬಿಣ	(ದಶಲಕ್ಷ ಟನ್‌ಗಳಲ್ಲಿ)	39.6	62
ಉಕ್ಕು	”	54.9	84.5
ಪೆಟ್ರೋಲಿಯಂ	”	113.2	225.0
ಸಿಮೆಂಟ್	”	33.3	63
ವಿದ್ಯುಚ್ಛಕ್ತಿ	(ಶತಕೋಟಿ ಕಿವಾ.ಗಳಲ್ಲಿ)	235.4	455

[5] ಅದೇ, ಪು. 125

ಯಾದಿ 4

ಗೋದಿ ಮತ್ತು ಇತರ ಆಹಾರ ಧಾನ್ಯಗಳ ಉತ್ಪಾದನೆ[6]

(ದಶಲಕ್ಷ ಟನ್‌ಗಳಲ್ಲಿ)

ವರ್ಷ	ಒಟ್ಟು ಉತ್ಪಾದನೆ	ಹೊಸ ಪ್ರದೇಶಗಳಲ್ಲಿ	ರಷ್ಯದ ಉಳಿದ ಭಾಗದಲ್ಲಿ
1953	82.5	26.9	55.6
1954	85.6	37.3	48.3
1955	106.8	27.7	79.1
1956	127.6	63.3	64.3
1957	105.0	38.1	66.9
1958	141.2	58.4	82.8
1959	125.9	55.3	70.6
1960	134.4	59.2	75.2
1961	138.0	51.3	86.7
1962	148.2	56.4	91.8
1963	107.5	ತಿಳಿದಿಲ್ಲ	ತಿಳಿದಿಲ್ಲ

ಸೋವಿಯೆತ್ ದೇಶದ ಕೈಗಾರಿಕಾ ಉತ್ಪಾದನೆ 1958–64ರಲ್ಲಿ 50%ರಷ್ಟಕ್ಕಿಂತಲೂ ಹೆಚ್ಚಾಯಿತು ಎಂದು ಮೇಲ್ಕಂಡ ಪಟ್ಟಿಯಿಂದ ತಿಳಿದು ಬರುತ್ತದೆ. ಆದರೆ ಇದೇ ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಬಹಳ ಅಲ್ಪ ಪ್ರಮಾಣದಲ್ಲಿ ಮಾತ್ರ ಏರಿದೆ.

ವ್ಯವಸಾಯ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವುದಕ್ಕಾಗಿ ಕ್ರುಶ್ಚೇಫ್ ಎರಡು ವಿಧಾನಗಳನ್ನು ಅನುಸರಿಸಿದರು: 1 ಮಳೆಯನ್ನೇ ಆಧಾರವಾಗಿ ಇಟ್ಟುಕೊಂಡಿರುವ ಪ್ರದೇಶಗಳಲ್ಲಿ ಉಂಟಾಗುವ ವೈಪರೀತ್ಯವನ್ನು ತಪ್ಪಿಸಲು ನೀರಾವರಿ ಸೌಕರ್ಯವನ್ನು ಅಭಿವೃದ್ಧಿಗೊಳಿಸುವುದು. 2 ವ್ಯವಸಾಯಕ್ಕೆ ಸಂಬಂಧಪಟ್ಟ ಎಲ್ಲ ಸರ್ಕಾರಿ ಇಲಾಖೆಗಳಲ್ಲೂ ಸುಧಾರಣೆಗಳನ್ನು ಜಾರಿಗೆ ತಂದು ಅವು ವ್ಯವಸಾಯಕ್ಕೆ ಯೋಗ್ಯ ರೀತಿಯಲ್ಲಿ ಸಹಾಯ ಮಾಡುವಂತೆ ಮಾಡುವುದು.

ವ್ಯವಸಾಯಕ್ಕೆ ಸಂಬಂಧಪಟ್ಟ ಇಲಾಖೆಗಳಲ್ಲಿ ಸುಧಾರಣೆ ತರಲು ಕೆಳಗೆ ಕಂಡ ಕ್ರಮಗಳನ್ನು ಅನುಸರಿಸಿದರು:

1 ವ್ಯವಸಾಯ ಇಲಾಖೆ ಎಲ್ಲ ರೀತಿಯ ತಾಂತ್ರಿಕ ಜ್ಞಾನವನ್ನು ರೈತರಿಗೆ ತಿಳಿಯಪಡಿಸಿ ಅವರು ಅದನ್ನು ಅನುಷ್ಠಾನಕ್ಕೆ ತರುವಂತೆ ಮಾಡಲು ಅಮೆರಿಕದ ಮಾದರಿಯಲ್ಲಿ ಪ್ರಾಯೋಗಿಕ ಕೇಂದ್ರಗಳನ್ನು ಸ್ಥಾಪಿಸಿದರು.

2 ವ್ಯವಸಾಯದ ಉತ್ಪಾದನೆಯನ್ನು ಕ್ರೋಢೀಕರಿಸುವುದರಲ್ಲಿ ಹೊಸ ವಿಧಾನವನ್ನು ಜಾರಿಗೆ ತಂದರು. ಹಿಂದಿನ ರೀತಿಯ ಕಡ್ಡಾಯ ವಸೂಲಿ ಪದ್ಧತಿಯನ್ನು ಕೈಬಿಟ್ಟರು. ಅದರ ಬದಲು ವರ್ಷದ ಪ್ರಾರಂಭದಲ್ಲೇ ಸಾಮೂಹಿಕ ಕೇಂದ್ರಗಳ ಮತ್ತು ಸರ್ಕಾರದ ಕೃಷಿ ಕ್ಷೇತ್ರಗಳ ಅಧಿಕಾರಿಗಳೊಂದಿಗೆ ಒಪ್ಪಂದ ಮಾಡಿಕೊಂಡು, ಅದರಂತೆ ಉತ್ಪಾದನೆಯನ್ನು ಕ್ರೋಢೀಕರಿಸಲು ಆರಂಭಿಸಿದರು. ದೇಶಾದ್ಯಂತ ನಿರೀಕ್ಷಕರನ್ನು ನೇಮಿಸಿ ಅವರು ಇಂಥ ಕಾರ್ಯದಲ್ಲಿ ಭಾಗಿಗಳಾಗುವಂತೆ ಮಾಡಿದರು.

[6] ಅದೇ, ಪು. 107 ಮತ್ತು 131

3 ಟ್ರಾಕ್ಟರ್ ಕೇಂದ್ರಗಳನ್ನು ರದ್ದು ಮಾಡಿದರು. ಅವುಗಳ ಬದಲು ಸರ್ಕಾರದ ನೇತೃತ್ವದಲ್ಲಿ ಎಲ್ಲ ರೀತಿಯ ವ್ಯವಸಾಯ ಉಪಕರಣಗಳನ್ನು ಒದಗಿಸುವ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಈ ಸಂಸ್ಥೆ ಸಾಮೂಹಿಕ ಕೇಂದ್ರಗಳಿಗೆ ಮತ್ತು ಸರ್ಕಾರದ ಕೃಷಿ ಕ್ಷೇತ್ರಗಳಿಗೆ ಬೇಕಾದ ಯಂತ್ರೋಪಕರಣಗಳು, ಅವುಗಳ ಬಿಡಿಭಾಗಗಳು, ಗೊಬ್ಬರ, ಇತ್ಯಾದಿ ವಸ್ತುಗಳನ್ನು ಒದಗಿಸುವ ಜವಾಬ್ದಾರಿ ಪಡೆದಿತ್ತು. ಇದರಿಂದ ರೈತರಿಗೆ ಟ್ರಾಕ್ಟರ್ ಕೇಂದ್ರಗಳ ಮೇಲಿದ್ದ ಅಸಮಾಧಾನವೂ ಹೋಯಿತು.

ಮೇಲ್ಕಂಡ ಕ್ರಮಗಳು ರೈತರಿಗೆ ತೃಪ್ತಿ ಉಂಟು ಮಾಡಲು ಮತ್ತು ಅವರಿಗೆ ಸ್ವಲ್ಪಮಟ್ಟಿನ ಸ್ವಾತಂತ್ರ್ಯ ದೊರಕಿಸಿಕೊಡಲು ಕಾರಣವಾಗಿದ್ದುವು. ಇದರಿಂದ ರೈತರು ಉತ್ಸಾಹಗೊಂಡು ಉತ್ಪನ್ನವನ್ನು ಹೆಚ್ಚಿಸಲು ಕಾರಣರಾಗುವರೆಂದು ಕ್ರುಶ್ಚೋಫ್ ಭಾವಿಸಿದ್ದರು. ಹೀಗೆ ಇದುವರೆಗೆ ಸೋವಿಯೆತ್ ಸರ್ಕಾರ ಅನುಸರಿಸಿಕೊಂಡು ಬಂದಿದ್ದ ಕಠಿಣ ನೀತಿಯನ್ನು ಬಿಟ್ಟು ಕ್ರುಶ್ಚೋಫ್ ಧಾರಾಳ ನೀತಿ ಅನುಸರಿಸಲು ಆರಂಭಿಸಿದರು.

ಆದರೆ ಕ್ರುಶ್ಚೋಫ್ ಧಾರಾಳ ನೀತಿಯನ್ನು ಅನುಸರಿಸಿದರೂ ಅವರಿಗೆ ಒಳ್ಳೆಯ ಹೆಸರು ಬರಲಿಲ್ಲ. ಅವರ ಅಧಿಕಾರದ ಕೊನೆಯ 2 ವರ್ಷಗಳಲ್ಲಿ ಮಾಂಸ ಮತ್ತು ಬೆಣ್ಣೆಯ ಬೆಲೆಗಳು ಏರಲು ಆರಂಭವಾದುವು. ಗ್ರಾಹಕರಿಗೆ ಹೆಚ್ಚುಹೆಚ್ಚಾಗಿ ಆಹಾರ ಧಾನ್ಯಗಳನ್ನು ಒದಗಿಸುವುದಾಗಿ ಸರ್ಕಾರ ಭರವಸೆ ಕೊಟ್ಟಿತ್ತು. ಜನಸಾಮಾನ್ಯರ ವರಮಾನ ಹೆಚ್ಚಿತ್ತು. ಆದ್ದರಿಂದ ಅವರು ಅಧಿಕ ಗ್ರಾಹಕರ ವಸ್ತುಗಳನ್ನು ಕೊಳ್ಳಲು ಪ್ರಾರಂಭಿಸಿದರು. ಇದರಿಂದ ಆಹಾರ ಧಾನ್ಯಗಳಿಗೆ ಬೇಡಿಕೆ ಹೆಚ್ಚಿತು. ಆದರೆ 1961 ಮತ್ತು 1963ರಲ್ಲಿ ಕೆಟ್ಟ ಹವಾಗುಣದ ಪರಿಣಾಮವಾಗಿ ವ್ಯವಸಾಯೋತ್ಪನ್ನ ಕಡಿಮೆಯಾಯಿತು. ಸಾವಿರಾರು ದಶಲಕ್ಷ ಟನ್‌ಗಳಷ್ಟು ಗೋದಿಯನ್ನು ಆಸ್ಟ್ರೇಲಿಯ, ಕೆನಡ ಮತ್ತು ಐರೋಪ್ಯ ದೇಶಗಳಿಂದ ತರಿಸಿಕೊಳ್ಳಬೇಕಾಯಿತು. ಇದಕ್ಕೆ ಕ್ರುಶ್ಚೋಫ್ ಹೊಣೆ ಎಂದು ಆಪಾದಿಸಿ ಅವರನ್ನು ಅಧಿಕಾರದಿಂದ ತೆಗೆಯಲಾಯಿತು.

III

ಕ್ರುಶ್ಚೋಫರ ಪದಚ್ಯುತಿಯಾದ ಮೇಲೆ ಈಗಿನ ನಾಯಕರು ವ್ಯವಸಾಯ ಕ್ಷೇತ್ರದಲ್ಲಿ ತಮ್ಮ ನೀತಿಯನ್ನು ಪ್ರಕಟಿಸಿದರು. ರಷ್ಯದ 8ನೆಯ ಪಂಚವಾರ್ಷಿಕ ಯೋಜನೆಯ (1966–70) ರೂಪರೇಖೆಗಳನ್ನು ಪ್ರಕಟಿಸುವಾಗ (ಮಾರ್ಚ್ 1965ರಲ್ಲಿ) ಈ ನೀತಿ ಪ್ರಕಟವಾಯಿತು. ಕ್ರುಶ್ಚೋಫ್ ತಮ್ಮ ದುಡುಕಿನ ಮತ್ತು ಆತುರದ ಸ್ವಭಾವದಿಂದ ವ್ಯವಸಾಯ ನೀತಿಯಲ್ಲಿ ಪರಾಜಿತರಾದರೆಂದು ಈಗಿನ ನಾಯಕರು ಆಪಾದಿಸಿ, ತಮ್ಮ ಉದ್ದೇಶಗಳನ್ನು ಈ ಕೆಳಗೆ ಕಂಡಂತೆ ವಿವರಿಸಿದರು:

1 ಧಾನ್ಯಗಳನ್ನು ಸಂಗ್ರಹಿಸುವ ನೀತಿಯಲ್ಲಿ ಬಹಳ ಬದಲಾವಣೆ ಮಾಡಲಾಯಿತು. 1964ರಲ್ಲಿ 90 ದಶಲಕ್ಷ ಟನ್‌ಗಳಷ್ಟನ್ನು ಶೇಖರಿಸಬೇಕೆಂದು ನಿರ್ಧರಿಸಲಾಗಿತ್ತು. ಆದರೆ 1965ರಲ್ಲಿ 55.7 ದಶಲಕ್ಷ ಟನ್‌ಗಳನ್ನು ಮಾತ್ರ ಶೇಖರಿಸಲು ನಿರ್ಧರಿಸಲಾಯಿತು. ಈ ನಿರ್ಧಾರ ವಾಸ್ತವ ಪರಿಸ್ಥಿತಿಗೆ ಅನುಗುಣವಾಗಿತ್ತು ಎಂದು ಹೇಳಲಾಯಿತು.

2 ಸಾಮೂಹಿಕ ವ್ಯವಸಾಯ ಕ್ಷೇತ್ರಗಳ ಮೇಲೆ ಹಾಕುತ್ತಿದ್ದ ವರಮಾನ ತೆರಿಗೆಯಲ್ಲಿ ಬಹಳ ಬದಲಾವಣೆ ಆಯಿತು. ಒಟ್ಟು ಆದಾಯದ ಮೇಲೆ ತೆರಿಗೆ ವಿಧಿಸುವುದರ ಬದಲು ನಿವ್ವಳ ಆದಾಯದ ಮೇಲೆ ತೆರಿಗೆ ಹಾಕುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಸಾಮೂಹಿಕ ಕೇಂದ್ರಗಳು ಕೊಡಬೇಕಾಗಿದ್ದ ಸಾಲದ ಮೊತ್ತದ ಪೈಕಿ 40%ರಷ್ಟನ್ನು ವಿಸರ್ಜಿಸಲಾಯಿತು. ಅವು 1958–59ರಲ್ಲಿ ಟ್ರಾಕ್ಟರ್ ಕೇಂದ್ರಗಳಿಗೆ ಕೊಡಬೇಕಾಗಿದ್ದ ಸಾಲವನ್ನು ವಿಸರ್ಜಿಸಲಾಯಿತು.

3 ಕೆಲವು ಗ್ರಾಹಕ ವಸ್ತುಗಳ ಬೆಲೆಯಲ್ಲಿ ವ್ಯತ್ಯಾಸವಿತ್ತು. ಪಟ್ಟಣ ಪ್ರದೇಶಗಳಲ್ಲಿ ಅವುಗಳ ಬೆಲೆ ಕಡಿಮೆ ಇತ್ತು. ಆದರೆ ಅದೇ ವಸ್ತುಗಳ ಬೆಲೆ ಗ್ರಾಮಾಂತರ ಪ್ರದೇಶಗಳಲ್ಲಿ ಅಧಿಕವಾಗಿತ್ತು. ಇದನ್ನು ಹೋಗಲಾಡಿಸಿ, ಎಲ್ಲ ಕಡೆಯೂ ಒಂದೇ ಬೆಲೆ ಇರುವಂತೆ ಮಾಡಲಾಯಿತು.

4 ಕೃತಕ ಗೊಬ್ಬರಗಳ ಉತ್ಪನ್ನದಲ್ಲಿ ಮೊದಲಿದ್ದ ಗುರಿಯನ್ನು ತಗ್ಗಿಸಿ 1970ರ ವೇಳೆಗೆ 55 ದಶಲಕ್ಷ ಟನ್ನುಗಳನ್ನು ಉತ್ಪಾದಿಸುವ ಉದ್ದೇಶ ಇಟ್ಟುಕೊಳ್ಳಲಾಯಿತು.

5 ಯಂತ್ರೋಪಕರಣಗಳ ಸರಬರಾಯಿಯನ್ನೂ ಹೆಚ್ಚಿಸಲು ನಿರ್ಧರಿಸಲಾಯಿತು.

6 ಎಲ್ಲ ಮುಖ್ಯ ನೀರಾವರಿ ಕಾಮಗಾರಿಗಳನ್ನು ಪೂರ್ತಿಗೊಳಿಸುವ ಜವಾಬ್ದಾರಿಯನ್ನೂ ಸರ್ಕಾರ ವಹಿಸಿಕೊಂಡಿತು.

7 ಆಹಾರ ಧಾನ್ಯಗಳ ಉತ್ಪಾದನೆ 8ನೆಯ ಪಂಚವಾರ್ಷಿಕ ಯೋಜನೆಯಲ್ಲಿ 30%ರಷ್ಟು ಹೆಚ್ಚುತ್ತದೆ, ಆದರೆ ಅವುಗಳಿಗೆ ಬೇಡಿಕೆ 30%ರಿಂದ 35%ರಷ್ಟು ಹೆಚ್ಚಬಹುದೆಂದು ಅಂದಾಜು ಮಾಡಲಾಯಿತು.

8 ಕೊರತೆ ಬೀಳುವ ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಿಸಲು ವ್ಯವಸಾಯಕ್ಕೆ ಅವಶ್ಯಕವಾದ ಎಲ್ಲ ಸಲಕರಣೆಗಳನ್ನು ಒದಗಿಸಲು ನಿರ್ಧರಿಸಲಾಯಿತು.

ಮೇಲ್ಕಂಡ ಕ್ರಮಗಳನ್ನು ಪಕ್ಷದ ಮುಂದೆ ಇಡುತ್ತ ಪ್ರಧಾನಿ ಕೊಸಿಗಿನ್ ಕ್ರುಶ್ಚೋಫ್‌ರವರ ನೀತಿಯನ್ನು ಟೀಕಿಸಿದರು. ಕ್ರುಶ್ಚೋಫ್ ಕಾಲದಲ್ಲಿ ಆಡಳಿತಗಾರರು ಆಗಿಂದಾಗ್ಗೆ ವ್ಯವಸಾಯ ಕ್ಷೇತ್ರದಲ್ಲಿ ಬದಲಾವಣೆಗಳನ್ನು ತರುತ್ತಿದ್ದುದರಿಂದ ಆಹಾರ ಅಭಾವ ಮತ್ತು ವ್ಯವಸಾಯೋತ್ಪನ್ನದಲ್ಲಿ ಇಳಿತಾಯ ಉಂಟಾಯಿತು ಎಂದು ತಿಳಿಸಲಾಯಿತು. ಕ್ರುಶ್ಚೋಫ್ ಮತ್ತು ಸ್ಟಾಲಿನ್ ಭ್ರಾಂತಿಗೆ ಒಳಪಟ್ಟು ಅಧಿಕ ಮಟ್ಟದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯನ್ನು ನಿರ್ಧರಿಸುತ್ತಿದ್ದರೆಂದು ಆಪಾದಿಸಲಾಯಿತು. ಕ್ರುಶ್ಚೋಫರ ಕಾಲದಲ್ಲಿ ಅವರು ನಿರ್ಧರಿಸಿದ್ದ ಗುರಿಯನ್ನು ಕೇವಲ 3 ವರ್ಷಗಳಲ್ಲಿ ಮಾತ್ರ ಮುಟ್ಟಲಾಯಿತು ಎಂದು ತಿಳಿಸಿದರು. 1955–65ರ ಮಧ್ಯೆ ಪ್ರತಿವರ್ಷವೂ ಆಹಾರ ಧಾನ್ಯಗಳ ಉತ್ಪಾದನೆಯ ಗುರಿಯನ್ನು ನಿರ್ಧರಿಸಿದರೂ 1956, 1958 ಮತ್ತು 1964ರಲ್ಲಿ ಮಾತ್ರ ಗುರಿಯನ್ನು ಸಾಧಿಸಲಾಯಿತು. ತಾವು ನಿರ್ಧರಿಸಿದ ಗುರಿಗಳನ್ನು ಸಾಧಿಸುವ ಸಲುವಾಗಿ ಪಕ್ಷದ ಅಧಿಕಾರಿಗಳು ಎಲ್ಲ ರೀತಿಯ ಪ್ರಭಾವವನ್ನು ರೈತರ ಮೇಲೆ ಬೀರಬೇಕೆಂದು ತಿಳಿಸಲಾಗಿತ್ತು. ಇದರಿಂದ ಭೂಮಿಯ ಸಾರವನ್ನು ಕಾಪಾಡುವ ಮತ್ತು ಬೆಳೆಗಳನ್ನು ಪುನರಾವೃತ್ತಿ ಪದ್ಧತಿಯ ಮೇಲೆ ಬೆಳೆದು ಭೂಮಿಯ ಗುಣವನ್ನು ಕಾಪಾಡುವ ಕಾರ್ಯಕ್ರಮಗಳು ಕಡೆಗಣಿಸಲ್ಪಟ್ಟವು. ಅನೇಕ ಸಂದರ್ಭಗಳಲ್ಲಿ ದನಕರುಗಳಿಗೆ ಮೇವು ಇಲ್ಲದಂತಾಯಿತು ಮತ್ತು ಬಿತ್ತನೆ ಬೀಜಗಳು ದೊರೆಯದಂತಾಯಿತು. ಇದರಿಂದ ವ್ಯವಸಾಯದ ಕ್ಷೇತ್ರದಲ್ಲಿ ದುಷ್ಪರಿಣಾಮಗಳಾದವು ಎಂದು ಕ್ರುಶ್ಚೋಫರ ನೀತಿಯನ್ನು ಖಂಡಿಸಲಾಯಿತು.

IV

1960–64ರ ಅವಧಿಯಲ್ಲಿ (ವ್ಯವಸಾಯ ಕ್ಷೇತ್ರದಲ್ಲಿ) ಉಂಟಾದ ನಿರಾಶೆಗೆ ಕ್ರುಶ್ಚೋಫರೇ ಕಾರಣವೆಂದು ಆಪಾದಿಸಲಾಗಿದೆ. ಅದರಲ್ಲಿಯೂ 3 ಕಾರಣಗಳಿಗಾಗಿ ಅವರನ್ನು ತೀವ್ರವಾಗಿ ಖಂಡಿಸಲಾಗಿದೆ. ಅವು ಯಾವುವೆಂದರೆ:

1 7 ವರ್ಷಗಳ ಅವಧಿಯ ಯೋಜನೆಯ ಕಾಲದಲ್ಲಿ ಕ್ರುಶ್ಚೋಫ್ ಭ್ರಮೆಯಿಂದ ಕೂಡಿ ವ್ಯವಸಾಯೋತ್ಪನ್ನಗಳ ವಿಷಯದಲ್ಲಿ ಉನ್ನತ ಮಟ್ಟದ ಗುರಿಯನ್ನು ನಿರ್ಧರಿಸಿದ್ದರು.

2 ಟ್ರಾಕ್ಟರ್ ಕೇಂದ್ರಗಳನ್ನು ಪುನರ್ ವ್ಯವಸ್ಥೆಗೊಳಿಸಲು ಹೋಗಿ ವ್ಯವಸಾಯ ಕ್ಷೇತ್ರದಲ್ಲಿ ಅಸ್ಥಿರತೆಯನ್ನುಂಟುಮಾಡಿದರು.

3 ಹೊಸ ಭೂಮಿಗಳನ್ನು ವ್ಯವಸಾಯಕ್ಕೆ ಅಳವಡಿಸುವ ಕಾರ್ಯದಲ್ಲಿ ನಿಷ್ಫಲರಾದರು.

ಕ್ರುಶ್ಚೋಫರ ವ್ಯವಸಾಯ ನೀತಿಯನ್ನು ವಿಮರ್ಶಾತ್ಮಕವಾಗಿ ಈಗ ಪರಿಶೀಲಿಸಬಹುದು:

1 ವ್ಯವಸಾಯಕ್ಕೆ ಅವಶ್ಯಕವಾದ ಸಲಕರಣೆಗಳನ್ನು ಉತ್ಪತ್ತಿ ಮಾಡುವ ವಿಷಯದಲ್ಲಿ ಮತ್ತು ವ್ಯವಸಾಯ ಉತ್ಪನ್ನಗಳನ್ನು ಪಡೆಯುವ ವಿಷಯದಲ್ಲಿ ಕ್ರುಶ್ಚೋಫ್ ಅತೀವ ತವಕಗೊಂಡು ಗುರಿಗಳನ್ನು ನಿರ್ಧರಿಸುತ್ತಿದ್ದರು ಎಂದು ಒಪ್ಪಿಕೊಳ್ಳಬಹುದು. 1955 ಮತ್ತು 1958ರ ಅವಧಿಯಲ್ಲಿ, ತಮ್ಮ ಅಧಿಕಾರ ಪ್ರಾರಂಭದಲ್ಲಿ ಉಂಟಾದ ಒಳ್ಳೆಯ ಫಲಿತಾಂಶ

ಗಳಿಂದ ಉತ್ಸಾಹಗೊಂಡು ಸೋವಿಯೆತ್ ದೇಶ ತನ್ನ ಸಮಸ್ಯೆಗಳನ್ನು ಪರಿಹರಿಸಿಕೊಂಡಿತು ಎಂದು ತಿಳಿದು, ತಮ್ಮ ಯೋಜನೆಗಳನ್ನು ಇನ್ನೂ ತ್ವರಿತಗೊಳಿಸಲು ಯತ್ನಿಸಿದರು. ಅಮೆರಿಕ ಸಂಯುಕ್ತಸಂಸ್ಥಾನವನ್ನು ವ್ಯವಸಾಯ ಮತ್ತು ಕೈಗಾರಿಕಾ ಕ್ಷೇತ್ರಗಳೆರಡರಲ್ಲೂ ಮೀರಿಸಿ ಮುಂದೆ ಹೋಗಬೇಕೆಂಬ ಆಸೆಯನ್ನು ಅವರು ಇಟ್ಟುಕೊಂಡಿದ್ದರು.

2 ಟ್ರಾಕ್ಟರ್ ಕೇಂದ್ರಗಳನ್ನು ಪುನರ್‌ವ್ಯವಸ್ಥೆಗೊಳಿಸುವುದರಲ್ಲಿ ಕ್ರುಶ್ಚೋಫರನ್ನು ನಿಂದಿಸಲಾಗಿದೆ. ಅವರು ಟ್ರಾಕ್ಟರ್ ಕೇಂದ್ರಗಳನ್ನು ಒಳ್ಳೆಯ ಉದ್ದೇಶದಿಂದ ವಿಸರ್ಜಿಸಿದ್ದರು. ಟ್ರಾಕ್ಟರ್ ಕೇಂದ್ರಗಳನ್ನು ಸ್ಟಾಲಿನರ ಕಾಲದಲ್ಲಿ ಬಹಳ ಜನ ಬಹು ಕಟುವಾಗಿ ಟೀಕಿಸಿದ್ದರು. ಏಕೆಂದರೆ ಅವು ಸಾಮೂಹಿಕ ಬೇಸಾಯ ಕೇಂದ್ರಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದುವು. ಜನರಿಗೆ ಟ್ರಾಕ್ಟರ್ ಕೇಂದ್ರಗಳ ವಿಷಯದಲ್ಲಿ ಇದ್ದ ಅತೃಪ್ತಿಯನ್ನು ತಿಳಿದುಕೊಂಡು ಕ್ರುಶ್ಚೋಫ್ ಅವನ್ನು ವರ್ಜಿಸಿ ಸಾಮೂಹಿಕ ಬೇಸಾಯ ಕೇಂದ್ರಗಳೇ ವ್ಯವಸಾಯ ಯಂತ್ರೋಪಕರಣಗಳನ್ನು ನೋಡಿಕೊಳ್ಳುವಂತೆ ಮಾಡಿದರು. ಹೀಗೆ ಮಾಡುವುದರಿಂದ ಸಾಮೂಹಿಕ ಬೇಸಾಯ ಕೇಂದ್ರಗಳಿಗೆ ಯಂತ್ರಗಳನ್ನು ಉಪಯೋಗಿಸುವುದರಲ್ಲಿ ಸ್ವಾತಂತ್ರ್ಯ ದೊರಕುತ್ತದೆ ಎಂದೂ ಅವುಗಳಿಂದ ಸಾಕಷ್ಟು ಪ್ರಯೋಜನ ಪಡೆಯಬಹುದೆಂದೂ ಅವರು ನಂಬಿದ್ದರು. ಆದರೆ ಸಾಮೂಹಿಕ ಕೇಂದ್ರಗಳು ಇಂಥ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಲಿಲ್ಲ. ಕ್ರುಶ್ಚೋಫರಿಗೆ ಸಾಮೂಹಿಕ ಕೇಂದ್ರಗಳು ಸರಿಯಾಗಿ ಯಂತ್ರಗಳನ್ನು ಪಡೆದುಕೊಳ್ಳಲು ಆಗುವುದಿಲ್ಲ ಎಂದು ತಿಳಿದಾಗ, ಅವರು ಹೊಸ ವ್ಯವಸ್ಥೆಯನ್ನು ಜಾರಿಗೆ ತಂದರು. ಒಂದು ನೂತನ ಸಂಸ್ಥೆಯನ್ನು ಸ್ಥಾಪಿಸಿ ಅದು ಯಂತ್ರಗಳನ್ನೂ ಬಿಡಿ ಭಾಗಗಳನ್ನೂ ಹಂಚುವಂತೆ ಮಾಡಿದರು. ಆದರೆ ಯಂತ್ರಗಳನ್ನು ಬಳಸುವುದರಲ್ಲಿ ನೂತನ ಸಂಸ್ಥೆಯ ಹತೋಟಿ ಇರಲಿಲ್ಲ. ಅದನ್ನು ಉಪಯೋಗಿಸುವ ಸ್ವಾತಂತ್ರ್ಯ ಸಾಮೂಹಿಕ ಕೇಂದ್ರಗಳಿಗೆ ಇತ್ತು.

ಆದರೆ ನಾವು ಒಂದು ಟೀಕೆಯನ್ನು ಮಾತ್ರ ಒಪ್ಪಿಕೊಳ್ಳಬಹುದು. ಸಾಮೂಹಿಕ ಕೇಂದ್ರಗಳಲ್ಲಿ ಯಂತ್ರಗಳನ್ನು ರಿಪೇರಿ ಮಾಡಲು ಸರಿಯಾದ ವ್ಯವಸ್ಥೆ ಮಾಡಿರಲಿಲ್ಲ. ಆದರೆ ಸಾಮೂಹಿಕ ಕೇಂದ್ರದ ಅಧಿಕಾರಿಗಳು ಸ್ವಲ್ಪ ಶ್ರದ್ಧೆ ವಹಿಸಿದ್ದರೆ ಯಂತ್ರಗಳನ್ನು ರಿಪೇರಿ ಮಾಡಿಸಿಕೊಳ್ಳುವುದೇನೂ ಅಸಾಧ್ಯವಾಗಿರಲಿಲ್ಲ. ನಾವು ಸೋವಿಯೆತ್ ದೇಶದ ಚರಿತ್ರೆಯನ್ನು ಪರಿಶೀಲಿಸಿದರೆ ಮೊದಲಿನಿಂದಲೂ ಸಾಮೂಹಿಕ ಕೇಂದ್ರಗಳು ಉತ್ಸಾಹದಿಂದ ಕಾರ್ಯ ಮಾಡುತ್ತಿರಲಿಲ್ಲ ಎಂಬುದು ತಿಳಿಯುತ್ತದೆ. ಇದರಿಂದ ನಮಗೆ ಕಂಡುಬರುವುದೇನೆಂದರೆ ಟ್ರಾಕ್ಟರ್ ಕೇಂದ್ರಗಳನ್ನು ವಿಸರ್ಜಿಸಿದ್ದರಿಂದ ವ್ಯವಸಾಯ ಕ್ಷೇತ್ರದಲ್ಲಿ ಏರುಪೇರುಗಳಾಗಲಿಲ್ಲ. ಅದರ ಬದಲು ಸಾಮೂಹಿಕ ಕೇಂದ್ರಗಳ ಔದಾಸೀನ್ಯದಿಂದ ಏರುಪೇರುಗಳಾದುವು ಎಂದು ಹೇಳಬಹುದು.

3 ಹೊಸ ಭೂಮಿಯನ್ನು ವ್ಯವಸಾಯಕ್ಕೆ ಅಳವಡಿಸುವ ಕ್ರುಶ್ಚೋಫ್ ಯೋಜನೆ ತತ್ತ್ವಶಃ ಬಹಳ ಒಳ್ಳೆಯದಾಗಿತ್ತು. ದುರದೃಷ್ಟವಶಾತ್ ಪ್ರಕೃತಿಯ ವಿಕೋಪದಿಂದ ಆ ಯೋಜನೆ ಅವರಿಗೆ ಒಳ್ಳೆಯ ಹೆಸರು ತರಲಿಲ್ಲ. ರಷ್ಯದಲ್ಲಿ ಕ್ರಾಂತಿಯಾದಾಗಿನಿಂದಲೂ ವ್ಯವಸಾಯೋತ್ಪಾದನೆಯಲ್ಲಿ ಸ್ವಯಂಪರಿಪೂರ್ಣತೆ ಬಂದಿರಲಿಲ್ಲ. ಸ್ಟಾಲಿನರ ಪ್ರಭಾವಶಾಲಿ ನಾಯಕತ್ವದಿಂದಾಗಿ ದೇಶದಲ್ಲಿ ಗಲಭೆಗಳಾಗದೆ ಜನರು ಕಷ್ಟ ಸಹಿಸಿಕೊಂಡಿದ್ದರು. ಸ್ಟಾಲಿನರು ನಿಧನರಾದ ಕೂಡಲೇ, ಜನರಿಗೆ ಹೆಚ್ಚಿನ ಆಹಾರಧಾನ್ಯಗಳನ್ನು ಒದಗಿಸುವುದು ಅತ್ಯಾವಶ್ಯಕವೆಂದು ಕ್ರುಶ್ಚೋಫ್ ಅರಿತರು. ಆದರೆ ಆಗ ಇದ್ದ ಪರಿಸ್ಥಿತಿಯಲ್ಲಿ ದೇಶದಲ್ಲಿದ್ದ ಜಮೀನುಗಳಿಂದ ಅಧಿಕ ಆಹಾರ ಧಾನ್ಯಗಳನ್ನು ಪಡೆಯಲು ಸಾಧ್ಯವಿಲ್ಲ ಎಂಬುದನ್ನು ಅರಿತುಕೊಂಡರು. ಸಾಮೂಹಿಕ ಕೇಂದ್ರಗಳಲ್ಲಿ ರೈತರು ತೋರಿಸುತ್ತಿದ್ದ ವರ್ತನೆಯಿಂದ ಮತ್ತು ಸಾಕಷ್ಟು ಗೊಬ್ಬರ ದೊರೆಯದೆ ಇದ್ದುದರಿಂದ ಆಹಾರಧಾನ್ಯಗಳ ಉತ್ಪಾದನೆ ಹೆಚ್ಚಿಸಲು

ಸಾಧ್ಯವಾಗುತ್ತಿರಲಿಲ್ಲ. ಹೊಸ ಭೂಮಿಗಳು ಬೇಕಾದಷ್ಟು ಪ್ರಮಾಣದಲ್ಲಿ ದೊರೆಯುತ್ತಿದ್ದುದರಿಂದ ಅವುಗಳನ್ನು ವ್ಯವಸಾಯಕ್ಕೆ ಅಳವಡಿಸಿದರೆ ಉತ್ಪಾದನೆ ಹೆಚ್ಚಿಸಬಹುದು ಎಂದು ನಿರ್ಧರಿಸಿದರು. ಜೊತೆಗೆ ಸಾಮೂಹಿಕ ಕೇಂದ್ರಗಳಲ್ಲಿ ಕೆಲಸ ಮಾಡಿ ಬೇಸರಗೊಂಡಿದ್ದ ರೈತರು ಹೊಸ ಅವಕಾಶ ದೊರೆತ ಒಡನೆಯೇ ಸೈಬೀರಿಯಾ ಮುಂತಾದ ನೂತನ ಪ್ರದೇಶಗಳಿಗೆ ಹೋಗಿ ನೆಲಸುವರೆಂದು ಭಾವಿಸಿದ್ದರು. ಅವರಿಗೆ ಅಲ್ಲಿ ಹೆಚ್ಚಿನ ಸ್ವಾತಂತ್ರ್ಯ ದೊರಕುವುದರಿಂದ ಬಲಾತ್ಕಾರವಿಲ್ಲದೆ ರೈತರು ಅಲ್ಲಿ ನೆಲಸಿ ವ್ಯವಸಾಯದ ಅಭಿವೃದ್ಧಿ ಸಾಧಿಸುವರೆಂದು ಕ್ರುಶ್ಚೋಫ್ ಊಹಿಸಿದ್ದರು. ಅವರ ನಿರೀಕ್ಷೆಯಂತೆಯೇ ಪ್ರಾರಂಭದಲ್ಲಿ ಹೊಸ ಜಮೀನುಗಳು ಆಹಾರ ಧಾನ್ಯಗಳ ಹೆಚ್ಚಿಗೆ ಉತ್ಪನ್ನಕ್ಕೆ ಕಾರಣವಾದುವು. ಆದರೆ ವಾಯುಗುಣದ ವೈಪರೀತ್ಯದ ದೆಸೆಯಿಂದ ಮುಂದೆ ಕೆಲವು ವರ್ಷಗಳಲ್ಲಿ ಬೆಳೆ ಕುಗ್ಗಿದಾಗ ಅವರು ನಿಂದೆಗೆ ಗುರಿಯಾದರು.

ಕ್ರುಶ್ಚೋಫ್ ಯೋಜನೆಗೆ ಸಾಕಷ್ಟು ಕಾಲಾವಕಾಶ ಕೊಟ್ಟರೆ ಅದು ಖಂಡಿತ ಜಯಪ್ರದವಾಗುತ್ತದೆ ಎಂಬುದನ್ನು ಭಾರತದ ಉದಾಹರಣೆಯಿಂದ ತಿಳಿದುಕೊಳ್ಳಬಹುದು. ಭಾರತದಲ್ಲಿ ಅನೇಕ ವಿವಿಧೋದ್ದೇಶ ನೀರಾವರಿ ಯೋಜನೆಗಳನ್ನು ರಚಿಸಲಾಗಿದೆ. ಇವನ್ನು ಪ್ರಾರಂಭಿಸಿದಾಗ ಇವು ಸಾಕಷ್ಟು ಫಲಿತಾಂಶ ಕೊಡಲಿಲ್ಲವೆಂದು ಜನರು ಸರ್ಕಾರವನ್ನು ಟೀಕಿಸಿದರು. ನೀರಾವರಿ ಯೋಜನೆಗಳಿಂದ ಕಾಲುವೆಗಳ ಮೂಲಕ ನೀರು ಹಾಯಿಸಲ್ಪಟ್ಟರೂ ಆ ಪ್ರದೇಶಗಳಲ್ಲಿ ಕೂಡಲೇ ನೀರನ್ನು ಉಪಯೋಗಿಸಿಕೊಳ್ಳಲು ಆಗಲಿಲ್ಲ. ನಮ್ಮ ದೇಶದ ರೈತರಿಗೆ ಭೂಮಿಯನ್ನು ಆಬಾದು ಮಾಡಿಕೊಂಡು ಹೊಸ ಪ್ರದೇಶಗಳಲ್ಲಿ ವ್ಯವಸಾಯ ಮಾಡುವುದಕ್ಕೆ ಸ್ವಲ್ಪ ವರ್ಷಗಳು ಹಿಡಿದುವು. ಈಗ ನೀರಾವರಿ ಯೋಜನೆಗಳು ಭಾರತದ ವ್ಯವಸಾಯ ಪದ್ಧತಿಯಲ್ಲಿ ಬದಲಾವಣೆ ತರುತ್ತಿವೆ. ಇದೇ ರೀತಿ ರಷ್ಯದಲ್ಲಿ ಹೊಸ ಜಮೀನುಗಳನ್ನು ರಚಿಸಿದ ಪ್ರದೇಶಗಳಲ್ಲಿ ಜನರಿಗೆ ನೆಲಸಲು ಕಾಲಾವಕಾಶ ಬೇಕಾಗುತ್ತದೆ. ಸೈಬೀರಿಯದ ಪ್ರದೇಶ ಎಲ್ಲ ದೃಷ್ಟಿಗಳಿಂದಲೂ ನಮ್ಮ ದೇಶದ ಅಭಿವೃದ್ಧಿ ಹೊಂದದ ಪ್ರದೇಶದ ಲಕ್ಷಣಗಳನ್ನು ಹೊಂದಿದೆ. ಆದ್ದರಿಂದ ಆ ಪ್ರದೇಶ ಕ್ರಮೇಣ ಅಭಿವೃದ್ಧಿಯಾಗುತ್ತ ಹೋದ ಹಾಗೆ ರೈತರು ಅಲ್ಲಿ ನೆಲಸುತ್ತಾರೆ. ಆಗ ಕ್ರುಶ್ಚೋಫ್ ಕನಸು ನನಸಾಗುತ್ತದೆ. ಈಗಿನ ರಷ್ಯನ್ ನಾಯಕರುಗಳೂ ಕ್ರುಶ್ಚೋಫ್ ನಿರ್ಧರಿಸಿದ್ದಂತೆಯೇ ಆ ಪ್ರದೇಶದಲ್ಲಿ ನೀರಾವರಿ ಸೌಕರ್ಯ ಕಲ್ಪಿಸಿ ಅಭಿವೃದ್ಧಿ ಕಾರ್ಯ ಕೈಕೊಂಡಿದ್ದಾರೆ. ಆದ್ದರಿಂದ ಇನ್ನು ಕೆಲವೇ ವರ್ಷಗಳಲ್ಲಿ ಆ ಪ್ರದೇಶ ರಷ್ಯದ ಸಮೃದ್ಧಿ ಪ್ರದೇಶವಾಗಿ ಮಾರ್ಪಾಡಾಗುತ್ತದೆ. ಆದ್ದರಿಂದ ಕ್ರುಶ್ಚೋಫ್ ಹೊಸ ಭೂಮಿಗಳನ್ನು ವ್ಯವಸಾಯಕ್ಕೆ ಅಳವಡಿಸಿ ಕೃಷಿ ವ್ಯವಸ್ಥೆಯಲ್ಲಿ ಏರುಪೇರು ಉಂಟುಮಾಡಿದರು ಎನ್ನುವುದಕ್ಕೆ ಬದಲು, ಅವರು ಸೋವಿಯೆತ್ ದೇಶಕ್ಕೆ ಒಂದು ಹೊಸ ನವಕಾಶ ಕಲ್ಪಿಸಿ ವ್ಯವಸಾಯದ ಅಭಿವೃದ್ಧಿಗೆ ಭದ್ರ ತಳಹದಿ ಕಲ್ಪಿಸಿದರು ಎಂದು ಹೇಳಬಹುದು.

4 ಕ್ರುಶ್ಚೋಫ್ ಅಧಿಕಾರದಿಂದ ಹೋದಮೇಲೆ ಜಾರಿಗೆ ತಂದ ಸುಧಾರಣೆಗಳಿಗಾಗಿ, ಕೊಸಿಗಿನ್ ಮತ್ತು ಅವರ ಸಹೋದ್ಯೋಗಿಗಳನ್ನು ಶ್ಲಾಘಿಸಲಾಗಿದೆ. ಆದರೆ ನಾವು ಸ್ಟಾಲಿನ್ ಸತ್ತ ಅನಂತರ ಅಧಿಕಾರಕ್ಕೆ ಬಂದ ಮಾಲಂಕೋವ್ ನೀಡಿದ ಹೇಳಿಕೆಗಳನ್ನು ಪರಿಶೀಲಿಸಿದರೆ ಈಗಿನ ಸುಧಾರಣೆಗಳಲ್ಲಿ ಕಂಡುಬರುವ ಅಂಶಗಳೆಲ್ಲವೂ ಆಗಲೇ ನಿರೂಪಿಸಲ್ಪಟ್ಟಿದ್ದುವೆಂದು ತಿಳಿದುಬರುತ್ತದೆ. 1954ರಲ್ಲಿ ಮಾಲಂಕೋವ್ ಪ್ರಧಾನಿಯಾಗಿದ್ದಾಗ ಕ್ರುಶ್ಚೋಫ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಆದ್ದರಿಂದ ಮಾಲಂಕೋವ್ ಹೇಳಿಕೆ ಕ್ರುಶ್ಚೋಫ್ ಅನುಮತಿ ಪಡೆದಿತ್ತು ಎನ್ನಬಹುದು. ಆದರೆ ಸ್ಟಾಲಿನ್ ಸತ್ತ ಕೂಡಲೇ ಕ್ರುಶ್ಚೋಫ್ ಮತ್ತು ಮಾಲಂಕೋವ್ ಉದ್ದೇಶಗಳನ್ನು ಕಾರ್ಯಗತ ಮಾಡಲಾಗಲಿಲ್ಲ. ಒಳ್ಳೆಯ ಸಂದರ್ಭಕ್ಕಾಗಿ ಕ್ರುಶ್ಚೋಫ್ ಕಾಯುತ್ತಿದ್ದರು. ಆದ್ದರಿಂದ ಕ್ರುಶ್ಚೋಫ್ ಪ್ರಗತಿಪರ ಉದ್ದೇಶಗಳನ್ನೇ ಈಗಿನ ಅಧಿಕಾರ ವರ್ಗದವರು ಪುನರುಚ್ಚರಿಸಿದ್ದಾರೆ ಎನ್ನಬಹುದು.

5 ವ್ಯವಸಾಯದ ಉತ್ಪಾದನೆಯಲ್ಲಿ ಪ್ರಗತಿ ಇರದೆ ಇರುವುದಕ್ಕೆ ಸಾಮೂಹಿಕ ಕೇಂದ್ರಗಳ ಧೋರಣೆಯೆ ಮುಖ್ಯ ಕಾರಣವೆನ್ನಬಹುದು. ಇಂದಿಗೂ ರಷ್ಯನರು ಸಾಮೂಹಿಕ ಬೇಸಾಯ ಪದ್ಧತಿಗೆ ಸಂಪೂರ್ಣವಾಗಿ ಹೊಂದಿಕೊಂಡಿಲ್ಲ. ಅನೇಕ ರಷ್ಯನರಿಗೆ ಸ್ವಂತವಾಗಿ ಭೂಮಿಯನ್ನು ಹೊಂದಿರಬೇಕೆಂಬ ಆಸೆ ಇಂದಿಗೂ ಇದೆ.

6 ವ್ಯವಸಾಯೋತ್ಪನ್ನಗಳನ್ನು ಹಂಚುವುದರ ಮತ್ತು ಸರ್ಕಾರ ಅವುಗಳನ್ನು ಕ್ರೋಡೀಕರಿಸುವ ನೀತಿಯಿಂದಾಗಿ ರೈತರಿಗೆ ಬಹಳ ಅಸಮಾಧಾನವಾಯಿತು. ವಾಸ್ತವಿಕ ಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳದೆ ಸರ್ಕಾರ ನಿರ್ಧರಿಸುತ್ತಿದ್ದುದರಿಂದ ಅನೇಕ ಸಂದರ್ಭಗಳಲ್ಲಿ ವ್ಯವಸಾಯ ಕ್ಷೇತ್ರಗಳಲ್ಲಿ ಬಿತ್ತುವುದಕ್ಕೆ ಕೂಡ ಬೀಜ ಉಳಿಯುತ್ತಿರಲಿಲ್ಲ. ಆಗ ಹಿಂದಣ ಸಂಗ್ರಹದಿಂದ ಬೀಜಗಳನ್ನು ಸರ್ಕಾರಿ ವ್ಯವಸಾಯ ಕ್ಷೇತ್ರಗಳು ಮತ್ತು ಸಾಮೂಹಿಕ ಬೇಸಾಯ ಕ್ಷೇತ್ರಗಳಿಗೆ ಒದಗಿಸಲಾಗುತ್ತಿತ್ತು. ಉದಾಹರಣೆಗೆ 1962ರಲ್ಲಿ ಸರ್ಕಾರ ಸುಮಾರು 14 ಲಕ್ಷ ಟನ್‌ಗಳಷ್ಟು ಬೀಜಗಳನ್ನು ಮಾರಿತು. 1965ರಲ್ಲಿ ವ್ಯವಸಾಯ ಕ್ಷೇತ್ರಗಳು 20 ಲಕ್ಷ ಟನ್ ಬೀಜಗಳನ್ನು ಒದಗಿಸಬೇಕೆಂದು ಸರ್ಕಾರವನ್ನು ಕೇಳಿಕೊಂಡುವು. ಅನೇಕ ವ್ಯವಸಾಯ ಕೇಂದ್ರಗಳಲ್ಲಿ ಸರ್ಕಾರಕ್ಕೆ ಧಾನ್ಯ ಕೊಟ್ಟ ಮೇಲೆ ಕೂಲಿ ಕೊಡಲು ಕೂಡ ಧಾನ್ಯಗಳು ಉಳಿಯುತ್ತಿರಲಿಲ್ಲ. ಇದರಿಂದ ರೈತರಿಗೆ ಅತೃಪ್ತಿ ಮತ್ತು ನಿರುತ್ಸಾಹ ಉಂಟಾಗಲು ಕಾರಣವಾಯಿತು. ಈ ವಿಷಯದಲ್ಲಿ ಕ್ರುಶ್ಚೋಫ್ ಕೂಡ ತಮ್ಮ ಧೋರಣೆಯನ್ನು ಬದಲಾಯಿಸಲಿಲ್ಲವೆಂದು ಒಪ್ಪಿಕೊಳ್ಳಬಹುದು.

7 ಪಕ್ಷದ ಧೋರಣೆಯಲ್ಲಿ ಬದಲಾವಣೆ ಆದ ಹೊರತು ವ್ಯವಸಾಯ ಕ್ಷೇತ್ರದಲ್ಲಿ ನಿರೀಕ್ಷಿಸಿದ ಹಾಗೆ ತ್ವರಿತವಾಗಿ ಪ್ರಗತಿ ಹೊಂದಲು ಸಾಧ್ಯವಿಲ್ಲ. ಕ್ರುಶ್ಚೋಫ್ ಪಕ್ಷದ ಧೋರಣೆಗೆ ಕಟ್ಟುಬಿದ್ದುದರಿಂದ ಅವರು ಕೂಡ ವಾಸ್ತವಿಕತೆಯನ್ನು ಅರಿತುಕೊಂಡು ಮಾರ್ಪಡಿಸಿಕೊಳ್ಳಲಾಗಲಿಲ್ಲ.

V

ಸ್ಟಾಲಿನರ 30 ವರ್ಷಗಳ ಅಧಿಕಾರದ ಫಲವಾಗಿ ಅವರ ಅನುಯಾಯಿಗಳು ಒಂದು ವಿಶಿಷ್ಟ ರೀತಿಯ ಆರ್ಥಿಕ ವ್ಯವಸ್ಥೆಗೆ ಉತ್ತರಾಧಿಕಾರಿಗಳಾಗಬೇಕಾಯಿತು. ಸೋವಿಯೆತ್ ದೇಶ ಪ್ರಪಂಚದಲ್ಲೇ ಎರಡನೆಯ ದೊಡ್ಡ ಕೈಗಾರಿಕಾ ರಾಷ್ಟ್ರವಾಗಿ ಬೆಳೆದಿತ್ತು. ಆದರೆ ಅದೇ ಸಮಯದಲ್ಲಿ ಹಿಂದುಳಿದ ವ್ಯವಸಾಯ ದೇಶವೂ ಆಗಿದ್ದ ಇಂಥ ಸಂದರ್ಭದಲ್ಲಿ ಸ್ಟಾಲಿನರ ಅನಂತರ ಬಂದ ನಾಯಕರಿಗೆ ಮೇಲ್ಕಂಡ ಸಮಸ್ಯೆಯನ್ನು ಬಗೆಹರಿಸಲು ಎರಡು ಮಾರ್ಗಗಳಿದ್ದವು: 1 ವ್ಯವಸಾಯಕ್ಷೇತ್ರದಲ್ಲಿ ಹೆಚ್ಚು ಬಂಡವಾಳ ಹಾಕಿ ಅಭಿವೃದ್ಧಿ ಮಾಡುವುದು. 2 ಕೈಗಾರಿಕೆಗಳನ್ನೇ ಮತ್ತಷ್ಟು ಅಭಿವೃದ್ಧಿಗೊಳಿಸಿ, ಉಳಿದ ಪಾಶ್ಚಾತ್ಯ ದೇಶಗಳಂತೆ ಪರದೇಶಗಳಿಂದ ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳುವುದು. ಅದರ ಮೂಲಕ ದೇಶದ ಆಹಾರ ಸಮಸ್ಯೆ ಪರಿಹರಿಸುವುದು.

ತಮ್ಮ ದೇಶದಲ್ಲಿ ಕೈಗಾರಿಕೆಯಲ್ಲಿ ಸಾಧಿಸಿದ ಹಾಗೆ ವ್ಯಸಾಯೋತ್ಪನ್ನದಲ್ಲಿ ಪ್ರಗತಿ ಸಾಧಿಸದಿದ್ದರೆ ಕಮ್ಯೂನಿಸ್ಟ್ ಸಿದ್ಧಾಂತಕ್ಕೆ ಅವಮಾನ ಮಾಡಿದಂತಾಗುತ್ತದೆ ಎಂದು ಸೋವಿಯೆತ್ ನಾಯಕರು ಭಾವಿಸಿ, ಏನೇ ಆದರೂ ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಸ್ವಯಂಪೂರ್ಣತೆ ಸಾಧಿಸಲು ಯತ್ನಿಸಿದರು. ಆದ್ದರಿಂದಲೇ ಕ್ರುಶ್ಚೋಫ್ ಬಹಳ ಸಂಪತ್ತನ್ನು ವ್ಯವಸಾಯದ ಅಭಿವೃದ್ಧಿಗಾಗಿ ವಿನಿಯೋಗಿಸಿದರು. ಆದರೆ 1963 ಮತ್ತು 1965ರಲ್ಲಿ ಉಂಟಾದ ಅಭಾವ ಪರಿಸ್ಥಿತಿಯಿಂದ ಅವರು ನಿರೀಕ್ಷಿಸಿದಷ್ಟು ಪ್ರತಿಫಲ ದೊರೆಯಲಿಲ್ಲ. ಈಗ ಕೋಸಿಗಿನರು ಕೂಡ ಕ್ರುಶ್ಚೋಫ್ ಹಾಗೆ ವ್ಯವಸಾಯದ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ತಾತ್ಕಾಲಿಕವಾಗಿ ಅಭಾವವನ್ನು ಹೋಗಲಾಡಿಸಲು ಪರದೇಶಗಳಿಂದ ಗೋದಿ ಆಮದು ಮಾಡಿಕೊಂಡರು. 1966ರಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಸುಮಾರು 160ರಿಂದ 165 ದಶಲಕ್ಷ ಟನ್‌ಗಳಷ್ಟು ಆಯಿತು ಎಂದು ಅಂದಾಜು ಮಾಡಲಾಗಿದೆ. ಇಂಥ

ಉತ್ಪಾದನೆ ಆದದ್ದು ವ್ಯವಸಾಯದ ಅಭಿವೃದ್ಧಿಕಾರ್ಯಗಳ ಪರಿಣಾಮ ಎಂದು ಭಾವಿಸಲಾಗಿದೆ. ಇದೇ ರೀತಿ ಸೈಜೀರಿಯಾ ಮತ್ತು ಕಜಕ್‌ಸ್ಥಾನ ಪ್ರದೇಶಗಳು ಸಂಪೂರ್ಣ ಅಭಿವೃದ್ಧಿ ಹೊಂದಿದರೆ ರಷ್ಯ ಸ್ವಯಂಪೂರ್ಣತೆ ಪಡೆಯುವುದಲ್ಲದೆ, ಇತರ ದೇಶಗಳಿಗೆ ಧಾನ್ಯ ರಫ್ತು ಮಾಡುವ ಶಕ್ತಿ ಪಡೆಯುವುದ ರಲ್ಲಿ ಸಂದೇಹವಿಲ್ಲ.

ಡಾ. ಅಬ್ದುಲ್ ಅಜೀಸ್

ಭಾರತದಲ್ಲಿ ಕೈಗಾರಿಕಾ ಸಂಬಂಧಗಳ ವ್ಯವಸ್ಥೆ

ಈ ಲೇಖನದಲ್ಲಿ ಭಾರತದಲ್ಲಿಯ ಕೈಗಾರಿಕಾ ಸಂಬಂಧಗಳ ವ್ಯವಸ್ಥೆಯ ಸ್ವಭಾವ ಹಾಗೂ ಈ ವ್ಯವಸ್ಥೆಯನ್ನು ಸ್ಥಾಪಿಸುವುದರಲ್ಲಿ ಸರ್ಕಾರ ವಹಿಸಿದ ಪಾತ್ರ—ಇವುಗಳನ್ನು ಕುರಿತು ವಿವೇಚಿಸಲಾಗುವುದು. ಮೊದಲು ಈ ಲೇಖನದಲ್ಲಿ 'ಕೈಗಾರಿಕಾ ಸಂಬಂಧಗಳು' ಹಾಗೂ 'ಕೈಗಾರಿಕಾ ಸಂಬಂಧಗಳ ವ್ಯವಸ್ಥೆ' ಎಂಬ ಪರಿಕಲ್ಪನೆಗಳನ್ನು ಯಾವ ಅರ್ಥದಲ್ಲಿ ಪ್ರಯೋಗಿಸಲಾಗಿದೆ ಎಂಬುದನ್ನು ವಿವೇಚಿಸುವುದು ಸೂಕ್ತ.

ಕೈಗಾರಿಕಾ ಸಂಬಂಧಗಳು

'ಕೈಗಾರಿಕಾ ಸಂಬಂಧಗಳು' ಎಂಬ ಪರಿಕಲ್ಪನೆಯನು ಸಾಮಾನ್ಯವಾಗಿ ರೂಢಿಯಲ್ಲಿ ಸಂಕುಚಿತ ಹಾಗೂ ನಿಷೇಧ ಅರ್ಥಗಳಲ್ಲಿ ವಿವರಿಸುವುದುಂಟು. ಉದಾಹರಣೆ, ಕೈಗಾರಿಕಾ ಸಂಬಂಧಗಳು ಕೆಟ್ಟಿವೆ ಅಥವಾ ಉತ್ತಮಗೊಂಡಿವೆ ಎಂದು ಹೇಳುವಾಗ ಕೈಗಾರಿಕಾ ವಿವಾದಗಳಲ್ಲಿ ಕಂಡುಬರುವ ಪ್ರವಣತೆಯನ್ನು (ಟ್ರೆಂಡ್) ಆಧಾರವಾಗಿಟ್ಟುಕೊಳ್ಳುತ್ತೇವೆ. ಹೀಗಾಗಿ ವಿವಾದಗಳಲ್ಲಿ ಏರುಮುಖದ ಅಥವಾ ಇಳಿಮುಖದ ಪ್ರವಣತೆ ಕಂಡುಬಂದಾಗ ಕ್ರಮವಾಗಿ ಕೈಗಾರಿಕಾ ಸಂಬಂಧಗಳು ಕೆಟ್ಟಿವೆ ಅಥವಾ ಉತ್ತಮಗೊಂಡಿವೆ ಎಂದು ಹೇಳುವುದುಂಟು. ಆದರೆ ವಿವಾದಗಳೇ ಇಲ್ಲದಿರುವ ಸ್ಥಿತಿಯನ್ನು ಉತ್ತಮಗೊಂಡ ಕೈಗಾರಿಕಾ ಸಂಬಂಧಗಳ ಸ್ಥಿತಿಯೆಂದು ವಿವರಿಸುವುದು ಅದರ ನಿಷೇಧ ಸ್ವರೂಪವನ್ನು ಎತ್ತಿ ಹಿಡಿದಂತೆಯೇ ಸರಿ. 'ಕೈಗಾರಿಕಾ ಸಂಬಂಧಗಳು' ಧನಸ್ವರೂಪವನ್ನು (ಪಾಸಿಟಿವ್) ಹೊಂದಿರುವುದರ ಜೊತೆಗೆ ವಿಶಾಲವಾದ ಅರ್ಥವನ್ನೂ ಹೊಂದಿದೆ ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಹೀಗೆ ಉತ್ತಮಗೊಂಡ ಔದ್ಯಮಿಕ ಸಂಬಂಧಗಳ ಪರಿಸ್ಥಿತಿ ವಿವಾದಗಳಿಲ್ಲದ್ದನ್ನು ಸೂಚಿಸುವುದರ ಜೊತೆಗೆ ಕಾರ್ಮಿಕರ ಮತ್ತು ಉದ್ಯಮಿಗಳ ನಡುವೆ ಇರುವ ಪರಸ್ಪರ ಅಭಿಮಾನ ಹಾಗೂ ಒಳ್ಳೆಯ ಬಾಂಧವ್ಯವನ್ನೂ ಸೂಚಿಸುತ ದೆ. ಆದ್ದರಿಂದ ಕೈಗಾರಿಕಾ ಸಂಬಂಧಗಳನ್ನು ಉತ್ತಮಪಡಿಸಬೇಕೆಂದು ಹೇಳುವುದಾದರೆ ಕಾರ್ಮಿಕರಲ್ಲೂ ಉದ್ಯಮಿಗಳಲ್ಲೂ ಪರಸ್ಪರ ಅಭಿಮಾನ ಹಾಗೂ ಬಾಂಧವ್ಯವನ್ನು ಪ್ರವರ್ತನಗೊಳಿಸಬೇಕೆಂದು ಅರ್ಥವಾಗುತ್ತದೆ. ಔದ್ಯಮಿಕ ಸಂಬಂಧಗಳನ್ನು ಈ ದೃಷ್ಟಿಯಿಂದ ನೋಡಿದ್ದೇ ಆದರೆ ಅವಕ್ಕೆ ವಿಶಾಲವಾದ ಅರ್ಥವನ್ನು ಕೊಟ್ಟಂತಾಗುತ್ತದೆ. ಹೀಗಾಗಿ ಔದ್ಯಮಿಕ ಸಂಬಂಧಗಳು ಕೇವಲ ಕಾರ್ಮಿಕ ಮತ್ತು ಉದ್ಯಮಿಗಳ ನಡುವಣ ಸೌಹಾರ್ದತೆಯನ್ನು ಸೂಚಿಸುವುದಲ್ಲದೆ ಕಾರ್ಮಿಕರ ಹಾಗೂ ಅವರ ಸಂಘದ ನಡುವಣ, ಕಾರ್ಮಿಕರ ಬೇರೆ ಬೇರೆ ಸಂಘಗಳ ನಡುವಣ ಹಾಗೂ ಕಾರ್ಮಿಕ ಸಂಘಗಳ ಮತ್ತು ಉದ್ಯಮಿಗಳ ಸಂಘಗಳ ನಡುವಣ ಸೌಹಾರ್ದತೆಯನ್ನು ಸೂಚಿಸುತ್ತದೆ.

ಔದ್ಯಮಿಕ ಸಂಬಂಧಗಳ ವ್ಯವಸ್ಥೆ

ಕೈಗಾರಿಕಾ ಸಂಬಂಧಗಳನ್ನು ಉತ್ತಮಪಡಿಸಬೇಕಾದರೆ ಮೇಲೆ ವಿವರಿಸಿದ ಸಂಬಂಧಗಳನ್ನು ಸರಿಯಾದ ರೀತಿಯಲ್ಲಿ ನಿಯಂತ್ರಿಸಬೇಕು. ಇದಕ್ಕಾಗಿ ಕಾರ್ಮಿಕರ, ಉದ್ಯಮಿಗಳ ಹಾಗೂ ಅವರ ಸಂಘ

ಗಳ ನಡವಳಿಕೆಯನ್ನು ವ್ಯವಸ್ಥೆಗೊಳಿಸುವ ನಿಯಮಗಳನ್ನು ರೂಪಿಸಬೇಕಾಗುತ್ತದೆ. ಇಂಥ ನಿಯಮಗಳ ಸಮುಚ್ಚಯವನ್ನೇ ಕೈಗಾರಿಕಾ ಸಂಬಂಧಗಳ ವ್ಯವಸ್ಥೆಯೆಂದು ಕರೆಯಲಾಗಿರುವುದು.

ಕೈಗಾರಿಕಾ ಸಂಬಂಧಗಳ ವ್ಯವಸ್ಥೆಯಲ್ಲಿಯ ಅಂಶಗಳು ಸ್ಥಳೀಯ ಸ್ಥಿತಿಗತಿಗನುಗುಣವಾಗಿ ಒಂದೊಂದು ದೇಶದಲ್ಲೂ ಯಾವುದೇ ದೇಶದ ಒಂದೊಂದು ಕೈಗಾರಿಕೆಯಲ್ಲೂ ಬೇರೆ ಬೇರೆಯಾಗಿರುವ ಸಂಭವವುಂಟು. ಆದರೂ ಈ ವ್ಯವಸ್ಥೆಯ ಗುರಿ ಒಂದೇ. ಅದೇನೆಂದರೆ ಕೈಗಾರಿಕಾ ಶಾಂತಿಯನ್ನು ಸ್ಥಾಪಿಸುವುದು. ಕೈಗಾರಿಕಾ ಶಾಂತಿಯನ್ನು ಕೈಗಾರಿಕಾ ಘರ್ಷಣೆ ಇಲ್ಲದಿರುವ ಪರಿಸ್ಥಿತಿಗೆ ಹೋಲಿಸುವುದನ್ನು ಬಿಡಬೇಕು. ಇಲ್ಲೂ 'ಕೈಗಾರಿಕಾ ಶಾಂತಿ'ಯ ಪರಿಕಲ್ಪನೆ ಕಾರ್ಮಿಕರ ಮತ್ತು ಉದ್ಯಮಿಗಳ ಹಾಗೂ ಅವರ ಸಂಘಗಳ ನಡುವಣ ಸೌಹಾರ್ದಯುತ ಸಂಬಂಧ ಪರಿಸ್ಥಿತಿಯನ್ನು ಸೂಚಿಸುತ್ತದೆಯೇ ಹೊರತು ಘರ್ಷಣೆಯಿಲ್ಲದ ಪರಿಸ್ಥಿತಿಯನ್ನು ಮಾತ್ರವಲ್ಲ ಎಂಬುದನ್ನು ಗಮನಿಸಬೇಕು.

ಸರ್ಕಾರದ ಪಾತ್ರ

ಕೈಗಾರಿಕಾ ಸಂಬಂಧಗಳ ವ್ಯವಸ್ಥೆಯನ್ನು ರೂಪಿಸಿದ ಮಾತ್ರಕ್ಕೆ ಕೈಗಾರಿಕೆಯಲ್ಲಿ ಶಾಂತಿ ಉದ್ಭವಿಸುವುದಿಲ್ಲ. ಕಾರ್ಮಿಕರ ಮತ್ತು ಉದ್ಯಮಿಗಳ ಸಂಬಂಧ ಘರ್ಷಣೆಯ ಹಂತದಿಂದ ಸೌಹಾರ್ದದ ಹಂತಕ್ಕೇರುವಂತೆ ಕೈಗಾರಿಕಾ ಸಂಬಂಧಗಳ ವ್ಯವಸ್ಥೆಯನ್ನು ನಿರ್ವಹಿಸಬೇಕಾಗುತ್ತದೆ. ಈಚೆಗೆ ಸರ್ಕಾರ ಈ ಹೊಣೆಯನ್ನು ಹೊತ್ತುಕೊಳ್ಳಲು ಪ್ರಾರಂಭಿಸಿದೆ. ಇದಕ್ಕೆ ಕಾರಣವಾದ ಅಂಶ, ಸರ್ಕಾರ ಕಾರ್ಮಿಕರ ಹಾಗೂ ಉದ್ಯಮಿಗಳ ಹಿತವನ್ನು ರಕ್ಷಿಸುವುದು ಹಾಗೂ ಕಾರ್ಮಿಕರ ಮತ್ತು ಉದ್ಯಮಿಗಳ ಒಕ್ಕೂಟದ ಶ್ರಮದ ಫಲವಾಗಿ ಬರುವ ವಸ್ತುಗಳನ್ನು ತಕ್ಕುದಾದ ಬೆಲೆಯಲ್ಲಿ ಬಳಕೆದಾರನಿಗೆ ಸಿಗುವಂತೆ ನಿಶ್ಚಿತಪಡಿಸುವುದು ಸರ್ಕಾರದ ಕರ್ತವ್ಯ ಎಂಬುದು. ಸರ್ಕಾರ ಈ ಬಗ್ಗೆ ಎಷ್ಟರಮಟ್ಟಿಗೆ ಆಸ್ಥೆ ವಹಿಸುತ್ತದೆ ಎಂಬುದು ಎರಡು ಅಂಶಗಳ ಮೇಲೆ ನಿಂತಿದೆ. 1 ರಾಷ್ಟ್ರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಯಾವ ಹಂತದಲ್ಲಿದೆ ಎಂಬುದರ ಮೇಲೆ ಹಾಗೂ 2 ರಾಷ್ಟ್ರದ ರಾಜಕೀಯ ವ್ಯವಸ್ಥೆಯ ಸ್ವಭಾವವೇನು ಎಂಬುದರ ಮೇಲೆ. ಹೀಗೆ ಕೈಗಾರಿಕಾ ವಿವಾದಗಳು ಹಿಂದುಳಿದ ರಾಷ್ಟ್ರಗಳ ಮೇಲೆ ಮಾಡುವ ಪರಿಣಾಮವನ್ನು ಮುಂದುವರಿದ ರಾಷ್ಟ್ರಗಳ ಮೇಲೆ ಮಾಡುವುದಿಲ್ಲ. ಆದ್ದರಿಂದ ಮುಂದುವರಿದ ರಾಷ್ಟ್ರಗಳಲ್ಲಿ ಈ ಕ್ಷೇತ್ರದಲ್ಲಿ ಸರ್ಕಾರದ ಪ್ರವೇಶನ ಅಷ್ಟು ಹೆಚ್ಚಿನದಾಗಿರುವುದಿಲ್ಲ. ಹಾಗೆಯೆ ಅಂಥ ರಾಷ್ಟ್ರ ಸ್ವತಂತ್ರ ಸಮಾಜವಾಗಿದ್ದರಂತೂ ಸರ್ಕಾರದ ಪ್ರವೇಶನ ಮತ್ತೂ ಕಡಿಮೆ. ಆದರೆ ಸಮಾಜವಾದಿ ರಾಷ್ಟ್ರಗಳಲ್ಲಿ ಕೈಗಾರಿಕಾ ಸಂಬಂಧಗಳ ವ್ಯವಸ್ಥೆಯನ್ನು ರೂಪಿಸುವುದರಲ್ಲಿ ಹಾಗೂ ಅದನ್ನು ನಿಯಂತ್ರಿಸುವುದರಲ್ಲಿ ಸರ್ಕಾರ ವಹಿಸುವ ಪಾತ್ರ ಅಧಿಕವಾಗಿರುತ್ತದೆ.

ಭಾರತದಲ್ಲಿ ಸರ್ಕಾರದ ಪಾತ್ರ

ಆದರೆ ಅಭಿವೃದ್ಧಿ ಹೊಂದುತ್ತಿರುವಂಥ ಆರ್ಥಿಕ ವ್ಯವಸ್ಥೆಗಳಲ್ಲಿ ಕೈಗಾರಿಕಾ ಸಂಬಂಧಗಳ ವ್ಯವಸ್ಥೆಯನ್ನು ರೂಪಿಸುವ ಹಾಗೂ ಅದನ್ನು ನಿಯಂತ್ರಿಸುವ ಬಗ್ಗೆ ಸರ್ಕಾರ ವಹಿಸಬೇಕಾದ ಪಾತ್ರವೇನೆಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಏಕೆಂದರೆ ಒಂದು ಕಡೆ ಆರ್ಥಿಕ ಅಭಿವೃದ್ಧಿಯನ್ನು ಪ್ರವರ್ತನಗೊಳಿಸುವ ಆವಶ್ಯಕತೆಯಿಂದಾಗಿ ಸರ್ಕಾರ ಕೈಗಾರಿಕಾ ಸಂಬಂಧಗಳನ್ನು ರೂಪಿಸುವ ಹಾಗೂ ನಿಯಂತ್ರಿಸುವ ಕಾರ್ಯಕ್ಷೇತ್ರದಲ್ಲಿ ಹೆಚ್ಚಾಗಿ ಪ್ರವೇಶಿಸುವುದು ಅವಶ್ಯವೆನಿಸಿದರೆ. ಮತ್ತೊಂದು ಕಡೆ ನಾವು ಪ್ರಜಾಪ್ರಭುತ್ವವನ್ನುಳ್ಳ ರಾಜಕೀಯ ವ್ಯವಸ್ಥೆಯನ್ನು ಆರಿಸಿಕೊಂಡಿರುವ ಕಾರಣ ಪ್ರತಿ ವ್ಯಕ್ತಿ ಸಂಘಕ್ಕೂ ಮೂಲಭೂತವಾದ ಸ್ವಾತಂತ್ರ್ಯವನ್ನು ನೀಡಬೇಕೆಂಬ ಆವಶ್ಯಕತೆಯಿಂದಾಗಿ ಸರ್ಕಾರ ಅತಿಯಾಗಿ ಈ ಕ್ಷೇತ್ರದಲ್ಲಿ ಪ್ರವೇಶಿಸುವುದು ಹಿತಕರವಲ್ಲವೆನಿಸುತ್ತದೆ. ಹೀಗಾಗಿ ಒಂದು ಕಡೆ ಕಾರ್ಮಿಕರೂ ಉದ್ಯಮಿಗಳೂ ರಾಷ್ಟ್ರದ ಉತ್ಪಾದನ ಗತಿಯನ್ನು ತಡೆಯದಂತೆ ನೋಡಿಕೊಳ್ಳಬೇಕು. ಮತ್ತೊಂದು ಕಡೆ ಈ ಪಕ್ಷಗಳಲ್ಲಿಯ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳು ಪ್ರವರ್ತನೆಗೊಳ್ಳುವಂತೆಯೂ ನೋಡಿಕೊಳ್ಳಬೇಕು. ಈ ಬಗ್ಗೆ ಸರ್ಕಾರ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ನೋಡೋಣ.

ಭಾರತ ಸರ್ಕಾರ ರೂಪಿಸಿರುವ ಕೈಗಾರಿಕಾ ಸಂಬಂಧಗಳ ವ್ಯವಸ್ಥೆ ಕಾನೂನು ರೀತಿಯದು ಹಾಗೂ ಸ್ವಯಂಪ್ರೇರಿತವಾದುದು ಎಂದು ಎರಡಾಗಿ ವಿಂಗಡಿಸಬಹುದು. ಮೊದಲನೆಯದು 1947

ರಲ್ಲಿ ತಂದಂಥ ಕೈಗಾರಿಕಾ ವಿವಾದಗಳ ಕಾಯಿದೆಯ ಪ್ರಕಾರ ರೂಪುಗೊಂಡಿತು. ಈ ಕಾಯಿದೆಯ ಪ್ರಕಾರ ವಿವಾದಗಳನ್ನು ತಡೆಗಟ್ಟುವುದರಲ್ಲಿ ಹಾಗೂ ಅವನ್ನು ಇತ್ಯರ್ಥಗೊಳಿಸುವುದರಲ್ಲಿ ಉದ್ಯುಕ್ತವಾಗುವ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದುವು. ವಿವಾದಗಳನ್ನು ಮುಂದಾಗಿ ತಡೆಯುವ ಕಾಯಕವನ್ನು ಕೈಗೊಳ್ಳುವ ಸಂಸ್ಥೆಯೆಂದರೆ ಕಾರ್ಖಾನೆಯ ಸಮಿತಿ (ವರ್ಕ್ಸ್ ಕಮಿಟಿ). ಈ ಸಮಿತಿಯಲ್ಲಿ ಕಾರ್ಮಿಕರ ಹಾಗೂ ಉದ್ಯಮಿಗಳ ಪ್ರತಿನಿಧಿಗಳು ಕೂಡಿದ್ದು ಕಾರ್ಖಾನೆಯಲ್ಲಿ ಎರಡೂ ಪಕ್ಷಗಳಿಗೆ ಸಂಬಂಧಿಸಿದಂತೆ ಉದ್ಭವಿಸಬಹುದಾದ ಸಮಸ್ಯೆಗಳನ್ನು ಚರ್ಚಿಸಿ ಮುಂದೆ ಉಂಟಾಗಬಹುದಾದ ವಿವಾದಗಳನ್ನು ತಡೆಯುವುದರಲ್ಲಿ ಸಮರ್ಥವಾಗುತ್ತದೆ. ಕಾನೂನಿನ ಪ್ರಕಾರ ವಿವಾದಗಳನ್ನು ಇತ್ಯರ್ಥಗೊಳಿಸಲು ಒದಗಿಸಿರುವ ಮುಖ್ಯವಾದ ಸಂಸ್ಥೆಗಳೆಂದರೆ ರಾಜಿ ನ್ಯಾಯ ಹಾಗೂ ನ್ಯಾಯನಿರ್ಣಯ(ಅಡ್ಜುಡಿಕೇಷನ್), ಈ ವ್ಯವಸ್ಥೆಯ ಪ್ರಕಾರ ವಿವಾದವನ್ನು ಪರಸ್ಪರ ಸಂಧಾನದ ಮೂಲಕ ಕಾರ್ಮಿಕರೂ ಉದ್ಯಮಿಗಳೂ ಇತ್ಯರ್ಥಗೊಳಿಸಿಕೊಳ್ಳುವುದರಲ್ಲಿ ಸಮರ್ಥವಾಗದಿದ್ದಲ್ಲಿ ಅವರು ಸರ್ಕಾರವನ್ನು ರಾಜಿ ನ್ಯಾಯಕ್ಕಾಗಿ ಕೋರಿಕೊಳ್ಳಬೇಕು. ಸರ್ಕಾರ ಸಂಧಾನಾಧಿಕಾರಿಯ (ಕಾನ್ಸಿಲಿಯೇಷನ್ ಆಫೀಸರ್) ಸೇವೆಯನ್ನು ಒದಗಿಸುತ್ತದೆ. ಒಂದು ವೇಳೆ ಈ ಮಟ್ಟದಲ್ಲೂ ಬಾಂಧವ್ಯ ಇತ್ಯರ್ಥಗೊಳ್ಳದಿದ್ದಲ್ಲಿ ಸರ್ಕಾರ ತೀರ್ಪು ನ್ಯಾಯವನ್ನು ಒದಗಿಸುವ ದೃಷ್ಟಿಯಿಂದ ವಿವಾದವನ್ನು ಕೈಗಾರಿಕಾ ಕೋರ್ಟು ಇಲ್ಲವೆ ಕೈಗಾರಿಕಾ ಟ್ರಿಬ್ಯೂನಲ್‌ಗೆ ವಹಿಸಿಕೊಡುತ್ತದೆ. ಎರಡು ಪಕ್ಷಗಳ ವಾದಗಳನ್ನು ಗಮನಿಸಿ ಇಲ್ಲಿ ತೀರ್ಪನ್ನು ನೀಡಲಾಗುವುದು. ಈ ತೀರ್ಪನ್ನು (ಅವಾರ್ಡ್) ಎರಡೂ ಪಕ್ಷಗಳು ಕಡ್ಡಾಯವಾಗಿ ಒಪ್ಪಿಕೊಳ್ಳಬೇಕು. ಈ ಕಾರಣದಿಂದಲೇ ಭಾರತದಲ್ಲಿನ ನ್ಯಾಯನಿರ್ಣಯವನ್ನು ಕಡ್ಡಾಯ ನ್ಯಾಯನಿರ್ಣಯ (ಕಂಪಲ್ಸರಿ ಆರ್ಬಿಟ್ರೇಷನ್) ಎಂದು ಕರೆಯುವುದು ವಾಡಿಕೆಯಾಗಿ ಬಂದಿದೆ.

ಕಾನೂನು ರೀತಿಯ ವ್ಯವಸ್ಥೆಯ ಜೊತೆಗೆ ಕಾರ್ಮಿಕರೂ ಉದ್ಯಮಿಗಳೂ ವಿವಾದಗಳನ್ನು ತಮ್ಮ ತಮ್ಮಲ್ಲೇ ಇತ್ಯರ್ಥ ಮಾಡಿಕೊಳ್ಳುವಂತೆ ಅನುವಾಗುವ ಸ್ವಯಂಪ್ರೇರಿತ ವ್ಯವಸ್ಥೆಗಳನ್ನು ರೂಪಿಸಿಕೊಡುವುದರಲ್ಲಿ ಸರ್ಕಾರ ಸಾಕಷ್ಟು ಆಸ್ಥೆವಹಿಸಿದೆ. ಈ ವ್ಯವಸ್ಥೆ ಸಾಲಿಯಾನ ನಡೆಯುವ ಭಾರತೀಯ ಕಾರ್ಮಿಕ ಸಮ್ಮೇಳನದಲ್ಲಾಗುವ ತ್ರಿಪಕ್ಷೀಯ ಸಮಾಲೋಚನೆಯ ಫಲವಾಗಿ ಉಂಟಾಗುವಂಥದು. ಇಲ್ಲಿ ವಿವಾದಗಳನ್ನು ಇತ್ಯರ್ಥಗೊಳಿಸುವುದಕ್ಕಿಂತ ಮಿಗಿಲಾಗಿ ಅವುಗಳನ್ನು ತಡೆಗಟ್ಟುವ ವಿಧಾನಗಳನ್ನು ಸೃಷ್ಟಿಸುವ ಪ್ರಯತ್ನ ನಡೆಯುತ್ತದೆ. ಹೀಗಾಗಿ ಈ ವ್ಯವಸ್ಥೆ ಇಲ್ಲಿಯ ವರೆಗೆ ಕಾರ್ಮಿಕರ ಸಂಘಗಳನ್ನು ಗುರುತಿಸುವ ವಿಧಾನವನ್ನು, ಕುಂದುಕೊರತೆಗಳನ್ನು ತೊಡೆಯುವ ಕಾರ್ಯವಿಧಾನವನ್ನು ರೂಢಿಸುವ, ಶಿಸ್ತಿನ ಸಂಹಿತೆಯನ್ನು ತಯಾರಿಸುವ. ಸಂಯುಕ್ತ ವ್ಯವಸ್ಥಾಪನ ಸಮಿತಿಗಳನ್ನು ಸ್ಥಾಪಿಸುವ, ಒಡಂಬಡಿಕೆಗಳು. ತೀರ್ಪುಗಳು ಮುಂತಾದವನ್ನು ಜಾರಿಯಲ್ಲಿ ತರುವ ಹಾಗೂ ವೇತನ ಬೋರ್ಡುಗಳನ್ನು ನೇಮಿಸುವ ಅನುಕೂಲಗಳನ್ನು ಒದಗಿಸಿಕೊಟ್ಟಿದೆ.

ನ್ಯಾಯನಿರ್ಣಯದ ಪ್ರಾಮುಖ್ಯ

ಭಾರತದಲ್ಲಿ ರೂಪಿತವಾಗಿರುವ ಔದ್ಯಮಿಕ ಸಂಬಂಧಗಳ ವ್ಯವಸ್ಥೆಯ ಅವಲೋಕನದಿಂದ ನಮ್ಮಲ್ಲಿ ಗಮನಕ್ಕೆ ಬರುವ ಒಂದು ಅಂಶವೇನೆಂದರೆ, ಇಲ್ಲಿ ನ್ಯಾಯನಿರ್ಣಯಕ್ಕೆ ಹೆಚ್ಚು ಪ್ರಾಮುಖ್ಯ ಕೊಡಲಾಗಿದೆ ಎಂಬುದು. ವಿವಾದಗಳನ್ನು ಇತ್ಯರ್ಥಗೊಳಿಸುವ ವ್ಯವಸ್ಥೆಯಲ್ಲಿ ನ್ಯಾಯನಿರ್ಣಯವೇ ಪ್ರಧಾನವಾದುದು. ಆದರೆ ನ್ಯಾಯನಿರ್ಣಯಪ್ರಧಾನವಾದ ಔದ್ಯಮಿಕ ಸಂಬಂಧಗಳ ವ್ಯವಸ್ಥೆ ಸಮರ್ಪಕವಾದ್ದಲ್ಲವೆಂಬುವನ್ನು ಅನೇಕ ಕಾರಣಗಳಿಂದಾಗಿ ಎಲ್ಲರೂ ಒಪ್ಪಿದ್ದಾರೆ. ಮೊದಲನೆಯದಾಗಿ ಅನೇಕ ವಿವಾದಗಳಲ್ಲಿ ಒಳಗೊಂಡಿರುವ ಸಮಸ್ಯೆಗಳು ಕಾನೂನುಬದ್ಧ ಸ್ವರೂಪದವಲ್ಲ; ಆದ್ದರಿಂದ ಅವುಗಳನ್ನು ನ್ಯಾಯಿಕ (ಜ್ಯುಡಿಷಿಯಲ್) ಕಾರ್ಯ ವಿಧಾನದ ಆಧಾರದ ಮೇಲೆ ಇತ್ಯರ್ಥಗೊಳಿಸಲು ಸಾಧ್ಯವಿಲ್ಲ. ಏಕೆಂದರೆ ಈ ಸಮಸ್ಯೆಗಳು ಕೈಗಾರಿಕೆಯ ಪಾವತಿ ಶಕ್ತಿ, ಜೀವನ ಮಟ್ಟ, ಉತ್ಪಾದನಸಾಮರ್ಥ್ಯ ಮತ್ತು ವೇತನಗಳೊಡನಿರುವ ಜಟಿಲ ಸಂಬಂಧ ಹಾಗೂ ಪಕ್ಷಗಳಲ್ಲಿಯ ವ್ಯವಸ್ಥಾ ಸ್ವರೂಪದ ಶಕ್ತಿಗಳಲ್ಲಿ ಕಂಡುಬರುವ ಅಸಮಾನತೆ ಇವೇ ಮೊದಲಾದ ಆರ್ಥಿಕ ಅಂಶಗಳು ಒಳಗೊಂಡಿರುತ್ತವೆ. ಆದಕಾರಣ ಈ ಸಮಸ್ಯೆಗಳನ್ನು ಸಾಮಾನ್ಯ ಸೂತ್ರಗಳಿಂದಾಗಲಿ, ಕೋರ್ಟುಕಾಯಿದೆಗಳಿಂದಾಗಲಿ, ಪೂರ್ವನಿದರ್ಶನ

ಗಳಿಂದಾಗಿ ಬಿಡಿಸುವುದು ಸಮರ್ಪಕವಲ್ಲ. ಎರಡನೆಯದಾಗಿ, ಶ್ರೀ ವಿ. ವಿ. ಗಿರಿಯವರು ಹೇಳುವಂತೆ ಕೋರ್ಟು ವ್ಯವಹಾರವನ್ನು ಉತ್ತೇಜಿಸುವಂಥ ತೀರ್ಪು ಶಾಶ್ವತವಾಗಿ ಕೈಗಾರಿಕೆಯಲ್ಲಿ ಶಾಂತಿಯನ್ನು ಸ್ಥಾಪಿಸುವುದರಲ್ಲಿ ಸಮರ್ಥವಾದ ನ್ಯಾಯವ್ಯವಸ್ಥೆಯೆನಿಸುವುದಿಲ್ಲ. ಈ ವ್ಯವಸ್ಥೆ ಕಾರ್ಮಿಕ ಸಂಘಗಳ ಬೆಳೆವಣಿಗೆಗೆ ಮತ್ತು ಸಾಮೂಹಿಕ ಚೌಕಾಸಿಯ ವೃದ್ಧಿಗೆ ಅನುವಾಗುವುದಿಲ್ಲವೆಂಬುದೂ ಅವರ ವಾದ. ಹೀಗಾಗಿ ನ್ಯಾಯನಿರ್ಣಯವನ್ನು ಎರಡು ಪಕ್ಷಗಳ ಮೇಲೂ ಕಡ್ಡಾಯವಾಗಿ ಹೇರಲಾಗುವ ಕಾರಣ, ಅದು ಒಂದು ಪಕ್ಷದ ಪರವಾಗಿದ್ದರೆ ಮತ್ತೊಂದು ಪಕ್ಷಕ್ಕೆ ಹಿತಕರವಾಗಿರಲಾರದು. ಆಗ ಒಂದು ಪಕ್ಷ ಗೆದ್ದ ಪಕ್ಷದಂತೆಯೂ ಮತ್ತೊಂದು ಸೋತ ಪಕ್ಷದಂತೆಯೂ ಕಾರ್ಖಾನೆಗೆ ಹಿಂದಿರುಗುವುದು ಸಹಜ. ಸೋತ ಪಕ್ಷ ತನ್ನ ನಷ್ಟವನ್ನು ತುಂಬಿಕೊಳ್ಳುವ ಮುಂದಿನ ಅವಕಾಶವನ್ನು ಕಾಯುವುದು ಸ್ವಾಭಾವಿಕವೇ. ಇಂಥ ಸ್ಥಿತಿಯಲ್ಲಿ ನ್ಯಾಯನಿರ್ಣಯ ವ್ಯವಸ್ಥೆಯಿಂದ ಶಾಶ್ವತ ಶಾಂತಿಯನ್ನು ನಿರೀಕ್ಷಿಸುವುದು ಕಷ್ಟ. ಹಾಗೂ ಎಲ್ಲಾ ಸಮಸ್ಯೆಗಳು ಹೇಗೂ ತೀರ್ಪು ನ್ಯಾಯದ ಮೂಲಕ ಇತ್ಯರ್ಥಗೊಳ್ಳುವುದಿಲ್ಲ ಎಂಬ ಕಾರಣದಿಂದ ಕಾರ್ಮಿಕ ಸಂಘಗಳಿಗೆ ಸ್ವಯಂಪ್ರೇರಿತ ಕ್ರಮಗಳನ್ನು ಉಪಯೋಗಿಸಿಕೊಂಡು ವಿವಾದಗಳನ್ನು ಇತ್ಯರ್ಥ ಮಾಡಿಕೊಳ್ಳುವ ಪ್ರೇರಣೆಯೇ ಇಲ್ಲದಂತಾಗುತ್ತದೆ. ಆದಕಾರಣ ಸಾಮೂಹಿಕ ಚೌಕಾಸಿ ವ್ಯವಸ್ಥೆ ವೃದ್ಧಿ ಹೊಂದದೆ ಹೋಗಬಹುದು.

ನ್ಯಾಯನಿರ್ಣಯ ವ್ಯವಸ್ಥೆಯಲ್ಲಿ ಮೇಲೆ ಹೇಳಿದಂತೆ ನ್ಯೂನತೆಗಳಿರುವುದರಿಂದ ವಿವಾದಗಳನ್ನು ಇತ್ಯರ್ಥಗೊಳಿಸುವ ಬೇರೆ ಕ್ರಮಗಳನ್ನು ಅನುಸರಿಸಬೇಕೆಂದು ಇದರಿಂದ ಅರ್ಥವಾಗುತ್ತದೆ. ಬೇರೆ ಯಾವುದೇ ನೂತನ ಕ್ರಮವನ್ನು ರೂಪಿಸುವಾಗ ಎರಡು ಅಂಶಗಳನ್ನು ಗಮನಿಸುವುದು ಸೂಕ್ತ. ಒಂದನೆಯದಾಗಿ, ಅಂಥ ಕ್ರಮದಿಂದ ಹೊರಡುವ ತೀರ್ಮಾನ ಕಾರ್ಮಿಕ ಹಾಗೂ ಉದ್ಯಮಿಗಳ ಒಪ್ಪಿಗೆಯನ್ನುಳ್ಳದ್ದಾಗಿದ್ದು ಅವರು ಆ ತೀರ್ಪಿಗೆ ಸ್ವಯಂಪ್ರೇರಿತವಾಗಿ ಕಟ್ಟುಬೀಳುವಂತಿರಬೇಕು. ಆಗಲೇ ಕೈಗಾರಿಕೆಯಲ್ಲಿ ಶಾಶ್ವತ ಶಾಂತಿ ನೆಲೆಸಲು ಸಾಧ್ಯವುಂಟಾಗುತ್ತದೆ. ಎರಡನೆಯದಾಗಿ, ತೀರ್ಪು ಕೊಡುವ ವ್ಯವಸ್ಥೆಯ ರಚನೆ ಹೇಗಿರಬೇಕೆಂದರೆ ಅಲ್ಲಿ ಸಮಸ್ಯೆಗಳನ್ನು ಕೇವಲ ಕಾನೂನಿನ ದೃಷ್ಟಿಯಿಂದಲೇ ನೋಡುವಂಥದಿರದೆ ಸಮಸ್ಯೆಗಳಲ್ಲಿ ಅಡಕವಾಗಿರುವ ಆರ್ಥಿಕ ಹಾಗೂ ಮಾನವೀಯ ಅಂಶಗಳನ್ನು ಗಮನಕ್ಕೆ ತಂದುಕೊಂಡು ತೀರ್ಮಾನ ನೀಡಲು ಅವಕಾಶವಿರಬೇಕು.

ಸ್ವಯಂಪ್ರೇರಿತ ಕ್ರಮಗಳ ಆವಶ್ಯಕತೆ

ಮೇಲೆ ನಿರೂಪಿಸಿದ ನೂತನ ವ್ಯವಸ್ಥೆಯ ಆವಶ್ಯಕತೆಗಳನ್ನು ಗಮನಿಸಿದರೆ ನಾವು ಸ್ವಯಂಪ್ರೇರಿತ ಔದ್ಯಮಿಕ ಸಂಬಂಧಗಳ ವ್ಯವಸ್ಥೆಯನ್ನು ರಚಿಸಬೇಕು ಎಂಬುದು ತಿಳಿದುಬರುತ್ತದೆ. ಎಂದರೆ ನಮ್ಮ ನೂತನ ವ್ಯವಸ್ಥೆಯಲ್ಲಿ ತೀರ್ಪು ನ್ಯಾಯಕ್ರಮಕ್ಕಿಂತ ಸಾಮೂಹಿಕ ಚೌಕಾಸಿ, ಪರಸ್ಪರ ಸಂಧಾನಕ್ರಮ ಹಾಗೂ ಸ್ವಯಂಪ್ರೇರಿತ ಪಂಚಾಯತಿಗಳು (ವಾಲಂಟರಿ ಆರ್ಬಿಟ್ರೇಷನ್) ಪ್ರಾಮುಖ್ಯ ಪಡೆದಿರಬೇಕು. ಆದರೆ ಭಾರತದಲ್ಲಿ ಸ್ವಯಂಪ್ರೇರಿತ ಕ್ರಮಗಳು ಯಶಸ್ವಿಯಾಗಿ ಕಾರ್ಯ ನಡೆಸಲು ಆವಶ್ಯಕವಾದ ಅಂಶಗಳ ಕೊರತೆಯಿದೆ ಎಂಬ ಒಂದು ಭಾವನೆ ಬೆಳೆದು ಬಂದಿದೆ. ಉದಾಹರಣೆಗೆ ಸಾಮೂಹಿಕ ಚೌಕಾಸಿ ಹಾಗೂ ಸ್ವಯಂಪ್ರೇರಿತ ಪಂಚಾಯತಿಗಳು ಯಶಸ್ವಿಯಾಗಬೇಕಾದಲ್ಲಿ ಆವಶ್ಯಕವಾದ ಅಂಶಗಳು ಯಾವುವೆಂದರೆ ವೃದ್ಧಿ ಹೊಂದಿದ ಕಾರ್ಮಿಕ ಸಂಘಗಳು, ಕಾರ್ಮಿಕರಲ್ಲೂ ಉದ್ಯಮಿಗಳಲ್ಲೂ ಹಾಗೂ ಅವರಿಬ್ಬರ ಸಂಘಗಳಲ್ಲೂ ಪರಸ್ಪರ ಸೌಹಾರ್ದ ಮತ್ತು ಕಾರ್ಮಿಕ ವೃಂದದಲ್ಲಿ ಏಕತೆ. ಆದರೆ ಭಾರತದಲ್ಲಿ ಕಾರ್ಮಿಕ ಸಂಘಗಳು ಅಷ್ಟಾಗಿ ವೃದ್ಧಿ ಹೊಂದಿಲ್ಲ. ಬಹುಪಾಲು ಕಾರ್ಮಿಕರು ಸಂಘಗಳ ಸದಸ್ಯರಾಗಿಲ್ಲ. ಅವರಲ್ಲಿ ಏಕತೆ ಏರ್ಪಟ್ಟಿಲ್ಲ ಹಾಗೂ ಸದಸ್ಯರಾಗಿರುವ ಕಾರ್ಮಿಕರಲ್ಲೇ ಒಡಕುಗಳುಂಟಾಗಿವೆ. ಪ್ರತಿಸ್ಪರ್ಧಿ ಸಂಘಗಳಿಗೆ ಅವಕಾಶ ಮಾಡಿಕೊಡಲಾಗಿದೆ. ಈ ಪರಿಸ್ಥಿತಿಯಲ್ಲಿ ಸಾಮೂಹಿಕ ಚೌಕಾಸಿಯಾಗಲಿ ಸ್ವಯಂಪ್ರೇರಿತ ಪಂಚಾಯತಿಯಾಗಲಿ ಯಶಸ್ವಿಯಾಗುವುದು ಕಷ್ಟ.

ಹೀಗಾಗಿ ಸಾಮೂಹಿಕ ಚೌಕಾಸಿ ಮತ್ತು ಸ್ವಯಂಪ್ರೇರಿತ ಪಂಚಾಯತಿ ಕ್ರಮಗಳು ನ್ಯಾಯ ನಿರ್ಣಯಕ್ಕಿಂತ ಮಿಗಿಲಾದರೂ ಆವಶ್ಯಕ ವಾತಾವರಣವಿಲ್ಲದ ಕಾರಣ ಅವನ್ನು ಅನುಷ್ಠಾನಕ್ಕೆ ತರಲು ಸಾಧ್ಯವಿಲ್ಲವೆಂದಾಗುತ್ತದೆ. ಆದರೆ ಇಲ್ಲಿ ಗಮನಿಸಬೇಕಾದುದೇನೆಂದರೆ ಅಂಥ ವಾತಾವರಣ ಸೃಷ್ಟಿ

ಯಾಗುವ ತನಕ ಈ ಕ್ರಮಗಳನ್ನು ಜಾರಿಗೆ ತರದೆ ಇಟ್ಟುಕೊಳ್ಳುವುದು ಅರ್ಥವಿಲ್ಲದ್ದು. ಏಕೆಂದರೆ ನ್ಯಾಯ ನಿರ್ಣಯ ಎಲ್ಲಿಯ ವರೆಗೆ ಮುಂದುವರಿಯುತ್ತದೆಯೋ ಅಲ್ಲಿಯ ತನಕ ಅಂಥ ವಾತಾವರಣ ಸೃಷ್ಟಿ ಯಾಗುವುದು ಸಾಧ್ಯವಿಲ್ಲ ಎಂಬ ಒಂದು ವಾದವಿದೆ. ಹೀಗೆ ಸಾಮೂಹಿಕ ಚೌಕಾಸಿ ವೃದ್ಧಿ ಹೊಂದ ಬೇಕಾದರೆ ಎರಡು ಅಂಶಗಳ ಆವಶ್ಯಕತೆ ಉಂಟಾಗುತ್ತದೆ. ಒಂದನೆಯದಾಗಿ, ಪರಸ್ಪರ ಸಂಧಾನ ಮುರಿದ ಪಕ್ಷದಲ್ಲಿ ಕಾರ್ಮಿಕರಿಗೂ ಉದ್ಯಮಿಗಳಿಗೂ ಕೆಲಸ ನಿಲುಗಡೆ ಮಾಡುವ ಹಕ್ಕು ಇರಬೇಕು. ಕೆಲಸ ನಿಲುಗಡೆಯಿಂದುಂಟಾಗುವ ಪರಿಣಾಮಗಳು ಎರಡೂ ಪಕ್ಷಗಳನ್ನು ಮತ್ತೆ ಸಂಧಾನ ಕ್ರಮವನ್ನು ಮುಂದುವರಿಸಿ ವಿವಾದಗಳನ್ನು ಸಾಮೂಹಿಕ ಚೌಕಾಸಿಯ ಮೂಲಕ ಇತ್ಯರ್ಥ ಮಾಡಿಕೊಳ್ಳುವಂತೆ ಕಡ್ಡಾಯ ಪಡಿಸುವುವು. ಎರಡನೆಯದಾಗಿ, ಎಲ್ಲ ವಿವಾದಗಳು ಪರಸ್ಪರ ಸಂಧಾನ ಕ್ರಮದ ಮೂಲಕ ಇತ್ಯರ್ಥಗೊಳ್ಳುವಂತಿರಬೇಕು. ಈ ಎರಡು ಕಟ್ಟುಪಾಡುಗಳನ್ನು ಪಾಲಿಸಿದ ಪಕ್ಷದಲ್ಲಿ ಮಾತ್ರ ಸಾಮೂಹಿಕ ಚೌಕಾಸಿ ವೃದ್ಧಿ ಹೊಂದುವುದು ಸಾಧ್ಯ. ಆದರೆ ನ್ಯಾಯನಿರ್ಣಯ ಕ್ರಮ ಪ್ರಮುಖವಾಗಿರುವ ಕೈಗಾರಿಕಾ ಸಂಬಂಧಗಳ ವ್ಯವಸ್ಥೆ, ಮುಷ್ಕರ ಹೂಡಿ ಕೆಲಸ ನಿಲುಗಡೆ ಮಾಡುವ ಕಾರ್ಮಿಕರ ಹಕ್ಕನ್ನು ಕಸಿದುಕೊಳ್ಳುತ್ತದೆ. ಏಕೆಂದರೆ ಮುಷ್ಕರ ಉಂಟಾಗುವ ಸುಳಿವು ಸಿಕ್ಕಿದ ಕೂಡಲೇ ಸರ್ಕಾರ ಕಾಯಿದೆ ಗನುಸಾರವಾಗಿ ವಿವಾದವನ್ನು ತೀರ್ಪು ನ್ಯಾಯಕ್ಕೆ ವಹಿಸಿಕೊಡಬಹುದು. ವಿವಾದವನ್ನು ನ್ಯಾಯ ನಿರ್ಣಯಕ್ಕೆ ವಹಿಸಿರುವಾಗ ಕೆಲಸದ ನಿಲುಗಡೆ ಉಂಟುಮಾಡುವುದು ಕಾನೂನುಬಾಹಿರ. ಹಾಗೂ ನ್ಯಾಯನಿರ್ಣಯ ಕ್ರಮ ಕಾರ್ಮಿಕರ ಸಂಘಗಳ ಬೆಳೆವಣಿಗೆಗೆ ಮತ್ತೊಂದು ರೀತಿಯಲ್ಲಿ ತಡೆಯನ್ನುಂಟು ಮಾಡುತ್ತದೆ. ಹೇಗೆಂದರೆ ಪ್ರಸ್ತುತ ವ್ಯವಸ್ಥೆಯಲ್ಲಿ ಮುಷ್ಕರ ಹೂಡುವ ಅವಕಾಶ ತೀರ ಕಡಿಮೆ. ಏಕೆಂದರೆ ಮುಷ್ಕರದ ಸುಳಿವು ತಿಳಿದ ಕೂಡಲೇ ಇಲ್ಲವೆ ಒಂದು ವೇಳೆ ಮುಷ್ಕರವುಂಟಾಗಿ ಮುಂದುವರಿ ಯಿತು ಎಂದ ಮೇಲೆ ಸರ್ಕಾರ ಮಧ್ಯೆ ಪ್ರವೇಶಿಸಿ ವಿವಾದವನ್ನು ನ್ಯಾಯನಿರ್ಣಯಕ್ಕೆ ವಹಿಸಿ ಇತ್ಯರ್ಥ ವಾಗುವಂತೆ ಮಾಡುತ್ತದೆ. ಹೇಗೂ ವಿವಾದ ನ್ಯಾಯನಿರ್ಣಯದ ಮಟ್ಟದಲ್ಲಿ ಇತ್ಯರ್ಥವಾಗುವುದಲ್ಲ ಎಂದು, ಸಂಧಾನ ಮುರಿದರೂ ಎರಡೂ ಪಕ್ಷಗಳು ಅದನ್ನು ಮತ್ತೆ ಏರ್ಪಡಿಸುವ ಗೋಜಿಗೆ ಹೋಗು ವುದಿಲ್ಲ. ಹೀಗಾಗಿ ನ್ಯಾಯನಿರ್ಣಯ ಕ್ರಮ ಚಾಲ್ತಿಯಲ್ಲಿರುವ ತನಕ ಸಾಮೂಹಿಕ ಚೌಕಾಸಿ ಕ್ರಮ ವೃದ್ಧಿ ಹೊಂದುವ ಅವಕಾಶ ಕಡಿಮೆ.

ಒಂದು ಒಗಟು

ನ್ಯಾಯನಿರ್ಣಯ ಕ್ರಮವನ್ನು ನಮ್ಮ ಕೈಗಾರಿಕಾ ಸಂಬಂಧಗಳ ವ್ಯವಸ್ಥೆಯಿಂದ ತೊಡೆದುಹಾಕ ಬೇಕೆಂಬುದನ್ನು ಮೇಲಿನ ಸಮೀಕ್ಷೆ ಸೂಚಿಸುತ್ತದೆ. ಆದರೆ ಈ ಕ್ರಮವನ್ನು ಸಂಪೂರ್ಣವಾಗಿ ತೊಡೆದು ಹಾಕುವುದರಿಂದ ತೊಂದರೆ ಇದೆ ಎಂಬ ವಾದ ಒಂದಿದೆ. ಕೈಗಾರಿಕಾ ಕಾರ್ಯಗತಿ ಸುಗಮವಾಗಿ ನಡೆ ಯುವುದನ್ನು ನಿಶ್ಚಿತಪಡಿಸಬೇಕಾದರೆ ಚಳವಳಿಕಾರಕ ಮಾರ್ಗಗಳ ಮೂಲಕ ವಿವಾದಗಳನ್ನು ಇತ್ಯರ್ಥ ಗೊಳಿಸುವಂತೆ ಕಾರ್ಮಿಕರಿಗೂ ಉದ್ಯಮಿಗಳಿಗೂ ಬಿಟ್ಟುಕೊಡುವುದು ಸೂಕ್ತವಲ್ಲ. ಕೈಗಾರಿಕಾ ಕಾರ್ಯ ಗತಿ ತಡೆಗಟ್ಟದಂತೆ ನೋಡಿಕೊಳ್ಳುವ ದೃಷ್ಟಿಯಿಂದ ನ್ಯಾಯನಿರ್ಣಯ ಕ್ರಮ ಮುಂದುವರಿಯುವುದು ವಾಸಿ ಎಂಬುದೇ ಈ ವಿವಾದದ ಅಭಿಪ್ರಾಯ. ಈ ಸಂದರ್ಭದಲ್ಲಿ ಒಂದು ಬಿಡಿಸಲಾಗದ ಒಗಟು ನಮ್ಮ ಮುಂದೆ ಬಂದು ನಿಲ್ಲುತ್ತದೆ. ಅದೇನೆಂದರೆ, ಸ್ವಯಂಪ್ರೇರಿತ ಕ್ರಮಗಳನ್ನು ಉತ್ತೇಜಿಸಬೇಕಾದರೆ ನ್ಯಾಯನಿರ್ಣಯ ಕ್ರಮವನ್ನು ತೆಗೆದುಹಾಕಬೇಕು. ಆದರೆ ನ್ಯಾಯನಿರ್ಣಯ ಕ್ರಮವನ್ನು ತೆಗೆದು ಬಿಡುವುದರಿಂದ ರಾಷ್ಟ್ರದ ಉತ್ಪಾದನ ಪ್ರಯತ್ನಕ್ಕೆ ಧಕ್ಕೆ ಬರುವ ಸಂಭವವುಂಟಾಗುತ್ತದೆ. ಆದ್ದ ರಿಂದ ಸ್ವಯಂಪ್ರೇರಿತ ಕ್ರಮಗಳನ್ನು ಉತ್ತೇಜಿಸುವ ಹಾಗೂ ಉತ್ಪಾದನ ಪ್ರಯತ್ನಕ್ಕೆ ತಡೆ ಯುಂಟಾಗದಂತೆ ನೋಡಿಕೊಳ್ಳುವ ಕ್ರಮವನ್ನು ರೂಪಿಸಬೇಕಾಗುತ್ತದೆ. ಈ ಒಂದು ಹಿನ್ನೆಲೆಯಲ್ಲಿ ರಾಷ್ಟ್ರೀಯ ಕಾರ್ಮಿಕ ಸಮಿತಿಯ ಸಲಹೆಗಳನ್ನು ಸ್ಥೂಲವಾಗಿ ನೋಡೋಣ.

ರಾಷ್ಟ್ರೀಯ ಕಾರ್ಮಿಕ ಸಮಿತಿಯ ಸಲಹೆಗಳು

ರಾಷ್ಟ್ರೀಯ ಕಾರ್ಮಿಕ ಸಮಿತಿ 1969ರಲ್ಲಿ ತನ್ನ ವರದಿಯನ್ನೊಪ್ಪಿಸಿ ರಾಷ್ಟ್ರ ಹಾಗೂ ರಾಜ್ಯ ಮಟ್ಟ ಗಳಲ್ಲಿ ಕೈಗಾರಿಕಾ ಟ್ರಿಬ್ಯೂನಲ್‌ಗಳಿಗೆ ಬದಲಾಗಿ ಖಾಯಂ ಕೈಗಾರಿಕಾ ಸಂಬಂಧಗಳ ಆಯೋಗಗಳನ್ನು

ನಿಯಮಿಸಬೇಕೆಂದು ಸಲಹೆ ನೀಡಿತು. ಈ ಸಮಿತಿಗಳಲ್ಲಿ ಮೂರು ವಿಭಾಗಗಳಿದ್ದು ಪ್ರತಿಯೊಂದು ವಿಭಾಗವೂ ಸಂಧಾನ, ನ್ಯಾಯನಿರ್ಣಯ ಹಾಗೂ ಪ್ರತಿನಿಧಿತ ಕಾರ್ಮಿಕ ಸಂಘಗಳಿಗೆ ಸನ್ಮಾನಪತ್ರಗಳನ್ನು ಕೊಡುವ ಕಾರ್ಯಗಳನ್ನು ಕೈಗೊಳ್ಳಬೇಕು. ಸಂಧಾನ ವಿಭಾಗ ಈಗಿರುವಂತೆ ಸಂಧಾನಾಧಿಕಾರಿಗಳಿಂದ ಕೂಡಿರತಕ್ಕದ್ದು. ಆದರೆ ನ್ಯಾಯನಿರ್ಣಯ ವಿಭಾಗದಲ್ಲಿ ನ್ಯಾಯಶಾಸ್ತ್ರದಲ್ಲಿ ಪರಿಣತರಾದ ಅಧಿಕಾರಿಗಳಲ್ಲದೆ ಕೈಗಾರಿಕೆ, ಕಾರ್ಮಿಕ, ಉದ್ಯಮ ಮೊದಲಾದ ಕ್ಷೇತ್ರಗಳಲ್ಲಿ ಪಾಂಡಿತ್ಯ ಪಡೆದಿರುವ ಅಧಿಕಾರಿಗಳೂ ಇರಬೇಕೆಂದು ಸಲಹೆ ನೀಡಲಾಗಿದೆ. ಪ್ರಸ್ತಾಪಿಸಲಾದ ನ್ಯಾಯನಿರ್ಣಯ ವ್ಯವಸ್ಥೆಯಲ್ಲಿ ಬೇರೆ ಬೇರೆ ಕ್ಷೇತ್ರಗಳ ಜ್ಞಾನವುಳ್ಳ ಅಧಿಕಾರಿಗಳಿರುವುದರಿಂದ ವಿವಾದವನ್ನು ಕೇವಲ ನ್ಯಾಯಸೂತ್ರಗಳ ಆಧಾರದ ಮೇಲೆಯೇ ತೀರ್ಮಾನಿಸುವ ಸಂಭವ ಕಡಿಮೆ; ಈಗ ವಿವಾದದಲ್ಲಿಯ ಮಾನವೀಯ ಹಾಗೂ ಆರ್ಥಿಕ ಅಂಶಗಳನ್ನು ಗುರುತಿಸಿ ತೀರ್ಪು ನೀಡುವ ಸಂಭವ ಹೆಚ್ಚಿದೆ. ಅಲ್ಲದೆ ಪ್ರಸ್ತಾಪಿಸಲಾದ ಕೈಗಾರಿಕಾ ಸಂಬಂಧಗಳ ಸಮಿತಿ ವಿವಾದ ಇತ್ಯರ್ಥ ಮಾಡುವುದರಲ್ಲಿ ಸ್ವಯಂಪ್ರೇರಿತ ಕ್ರಮಗಳನ್ನು ಪ್ರವರ್ತನೆ ಮಾಡುವುದಲ್ಲದೆ ನ್ಯಾಯನಿರ್ಣಯ ವ್ಯವಸ್ಥೆಯ ಅನುಕೂಲಗಳನ್ನು ನಿಶ್ಚಿತಪಡಿಸಿ ಕೆಲಸ ನಿಲುಗಡೆಯ ಸಂಭವವನ್ನು ಕಡಿಮೆಗೊಳಿಸುತ್ತದೆ. ಹೊಸದಾಗಿ ಪ್ರಸ್ತಾಪಿಸಿರುವ ಕ್ರಮಗಳಲ್ಲಿ ವಿವಾದ ಇತ್ಯರ್ಥಗೊಳಿಸುವ ಕಾರ್ಯಗತಿ ಹೀಗಿರುತ್ತದೆ: ಎರಡು ಪಕ್ಷಗಳವರೂ ವಿವಾದಗಳನ್ನು ಆದಷ್ಟು ಮಟ್ಟಿಗೆ ಪರಸ್ಪರ ಸಂಧಾನದ ಮೂಲಕ ಇತ್ಯರ್ಥಗೊಳಿಸಿಕೊಳ್ಳತಕ್ಕದ್ದು. ಸಂಧಾನ ಕ್ರಮ ಸಫಲವಾಗದಿದ್ದಲ್ಲಿ ಕೈಗಾರಿಕಾ ಸಂಬಂಧಗಳ ಸಮಿತಿ ಪಕ್ಷಗಳು ಬೇಡಿದರೆ ಸ್ವಯಂಪ್ರೇರಿತ ಪಂಚಾಯಿತಿ ಅನುಕೂಲವನ್ನು ಒದಗಿಸಿಕೊಡುತ್ತದೆ. ಈ ವ್ಯವಸ್ಥೆಗೆ ಒಪ್ಪದಿದ್ದಲ್ಲಿ ಕೈಗಾರಿಕಾ ಸಂಬಂಧಗಳ ಸಮಿತಿ ಕೆಳಗೆ ತೋರಿಸಿದಂತೆ ವಿವಾದಗಳನ್ನು ಇತ್ಯರ್ಥಗೊಳಿಸುವ ಕ್ರಮವನ್ನು ಕೈಗೊಳ್ಳುತ್ತದೆ:

1 ಅವಶ್ಯಕವೆನಿಸಿದ ಕೈಗಾರಿಕೆಗಳ ಬಗ್ಗೆ ಈ ಸಮಿತಿ ನ್ಯಾಯನಿರ್ಣಯವನ್ನು ಕೈಗೊಂಡು ತನ್ನ ತೀರ್ಪನ್ನು ಪಕ್ಷಗಳ ಮೇಲೆ ಕಡ್ಡಾಯಪಡಿಸುತ್ತದೆ.

2 ಅವಶ್ಯಕವಲ್ಲವೆನಿಸಿದ ಉಳಿದ ಕೈಗಾರಿಕೆಗಳ ವಿಷಯದಲ್ಲಿ ಎರಡು ಪಕ್ಷಗಳೂ ವಿವಾದವನ್ನು ತಮ್ಮ ತಮ್ಮಲ್ಲಿಯೇ ಇತ್ಯರ್ಥಗೊಳಿಸಿಕೊಳ್ಳುವಂತೆ ಸಮಿತಿ ಸಹಾಯ ಮಾಡುತ್ತದೆ. ವಿವಾದ ಹಾಗೆ ಇತ್ಯರ್ಥಗೊಳ್ಳದಿದ್ದ ಪಕ್ಷದಲ್ಲಿ ಕಾರ್ಮಿಕರೂ ಉದ್ಯಮಿಗಳೂ ನೇರ ಕ್ರಮ—ಬೀಗಮುದ್ರೆ ಮತ್ತು ಮುಷ್ಕರ—ಕೈಗೊಳ್ಳುವ ಸ್ವಾತಂತ್ರ್ಯವನ್ನು ಪಡೆಯುತ್ತಾರೆ. ಆದರೆ ನೇರಕ್ರಮ 30 ದಿನಗಳ ವರೆಗೆ ಮುಂದುವರಿದರೆ ಸಮಿತಿ ಮಧ್ಯೆ ಪ್ರವೇಶಿಸಿ ವಿವಾದವನ್ನು ನ್ಯಾಯನಿರ್ಣಯ ಮಾಡಿ ಇತ್ಯರ್ಥಗೊಳಿಸುತ್ತದೆ.

ಹೀಗಾಗಿ ರಾಷ್ಟ್ರೀಯ ಕಾರ್ಮಿಕ ಸಮಿತಿ ಪ್ರಸ್ತಾಪಿಸಿರುವಂಥ ಕೈಗಾರಿಕಾ ಸಂಬಂಧಗಳ ಆಯೋಗ ವಿವಾದ ಇತ್ಯರ್ಥಗೊಳಿಸುವ ಸ್ವಯಂಪ್ರೇರಿತ ಕ್ರಮಗಳು ವೃದ್ಧಿ ಹೊಂದುವುದಕ್ಕಾಗಿ ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಕಾರ್ಮಿಕರೂ ಉದ್ಯಮಿಗಳೂ ಪರಸ್ಪರ ಸಂಧಾನದ ಮೂಲಕ ವಿವಾದಗಳನ್ನು ಇತ್ಯರ್ಥಗೊಳಿಸಿಕೊಳ್ಳುವಂತೆ ಉತ್ತೇಜನ ನೀಡುತ್ತದೆ. ಹಾಗೂ ಸ್ವಲ್ಪಮಟ್ಟಿಗೆ ಎರಡು ಪಕ್ಷಗಳೂ ನೇರಕ್ರಮ ಕೈಗೊಳ್ಳಲೂ ಅವಕಾಶವನ್ನುಂಟುಮಾಡಿದೆ. ಈ ಅನುಕೂಲಗಳು ಸಾಮೂಹಿಕ ಚೌಕಾಸಿ ವೃದ್ಧಿಹೊಂದಲು ತಕ್ಕಮಟ್ಟಿಗೆ ಸಹಾಯ ಮಾಡುತ್ತವೆ. ಜೊತೆಗೆ ಸಮಿತಿ ನ್ಯಾಯನಿರ್ಣಯ ಕ್ರಮವನ್ನು ಅವಶ್ಯಕವಾಗಿದ್ದಲ್ಲಿ ಮಾತ್ರ ಉಪಯೋಗಿಸಿಕೊಳ್ಳುವಂತೆ ಸಲಹೆ ನೀಡಿದೆ. ಹೀಗೆ ಅವಶ್ಯಕ ಕೈಗಾರಿಕೆಗಳಲ್ಲಿ ಕೆಲಸ ನಿಲುಗಡೆ ಭಯ ಕಂಡುಬಂದಾಗ ಹಾಗೂ ಅವಶ್ಯಕವಲ್ಲದ ಇತರ ಕೈಗಾರಿಕೆಗಳಲ್ಲಿ ಕೆಲಸ ನಿಲುಗಡೆ ಅವಶ್ಯಕತೆಗಿಂತ ಅಧಿಕ ಕಾಲ ಮುಂದುವರಿದಾಗ ಸಮಿತಿ ಮಧ್ಯೆ ಪ್ರವೇಶಿಸಿ ವಿವಾದವನ್ನು ನ್ಯಾಯನಿರ್ಣಯ ಕ್ರಮವನ್ನನುಸರಿಸಿ ಇತ್ಯರ್ಥಗೊಳಿಸುವ ಪ್ರಸ್ತಾವನೆಯಾಗಿದೆ. ಸರ್ಕಾರ ಈ ಸಲಹೆಗಳನ್ನು ಇನ್ನೂ ಪರಿಶೀಲಿಸುತ್ತಿದೆ. ಈ ಸಲಹೆಗಳ ಆಧಾರದ ಮೇಲೆ ಕೈಗಾರಿಕಾ ಸಂಬಂಧಗಳ ವ್ಯವಸ್ಥೆಯನ್ನು ರೂಪಿಸುವ ದೃಷ್ಟಿಯಿಂದ ಸರ್ಕಾರ ಇಷ್ಟರಲ್ಲಿಯೇ ಕಾಯಿದೆ ಮಾಡುವ ಸಂಭವವಿದೆ.

ರಘು ಸುತ

ಪೋರ್ಚುಗೀಸ್ ಭೂಗೋಳಶಾಸ್ತ್ರಜ್ಞ ನಾವಿಕ ರಾಜಕುಮಾರ ಹೆನ್ರಿ

ಮಧ್ಯಯುಗದ ಖ್ಯಾತ ಭೌಗೋಳಿಕ ಅನ್ವೇಷಣಗಳಿಗೆ ಬುನಾದಿ ಹಾಕಿದವನೆಂದರೆ ಪ್ರಿನ್ಸ್. ಹೆನ್ರಿ ದಿ ನಾವಿಗೇಟರ್. ಈತ ನೇರವಾಗಿ ಅನ್ವೇಷಣೆಗಳಲ್ಲಿ ಭಾಗವಹಿಸದಿದ್ದರೂ, ಭೂಗೋಳಶಾಸ್ತ್ರದ ವೈಜ್ಞಾನಿಕ ಅಧ್ಯಯನ ಅನ್ವೇಷಣೆಗಳಿಗೆ ಅಗತ್ಯವಾದ ಸಾಧನಗಳ ತಯಾರಿಕೆ, ನಾವಿಕರ ಕ್ರಮಬದ್ಧ ತರಬೇತು —ಇವುಗಳ ವ್ಯವಸ್ಥೆ ಮಾಡಿ, ಅನ್ವೇಷಣೆಯ ಕಾರ್ಯವನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಿದವರಲ್ಲಿ ಇವನೇ ಮೊದಲಿಗ.

14ನೆಯ ಶತಮಾನದ ಅಂತ್ಯದೊಂದಿಗೆ ಅನ್ವೇಷಣೆಯ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದು ಪ್ರಾರಂಭವಾಯಿತು. ಆ ಶತಮಾನದ ವರೆವಿಗಿನ ವ್ಯಾಪಾರೀ ಪ್ರವಾಸಗಳು, ಅನ್ವೇಷಣೆಯ ಪ್ರವಾಸಗಳು ಹೆಚ್ಚಾಗಿ ಭೂಮಾರ್ಗವನ್ನು ಅವಲಂಬಿಸಿದ್ದುವು. ಆಗೊಮ್ಮೆ ಈಗೊಮ್ಮೆ ಅಪರೂಪವಾಗಿ ಜಲಯಾನ ಕೈಗೊಳ್ಳಲಾಗುತ್ತಿದ್ದರೂ ಅದು ಹೆಚ್ಚಾಗಿ ಸಮುದ್ರತೀರಕ್ಕೇ ಹೊಂದಿಕೊಂಡಿರುತ್ತಿತ್ತು. ದೂರದೂರದ ಸಮುದ್ರಯಾನ ಇನ್ನೂ ರೂಢಿಗೆ ಬಂದಿರಲಿಲ್ಲ.

ಕ್ರೈಸ್ತಧರ್ಮದವರಿಗೂ ಮುಸಲ್ಮಾನರಿಗೂ ನಡುವೆ ನಡೆಯುತ್ತಿದ್ದ ಮತೀಯ ಕದನಗಳು ಐರೋಪ್ಯ ದೇಶಗಳ ಮೇಲೆ ಅತ್ಯಂತ ಹೆಚ್ಚಿನ ಪ್ರಭಾವ ಬೀರಿದುವು. ಯೂರೋಪಿಗೆ ಪೌರಸ್ತ್ಯ ದೇಶಗಳಿಂದ ರವಾನೆಯಾಗುತ್ತಿದ್ದ ಅನೇಕ ವಸ್ತುಗಳ ವ್ಯಾಪಾರ ಮಧ್ಯ ಪ್ರಾಚ್ಯದಲ್ಲಿದ್ದ ಅರಬ್ಬರ ಕೈಯಲ್ಲಿತ್ತು. ಇವರು ವಸ್ತುಗಳನ್ನು ಯೂರೋಪಿಗೆ ಮಾರುವಾಗ ಅವುಗಳ ಬೆಲೆ ಮತ್ತು ಸರಬರಾಯಿ ನಿಯಮಗಳನ್ನು ಕಠಿಣತಮವನ್ನಾಗಿ ಮಾಡುತ್ತಿದ್ದರು. ಆದ್ದರಿಂದ ಇದರಿಂದ ತಪ್ಪಿಸಿಕೊಳ್ಳಲು ಪೌರಸ್ತ್ಯ ದೇಶಗಳಿಗೆ ಜಲಮಾರ್ಗವೊಂದನ್ನು ಕಂಡುಹಿಡಿಯಲೇ ಬೇಕಾಯಿತು. ಇದರಲ್ಲಿ ಪೋರ್ಚುಗಲ್ ದೇಶ ಪ್ರಮುಖಸ್ಥಾನವನ್ನು ಪಡೆಯಿತು.

ತುರ್ಕರು ಪೂರ್ವ ಯೂರೋಪಿನಲ್ಲಿ ಹೆಜ್ಜೆಹೆಜ್ಜೆಗೂ ಬಲಗೊಳ್ಳುತ್ತ ಬಂದಂತೆ. ಒಂದೊಂದಾಗಿ ದೇಶಗಳನ್ನು ಆಕ್ರಮಿಸಿಕೊಳ್ಳುತ್ತ ನಡೆದಂತೆ. ಐಬೀರಿಯನ್ ಪರ್ಯಾಯ ದ್ವೀಪದಿಂದ ಮುಸಲ್ಮಾನರನ್ನು ನಿಧಾನವಾಗಿ ಹೊರದೂಡಲಾಯಿತು. ಪೋರ್ಚುಗೀಸರು ಈ ಕಾರ್ಯದಲ್ಲಿ ಪ್ರಮುಖರಾದವರಾಗಿದ್ದರು.

ಅದುವರೆಗೂ ಮೂರ್ ಜನರು ಪೋರ್ಚುಗಲ್ ದೇಶವನ್ನು ಆಕ್ರಮಿಸಿದ್ದರು. ಕ್ರಿ.ಶ. 1250 ರಲ್ಲಿ ಪೋರ್ಚುಗಲ್ ದೇಶ ಸ್ವಾತಂತ್ರ್ಯ ಹೋರಾಟವನ್ನು ನಡೆಸಿ, ಮೂರರನ್ನು ಓಡಿಸಿತು. ಇಂಗ್ಲೆಂಡ್ ಮತ್ತು ಫ್ರಾನ್ಸ್, ಒಂದಿಗೆ ಸತ್ಸಂಬಂಧವನ್ನು ಬೆಳೆಸಿ ತನ್ನ ನಾವೆಯ ಮೂಲಬಲಗಳನ್ನು ಅಭಿವೃದ್ಧಿಪಡಿಸಿಕೊಂಡಿತು. ಎಲ್ಲಕ್ಕಿಂತ ಹೆಚ್ಚಾಗಿ ಆ ದೇಶ ಆಗಿನ ಪ್ರಮುಖ ವ್ಯಾಪಾರ ಕೇಂದ್ರವಾದ ಮೆಡಿಟರೇನಿಯನ್ ಸಮುದ್ರ ಮತ್ತು ಅಟ್ಲಾಂಟಿಕ್ ಸಾಗರಗಳ ಸಂಧಿಸ್ಥಳದಲ್ಲಿತ್ತು.

ಪೋರ್ಚುಗಲ್ ದೇಶದ ದೊರೆಯಾದ 1ನೆಯ ಜಾನ್ (1383–1433) ತನ್ನ ದೇಶದ ಸಮುದ್ರಯಾನದ ಹಿರಿಮೆಯ ಮೂಲ ಸ್ಥಾಪಕ. ಅಲ್ಲದೆ ಪೋರ್ಚುಗಲ್‌ನಲ್ಲಿ ಅವಿಜ್ ವಂಶದ ಮೂಲಸ್ಥಾಪಕನೂ ಆಗಿದ್ದ. ಇವನ ಕಾಲದಲ್ಲಿ ಮೊರಾಕೊ ಮತ್ತು ಕ್ಯಾಸ್ಟಿಲೆಗಳ ಹಿಡಿತದಿಂದ ಬೇರೆಯಾಗಿ ಪೋರ್ಚುಗಲ್ ದೇಶ ಸ್ವಾತಂತ್ರ್ಯ ಪಡೆಯಿತು. ಇಂಗ್ಲೆಂಡಿನ ರಾಜಮನೆತನದೊಂದಿಗೆ ವಿವಾಹ ಸಂಬಂಧ ಬೆಳೆಸಿದ್ದ ಈತನ ಎಲ್ಲ ಮಕ್ಕಳೂ ಶಕ್ತರು. ಅವರಲ್ಲೂ ಮೂರನೆಯವನಾದ ಹೆನ್ರಿ ತಂದೆಯ ಬುದ್ಧಿವಂತಿಕೆ, ಸೂಕ್ಷ್ಮಮತಿಯನ್ನು ಪಡೆದಿದ್ದುದೇ ಅಲ್ಲದೆ ತಾಯಿಯ ಕಡೆಯ ಶೌರ್ಯಧೈರ್ಯಗಳನ್ನೂ ಹೊಂದಿದ್ದ. ಈತ ಮತ್ತು ಈತನ ಅಣ್ಣ ಪೆಡ್ರೋ—ಇವರಿಬ್ಬರೂ ಭೂಗೋಳಶಾಸ್ತ್ರದ ಬೆಳವಣಿಗೆಗೆ ಅಪಾರವಾಗಿ ದುಡಿದರು.

ಪೆಡ್ರೋ ಉತ್ಸುಕ ಪ್ರವಾಸಿಯಾಗಿದ್ದ. ಪಶ್ಚಿಮ ಯೂರೋಪ್ ದೇಶಗಳಲ್ಲೆಲ್ಲ ಪ್ರವಾಸ ಮಾಡಿ, ಅಲ್ಲಿಯ ನಾವಿಕರು ಹಾಗೂ ಅನ್ವೇಷಕರೊಂದಿಗೆ ಬೆರೆತು ಸಂಭಾಷಿಸಿದ್ದ. ಹಾಗೆ ಮಾಡುವಾಗ ತಾನು ಪಡೆದ ಜ್ಞಾನದ ವಿವರಗಳನ್ನು ಗುರ್ತು ಮಾಡಿಕೊಂಡು, ಭೂಪಟ ಹಾಗೂ ನಕ್ಷೆಗಳನ್ನು ವಿಪುಲವಾಗಿ ಸಂಗ್ರಹಿಸಿದ್ದ. ತಂದೆಯ ಮರಣಾನಂತರ ಪಟ್ಟಕ್ಕೆ ಬಂದ ಈತ ತನಗಿಂತಲೂ ಪ್ರಸಿದ್ಧನಾದ ತನ್ನ ಸಹೋದರನಾದ ಹೆನ್ರಿಗೆ ಎಲ್ಲ ರೀತಿಯ ಸಹಾಯ ಮಾಡಲು ಸಿದ್ಧನಾದ.

ಹೆನ್ರಿ ಬಾಲ್ಯದಿಂದಲೂ ನಾವಿಕರ ಸಂಗದಲ್ಲಿ ಬೆಳೆದ. ಯುವಕನಾದ ಮೇಲೆ ಉತ್ತರ ಆಫ್ರಿಕದಲ್ಲಿಯ ಮೂರ್ ಜನಾಂಗದವರೊಂದಿಗೆ ಸೇರಿಕೊಂಡು ಅನೇಕ ದೇಶಗಳಲ್ಲಿ ಸುತ್ತಾಡಿದ್ದ. 1415ರಲ್ಲಿ ಉತ್ತರ ಆಫ್ರಿಕದ ಮೂರ್ ಜನರ ವಿರುದ್ಧ ಯುದ್ಧ ನಡೆಸಿ, ಅವರ ದುರ್ಗಮ ಕೋಟೆಯಾದ ಕ್ಯೂಟಾವನ್ನು ವಶಪಡಿಸಿಕೊಳ್ಳುವುದರಲ್ಲಿ ಜಯಪ್ರದನಾದ. ಇವನಿಗೆ ನೈಟ್ ಪದವಿ ದೊರಕಿತು. ಅದುವರೆವಿಗೆ ಯಾವ ಪೋರ್ಚುಗೀಸನೂ ಯಾವ ಮತೀಯ ಯುದ್ಧದಲ್ಲೂ ಅಷ್ಟೊಂದು ಸಾಹಸವನ್ನು ಪ್ರದರ್ಶಿಸಿರಲಿಲ್ಲ. ಇದರ ಪರಿಣಾಮವಾಗಿ ಈತ ವಿಸೂವಿನ ಡ್ಯೂಕನಾಗಿಯೂ ಕೋವಿಲ್‌ಹ್ಯಾಂನ ಅಧಿಪತಿಯಾಗಿಯೂ ನೇಮಕಗೊಂಡ.

ಇವೆಲ್ಲಕ್ಕಿಂತ ಹೆಚ್ಚಾಗಿ ಈತ ಮೂರ್ ಜನರಿಂದ ಬಹಳ ಮುಖ್ಯವಾದ ಅನೇಕ ವಿಚಾರಗಳನ್ನು ತಿಳಿದುಕೊಂಡ. ಮಹಾ (ಸಹರಾ) ಮರುಭೂಮಿಯ ದಕ್ಷಿಣದ ಪ್ರದೇಶಗಳು, ಅವನ್ನು ಹಾಯ್ದು ಬರುವ ಒಂಟೆ ಮಾರ್ಗಗಳು, ಅವು ಹೊತ್ತು ತರುವ ಬೆಲೆಬಾಳುವ ವಸ್ತುಗಳು, ಅವನ್ನು ಕಳುಹಿಸುವ ದೇಶಗಳು—ಇವೆಲ್ಲವನ್ನೂ ತಿಳಿದ. ಇದರಿಂದ ಈತನ ವಾಣಿಜ್ಯಭೂಗೋಳಶಾಸ್ತ್ರದ ಜ್ಞಾನ ಹೆಚ್ಚಿತು.

ಇದೇ ಸಮಯದಲ್ಲೇ ಇವನ ಅನ್ವೇಷಣೆಯೂ ಪ್ರಾರಂಭವಾಯಿತೆನ್ನಬಹುದು. ಪಶ್ಚಿಮದಲ್ಲಿಯ ಸಾಗರ, ಸಮುದ್ರಗಳ ಬಗೆಗಿನ ಉತ್ತಮ ಜ್ಞಾನ ಸಂಪಾದನೆ, ಅಪರಿಚಿತ ಆಫ್ರಿಕನ್ ತೀರಗಳ ಮುಖಾಂತರ ದೂರದ ಸಮುದ್ರ ಮಾರ್ಗಗಳ ಅನ್ವೇಷಣೆ, ಹೊಸ ಪ್ರದೇಶಗಳ ಪರಿಶೋಧನೆ, ಸಹರಾ ಮರುಭೂಮಿಯನ್ನು ಹಾಯ್ದು ಭಾರತವನ್ನು ತಲಪುವ ಯೋಜನೆಗಳು—ಇವೆಲ್ಲ ಇವನ ತಲೆಯಲ್ಲಿ ಶಾಶ್ವತವಾಗಿ ನೆಲೆಸಿದ್ದುವು.

ಹೆನ್ರಿ ಪೋರ್ಚುಗಲ್‌ಗೆ ಹಿಂದಿರುಗಿದ. ಅನ್ವೇಷಣೆಯ ಕೆಲಸಕ್ಕೆ ಅನುಕೂಲವಾಗುವ ರೀತಿಯಲ್ಲಿ ನಾವೆಯ ಸಂಚಾರದ ಕಲೆಯ ಅಧ್ಯಯನದ ಹಾಗೂ ಬೋಧನೆಯ ಕ್ರಮಗಳ ಏರ್ಪಾಡಿನ ಬಗ್ಗೆ ತುಂಬ ಯೋಚನೆ ಮಾಡಿದ. ಅಂತೆಯೇ ಇದನ್ನು ಕಾರ್ಯರೂಪಕ್ಕೆ ತರಲು ಲಾಗೋಸ್‌ನ ಬಳಿಯ ಸೇಂಟ್ ವಿನ್‌ಸೆಂಟ್ ಭೂಶಿರದ ಬಳಿ ಒಂದು ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿದ. ತಾನೇ ಸ್ವತಃ ಅಧ್ಯಾಪನ ಕಾರ್ಯವನ್ನು ಮಾಡಿದ್ದಲ್ಲದೆ ಅನೇಕ ಸೂಕ್ತ ಅಧ್ಯಾಪಕರನ್ನು ನೇಮಿಸಿದ. ಅಲ್ಲಿ ತತ್ತ್ವವಿಚಾರಗಳ ವಿವರಗಳು ಹಾಗೂ ಪ್ರಾಯೋಗಿಕ ತರಗತಿಗಳನ್ನು ನಡೆಸತೊಡಗಿದ. ಇದಕ್ಕಾಗಿ ಯೂರೋಪಿನ ಎಲ್ಲ ಸ್ಥಳಗಳಿಂದಲೂ ನಾವಿಕರು ನೂರಾರು ಸಂಖ್ಯೆಯಲ್ಲಿ ಬರತೊಡಗಿದರು. ಈ ರೀತಿ ದೃಢಕಾಯರಾದ ಮೀನುಗಾರರನ್ನು ಸುಶಿಕ್ಷಿತ ನಾವಿಕರನ್ನಾಗಿ ಪರಿವರ್ತಿಸುವ ಕಾರ್ಯದಲ್ಲಿ ನಿರತನಾದ.

ಸಮುದ್ರಯಾನದ ರೀತಿಯಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದ ಕಾಲವದು. 13ನೆಯ ಶತಮಾನದ ಪ್ರಾರಂಭದಿಂದಲೆ ನೌಕಾದಿಕ್‌ಸೂಚಿ ಬಳಕೆಗೆ ಬಂದಿತು. ಇದರ ಸಹಾಯದಿಂದ ಸಮುದ್ರ

ತೀರದಿಂದ ಸ್ವಲ್ಪ ದೂರ ಮಧ್ಯ ಸಮುದ್ರದ ವರೆಗೂ ಯಾನಗಳನ್ನು ಮಾಡಲಾರಂಭಿಸಿದರು. ಆದರೆ ಅನೇಕ ಸಂಶೋಧನೆಗಳ ಅನಂತರ ಈ ಉಪಕರಣದಲ್ಲಿ ಅನೇಕ ಬದಲಾವಣೆಗಳನ್ನು ತಂದು ಆಧುನಿಕ ಗೊಳಿಸಲಾಯಿತು. ಇದರ ಪರಿಣಾಮವಾಗಿ ಸಾಗರಗಳಲ್ಲಿ ಒಳಭಾಗಗಳ ವರೆಗೂ ಹಡಗುಗಳನ್ನು ನಡೆಯಿಸಲು ಅನುಕೂಲವಾಯಿತು.

ಅದುವರೆಗೆ ಇದ್ದ ಭೂಪಟಗಳನ್ನು ಆಧುನಿಕಗೊಳಿಸಲಾಯಿತು. ಇದಕ್ಕಾಗಿ ಇಟಲಿ ಮತ್ತು ಸಿಸಿಲಿಯಿಂದ ಅನೇಕ ತಜ್ಞ ಭೂಪಟರಚನಾಕಾರರನ್ನು ಕರೆಸಲಾಯಿತು. ಅವರೊಂದಿಗೆ ಕಲೆತು ಚರ್ಚಿಸಿ, ಸಂಶೋಧಿಸಿ ಹೊಸ ಬಗೆಯ ಭೂಪಟಗಳನ್ನು ರಚಿಸಲಾಯಿತು. ಅದುವರೆಗಿನ ಭೂಪಟಗಳಲ್ಲಿ ಬಹುವಾಗಿ ಊಹಾಲೋಕದ ಇಲ್ಲವೆ ದಂತಕಥೆಗಳ ವಿವರಗಳ ಆಧಾರದ ಮೇಲೆ ದೇಶಗಳ ಭೂಪಟಗಳ ರಚನೆಯಾಗುತ್ತಿತ್ತು.

ಆತ ಇವೆಲ್ಲಕ್ಕಿಂತ ಮುಖ್ಯವಾದ ಮತ್ತೊಂದು ಸುಧಾರಣೆಯನ್ನು ತಂದ. ಅದುವರೆವಿಗೆ ಉಪ ಯೋಗಿಸಲಾಗುತ್ತಿದ್ದ ಹಡಗುಗಳು ಸಾಗರಗಳ ಒಳಭಾಗಗಳಲ್ಲಿ ಬಹಳ ದೂರದ ವರೆಗೆ ಪ್ರವಾಸ ಮಾಡಲಾಗುತ್ತಿರಲಿಲ್ಲ. ಆದುದರಿಂದ ಬಹಳ ಪ್ರಯತ್ನಪಟ್ಟು ಬಲಿಷ್ಠವಾದ, ದೂರ ಪ್ರವಾಸಗಳನ್ನು ತಡೆಯಬಲ್ಲಂಥ ಶಕ್ತಿಯುಳ್ಳ ಸುಧಾರಿತ ಹಡಗುಗಳನ್ನು ಈತ ನಿರ್ಮಿಸಿದ. ಮೀನು ಹಿಡಿಯುವ ದೋಣಿಗಳ ಘಟ್ಟದಿಂದ ನಾಲ್ಕೈದು ಭಾರಿ ಸ್ತಂಭಗಳನ್ನುಳ್ಳ 300ಕ್ಕೂ ಹೆಚ್ಚಿನ ಟನ್ನುಗಳ ಭಾರದ ಬೃಹತ್ ಹಡಗುಗಳ ಘಟ್ಟಕ್ಕೆ ನಿರ್ಮಾಣವನ್ನು ಬೆಳೆಸಿದ ಕೀರ್ತಿ ಹೆನ್ರಿಯದು. ಇವನ್ನು ಕ್ಯಾರವೆಲ್ ಎಂಬುದಾಗಿ ಕರೆದ. ಇವು ದೂರದ ಪ್ರಯಾಣವನ್ನೇ ಅಲ್ಲದೆ ಕಷ್ಟಪ್ರದವಾದ ಯಾನಗಳನ್ನೂ ಎದುರಿಸ ಬಲ್ಲಷ್ಟು ಶಕ್ತಿಯುತವಾಗಿದ್ದುವು.

ಇವನ ನೌಕಾ ವಿದ್ಯಾಲಯದಲ್ಲಿ ಭೂಪಟಗಳನ್ನು ಓದುವುದು, ಸಮುದ್ರದಲ್ಲಿ ಹಡಗಿನ ಸನ್ನಿವೇಶ ನಿರ್ಣಯ, ನಕ್ಷತ್ರಗಳ ಅವಲೋಕನ ಹಾಗೂ ಅವುಗಳಿಂದ ಸಮಯ ನಿರ್ಣಯ–ಇವೆಲ್ಲವನ್ನೂ ನಾವಿಕರಿಗೆ ಕಲಿಸಲಾಗುತ್ತಿತ್ತು. ಅನೇಕ ವರ್ಷಗಳ ವರೆಗೆ, ಅನೇಕ ಕಪ್ತಾನರುಗಳು ಇಲ್ಲಿ ತರಬೇತಾದರು. ಇಲ್ಲಿ ಕಲಿತದ್ದನ್ನು ಇವರು ಪ್ರಾಯೋಗಿಕವಾಗಿ ತೋರಿಸಲು ಸ್ವತಃ ಸಣ್ಣ ಸಣ್ಣ ಅನ್ವೇಷಣೆಗಳನ್ನು ನಡೆಸಿ ದರು. ಆ ಅನ್ವೇಷಣೆಗಳು ಪೂರ್ತಿಗೊಂಡಾಗ, ಅವರು ಜಯಪ್ರದರಾಗಿ ಅನೇಕ ವೈವಿಧ್ಯಪೂರ್ಣ ವರದಿ ಗಳೊಂದಿಗೆ ಹಿಂದಿರುಗತೊಡಗಿದರು. ನವೀನ ಮಾರ್ಗಾನ್ವೇಷಣೆಗಳಲ್ಲಿ ಅವರು ಈ ರೀತಿ ಹೆಚ್ಚಿನ ಪ್ರಾವೀಣ್ಯ ಪಡೆದರು.

ಇವೆಲ್ಲವುಗಳ ಮುಖಾಂತರ ಹೆನ್ರಿ ತನ್ನ ಜೀವನದ ಗುರಿ ಸಾಧಿಸಲು ಪ್ರಯತ್ನಿಸಿದ. ಅನ್ವೇಷಣೆಯ ಕಾರ್ಯವೆಂದರೆ ಇವನಿಗೆ ಬಹಳ ಇಷ್ಟ. ದಕ್ಷಿಣ ಆಫ್ರಿಕವನ್ನು ಬಳಸಿ ಹೋಗುವ ಮಾರ್ಗವೊಂದನ್ನು (ಒಂದು ವೇಳೆ ಅಂಥ ಮಾರ್ಗವಿದ್ದಲ್ಲಿ) ಕಂಡುಹಿಡಿಯಲು ಇವನು ಇಷ್ಟಪಟ್ಟಿದ್ದ. ಇದರಿಂದ ಯೂರೋ ಪಿನ (ಅದರಲ್ಲೂ ಪೋರ್ಚುಗಲ್‌ನ) ಲಕ್ಷಾಂತರ ವ್ಯಾಪಾರಿಗಳಿಗೆ ಅನುಕೂಲವಾಗಿ, ಅವರು ಅರಬ್ ವ್ಯಾಪಾರಿಗಳ ಭಯದಿಂದ ದೂರವಾಗುವುದೇ ಅಲ್ಲದೆ ಭೂಮಿಯ ನಿಜವಾದ ಆಕಾರದ ಸಮಸ್ಯೆಯೂ ಬಗೆಹರಿಯುವುದು ಎಂದು ಆತ ತಿಳಿದಿದ್ದ. ಅಲ್ಲದೆ ಅಂಥ ಒಂದು ಜಲಮಾರ್ಗ ಪೋರ್ಚುಗೀಸರ ಕೈಯಲ್ಲಿದ್ದರೆ ಒಳ್ಳೆಯದು ಹಾಗೂ ಲಾಭಕರ ಎಂದು ಆತ ನಂಬಿದ್ದ. ಅಲ್ಲದೆ ಇದರ ಮುಖಾಂತರ ಭಾರಿ ಸುಂಕಗಳನ್ನು ತೆರುವ ಸಮಸ್ಯೆಯೂ ತಪ್ಪಿ ವ್ಯಾಪಾರ ಸುಗಮವಾಗುವುದೆಂಬ ಆಸೆಯೂ ಅಂಕುರಿಸಿತು. ಎಲ್ಲಕ್ಕಿಂತ ಹೆಚ್ಚಾಗಿ ಹೆನ್ರಿಗೆ ಕ್ರೈಸ್ತಮತವನ್ನು ಹರಡುವ ಚಪಲ ಇತ್ತು.

1415ರಿಂದ 1430ರ ವರೆಗೆ ಸ್ಯಾಗ್ರೆಸ್ ಭೂಶಿರದಲ್ಲಿದ್ದ ವೀಕ್ಷಣಾಲಯ ಹಾಗೂ ಅಧ್ಯಯನ ಕೇಂದ್ರಗಳಿಂದ ತರಬೇತಾದ ನಾವಿಕರಿಂದ ಅನೇಕ ಅನ್ವೇಷಣ ಕಾರ್ಯಗಳು ನಡೆದುವು. ಈ ಸಮಯದಲ್ಲಿ ಕನೇರಿ ಮತ್ತು ಮಡೀರಾ ದ್ವೀಪಗಳ ಸಂಬಂಧವಾಗಿ ಅನೇಕ ಯಾನಗಳನ್ನು ಕೈಗೊಳ್ಳಲಾಯಿತು. ಹೆನ್ರಿ 1415ರಲ್ಲಿ ಜಾನ್ ಡಿ ಟ್ರಾಸ್ಟೋವನನ್ನು ಸಮುದ್ರಯಾನಕ್ಕಾಗಿ ಕಳುಹಿಸಿದ. ಅದು ಕನೇರಿ ದ್ವೀಪದ ಸಮುದಾಯವನ್ನು ತಲುಪಿತು. ಈ ದ್ವೀಪಸಮೂಹವನ್ನು ಫ್ರೆಂಚ್, ಸ್ಪ್ಯಾನಿಷ್ ಮತ್ತು ಜಿನೋವ ನಾವಿಕರು ಹಿಂದೆಯೇ ಕಂಡುಹಿಡಿದಿದ್ದರೂ ಇದನ್ನು ಕಂಡುಹಿಡಿದ ಕೀರ್ತಿ ತಮ್ಮದು ಎಂದು ಪೋರ್ಚುಗೀಸರು ಕರೆದುಕೊಂಡರು. ಜಾರ್ಕೊವನ್ನು 1418ರಲ್ಲೂ, ಪೋರ್ಟೋಸಾಂಟೊ ಹಾಗೂ

ಮಡೀರಾಗಳನ್ನು 1420ರಲ್ಲೂ ಕಂಡುಹಿಡಿಯಲಾಯಿತು. ಆದರೆ ಇವನ್ನೆಲ್ಲ 14ನೆಯ ಶತಮಾನದಲ್ಲೆ ಕಂಡುಹಿಡಿಯಲಾಗಿತ್ತು. ಮಡೀರಾದಲ್ಲಿ ಪೋರ್ಚುಗೀಸರ ವಸಾಹತು ಒಂದನ್ನು ಸ್ಥಾಪಿಸಲಾಯಿತು. ಇದರ ಮುಖಾಂತರ ಸ್ವಲ್ಪಮಟ್ಟಿಗೆ ಮರದ ದಿಮ್ಮಿಗಳ ವ್ಯಾಪಾರವೂ ಅಭಿವೃದ್ಧಿಯಾಯಿತು. ಹೆನ್ರಿ ಸುಮಾರು 1418ರಲ್ಲಿ ಜಿಬ್ರಾಲ್ಟರಿನ ಪ್ರಾಮುಖ್ಯವನ್ನು ಅರಿತು ಅದನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದ್ದ.

ಅದುವರೆಗೂ ಬೊಜಡೊರ್ ಭೂಶಿರವನ್ನು ಸಮುದ್ರಯಾನಗಳ ಗರಿಷ್ಠ ಸೀಮೆ ಎಂದು ಪರಿಗಣಿಸಲಾಗಿತ್ತು. ಆದರೆ ಅದು ವರೆವಿಗೆ ನಡೆಸಿದ ಯಾನಗಳ ಬೆನ್ನಿನಲ್ಲಿ ನೂರಾರು ಕ್ಯಾರವೆಲ್‌ಗಳನ್ನು ಬೊಜಡೊರಿನ ದಕ್ಷಿಣಕ್ಕಿರುವ ಆಫ್ರಿಕದ ತೀರವನ್ನು ಪರೀಕ್ಷಿಸಲು ಕಳುಹಿಸಲಾಯಿತು. ಈ ಹೊರ ಚಾಚಿದ ಭೂಶಿರವನ್ನು ಹಾಯ್ದು ಹೋಗುವ ಪ್ರತಿ ನಾವಿಕನೂ ಎಲ್ಲ ರೀತಿಯ ಕರಾಳ ಹಾಗೂ ಭಯಾನಕ ಸನ್ನಿವೇಶಗಳನ್ನು ಎದುರಿಸಬೇಕಾಗುವುದೆಂದು ಸಾಮಾನ್ಯವಾಗಿ ನಂಬಲಾಗಿತ್ತು. ಇದರ ಆಚೆ "ಸಾಗರದ ಹೆಬ್ಬಾವುಗಳು, ಏಕಶೃಂಗಿ ಪ್ರಾಣಿಗಳು, ಭೀಕರ ಜ್ವಾಲೆಗಳು ಮತ್ತು ದಹಿಸುವ ಬಿಸಿಲು" ಮಾನವ ಜೀವನದ ಇರುವಿಕೆಯನ್ನೇ ಅಸಾಧ್ಯವಾಗಿಸುತ್ತವೆ ಎಂದು ನಂಬಲಾಗಿತ್ತು. ಈ ಎಲ್ಲ ಭಾವನೆಗಳನ್ನೂ ಸುಳ್ಳಾಗಿಸಲು ಹೆನ್ರಿ ತುಂಬ ಉತ್ಸುಕನಾಗಿದ್ದ. ಈ ಪ್ರಯತ್ನಗಳಲ್ಲಿ ಜಯಗಳಿಸುವ ಹಿರಿಯಾಸೆ ಹೊಂದಿದ್ದ.

ಡಿಯಾಗೊ ಡಿ ಸಿವಿಲ್ ಮತ್ತು ವೆಲ್ಹೊ ಕ್ಯಾಬ್ರೆಲ್ ಇವರನ್ನು ಅಜೋರ್ಸ್ ದ್ವೀಪ ಸಮುದಾಯವನ್ನು ಕಂಡುಹಿಡಿಯಲು 1431ರಲ್ಲಿ ಕಳುಹಿಸಲಾಯಿತು. ಹೆನ್ರಿಯ ತಂದೆಯಾದ ಜಾನ್ ದೊರೆ 1433ರಲ್ಲಿ ಮರಣ ಹೊಂದಿದರೂ ಹೆನ್ರಿ ಸಿಂಹಾಸನವನ್ನೇರುವುದರಲ್ಲಿ ಆಸಕ್ತನಾಗದೆ ಭೂಗೋಳಶಾಸ್ತ್ರದ ಮುನ್ನಡೆಗಾಗಿ ತನ್ನ ಸಾಧನೆಗಳನ್ನು ಮುಂದುವರಿಸುತ್ತಲೇ ಇದ್ದ. 1434ರಲ್ಲಿ ಇವನ ಕಪ್ತಾನರಲ್ಲಿ ಒಬ್ಬನಾದ ಗಿಲ್ ಇಯನ್ನಸ್. ಹೆನ್ರಿಯ ಹಡಗೊಂದರ ನಾಯಕನಾಗಿ. ಬೊಜಡೊರ್ ಭೂಶಿರವನ್ನು ನಾಲ್ಕಾರು ಬಾರಿ ಸುತ್ತಾಡಿ. ದಾಟಿ. "ಅದರಾಚೆಯ ಸಮುದ್ರ ಪೋರ್ಚುಗಲ್ ಬಳಿಯ ಸಮುದ್ರದಷ್ಟೆ ಪ್ರಯಾಣಕ್ಕೆ ಅತಿಸುಲಭವೂ ಆಹ್ಲಾದಕರವೂ ಆಗಿದೆ" ಎಂದು ತಿಳಿಸಿದ. ಆ ಪ್ರದೇಶದಲ್ಲಿ ಮಾನವನ ಇರುವಿಕೆಯ ಗುರುತು ಸ್ವಲ್ಪವೂ ಇರದಿದ್ದರೂ ಅಲ್ಲಿಂದ ಮುಂದಕ್ಕೆ ತನ್ನ ಕಪ್ತಾನರನ್ನು ಕಳುಹಿಸುವುದರಲ್ಲಿ ಹೆನ್ರಿ ಏನೇನೂ ಕಷ್ಟಪಡಬೇಕಾಗಿರಲಿಲ್ಲ.

1435ರಲ್ಲಿ ಹೆನ್ರಿಗೆ ಪಾನೀಯ ಒದಗಿಸುವ ನಾವಿಕನಾದ ಬಲ್‌ಡಾಯನು ಬೊಜಡೊರ್‌ನಿಂದ ಮುಂದೆ ಐನೂರು ಮೈಲಿಗಳ ವರೆವಿಗಿನ ಆಫ್ರಿಕನ್ ತೀರವನ್ನು ಅನುಸರಿಸಿ ಪರಿಶೋಧನೆ ನಡೆಸಿದ. ಅಲ್ಲಲ್ಲಿ ಒಂಟೆ ವ್ಯಾಪಾರಿಗಳ ಓಡಾಟದ ಕುರುಹು ಕಂಡುಬಂತು. ಒಮ್ಮೆ ನೈಲ್ ನದಿಯ ಪಶ್ಚಿಮ ಭಾಗವನ್ನು ಕಂಡುದಾಗಿಯೂ ಹೇಳಲಾಗಿದೆ. ಹೆನ್ರಿ ಈ ವಿಚಾರವನ್ನು ಮೂರ್ ಜನಾಂಗದ ಪ್ರಯಾಣಿಕರಿಂದ ಕೇಳಿದ್ದ. 1436ರಲ್ಲಿ ಹೆನ್ರಿಯ ಪೋರ್ಚುಗೀಸ್ ಹಡಗುಗಳು ಬ್ಲಾಂಕೋ ಭೂಶಿರವನ್ನು ತಲುಪಿದ್ದುವು. ಒಟ್ಟಿನಲ್ಲಿ ಹೆನ್ರಿಯ ಹಡಗುಗಳು ಪಶ್ಚಿಮ ಆಫ್ರಿಕದ ರಿಯೊ-ಡಿ-ಓರೆನಲ್ಲಿರುವ ಸುವರ್ಣ ನದಿಯ ವರೆಗೂ ತಲುಪಿದ್ದಿರಬಹುದು. ಇಲ್ಲಿ ಮೊಟ್ಟಮೊದಲನೆಯದಾಗಿ ಓರ್ವ ಆಫ್ರಿಕನ್ ವಾಸಿಯನ್ನು ಸೆರೆ ಹಿಡಿಯಲು ಪ್ರಯತ್ನಿಸಲಾಯಿತು.

ಇದರಿಂದ ಮಧ್ಯಯುಗದಲ್ಲಿ ಭಾವಿಸಲಾಗಿದ್ದಂಥ ಪ್ರಪಂಚದ ದಕ್ಷಿಣ ಎಲ್ಲೆ ದೂರ ಸರಿಯಿತು. ಭೂಮಿಯ ಇರವಿನ ಬಗ್ಗೆ ಹೊಸ ದೃಷ್ಟಿ ನಿರ್ಮಾಣವಾಯಿತು. 1441ರಲ್ಲಿ ವೈಟ್ (ಬ್ಲ್ಯಾಂಕೋ) ಭೂಶಿರವನ್ನು ಮೊಟ್ಟಮೊದಲನೆಯದಾಗಿ ಹಾಯ್ದು ಮುಂದಕ್ಕೆ ಪ್ರಯಾಣ ಮಾಡಲಾಯಿತು. ಆ್ಯಂಟಂ ಗೋಕಾಲ್‌ವೆಜ್, ಬೊಜಡೊರ್‌ನ ಆಚೆಯಲ್ಲಿಯ ಗಿನಿ ತೀರದಿಂದ ಗುಲಾಮರು ಹಾಗೂ ಚಿನ್ನದ ದೂಳನ್ನು ತಂದ. ನುನೊ ಟ್ರಿಸ್ಟಾಂ ಮತ್ತೂ ಮುಂದುವರಿದ.

ಇವೆಲ್ಲ ಯಾನಗಳು ಪೋರ್ಚುಗಲ್‌ನಲ್ಲೆಲ್ಲ ಅತ್ಯಂತ ಜನಪ್ರಿಯವಾದುವು. ವ್ಯಾಪಾರಿಗಳು, ನಾವಿಕರು, ನೂತನ ಮಾರ್ಗಾನ್ವೇಷಿಗಳು ಲಿಸ್ಬನ್, ಲಾಗೋಸ್ ಮತ್ತಿತರ ಕಡೆಗಳಿಂದ ಗುಂಪುಗುಂಪಾಗಿ ಬಂದು ಸ್ವಯಂಸೇವಕರಾಗಿ ಸೇರಿಕೊಂಡರು. ಇವರಿಗೆ ಚಿನ್ನ ಗಳಿಸುವ ಆಸೆಯೂ ಇತ್ತು ಎನ್ನಬಹುದು.

1442ರಲ್ಲಿ ನುನೊ ಟ್ರಿಸ್ಟಾಂ ಆರ್ಗ್ವಿಯಂ ಕೊಲ್ಲಿಯನ್ನು ತಲುಪಿದ. ಇಷ್ಟರಲ್ಲಿ ಇಂಗ್ಲೆಂಡ್ ಹೆನ್ರಿಯ ಶೌರ್ಯವನ್ನು ಗುರುತಿಸಿ ನೈಟ್ ಪದವಿಯನ್ನು ನೀಡಿತು.

ಆದರೆ ಮೂಲನಿವಾಸಿಗಳನ್ನು ಸೆರೆಹಿಡಿದು, ಅವರನ್ನು ಗುಲಾಮರನ್ನಾಗಿ ಪರಿವರ್ತಿಸತೊಡಗಿದಾಗ ಮಾತ್ರ, ಹೆನ್ರಿಯ ಕಪ್ತಾನರರಲ್ಲಿ ನಿಜವಾದ ಉತ್ಸಾಹ ಕಂಡುಬಂದಿತು. ಮೂಲನಿವಾಸಿಗಳನ್ನು ಸೆರೆಹಿಡಿಯುವುದು ಮತ್ತು ಚಿನ್ನಕ್ಕಾಗಿ ಅವರನ್ನು ಮಾರುವುದು ಪ್ರಾರಂಭವಾಯಿತು. ಮುಂದೆ ಈ ದುರಾಶೆ ಬೆಳೆಯಿತು. ಕೆಲವು ಕಪ್ತಾನರ ಈ ದುರಭ್ಯಾಸ ಮುಂದೆ ಗುಲಾಮಗಿರಿಯ ವ್ಯಾಪಾರಕ್ಕೆ ದಾರಿ ಮಾಡಿಕೊಟ್ಟಿತು. ಇದರಿಂದಾಗಿ ಉತ್ತಮ ಸ್ಥಾನ ಪಡೆದಿದ್ದ ಹೆನ್ರಿಗೆ ತನ್ನ ರಾಜ್ಯ ಹಾಗೂ ಪ್ರಪಂಚದ ಎಲ್ಲ ಕಡೆಗಳಿಂದ ಮುಂದೆ ಅನೇಕರು ವಿರೋಧಿಗಳಾದರು.

ಹಡಗುಗಳು ಇನ್ನೂ ದಕ್ಷಿಣದ ಕಡೆಗೆ ಹೋದಂತೆಲ್ಲ ಮಾನವ ಜೀವನ ಹಾಗೂ ಫಲವತ್ತಾದ ಪ್ರದೇಶಗಳು ಆಗಾಗ ಕಂಡುಬರುವುದು ಹೆಚ್ಚಾಯಿತು. ಒಂದು ಕಡೆ ಅನೇಕ ಮೂಲವಾಸಿಗಳ ತಂಡ ದೊಡ್ಡ ದೊಡ್ಡ ದಿಮ್ಮಿಗಳ ಮೇಲೆ ಕುಳಿತು, ತಮ್ಮ ಕಾಲುಗಳನ್ನು ನೀರಿನಲ್ಲಿ ಇಳಿಬಿಟ್ಟು ಅವನ್ನು ಹುಟ್ಟುಗಳಂತೆ ಆಡಿಸುತ್ತಾ, ಸಮುದ್ರ ತೀರದುದ್ದಕ್ಕೂ ಹೋಗುತ್ತಿದ್ದುದನ್ನು ಕಂಡರು. ದುರದೃಷ್ಟವಶಾತ್ ಚಿನ್ನ ಪಡೆಯುವ ಹಾಗೂ ಗುಲಾಮ ವ್ಯಾಪಾರದ ಹೀನ ಪದ್ಧತಿಗೆ ಅನೇಕ ಪೋರ್ಚುಗೀಸ್ ನಾವಿಕರು ಮಾರುಹೋದರು. ಇದರಿಂದ ಯಾವ ಅನ್ವೇಷಣೆಗಳಿಗಾಗಿ, ಮೂಲಭೂತ ಗುರಿಗಾಗಿ, ಸಾಧನೆಗಳಿಗಾಗಿ ಅವರನ್ನು ಕಳುಹಿಸಲಾಗಿತ್ತೊ, ಅದು ನಾಶವಾಗಿತ್ತು. ಮೂಲವಾಸಿಗಳ ಮೇಲೆ ಪದೇ ಪದೇ ದಾಳಿ ಮಾಡಿ, ಅವರನ್ನು ಸೆರೆ ಹಿಡಿದು ಗುಲಾಮರನ್ನಾಗಿ ಪರಿವರ್ತಿಸುವ ಚಟ ಹೆಚ್ಚಾಯಿತು. ತಮ್ಮನ್ನು ಸೆರೆಹಿಡಿದು ತಿಂದುಬಿಡುವರೆಂಬ ಭಯ ಆ ಮೂಲವಾಸಿಗಳಲ್ಲಿ ಬೇರೂರಿ, ಅವರು ಪೋರ್ಚುಗೀಸರನ್ನು ಮತ್ತಷ್ಟು ಹೆಚ್ಚಾಗಿ ದ್ವೇಷಿಸಲು ಪ್ರಾರಂಭಿಸಿದರು. ಗುಲಾಮ ದಾಳಿ ಕ್ರೈಸ್ತಮತಕ್ಕೆ ವಿರುದ್ಧವಾದುದಾದರೂ ಅಚ್ಚ ಕ್ರೈಸ್ತ ಧರ್ಮೀಯರೇ ಈ ಪದ್ಧತಿಯನ್ನು ಅನುಸರಿಸತೊಡಗಿದರು. ಈ ರೀತಿ ಸೆರೆಹಿಡಿಯಲ್ಪಟ್ಟವರನ್ನು ವಿದ್ಯಾವಂತರನ್ನಾಗಿ ಪರಿವರ್ತಿಸಲು ಹೆನ್ರಿ ಪ್ರಯತ್ನಿಸುತ್ತಿದ್ದ. ಆದರೆ ಇವನ ಹಿಂಬಾಲಕರು ಮಾತ್ರ ಅವರನ್ನು ತುಂಬ ಕ್ರೌರ್ಯದಿಂದ ನಡೆಸಿಕೊಳ್ಳುತ್ತಿದ್ದರು.

1444ರಿಂದ 1446ರ ವರೆಗೆ ಜಲಯಾನ ಹಾಗೂ ಪರಿಶೋಧನ ಚಟುವಟಿಕೆಗಳು ಉನ್ನತ ಮಟ್ಟ ಮುಟ್ಟಿದುವು. ಮೂವತ್ತಕ್ಕಿಂತಲೂ ಹೆಚ್ಚು ಹಡಗುಗಳನ್ನು ಗಿನಿ ತೀರಕ್ಕೆ ಹೆನ್ರಿ ಕಳುಹಿಸಿದ. ವಿವಿಧ ರೀತಿಗಳಲ್ಲಿ ಈ ಹಡಗುಗಳ ಕಪ್ತಾನರು ಜಯಭೇರಿ ಬಾರಿಸಿದರು. ಡಯಾಜ್, ಟ್ರಿಸ್ಟಾಂ ಮುಂತಾದವರು 1445ರಲ್ಲಿ ಸೆನೆಗಲನ್ನು ತಲುಪಿದರು. ಡಯಾಜ ಇದೇ ವರ್ಷ ವರ್ಡೆ ಭೂಶಿರವನ್ನು ಸುತ್ತು ಹಾಕಿದ. ಆ ವರ್ಷದಲ್ಲೆ ಪಾಮಾಸ್ ಭೂಶಿರವನ್ನು ಕಾಣಲಾಯಿತು. ಇದು ಮರುಭೂಮಿ ಪ್ರದೇಶದ ಎಲ್ಲೆಯನ್ನು ತೋರಿಸುತ್ತದೆ. ವರ್ಡೆ ಭೂಶಿರದ ಹೊರಚಾಚಿದ ಭೂಭಾಗದ ಸುಂದರ ಹಸಿರು ಭಾಗಗಳನ್ನು ದಾಟಲಾಯಿತು. ಪೋರ್ಚುಗೀಸ್ ಕ್ಯಾರವೆಲ್‌ಗಳನ್ನು ಆ ತೀರದ ಜನರು ಕೇಳಿಯಾಗಲಿ, ನೋಡಿಯಾಗಲಿ ಇರಲಿಲ್ಲ. ಅವನ್ನು ನೋಡಲು ಜನರು ಉತ್ಸುಕರಾದರು. ಕೆಲವರು ಅವು ಮೀನುಗಳಿರಬಹುದೆಂದುಕೊಂಡರು. ಮತ್ತೆ ಕೆಲವರು ಅವು ಫ್ಯಾಂಟಮ್‌ಗಳಿರಬಹುದೆಂದುಕೊಂಡರು. ಉಳಿದವರು ಅವು ದೇವಪಕ್ಷಿಗಳೆಂದು ತಿಳಿದರು. ಹೊಸ ವ್ಯಾಪಾರ ಸಂಬಂಧಗಳನ್ನು ಸ್ಥಾಪಿಸುವ ಸಾಧ್ಯಾಸಾಧ್ಯತೆ, ಪಶ್ಚಿಮ ನೈಲ್ ನದೀ ಮೂಲಗಳನ್ನು ಕಂಡು ಹಿಡಿಯುವುದು ಮುಂತಾದ ಉದ್ದೇಶದಿಂದ ಹೊಸ ತಂಡಗಳು ಹೊರಟುವು. ಇವು ಬಹಳ ಬೇಗ ಸಾಧ್ಯವಾಗಬಲ್ಲವೆಂಬುದನ್ನು ಹೆನ್ರಿ ಹೇಳುತ್ತಲೇ ಇದ್ದ. ಇದರ ಫಲವಾಗಿಯೇ ಸೆನೆಗಲನ್ನು ತಲುಪಿದ್ದರು. ಆದರೆ ಅಲ್ಲಿಯ ಮೂಲನಿವಾಸಿಗಳ ವಿರೋಧದಿಂದಾಗಿ ಅವರು ಹಿಂದಿರುಗಬೇಕಾಯಿತು.

1446ರಲ್ಲಿ ಜಾನ್ ಫರ್ನಾಂಡೆಜ್ ಸಿಯಾರ ಲಿಯೋನೋವನ್ನು ತಲುಪಿದ. ಇದು ವರ್ಡೆ ಭೂಶಿರದಿಂದ ಸುಮಾರು 500 ಮೈಲಿಗಳ ದೂರದಲ್ಲಿತ್ತು. 1446ರಲ್ಲೇ ಆರ್ಗ್ವಿಯ ತೀರದಲ್ಲಿ ಫರ್ನಾಂಡೆಜ್ ಸುಮಾರು ಏಳು ತಿಂಗಳ ಕಾಲ ಅಲ್ಲಿಯ ಮೂಲವಾಸಿಗಳ ಜೊತೆಯಲ್ಲಿದ್ದು ಹಿಂದಿರುಗಿದ. ಇದು

ದಕ್ಷಿಣ ಸಹರಾ ಮರುಭೂಮಿಯು ಸಂಬಲರ್ಹವಾದ ಮೊಟ್ಟಮೊದಲನೆಯ ವಿವರಣೆಯಾಗಿದೆ. 1448ರಲ್ಲಿ ಕೆಲವೊಂದು ಹಡಗುಗಳು ಗಾಂಬಿಯ ಬಳಿ ನಾಶವಾದುವು.

1450ರ ಅನಂತರದ ಅತ್ಯಂತ ಮುಖ್ಯವಾದ ಘಟನೆಯೆಂದರೆ ಕ್ಯಾಡಮೋಸ್ಟೊ ಎಂಬ ವೆನಿಸಿಗ ಹೆನ್ರಿಯ ಬಳಿ ಕೆಲಸಕ್ಕೆ ಸೇರಿ, 1455 ಮತ್ತು 1456ರಲ್ಲಿ ಆಫ್ರಿಕದ ಪಶ್ಚಿಮ ತೀರದುದ್ದಕ್ಕೂ ಅನೇಕ ಯಾನಗಳನ್ನು ಮಾಡಿ, ಗಾಂಬಿಯ ನದಿಯ ಮೂಲವಾಸಿಗಳೊಂದಿಗೆ ಸ್ನೇಹಸಂಬಂಧ ಬೆಳೆಸಿ ಅಲ್ಲಿಂದ ಸಿರಿಯ, ಟ್ಯೂನಿಸ್ ಮತ್ತು ಮೊರಾಕೊಗಳಿಗೆ ಒಂಟೆ ಮಾರ್ಗಗಳ ಮುಖಾಂತರ ವ್ಯಾಪಾರ ಹೆಚ್ಚುವಂತೆ ಮಾಡಿದ್ದು. ವರ್ಡೆ ಭೂಶಿರದಿಂದ ದಕ್ಷಿಣಕ್ಕಿರುವ ಭೂ ಹಾಗೂ ತೀರ ಪ್ರದೇಶಗಳನ್ನು ಪರಿಶೋಧಿಸಿ, ಅಲ್ಲಿಯ ವಿವರಗಳನ್ನು ಭೂಪಟದಲ್ಲಿ ಇಳಿಸಲಾಯಿತು. ಅನೇಕ ಸ್ಥಳಗಳಿಗೆ ಹೆಸರುಗಳನ್ನು ಕೊಡಲಾಯಿತು. ಮೂಲವಾಸಿಗಳು ಹಾಗೂ ಅಲ್ಲಿಯ ವ್ಯಾಪಾರ ಮಾರ್ಗಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಸಂಗ್ರಹಿಸಲಾಯಿತು.

ಗೋಮೆಜ್ ತನ್ನ ಪ್ರಥಮ ಪ್ರಯತ್ನಕ್ಕೆ (1458) ಮುಂಚೆ ಭಾರತಕ್ಕೆ ಹೊಸ ಮಾರ್ಗವೊಂದನ್ನು ಕಂಡುಹಿಡಿಯುವ ಉದ್ದೇಶದಿಂದ ಗಾಂಬಿಯ ನದಿ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳನ್ನೆಲ್ಲ ಬಹು ಎಚ್ಚರಿಕೆಯಿಂದ ಅನ್ವೇಷಿಸಿದ್ದ.

ಹೆನ್ರಿಯ ಇಳಿವಯಸ್ಸಿನ ಮುಂದಣ ಜೀವನವನ್ನು ಈ ರೀತಿ ವಿಭಾಗಿಸಬಹುದು:

1 ಅಜೋರ್ ದ್ವೀಪಸಮುದಾಯದ ಅನ್ವೇಷಣೆ. ಹೊಸ ದ್ವೀಪಗಳ ಪರಿಶೋಧನೆಯ ಪ್ರಯತ್ನದಲ್ಲಿ ಮುಂದುವರಿಕೆ. ಅಲ್ಲಿ ವಸಾಹತು ನಿರ್ಮಾಣ.

2 ಮೆಡೀರಾ ದ್ವೀಪದ ಮರದ ದಿಮ್ಮಿ, ಸಕ್ಕರೆ, ಜೋಳ, ಜೇನುತುಪ್ಪ, ದ್ರಾಕ್ಷಾರಸಗಳ ವ್ಯಾಪಾರದ ಅಭಿವೃದ್ಧಿ.

3 ಕ್ಯಾಡಮೊಸ್ಟೊ ಮತ್ತು ಡಿಯಾಗೊ ಗೋಮೆಜ್ ಅನ್ವೇಷಣೆಗಳು.

ಹೆನ್ರಿ ಅನೇಕ ಅಟ್ಲಾಂಟಿಕ್ ಹಾಗೂ ಆಫ್ರಿಕನ್ ಅನ್ವೇಷಣೆಗಳಿಗಾಗಿ ತನ್ನ ಹೆಸರಿನಲ್ಲಿ ಪೋಪ್‌ನಿಂದ ಅನುಮತಿ ಪಡೆದು ಹೊಸ ದೇಶಗಳು ಪೋರ್ಚುಗೀಸರಿಗೆ ಬರುವಂತೆ ಮಾಡಿದ. ಈತ ಧಾರ್ಮಿಕ ಅಧ್ಯಯನದ ವಿದ್ಯಾಲಯವೊಂದನ್ನು ಸ್ಥಾಪಿಸಿದ. ಲಿಸ್ಬನ್‌ನಲ್ಲಿ ವೈದ್ಯ ಹಾಗೂ ಗಣಿತಶಾಸ್ತ್ರದ ಪೀಠಗಳನ್ನು ಸ್ಥಾಪಿಸಿದ. ತನ್ನ ಕಪ್ತಾನರು, ನಾವಿಕರು ಮತ್ತು ಇತರರಿಗೆ ನಾವೆಯ ನಿರ್ಮಾಣ ಕಲೆ, ಭೂಪಟಗಳ ತಯಾರಿಕೆ ಮತ್ತು ತಾಂತ್ರಿಕ ಪರಿಕರಗಳ ಅಭಿವೃದ್ಧಿಗಾಗಿ ಅರಬ್, ಯೆಹೂದಿ ಮುಂತಾದ ಕಡೆಗಳಿಂದ ಬಂದ ಗಣಿತಜ್ಞರನ್ನು ನೇಮಿಸಿದ್ದ.

ಮಾಸ್ಟರ್ ಪೀಟರ್ ಎಂಬಾತ ಹೆನ್ರಿಗಾಗಿ ಎಲ್ಲ ರೀತಿಯ ಭೂಪಟ ಹಾಗೂ ನಕ್ಷೆಗಳನ್ನು ಅಲಂಕರಿಸಿ ತಯಾರಿಸಿದ್ದ. ನಾವಿಕರಿಗೆ ಉತ್ತಮ ರೀತಿಯ ಭೂಮಿತಿ, ಖಗೋಳಶಾಸ್ತ್ರಗಳ ನಿಯಮಗಳು ಮತ್ತು ಅವುಗಳ ಪರಿಕರಗಳ ಉಪಯೋಗಗಳನ್ನು ಬಹು ಚೆನ್ನಾಗಿ ಕಲಿಸಲಾಗುತ್ತಿತ್ತು. ಆಗಿನ ಕಾಲದ ಪೋರ್ಚುಗೀಸ್ ಕ್ಯಾರವೆಲ್‌ಗಳು ಅತ್ಯುತ್ತಮವಾಗಿದ್ದುವು. ಆ ಕಾಲಕ್ಕಿಂತ ಮುಂಚೆ ಸಿದ್ಧವಾಗಿದ್ದ ಭೂಪಟಗಳ ಅಧ್ಯಯನಕ್ಕಾಗಿ ಹೆನ್ರಿ ಹೆಚ್ಚು ಕಾಲವನ್ನು ವ್ಯಯಿಸುತ್ತಿದ್ದ; ಮತ್ತು ವಾಯುವ್ಯ ಆಫ್ರಿಕದ ವ್ಯಾಪಾರ ಮಾರ್ಗಗಳ ಬಗ್ಗೆ ಹೆಚ್ಚು ವಿಷಯವನ್ನು ಸಂಗ್ರಹಿಸುವುದಕ್ಕಾಗಿ ಉಪಲಬ್ಧ ವಿಷಯಗಳ ಸಂಗ್ರಹಕ್ಕಾಗಿ ಹೆಚ್ಚು ಸಮಯವನ್ನು ಕಳೆಯುತ್ತಿದ್ದನೆಂದು ಹೆನ್ರಿ ತನ್ನ ಚರಿತ್ರೆಯಲ್ಲಿ ತಿಳಿಸಿದ್ದಾನೆ.

ಹೆನ್ರಿ 1460ರ ನವೆಂಬರ್ 3ರಂದು ಸ್ಯಾಗ್ರೋಸದಲ್ಲಿ ಮರಣ ಹೊಂದಿದ. ಆ ಸಮಯದಲ್ಲಿ ಪೋರ್ಚುಗಲ್ ಜಗತ್ತಿನ ಪ್ರಧಾನ ನೌಕಾಶಕ್ತಿಯುತ ದೇಶವಾಗಿತ್ತಲ್ಲದೆ ಅನಂತರದ ಅನ್ವೇಷಣೆಗಳಿಗೆ ಬುನಾದಿಯನ್ನು ಹಾಕಿತು.

ಎಂ. ಎಸ್. ಕೃಷ್ಣಮೂರ್ತಿ

ನೊಳಂಬ ಮಹಾದೇವಿ*

ಪ್ರಾಚೀನ ಕರ್ಣಾಟಕದಲ್ಲಿ ಆಳಿದ ಮುಖ್ಯವಾದ ಸಾಮಂತ ರಾಜಮನೆತನಗಳಲ್ಲಿ ನೊಳಂಬರ ವಂಶವೂ ಒಂದು. ಇವರು ಕ್ರಿ. ಶ. 8ನೆಯ ಶತಮಾನದ ಮಧ್ಯಭಾಗದಿಂದ 11ನೆಯ ಶತಮಾನದ ಅಂತ್ಯದವರೆಗೆ ಆಳಿದರು. ಇವರ ರಾಜಧಾನಿ ಹೆಂಜೇರು ಅಥವಾ ಈಗಿನ ಅನಂತಪುರ ಜಿಲ್ಲೆಯ ಮಡಕಶಿರಾ ತಾಲ್ಲೂಕಿನಲ್ಲಿರುವ ಹೇಮಾವತಿಯಾಗಿತ್ತು. ಕ್ರಿ. ಶ. 950ರ ವೇಳೆಗೆ ಉಚ್ಛ್ರಾಯ ಸ್ಥಿತಿಗೇರಿದ ನೊಳಂಬರ ರಾಜ್ಯದ ಎಲ್ಲೆ ಈಗಿನ ಮೈಸೂರು ರಾಜ್ಯದ ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳನ್ನೊಳಗೊಂಡಿತ್ತಲ್ಲದೆ ಇವುಗಳ ಸುತ್ತಮುತ್ತಲಿನ ಆಂಧ್ರಪ್ರದೇಶದ ಅನಂತಪುರ, ಚಿತ್ತೂರು ಮತ್ತು ತಮಿಳುನಾಡಿನ ಉತ್ತರ ಆರ್ಕಾಟ್, ಸೇಲಂ ಜಿಲ್ಲೆಗಳ ವರೆಗೂ ವಿಸ್ತರಿಸಿತ್ತು. ಹೀಗೆಯೇ ನೊಳಂಬರು ಸ್ವಲ್ಪ ಕಾಲ ಗಂಗರ, ಕೆಲವೊಮ್ಮೆ ರಾಷ್ಟ್ರಕೂಟರ ಸಾಮಂತರಾಗಿಯೂ ಸ್ವಲ್ಪಕಾಲ ಸ್ವತಂತ್ರರಾಗಿಯೂ ನೊಳಂಬವಾಡಿ 32000 ಎಂಬ ವಿಸ್ತಾರವಾದ ಪ್ರದೇಶದ ರಾಜ್ಯಭಾರ ನಡೆಸುತ್ತಿತ್ತಿದ್ದರು. ಈ ವಂಶದ ಅತಿ ಪ್ರಬಲ ರಾಜರಲ್ಲೊಬ್ಬನಾದ ಇರಿವ ನೊಳಂಬ ದಿಲೀಪ (ಕ್ರಿ. ಶ. 942–68) ಕ್ರಿ. ಶ. 968ರಲ್ಲಿ ಕಾಲವಾದ ಮೇಲೆ ಕ್ರಿ. ಶ. ಸು. 970ರಲ್ಲಿ ಪೂರ್ವ ಗಂಗರ ರಾಜನಾದ ಎರಡನೆಯ ಮಾರಸಿಂಹ ನೊಳಂಬರೆಲ್ಲರನ್ನು ಯುದ್ಧದಲ್ಲಿ ಕೊಂದು 'ನೊಳಂಬ ಕುಲಾಂತಕ'ನೆಂದು ಪ್ರಸಿದ್ಧನಾದ[1]. ನೊಳಂಬರು ಈ ಅನಿರೀಕ್ಷಿತ ಆಘಾತದಿಂದ ಚೇತರಿಸಿಕೊಳ್ಳುವುದರೊಳಗಾಗಿಯೇ ರಾಜ ರಾಜ ಚೋಳ ನೊಳಂಬವಾಡಿಯನ್ನು ಆಕ್ರಮಿಸಿಕೊಂಡ[2]. ಇದರಿಂದಾಗಿ ಕರ್ಣಾಟಕದಲ್ಲಿ ನೊಳಂಬರ ಪ್ರಾಬಲ್ಯ ಕ್ಷೀಣಿಸಿ ಅವರು ಇತರ ರಾಜರ ನೆರವಿಗಾಗಿ ಹಂಬಲಿಸಬೇಕಾಯಿತು. ಆ ಸಮಯದಲ್ಲಿ ಕರ್ಣಾಟಕದ ರಾಜಕೀಯದಲ್ಲಿ ಉನ್ನತ ಸ್ಥಿತಿಯಲ್ಲಿದ್ದ ಹಾಗೂ ವರ್ಧಿಸುತ್ತಿದ್ದ ಕಲ್ಯಾಣಿಯ ಚಾಳುಕ್ಯರು ನೊಳಂಬರಿಗೆ ಆಶ್ರಯದಾತರಾದರು.

ಕಲ್ಯಾಣಿಯ ಚಾಳುಕ್ಯರ ಆಶ್ರಯ ಪಡೆದ ನೊಳಂಬ ರಾಜನೆಂದರೆ, ಎರಡನೆಯ ಪೊಳಲ್ಚೋರನ ಮಗನೂ ಎರಡನೆಯ ಮಹೇಂದ್ರನ ತಮ್ಮನೂ ಆದ ಎರಡನೆಯ ಇರಿವ ನೊಳಂಬ. ಇವನು ಕಲ್ಯಾಣಿಯ ಚಾಳುಕ್ಯರ ಮಾಂಡಲಿಕನಾದುದಲ್ಲದೆ, ಚಾಳುಕ್ಯ ರಾಜನಾದ ತೈಲನ ಮೊಮ್ಮಗಳೂ (ಆಹವಮಲ್ಲ ನೂರ್ಮಡಿ ತೈಲ) ಸತ್ಯಾಶ್ರಯನ ಮಗಳೂ (ಅಕಳಂಕ ಚರಿತ ಇರಿವ ಬೆಡಂಗ ಸತ್ಯಾಶ್ರಯ) 5ನೇ ವಿಕ್ರಮಾದಿತ್ಯನ ತಂಗಿಯೂ ಆದ ಒಬ್ಬ ರಾಜಕುಮಾರಿಯನ್ನು ಮದುವೆಯಾಗಿದ್ದನೆಂದು ಕ್ರಿ. ಶ. 1010ರ ಬಳ್ಳಾರಿ ಜಿಲ್ಲೆಯ ಆಲೂರು ಶಾಸನದಲ್ಲಿ ಹೇಳಿದೆ[3]. ಈ ಶಾಸನದಲ್ಲಿ ಇರಿವ ನೊಳಂಬ ಘಟೆಯಂಕಕಾರ

* ಈ ಲೇಖನ ಬರೆಯಲು ಸಹಾಯ ಮಾಡಿದ ಡಾ. ಎ. ವಿ. ನರಸಿಂಹಮೂರ್ತಿಯವರಿಗೆ ನಾನು ಋಣಿಯಾಗಿದ್ದೇನೆ.

[1] E. C. II 50. 59, E. I. Vol. V., p. 151

[2] M. A. R. 1917. p. 41 para 90 ; S. I. I. Vol. I., p. 241

[3] E. I. XVI., p. 27

ನೊಳಂಬವಾಡಿ 32000, ಕೆಂಗಲಿ 500. ಬಲ್ಲಕುಂದೆ 300. ಕುಕ್ಕನೂರು 30 ಮತ್ತು ಮಾಸೆಯ ವಾಡಿಯ ಐದು ಗ್ರಾಮಗಳನ್ನು ಆಳುತ್ತಿದ್ದನೆಂದು ಹೇಳಿದೆ. ಇವನ ಆಳ್ವಿಕೆಯ ಕಾಲ ಕ್ರಿ. ಶ. ಸು. 1010–24. ಈ ಶಾಸನದಲ್ಲೆಲ್ಲಿಯೂ ಇರಿವ ನೊಳಂಬನನ್ನು ಮದುವೆಯಾದ ಚಾಳುಕ್ಯ ರಾಜಕುಮಾರಿಯ ಹೆಸರನ್ನು ತಿಳಿಸದೆ ಇರುವುದರಿಂದ ಈ ವಿಷಯದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಆ ರಾಜ ಕುಮಾರಿಯ ಹೆಸರು ಮತ್ತು ಆಕೆಯ ಸ್ಥಾನಮಾನಗಳ ಬಗ್ಗೆ ಚರ್ಚಿಸುವುದೇ ಈ ಲೇಖನದ ಉದ್ದೇಶ ವಾಗಿದೆ.

ಕ್ರಿ. ಶ. 1014ರ ಗುಣಹಾಳು (ಬಳ್ಳಾರಿ ಜಿಲ್ಲೆ) ಶಾಸನದಲ್ಲಿ4 ಏಕವಾಕ್ಯ ಇರಿವ ನೊಳಂಬಾಧಿ ರಾಜರ ಮಹಾದೇವಿ ಶ್ರೀಮತ್ ವೃದ್ಧಿಮಬ್ಬರಸಿಯು ಪಂಪಾ ಸರೋವರದ ಮಹಾಕಾಳ ದೇವರಿಗೆ ಕೆಲವು ದಾನಗಳನ್ನು ಮಾಡಿದಳೆಂದು ಹೇಳಿದೆ5. ಆದುದರಿಂದ ಈಕೆ ಇರಿವ ನೊಳಂಬ ಘಟೆಯಂಕ ಕಾರನ ಪತ್ನಿಯೆಂದು ಹೇಳಬಹುದು. ಆದರೆ ಈಕೆಯು ಚಾಳುಕ್ಯ ಸತ್ಯಾಶ್ರಯನ ಪುತ್ರಿಯೇ ಎಂಬುದು ಸಂದೇಹ.

ಕ್ರಿ. ಶ. 997 ಚಾಳುಕ್ಯ ಪೆರ್ಮ್ಮಾಡಿದೇವನ ಮಗಳು ಪಂಪದೇವಿಯು ರಾಜ್ಯಾರಂಭ ವರ್ಷ ವೆಂದು ಹುಣಸೂರು ಜಿಲ್ಲೆಯ ಕುಡಕೂರು ಶಾಸನದಲ್ಲಿ ಹೇಳಿದೆ.6.ಈ ಶಾಸನದ ಬಗ್ಗೆ ವಿಚಾರ ಮಾಡುತ್ತಾ, ಶ್ರೀಮಾನ್ ರೈಸ್‌ರವರು ಈ ರೀತಿ ಹೇಳಿದ್ದಾರೆ7. "ಈ ವರ್ಷದಲ್ಲಿ ಚಾಳುಕ್ಯ ರಾಜನಾದ ತೈಲಪ ಕಾಲವಾಗಿ ಅವನ ಮಗ ಸತ್ಯಾಶ್ರಯ ಪಟ್ಟಕ್ಕೆ ಬಂದ ಮತ್ತು ಈತನಿಗೆ (ಡಾ. ಫ್ಲೀಟರು ಹೇಳಿರುವ ಹಾಗೆ) ಒಬ್ಬ ಮಗಳಿದ್ದು, ಅವಳು ಇರಿವ ನೊಳಂಬಾಧಿರಾಜನನ್ನು ಮದುವೆಯಾಗಿದ್ದಳು. ಆಕೆಯೇ ಈ ಶಾಸನದ ಪಂಪದೇವಿಯಾಗಿರಬಹುದು. ಆದರೆ ಆಕೆಗೆ ಆ ಸಮಯದಲ್ಲಿ ಒಬ್ಬ ಪತಿ ಇದ್ದನೇ, ಅವಳು ಆಳುತ್ತಿದ್ದ ರಾಜ್ಯ ಯಾವುದು ಎಂಬುದಕ್ಕೆ ಈ ಶಾಸನದಲ್ಲಿ ಆಧಾರಗಳಿಲ್ಲ. ಪ್ರಾಯಶಃ ಆಕೆಯು ಈ ಶಾಸನ ಸಿಕ್ಕಿದ ಸ್ಥಳ ಅಂದರೆ ಹುಣಸೂರು ತಾಲ್ಲೂಕಿನ ಬೆಟ್ಟದಪುರದ ಭಾಗಗಳನ್ನೊಳಗೊಂಡಿದ್ದ ಪ್ರಾಂತ್ಯದ ಮೇಲೆ ರಾಜ್ಯಭಾರ ನಡೆಸುತ್ತಿದ್ದಿರಬಹುದು. ಮೇಲೆ ಹೇಳಿದ ಹೋಲಿಕೆ ಸರಿಯಾಗಿಲ್ಲದ ಪಕ್ಷದಲ್ಲಿ ಈಕೆ ಗಂಗರಾಜನೊಬ್ಬನ ವಿಧವೆಯಾಗಿರಲೂ ಸಾಧ್ಯ. ಏಕೆಂದರೆ ಹುಣಸೂರು ಜಿಲ್ಲೆ ಗಂಗ ವಾಡಿಯ ಒಂದು ಪ್ರಾಂತ್ಯವಾಗಿತ್ತೇ ವಿನಾ ನೊಳಂಬವಾಡಿ ಪ್ರಾಂತ್ಯದಲ್ಲಿ ಸೇರಿರಲಿಲ್ಲ".

ಕ್ರಿ. ಶ. 1024ರ ಡಿಸೆಂಬರ್ 24ರ ಮರೋಲ್ ಶಾಸನದಲ್ಲಿ8 (ಬಿಜಾಪುರ ಜಿಲ್ಲೆ) ಜಗದೇಕ ಮಲ್ಲನ (ಜಯಸಿಂಹ) ಕೈಕೆಳಗೆ ನೊಳಂಬ ಘಟೆಯಂಕಕಾರ (ಇರಿವ ನೊಳಂಬ) ನೊಳಂಬವಾಡಿ ಮತ್ತು ಕರಿವಿಡಿಯ 30 ಭಾಗಗಳನ್ನು ಆಳುತ್ತಿದ್ದಾಗ ಮರುವೂಳಲ್ ಅನ್ನು ಸಟ್ಟಿಗನ (ಇರಿವ ಬೆಡಂಗ ಸತ್ಯಾಶ್ರಯ) ಮಗಳಾದ ಮಹಾದೇವಿ ಆಳುತ್ತಿದ್ದಳು ಎಂದು ತಿಳಿದು ಬರುತ್ತದೆ. ಶಾಸನದ ಇತರ ಭಾಗದಿಂದ ಅನಂತವೀರ್ಯ ಮುನಿಪ, ಗುಣಕೀರ್ತಿ ಸಿದ್ಧಾಂತ ಭಟ್ಟಾರಕ ಮತ್ತು ದೇವಕೀರ್ತಿ ಪಂಡಿತ ಎಂಬ ಮೂವರು ಜೈನಗುರುಗಳ ಹೆಸರುಗಳು ತಿಳಿಯುತ್ತವೆ. ಈ ಶಾಸನವನ್ನು ಪ್ರಕಟಿಸಿದ ವಿದ್ವಾಂಸರು9 ಸಟ್ಟಿಗನ ಮಗಳಾದ ಈ ಶಾಸನದ ಮಹಾದೇವಿ ಮತ್ತು ಆಲೂರು ಶಾಸನದಲ್ಲಿ ಹೇಳಿರುವಂತೆ ಇರಿವ

---

4 A. R. No. 722 of 1922 ; S. I. I. IX pt. I, No. 79

5 ಈ ಶಾಸನದ ಅಕ್ಷರಗಳು ಅನೇಕ ಕಡೆ ಹೊರಟು ಹೋಗಿರುವುದರಿಂದ ಶಾಸನದ ಪಾಠವು ಈ ರೀತಿ ಕಾಣಿಸುತ್ತದೆ. "...ಶ್ರೀ ಪ್ರಿಥಿವೀವಲ್ಲಭ ...ಕವಾಕ್ಯಂ ಕಂಚೀಪುರ ಪರಮೇಶ್ವರಂ ಮದ... ಶ್ರೀಮದಿಜೀವ ನೊಳಂಬಾಧಿ ರಾಜರ...ಶ್ರೀ...ವಬ್ಬರಸಿಯರು..." ಶಾಸನಶಾಖೆಯ ವಾರ್ಷಿಕ ವರದಿಯಲ್ಲಿ ಇರಿವ ನೊಳಂಬಾಧಿರಾಜರ[ಪತ್ನಿ] [ವೃದ್ಧಿ]ಮಬ್ಬರಸಿ ಎಂದು ಕೊಡಲಾಗಿದೆ.

6 E. C. IV., pt. II. IHn. 50

7 Ibid. Intro. p. 13

8 A. R. No. (B. K.) 60 of 1928-29 ; S. I. I. XI., pt. I., No. 61. (B. K. Vol. I. pt. I)

9 Ibid

ನೊಳಂಬ ಘಟೆಯಂಕಕಾರನನ್ನು ಮದುವೆಯಾದ ಸತ್ಯಾಶ್ರಯನ ಮಗಳು ಇಬ್ಬರೂ ಒಬ್ಬಳು ಆಗಿರಬಹುದು ಮತ್ತು ಈ ಶಾಸನದ ನೊಳಂಬ ಘಟೆಯಂಕಕಾರನೂ ಆಲೂರು ಶಾಸನದ ಇರಿವ ನೊಳಂಬ ಘಟೆಯಂಕಕಾರನೂ ಒಬ್ಬನೇ ಎಂದು ಹೇಳಿದ್ದಾರೆ.

ಇರಿವ ನೊಳಂಬನಿಗೆ ಘಟೆಯಂಕಕಾರನೆಂಬ ಬಿರುದಿದ್ದುದರಿಂದ ಮೇಲೆ ಹೇಳಿದ ಎರಡನೆಯ ಹೇಳಿಕೆಯನ್ನು ಒಪ್ಪಬಹುದು. ಆದರೆ ಈ ಶಾಸನದಲ್ಲಿ ನೊಳಂಬ ಘಟೆಯಂಕಕಾರನಿಗೂ ಮಹಾದೇವಿಗೂ ಇದ್ದ ಸಂಬಂಧವನ್ನು ಹೇಳಿಲ್ಲ. ಮಹಾದೇವಿ ನೊಳಂಬ ಘಟೆಯಂಕಕಾರ ನೊಳಂಬವಾಡಿ ಮುಂತಾದ ಪ್ರಾಂತ್ಯಗಳನ್ನು ಆಳುತ್ತಿದ್ದ ಕಾಲದಲ್ಲಿ ಮರುವೂಳಲನ್ನು ಆಳುತ್ತಿದ್ದ ಮಾತ್ರಕ್ಕೆ ಆಕೆಯು ಘಟೆಯಂಕಕಾರನ ಪತ್ನಿಯೆಂದು ಹೇಳುವುದಕ್ಕಾಗದು. ಒಂದು ಪಕ್ಷ ಆಕೆ ಆತನ ಪತ್ನಿಯೇ ಆಗಿದ್ದರೂ ಅದನ್ನು ಸಮರ್ಥಿಸಲು ಈ ಶಾಸನದಲ್ಲಿ ಸಾಕಷ್ಟು ಆಧಾರಗಳಿಲ್ಲ. ಆದ್ದರಿಂದ ಇರಿವನೊಳಂಬ ಮದುವೆಯಾದ ಸತ್ಯಾಶ್ರಯನ ಮಗಳು ಈ ಶಾಸನದ ಮಹಾದೇವಿಯೇ ಅಲ್ಲವೇ ಎಂಬುದನ್ನು ಪರಿಶೀಲಿಸೋಣ.

ಕ್ರಿ. ಶ. 1036 ಡಿಸೆಂಬರ್ 24ರ ಬಳ್ಳಾರಿ ಜಿಲ್ಲೆಯ ಒರುವಾಯಿ ಶಾಸನಗಳಲ್ಲಿ10 ಜಗದೇಕಮಲ್ಲ (2ನೆ ಜಯಸಿಂಹ) ಆಳುತ್ತಿರುವಾಗ, ಆತನ ಪತ್ನಿಯೂ ಲಕ್ಷ್ಮೀ ಸಮಾನೆಯೂ ನೊಳಂಬನ ಮಗಳೂ ಆದ ಶ್ರೀಮದ್ದೇವಳದೇವಿ ಮತ್ತು ಪಲ್ಲವ ಕುಲತಿಲಕ, ಅನೋಘವಾಕ್ಯ, ಕಂಚೀಪುರವರೇಶ್ವರ ಶ್ರೀಮನ್ ಮಹಾಮಂಡಳೇಶ್ವರ ನೊಳಂಬ ಉದಯಾದಿತ್ಯದೇವ ಇಬ್ಬರೂ, ನೊಳಂಬ ಮಹಾದೇವಿಯ ಅಸ್ತಿಯನ್ನು ಗಂಗೆಯಲ್ಲಿರಿಸಿ ಬಂದ ಬ್ರಾಹ್ಮಣ ಮಾಧವ ಷಡಂಗಿ,ಕೃಷ್ಣಯ್ಯ ಮತ್ತು ತುಪ್ಪದ ದೇವಯ್ಯನಿಗೆ ಕೆಲವು ದಾನಗಳನ್ನು ಮಾಡಿದರೆಂದು ಹೇಳಿದೆ.

ಈ ಶಾಸನಗಳಲ್ಲಿ ಹೇಳಿರುವ ನೊಳಂಬ ಮಹಾದೇವಿ ನೊಳಂಬ ಉದಯಾದಿತ್ಯ ಹಾಗೂ ನೊಳಂಬನ ಮಗಳೂ, ಜಯಸಿಂಹನ ಪತ್ನಿಯೂ ಆದ ದೇವಳದೇವಿಯರ ತಾಯಿಯಾಗಿರಬೇಕು. ಏಕೆಂದರೆ ಹಿಂದೂಧರ್ಮದ ಪ್ರಕಾರ ಸತ್ತವರ ಅಸ್ಥಿಯನ್ನು ಗಂಗೆಯಲ್ಲಿ ಮುಳುಗಿಸುವುದು ಪದ್ಧತಿ. ನೊಳಂಬ ಮಹಾದೇವಿಯ ಅಸ್ಥಿಗೆ ಬ್ರಾಹ್ಮಣರ ಕೈಯಲ್ಲಿ ಈ ಕರ್ಮವನ್ನು ಮಾಡಿಸಿ ಅವರಿಗೆ ಕೆಲವು ದಾನಗಳನ್ನು ಮಾಡಿದ ಈ ಇಬ್ಬರು ದಾನಿಗಳು ಮಹಾದೇವಿಯ ಮಕ್ಕಳಿರಬೇಕು. ಏಕೆಂದರೆ ಈ ಕರ್ಮವನ್ನು ಮಾಡುವವರು ಸತ್ತವರ ಮಕ್ಕಳೇ ಹೊರತು ಬೇರೆಯವರಲ್ಲ. ಅಲ್ಲದೆ ನೊಳಂಬ ಉದಯಾದಿತ್ಯದೇವ ಇರಿವ ನೊಳಂಬ ಘಟೆಯಂಕಕಾರನ ಜ್ಯೇಷ್ಠಪುತ್ರ11. ಈತ ತಂದೆಯ ಅನಂತರ 1024ರಲ್ಲಿ ನೊಳಂಬ ಸಿಂಹಾಸನಕ್ಕೆ ಬಂದ. ಈತ ನೊಳಂಬ ಮಹಾದೇವಿಯ ಅಂತ್ಯಕ್ರಿಯೆಯನ್ನು ಮಾಡಿದನೆಂದ ಮೇಲೆ ಇವನು ಇರಿವ ನೊಳಂಬ ಮತ್ತು ಮಹಾದೇವಿಯರ ಪುತ್ರನಿರಬೇಕು. ಆದ್ದರಿಂದ ಈ ಶಾಸನದ ನೊಳಂಬ ಮಹಾದೇವಿ ಮತ್ತು ಮರೋಲ್ ಶಾಸನದ ಸಟ್ಟಿಗನ ಮಗಳಾದ ಮಹಾದೇವಿ ಇಬ್ಬರೂ ಒಬ್ಬರೇ ಮತ್ತು ಆಕೆ ಇರಿವ ನೊಳಂಬ ಘಟೆಯಂಕಕಾರನ ಪತ್ನಿ ಎಂಬುದು ಖಚಿತ. ಹಾಗಿದ್ದ ಪಕ್ಷದಲ್ಲಿ ಗೊಣಿಹಾಳು ಶಾಸನದಲ್ಲಿ ಉಕ್ತವಾಗಿರುವ ವೃದ್ಧಿಮಬ್ಬರಸಿ. ಒಂದು ಪಕ್ಷ ಇರಿವ ನೊಳಂಬನ ಪತ್ನಿಯೇ ಆಗಿದ್ದಲ್ಲಿ, ಎರಡನೆಯ ಪತ್ನಿಯಾಗಿರಲೂ ಸಾಧ್ಯ. ಜಗದೇಕಮಲ್ಲ ನೊಳಂಬ ಉದಯಾದಿತ್ಯ ಇರಿವ ನೊಳಂಬ ಘಟೆಯಂಕಕಾರನ ಜ್ಯೇಷ್ಠಪುತ್ರನೆಂದು ಮೋರಿಗೇರಿ ಶಾಸನದಲ್ಲಿ ಹೇಳಿದೆ12. ಇದರಿಂದ ಇರಿವ ನೊಳಂಬನಿಗೆ ಇನ್ನೂ ಕೆಲವು ಪುತ್ರರಿದ್ದರೆಂದು ಹೇಳಬಹುದು. ಆದರೆ ಅವರ ವಿಷಯವೊಂದೂ ನಮಗೆ ತಿಳಿಯದು. ಜ್ಯೇಷ್ಠಪುತ್ರನೂ, ಚಾಳುಕ್ಯ ರಾಜಕುಮಾರಿಯಿಂದ ಜನಿಸಿದವನೂ ಆದ ಜಗದೇಕಮಲ್ಲ ನೊಳಂಬ ಉದಯಾದಿತ್ಯದೇವನಿಗೆ, ಚಾಳುಕ್ಯಾಧೀಶ್ವರನ ಬೆಂಬಲವಿದ್ದುದರಿಂದ ಈತನೇ ಇರಿವ ನೊಳಂಬನ ಅನಂತರ ನೊಳಂಬ ರಾಜ್ಯಕ್ಕೆ ಅಧಿಪತಿಯಾದ.

ಇದಲ್ಲದೆ ಜಗದೇಕಮಲ್ಲ ನೊಳಂಬ ಚಾಳುಕ್ಯ ಚಕ್ರವರ್ತಿ ಎರಡನೆಯ ಜಯಸಿಂಹನಿಗೆ ಸೋದರಳಿಯನಾಗಿದ್ದ. ಹೇಗೆಂದರೆ ಎರಡನೆಯ ಜಯಸಿಂಹ ಜಗದೇಕಮಲ್ಲ ನೊಳಂಬನ ತಾಯಿಯಾದ

---

10 A. R. No 200, 201 of 1913 ; S. I. I. IX., pt. I., No. 92, 91

11 A. R. No. 443 of 1914 ; S. I. I. IX., pt. I , No. 101

12 A. R. No. 443 of 1914 ; S. I. I. IX., pt. I., No. 101

ಮಹಾದೇವಿಯ ಸಹೋದರ. ಈ ಶಾಸನದಲ್ಲಿ ಹೇಳಿರುವ ದೇವಲದೇವಿ ನೊಳಂಬನ ಮಗಳೆಂದೂ, ಚಾಳುಕ್ಯ ಜಯಸಿಂಹನ ಪತ್ನಿಯೆಂದೂ ಹೇಳಿದೆ. ಈಕೆ ಜಗದೇಕಮಲ್ಲ ನೊಳಂಬ ಉದಯಾದಿತ್ಯನೊಂದಿಗೆ ದಾನದಲ್ಲಿ ಪಾಲ್ಗೊಂಡಿದ್ದುದರಿಂದ ಈಕೆ ಆತನ ತಂಗಿ ಮತ್ತು ಮಹಾದೇವಿ. ಇರಿವನೊಳಂಬರ ಮಗಳು—ಎಂಬುದರಲ್ಲಿ ಸಂಶಯವಿಲ್ಲ. ಹೀಗಿರುವಾಗ ಈಕೆ ಚಾಳುಕ್ಯ ಚಕ್ರವರ್ತಿ ಎರಡನೆಯ ಜಯಸಿಂಹನಿಗೆ ಅಕ್ಕನ ಮಗಳಾದವಳು. ಶಾಸನದಲ್ಲಿ ಜಯಸಿಂಹನ ಪತ್ನಿಯೆಂದು ವರ್ಣಿತಳಾಗಿರುವುದರಿಂದ, ಈಗಲೂ ಬಳಕೆಯಲ್ಲಿರುವ ಪದ್ಧತಿಯಂತೆ ದೇವಲದೇವಿ ತನ್ನ ತಾಯಿ ಮಹಾದೇವಿಯ ಸಹೋದರನನ್ನೇ ಮದುವೆ ಆದಳೆಂದು ಹೇಳಬಹುದು.

ಆದ್ದರಿಂದ ಆಲೂರು ಶಾಸನದ ಸತ್ಯಾಶ್ರಯನ ಮಗಳ ಹೆಸರು ಮಹಾದೇವಿಯೆಂದು ನಿಸ್ಸಂದೇಹವಾಗಿ ಹೇಳಬಹುದು. ಈಕೆ ಮರೋಲ್ ಶಾಸನದಲ್ಲಿ ಹೇಳಿರುವಂತೆ 1024ರಲ್ಲಿ ಮರುವೊಳಲನ್ನು ಆಳುತ್ತಿದ್ದು, ಕ್ರಿ. ಶ. 1036ರ ಕೊನೆಯ ಭಾಗದಲ್ಲಿ ಸಾವನ್ನಪ್ಪಿದಳೆಂದು ಹೇಳಬಹುದು. ಕ್ರಿ. ಶ. 1024ರ ಅನಂತರದ ಕಾಲದ ಶಾಸನಗಳಲ್ಲೆಲ್ಲಿಯೂ ಇರಿವ ನೊಳಂಬನ ಹೆಸರು ಕಾಣದೆ ಇರುವುದರಿಂದ ಮತ್ತು 1024ರಿಂದಲೇ ಜಗದೇಕಮಲ್ಲ ನೊಳಂಬ ಉದಯಾದಿತ್ಯನು ಪೂರ್ಣ ರಾಜ್ಯವನ್ನಾಳುತ್ತಿದ್ದುದರಿಂದ ಇರಿವನೊಳಂಬ ಕ್ರಿ.ಶ. 1024ರ ಸುಮಾರಿಗೆ ಕಾಲವಾಗಿರಬಹುದು. ಕ್ರಿ. ಶ. 1036ರ ಒರುವಾಯಿ ಶಾಸನದ ದಾನದ ಸಮಯದಲ್ಲಿಯೂ ಸಹ ಈತನ ಹೆಸರು ಕಂಡು ಬರದೆ ಇರುವುದರಿಂದ ಆ ಸಮಯದಲ್ಲಿ ಈತ ಬದುಕಿರಲಿಲ್ಲವೆಂಬುದು ಖಚಿತ. ಹಾಗಿದ್ದ ಪಕ್ಷದಲ್ಲಿ ಕ್ರಿ. ಶ. 1036ರ ವರೆಗೆ ನೊಳಂಬ ಮಹಾದೇವಿ ವಿಧವೆಯಾಗಿ ಜೀವಿಸಿದಳೆಂದು ತೋರುತ್ತದೆ.

ಕೆ. ಬಿ. ನೀಲಾವರ್

ತೊಗಲು ಕೈಗಾರಿಕೆ

ಭಾರತದ ಸಾಂಪ್ರದಾಯಿಕ ಕೈಗಾರಿಕೆಗಳಾದ ಹತ್ತಿಯ ಬಟ್ಟೆ, ಸೆಣಬು, ಚಹ, ಕಾಫಿ ಮುಂತಾದವುಗಳಲ್ಲಿ ಚರ್ಮದ ಕೈಗಾರಿಕೆಯೂ ಒಂದಾಗಿದೆ. ಪ್ರಾಣಿಗಳು ಸತ್ತ ಅನಂತರ ಚರ್ಮವನ್ನು ಬಿಸಾಡುವ ಬದಲು ಉಪಯುಕ್ತವಾದ ಹಲವಾರು ಸುಂದರ ವಸ್ತುಗಳನ್ನು ತಯಾರಿಸುವಲ್ಲಿ ಚರ್ಮದ ಬೆಲೆ ಏರುತ್ತಿದೆ. ಪ್ರಪಂಚದ ಮಾರುಕಟ್ಟೆಗಳಲ್ಲಿ ಚರ್ಮ ಹಾಗೂ ಚರ್ಮದಿಂದ ತಯಾರಾದ ವಸ್ತುಗಳ ಬೇಡಿಕೆಯು ಸರ್ವದಾ ಹೆಚ್ಚುತ್ತಿದೆ.

ಭಾರತದಲ್ಲಿ ಈ ಕೈಗಾರಿಕೆಗೆ ತುಂಬ ಮಹತ್ವ. ಭಾರತದಿಂದ ಚರ್ಮದ ನಿರ್ಯಾತವನ್ನು ನಾಲ್ಕು ಪಟ್ಟು ಹೆಚ್ಚಿಸಬಹುದೆಂದು ಅನ್ವಯ ಆರ್ಥಿಕ ಸಂಶೋಧನೆಯ ರಾಷ್ಟ್ರೀಯ ಪರಿಷತ್ತಿನ ಅಧ್ಯಯನ ವೊಂದರಿಂದ ವ್ಯಕ್ತವಾಗಿದೆ. 1965–66ರಲ್ಲಿ ಸಾಧಾರಣ 1.1 ಕೋಟಿ ಡಾಲರುಗಳಷ್ಟು ಬೆಲೆಬಾಳುವ ಚರ್ಮ ರಫ್ತಾಗಿತ್ತು. 1975ರ ಸುಮಾರಿಗೆ 4.4 ಕೋಟಿ ಡಾಲರುಗಳಷ್ಟು ಬೆಲೆಯುಳ್ಳ ಚರ್ಮವನ್ನು ನಿರ್ಯಾತ ಮಾಡಬಹುದೆಂದು ಹೇಳಲಾಗಿದೆ.

ಭಾರತ ಜನಸಂಖ್ಯೆಯಲ್ಲಿ ಮಾತ್ರವಲ್ಲ ಪ್ರಾಣಿಗಳ ಸಂಖ್ಯೆಯಲ್ಲೂ ಮಹತ್ತ್ವವನ್ನು ಪಡೆದಿದೆ. ದೇಶದಲ್ಲಿ ಸುಮಾರು 35 ಕೋಟಿ ಜಾನುವಾರುಗಳಿವೆ. 4.1 ಕೋಟಿ ಕುರಿಗಳೂ 6.3 ಕೋಟಿ ಆಡುಗಳೂ ಉಂಟು. ಇಷ್ಟು ಜಾನುವಾರುಗಳೂ ಇತರ ಪ್ರಾಣಿಗಳೂ ಇರುವ ದೇಶದಲ್ಲಿ ಚರ್ಮ ಕೈಗಾರಿಕೆಗಿರುವ ಅವಕಾಶ ಅತಿಹೆಚ್ಚು.

ಆದರೆ ಇಂದು ವಿದೇಶಗಳಲ್ಲಿ ಚರ್ಮದ ಬೇಡಿಕೆಯ ಕ್ರಮದಲ್ಲಿ ತುಂಬಾ ವ್ಯತ್ಯಾಸವಾಗಿದೆ. ಅಂತೆಯೇ ರಫ್ತಿನಲ್ಲೂ ವ್ಯತ್ಯಾಸವಾಗಿದೆ. ಇನ್ನೂ ತುಂಬಾ ವ್ಯತ್ಯಾಸವಾಗಬೇಕಾಗಿದೆ. ಹಿಂದೆ ಭಾರತ ಹೆಚ್ಚಾಗಿ ಕಚ್ಚಾ ಚರ್ಮವನ್ನು ರಫ್ತು ಮಾಡುತಿತ್ತು. ಇಂದು ಹದ ಮಾಡಿದ ಕ್ರೋಂ ಚರ್ಮವನ್ನೂ ಇತರ ವಿವಿಧ ಬಗೆಯ ಹದಮಾಡಿದ ಚರ್ಮವನ್ನೂ, ಚರ್ಮದ ಪಾದರಕ್ಷೆಗಳನ್ನೂ, ಕೈಚೀಲ ಮುಂತಾದ ಅನೇಕ ರೀತಿಯ ಚರ್ಮದ ವಸ್ತುಗಳನ್ನೂ ರಫ್ತು ಮಾಡುತ್ತಿದೆ.

ಚರ್ಮದ ಕೈಗಾರಿಕೆಯಲ್ಲಿ ಈ ರೀತಿಯ ಮಾರ್ಪಾಡಿನಿಂದ ಭಾರತಕ್ಕೆ ತುಂಬಾ ಲಾಭವಾಗುತ್ತಿದೆ. ಉದ್ಯೋಗಾವಕಾಶವೂ ಹೆಚ್ಚುತ್ತಿದೆ. ಇದರಲ್ಲಿ ಪೂರ್ವ ಭಾರತದ ಹದಮಾಡುವ ವಿಧಾನ ಎನ್ನುವ ಹೊಸ ವಿಧಾನವನ್ನು ಮದ್ರಾಸಿನಲ್ಲಿ ಪ್ರಾರಂಭಿಸಿದುದರಿಂದ, ಈ ಕೈಗಾರಿಕೆಯು ಉನ್ನತಿಯಾಯಿತು. ಈ ರೀತಿಯಲ್ಲಿ ಹದ ಮಾಡಿದ ಚರ್ಮ ಬೇರೆ ದೇಶಗಳಲ್ಲಿ ತಯಾರಾದ ಚರ್ಮಕ್ಕಿಂತ ಉತ್ತಮವಾಗಿದೆ. ಭಾರತದ ಚರ್ಮದ ಒಟ್ಟು ರಫ್ತಿನಲ್ಲಿ ಶೇಕಡ 50ರಷ್ಟು ಈ ರೀತಿಯಲ್ಲಿ ಹದಮಾಡಿದ ಚರ್ಮವೇ ಆಗಿದೆ. ಸುಮಾರು ಹತ್ತು ವರ್ಷಗಳ ಹಿಂದೆ ಚರ್ಮ ಹದಮಾಡುವುದರಲ್ಲಿ ಇನ್ನೊಂದು ಹೊಸರೀತಿ ಯನ್ನು ಕಂಡು ಹಿಡಿಯಲಾಯ್ತು. ಅದನ್ನು 'ವೆಟ್ ಬ್ಲೂ' ಪದ್ಧತಿ ಎಂದು ಕರೆಯುತ್ತಾರೆ. ಸಾಧಾರಣ ನೂರಕ್ಕೆ 20ರಷ್ಟು ಈ ರೀತಿ ಹದಮಾಡಿದ ಚರ್ಮವನ್ನು ನಿರ್ಯಾತಮಾಡಲಾಗುವುದು.

ಸರ್ಕಾರ ಈ ಕೈಗಾರಿಕೆಗಿರುವ ಬೆಳೆಗೆಯನ್ನು ಅರಿತು ಅನೇಕ ರೀತಿಯಲ್ಲಿ ನೆರವಾಗುತ್ತಿದೆ. 1960

ರಿಂದ ಕಚ್ಚಾ ಚರ್ಮದ ನಿರ್ಯಾತವನ್ನು ಖಂಡಿಸಲಾಯಿತು. ಮದ್ರಾಸಿನಲ್ಲಿ ಒಂದು ಕೇಂದ್ರೀಯ ಚರ್ಮ ಸಂಶೋಧನಾಲಯವನ್ನು ಸ್ಥಾಪಿಸಲಾಯಿತು. (ಸೆಂಟ್ರಲ್ ಲೆದರ್ ರೀಸರ್ಚ್ ಇನ್ಸ್‌ಟಿಟ್ಯೂಟ್) ಇದು ಪ್ರಪಂಚದಲ್ಲೇ ಅತಿ ದೊಡ್ಡದಾದ ಸಂಸ್ಥೆ. ಹದಿನೈದು ವರ್ಷಗಳ ಹಿಂದೆ ಇದರ ಜನ್ಮವಾಯ್ತು. ಇದರಲ್ಲಿ ಕಂಡುಹಿಡಿದ ಹೊಸವಿಧಾನಗಳನ್ನು ದೇಶದ ಎಲ್ಲೆಡೆಗಳಲ್ಲೂ ಹಬ್ಬಿಸಲು 5 ವಲಯ ಪ್ರಸರಣ ಕೇಂದ್ರಗಳನ್ನು ಮುಂಬೈ ರಾಜಕೋಟೆ. ಕಲ್ಕತ್ತ. ಕಾನ್‌ಪುರ. ಮದ್ರಾಸ್ ಈ ಸ್ಥಳಗಳಲ್ಲಿ ಸ್ಥಾಪಿಸಲಾಯಿತು. ಕೇಂದ್ರ ಸಂಸ್ಥೆ ಹಾಗೂ ವಲಯ ಕೇಂದ್ರಗಳು ಈ ಕೈಗಾರಿಕೆಯ ಉನ್ನತಿಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ವಿವಿಧ ದೇಶಗಳಲ್ಲಿ ಈ ಕೈಗಾರಿಕೆಗೆ ಸಂಬಂಧಪಟ್ಟ ಸಂಸ್ಥೆಗಳು ಇವುಗಳ ಸಲಹೆ ಪಡೆಯುತ್ತವೆ. ಇಷ್ಟರಿಂದಲೇ ತೃಪ್ತಿಪಡದೆ ಇನ್ನು ಸಾರ್ವಜನಿಕರ ಬೇಡಿಕೆಗೆ ಅನುಗುಣವಾಗಿ ಈ ಕೈಗಾರಿಕೆಯನ್ನು ಬೆಳೆಸಬೇಕಾಗಿದೆ.

ಚರ್ಮ ಮತ್ತು ಚರ್ಮದ ವಸ್ತುಗಳ ರಫ್ತಿನಿಂದ 1952–53ರಲ್ಲಿ ರೂ. 27.4 ಕೋಟಿ ಲಭಿಸಿತ್ತು. ಅದು 1968–69ರಲ್ಲಿ ರೂ. 86 ಕೋಟಿಗೆ ಏರಿತು. ಆದರೆ ಮರುವರ್ಷ ಅದೇ ರೀತಿಯಲ್ಲಿ ಇದರ ನಿರ್ಯಾತ ಏರಲಿಲ್ಲ. 1969–70ರಲ್ಲಿ ರೂ. 93 ಕೋಟಿ ಆಯಿತು. ನಮ್ಮ ಒಟ್ಟು ರಫ್ತಿನಲ್ಲಿ ಇದರ ಪಾತ್ರ ತುಂಬ ಮಹತ್ವದ್ದಾಗಿದೆ. ನಾವು ಜಾಗ್ರತರಾಗಿ ಈ ಕೈಗಾರಿಕೆಯನ್ನು ಬೆಳೆಸಿದಲ್ಲಿ ನಮ್ಮ ವಿದೇಶ ವಿನಿಮಯ ಕೊರತೆಯನ್ನು ನಿವಾರಿಸುವಲ್ಲಿ ಇದು ತುಂಬ ನೆರವಾಗುವುದು. ನಮ್ಮ ನಿರುದ್ಯೋಗ ಸಮಸ್ಯೆಗೂ ಸ್ವಲ್ಪ ಮಟ್ಟಿಗೆ ಸಹಾಯವಾದೀತು. ಪ್ರಾಣಿಗಳು ಸತ್ತನಂತರ ತೊಗಲು ಪ್ರಯೋಜನವಿಲ್ಲದ ವಸ್ತು. ಅಂಥ ವಸ್ತುವಿನಿಂದ ಉಪಯುಕ್ತವಾದ ವಸ್ತುಗಳನ್ನು ತಯಾರಿಸುವಲ್ಲಿ ಉತ್ಪತ್ತಿಯನ್ನು ಹೆಚ್ಚಿಸಿ ಹಣಗಳಿಸಬಹುದು. ಕೇವಲ ಪ್ರಾಣಿಗಳ ಚರ್ಮದ ರಫ್ತಿನಿಂದಲೇ ಸರಾಸರಿ ವರ್ಷಕ್ಕೆ 21 ಲಕ್ಷ ವಿದೇಶಿ ವಿನಿಮಯ ಬರುತಿತ್ತು. ಕೈಗಾರಿಕೆಯಲ್ಲಿ ಮುಂದುವರಿದ ದೇಶಗಳಲ್ಲಿ ಚರ್ಮ ಹಾಗೂ ಚರ್ಮದಿಂದ ತಯಾರಾದ ವಸ್ತುಗಳಿಗೆ ಬೇಡಿಕೆ ಭರದಿಂದ ಏರುತ್ತಿದೆ. ಪ್ರಾಣಿಗಳ ತೊಗಲಿನಿಂದ ಪಾದರಕ್ಷೆ. ಹಣದ ಚೀಲ. ಕೈಚೀಲ. ಸೊಂಟದ ಪಟ್ಟಿ. ಪ್ರಾಣಿಗಳ ಹೊದಿಕೆ. ಟೊಪ್ಪಿ. ಆಯುಧಗಳನ್ನು ಇಡುವ ಚೀಲ ಮುಂತಾದ ಅನೇಕ ವಸ್ತುಗಳನ್ನು ಸುಂದರವಾಗಿ ತಯಾರಿಸಬಹುದು.

ಭಾರತದಲ್ಲಿ ಪಾದರಕ್ಷೆಯ ತಯಾರಿಕೆಯೇ ದೊಡ್ಡ ಕೈಗಾರಿಕೆಯಾಗಿ ಬೆಳೆಯಬಹುದು. ಈ ಕ್ಷೇತ್ರದಲ್ಲಿ ಅನೇಕ ಸಂಸ್ಥೆಗಳು ಈಗಾಗಲೆ ಬೆಳೆದು ಬಂದಿವೆ. 1953–65ರಲ್ಲಿ ಪ್ರಪಂಚದ ಪಾದರಕ್ಷೆಯ ವ್ಯಾಪಾರವು ವರ್ಷಂಪ್ರತಿ ಸೇಕಡ 12ರಂತೆ ಹೆಚ್ಚಾಗಿದೆ. 1964ರಲ್ಲಿ ಸು. 800 ದಶಲಕ್ಷ ಡಾಲರ್‌ಗಳಷ್ಟು ಆಗಿದೆ. ದೇಶ ವಿದೇಶಗಳಲ್ಲಿ ಏರುತ್ತಿರುವ ಜನಸಂಖ್ಯೆ. ಹೆಚ್ಚುತ್ತಿರುವ ಜೀವನ ಮಟ್ಟ ಇವು ಇದರ ಬೇಡಿಕೆಗೆ ತುಂಬಾ ಸಹಾಯಕ. ಯೂರೋಪ ಅಮೆರಿಕಗಳ ಪಾದರಕ್ಷೆಗಳ ಆಮದು ಹೆಚ್ಚುತ್ತಿದೆ. ಇಟಲಿ. ಫ್ರಾನ್ಸ್. ಇಂಗ್ಲೆಂಡ್. ಪಶ್ಚಿಮ ಜರ್ಮನಿ. ಜೆಕೊಸ್ಲೊವಾಕಿಯ, ಹಂಗೇರಿ. ಪಾಕಿಸ್ತಾನ. ಚೀನ. ಅರಬ್ ಗಣರಾಜ್ಯ–ಈ ದೇಶಗಳು ವಿವಿಧ ರಾಷ್ಟ್ರಗಳಿಗೆ ಪಾದರಕ್ಷೆಗಳನ್ನು ರಫ್ತುಮಾಡುತ್ತವೆ.ಮಹಿಳೆಯರ ಪಾದರಕ್ಷೆಗಳ ಮಾದರಿ. ಪಾದರಕ್ಷೆಗಳ ಬೆಲೆ ಈ ವಿಚಾರಗಳಲ್ಲಿ ಪ್ರಪಂಚದಲ್ಲೇ ಹೆಸರುವಾಸಿಯಾಗಿರುವ ದೇಶ ಇಟಲಿ. ರಬ್ಬರಿನ ಪಾದರಕ್ಷೆಗಳು ಹಾಂಗ್‌ಕಾಂಗ್ ಮತ್ತು ಜಪಾನ್‌ಗಳಿಂದಲೂ ಬರುತ್ತವೆ.

ಭಾರತದಲ್ಲೂ ಪಾದರಕ್ಷೆಯ ಕೈಗಾರಿಕೆಗೆ ತುಂಬ ಅವಕಾಶವಿದೆ. ಮೂರು ಯೋಜನೆಗಳ ಕಾಲದಲ್ಲಿ ಅಂದರೆ 1951–52ರಿಂದ 1965–66ರ ವರೆಗೆ ಪಾದರಕ್ಷೆಗಳ ಉತ್ಪನ್ನ 107 ದಶಲಕ್ಷ ಜೊತೆಗಳಿಂದ 206 ದಶಲಕ್ಷ ಜೊತೆಗಳಿಗೆ ಏರಿತು. ಇಷ್ಟು ಉತ್ಪನ್ನವಾದರೂ ಪಾದರಕ್ಷೆಗಳ ತಲಾ ಉಪಯೋಗ ನಮ್ಮಲ್ಲಿ ಕೇವಲ 0.42 ಜೊತೆ; ಅಮೆರಿಕದಲ್ಲಿ ಇದು 4.5 ಜೊತೆ. ಕೈಗಾರಿಕೆಗಳಲ್ಲಿ ಮುಂದುವರಿದ ದೇಶಗಳಲ್ಲೆಲ್ಲ ಸಾಮಾನ್ಯವಾಗಿ ತಲಾ ಮೂರು ಜೊತೆ. ಇದರಿಂದಲೇ ನಮ್ಮ ದೇಶದಲ್ಲಿ ಈ ಕೈಗಾರಿಕೆಗೆ ಇರುವ ಅವಕಾಶವನ್ನು ತಿಳಿಯಬಹುದು. ಪಾದರಕ್ಷೆಗೆ ಚರ್ಮ. ರಬ್ಬರು. ಕ್ಯಾನ್ವಾಸ್ ಪ್ಲಾಸ್ಟಿಕ್ ಮತ್ತು ಮರದ ವಸ್ತುಗಳನ್ನು ಉಪಯೋಗಿಸುತ್ತಾರೆ. 1970–71ರಲ್ಲಿ ಸುಮಾರು 230 ದಶಲಕ್ಷಜೊತೆಗಳಷ್ಟು ಚರ್ಮದ ಪಾದರಕ್ಷೆಗಳನ್ನೂ ನೂರು ದಶಲಕ್ಷ ಜೊತೆಗಳಷ್ಟು ರಬ್ಬರ್ ಹಾಗೂ ಇತರ ಪಾದರಕ್ಷೆಗಳನ್ನೂ ತಯಾರಿಸಬಹುದು ಎಂದು ಎಣಿಸಲಾಗಿತ್ತು. ದೇಶದಲ್ಲಿ ಇದೇ ರೀತಿ ಪಾದರಕ್ಷೆಗಳ ಬೇಡಿಕೆ

ಮುಂದರಿದರೆ 230 ದಶಲಕ್ಷ ಜೊತೆಗಳಲ್ಲಿ ಸುಮಾರು 30 ದಶಲಕ್ಷ ಜೊತೆಗಳಷ್ಟನ್ನು ರಫ್ತು ಮಾಡಬಹುದು.

1950–51ರಿಂದ 1965-66ರ ಅವಧಿಯಲ್ಲಿ ಪಾದರಕ್ಷೆಗಳ ರಫ್ತು 2.2 ದಶಲಕ್ಷ ಜೊತೆಗಳಿಂದ 9.6 ದಶಲಕ್ಷ ಜೊತೆಗಳಿಗೆ ಏರಿತು. ಇದರಲ್ಲಿ ಸೋವಿಯೆತ್ ದೇಶದೊಡನೆ ನಮ್ಮ ವ್ಯಾಪಾರ ಒಪ್ಪಂದ ತುಂಬ ಉಪಯೋಗವಾಗಿದೆ. 1965ರಲ್ಲಿ ಸೋವಿಯೆತ್ ದೇಶಕ್ಕೆ 28 ದಶಲಕ್ಷ ಜೊತೆಗಳನ್ನು ರಫ್ತು ಮಾಡಲಾಯ್ತು. ಆದರೂ ಪ್ರಪಂಚದ ಪಾದರಕ್ಷೆ ವ್ಯಾಪಾರದಲ್ಲಿ ನಮ್ಮ ಪಾಲು ತುಂಬಾ ಕಡಿಮೆ. ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಪ್ರಪಂಚದ ಪಾದರಕ್ಷೆ ವ್ಯಾಪಾರದಲ್ಲಿ ಭಾರತದ ರಫ್ತು ಸೇಕಡ 2ರಷ್ಟು ಏರಿಸುವ ಸೂಚನೆ ಇದೆ. ಅಂದರೆ 1975ರಲ್ಲಿ ರೂ. 33ಕೋಟಿ ಬೆಲೆಯಷ್ಟು ಪಾದರಕ್ಷೆಗಳನ್ನು ರಫ್ತು ಮಾಡಬಹುದು. ವರ್ಷಂಪ್ರತಿ ಸೇಕಡ 20ರಂತೆ ಇದರ ರಫ್ತನ್ನು ಹೆಚ್ಚಿಸಬಹುದು. ಈ ಹಿಂದೆ ಸೇಕಡ 14ರಂತೆ ರಫ್ತು ಹೆಚ್ಚಾಗುತ್ತಿತ್ತು. ಸೋವಿಯೆತ್ ದೇಶಕ್ಕೆ ನಮ್ಮ ರಫ್ತನ್ನು 30 ದಶಲಕ್ಷ ಜೊತೆಗಳಿಗೆ ಏರಿಸಬಹುದು. ಅಮೆರಿಕ ಮತ್ತು ಕೆನಡಗಳಲ್ಲೂ ವಿವಿಧ ರೀತಿಯ ಪಾದರಕ್ಷೆಗಳಿಗೆ ಬೇಡಿಕೆ ಹೆಚ್ಚಿಸಬಹುದು. ಭಾರತದ ಪಾದರಕ್ಷೆಗಳ ರಫ್ತಿನಲ್ಲಿ ಸೇಕಡ 50ರಷ್ಟು ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಶನಿನ ಮೂಲಕ ನಡೆಯುತ್ತದೆ. ನಮ್ಮ ಪಾದರಕ್ಷೆಗಳ ರೀತಿ, ಅಂತಿಮ ಮೆರುಗು, ಮಾದರಿ, ಬೆಲೆ. ಮತ್ತು ಜೋಡಣೆಗಳಲ್ಲಿ ಉನ್ನತಿ ಸಾಧಿಸಿ ಪ್ರಪಂಚದ ಮಾರುಕಟ್ಟೆಗಳಲ್ಲಿ ನಮ್ಮ ಸ್ಥಾನವನ್ನು ಹೆಚ್ಚಿಸಬಹುದು.

ಭಾರತದ ತೊಗಲು ಕೈಗಾರಿಕೆಯ ಏಳಿಗೆಯಲ್ಲಿ ನಾವು ಕೆಲವೊಂದು ಅಡಚಣೆಗಳನ್ನು ಎದುರಿಸಬೇಕಾಗಿದೆ. ನಮ್ಮಲ್ಲಿಯ ಕಸಾಯಿ ಖಾನೆಗಳು ತುಂಬ ಕೆಳತರಗತಿಯವುಗಳಾಗಿವೆ. ಅವುಗಳಲ್ಲಿ ಚರ್ಮವನ್ನು ಸುಲಿಯಲು ಮತ್ತು ಸರಿಯಾದ ರೀತಿಯಲ್ಲಿ ಶೇಖರಿಸಲು ವ್ಯವಸ್ಥೆಗಳಿಲ್ಲ. ನಮ್ಮ ಯೋಜನಾ ಆಯೋಗ ಇದರಿಂದಾಗುವ ನಷ್ಟ ಸುಮಾರು ರೂ. 29 ಕೋಟಿ ಎಂದು ಎಣಿಸಿದೆ. ವರ್ಷಂಪ್ರತಿ ಸುಮಾರು 40 ದಶಲಕ್ಷ ಪ್ರಾಣಿಗಳನ್ನು ಕೊಲ್ಲುವ ದೇಶವಾದ ಭಾರತದಲ್ಲಿ ಸರಿಯಾದ ವ್ಯವಸ್ಥೆ ಮಾಡಿದಲ್ಲಿ ಚರ್ಮದಿಂದಲೇ ತುಂಬಾ ಹಣ ಗಳಿಸಬಹುದು. ಎರಡನೆಯದಾಗಿ ಭಾರತದ ರಫ್ತಿನ ಮೇಲೆ ಬೇರೆ ದೇಶಗಳಲ್ಲಿ ಹೆಚ್ಚಿಗೆ ತೆರಿಗೆ ಹೊರಿಸುತ್ತಾರೆ. ಅದನ್ನು ನಾವು ವ್ಯಾಪಾರ ಒಪ್ಪಂದದ ಮೂಲಕ ಹಗುರಗೊಳಿಸಬಹುದು. ಪ್ಲ್ಯಾಸ್ಟಿಕ್ ಮತ್ತು ಇತರ ಸಂಯೋಜಿತ ವಸ್ತುಗಳ ಪೈಪೋಟಿ ನಮ್ಮ ಚರ್ಮ ಕೈಗಾರಿಕೆ ಎದುರಿಸುತ್ತಿರುವ ಇನ್ನೊಂದು ಅಡಚಣೆ. ಪ್ಲ್ಯಾಸ್ಟಿಕ್ ಯುಗದಲ್ಲಿ ಅವುಗಳ ಪೈಪೋಟಿ ತುಂಬಾ ಹೆಚ್ಚುವ ಸಾಧ್ಯತೆ ಇದೆ. ಅದನ್ನು ಎದುರಿಸಲು ನಮ್ಮ ಚರ್ಮ ಕೈಗಾರಿಕೆ ಅಣಿಯಾಗಬೇಕು. ಭಾರತದ ಚರ್ಮದ ವಸ್ತುಗಳಿಗೆ ಮುಖ್ಯ ಗ್ರಾಹಕ ದೇಶಗಳು ಸೋವಿಯೆತ್ ದೇಶ, ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಇಟಲಿ, ನೆದರ್ಲೆಂಡ್ಸ್ ಮತ್ತು ಸ್ವಲ್ಪ ಮಟ್ಟಿಗೆ ಜಪಾನ್. ಅವುಗಳ ಹೇಳಿಕೆಯ ಪ್ರಕಾರ ನಮ್ಮ ತೊಗಲು ವಸ್ತುಗಳು ಉತ್ತಮ ಮಟ್ಟದವಾಗಿವೆ. ಆದರೂ ಆಗಾಗ ಈ ದೇಶಗಳಲ್ಲಿ ಚರ್ಮದ ವಸ್ತುಗಳಲ್ಲಿಯ ಅಭಿರುಚಿಯನ್ನು ಪರಿಶೀಲಿಸಿ ನಮ್ಮ ವಸ್ತುಗಳ ಮಟ್ಟವನ್ನು ಇನ್ನೂ ಹೆಚ್ಚಿಸಬೇಕು. ಅಲ್ಲಿಯವರ ರುಚಿಗೆ ಅನುಗುಣವಾಗಿ ನಾವು ಬದಲಾಯಿಸಬೇಕು. ಇತ್ತೀಚಿಗಿನ ವ್ಯಾಪಾರ ನಿಯೋಗದ ಪ್ರಕಾರ ಹಾಂಗ್‌ಕಾಂಗ್, ಇಂಡೊನೇಷ್ಯಾ, ಮಲೇಷ್ಯಾ ದೇಶಗಳಲ್ಲಿ ನಮ್ಮ ರಫ್ತಿನ ಸಾಧ್ಯತೆ ತುಂಬ ಇದೆ. ಇದು ನಮ್ಮ ಮುತುವರ್ಜಿಯನ್ನು ಹೊಂದಿಕೊಂಡಿದೆ.

ಮದ್ರಾಸಿನ ಚರ್ಮದ ಮಾರುಕಟ್ಟೆಯಲ್ಲಿ ಕಳ್ಳ ವ್ಯಾಪಾರ ಮತ್ತು ಸಟ್ಟಾ ವ್ಯಾಪಾರ ತುಂಬಾ ನಡೆಯುತ್ತದೆ. ಇದನ್ನು ನಿಲ್ಲಿಸುವಲ್ಲಿ ಸರ್ಕಾರದ ಪಾತ್ರ ಮುಖ್ಯವಾದ್ದು. ನಮ್ಮ ವಸ್ತುಗಳ ಬೆಲೆಯನ್ನು ಕಡಮೆ ಮಾಡಲು ಆಧುನಿಕ ಯಂತ್ರಗಳನ್ನು ಉಪಯೋಗಿಸಬಹುದು. ಅವುಗಳನ್ನು ಪಡೆಯುವಲ್ಲೂ ಸರ್ಕಾರದ ಸಹಾಯ ಅಗತ್ಯ. ದೇಶದಲ್ಲಿ ಚರ್ಮದ ಕೈಗಾರಿಕೆ ಒಂದು ಹೀನವಾದ ಉದ್ಯಮ ಎನ್ನುವ ಭಾವನೆ ಬೆಳೆದು ಬಂದಿದೆ. ಅಂಥ ಭಾವನೆಯನ್ನು ನಿವಾರಿಸಬೇಕು. ಅನೇಕ ಮಹತ್ತರವಾದ ಕೈಗಾರಿಕೆಗಳಂತೆ ತೊಗಲು ಕೈಗಾರಿಕೆಯೂ ಒಂದು ವ್ಯಾಪಾರಾವಕಾಶವುಳ್ಳ ಕೈಗಾರಿಕೆ. ದೇಶದ ಉನ್ನತಿಯಲ್ಲಿ ಪಾತ್ರ ವಹಿಸಬಲ್ಲ ಕೈಗಾರಿಕೆ ಎನ್ನುವ ಭಾವನೆಯನ್ನು ಜನರಲ್ಲಿ ಹುಟ್ಟಿಸಬೇಕು.

ನಾಲ್ಕನೆಯ ಯೋಜನೆಯಲ್ಲಿ ಇದರ ರಫ್ತನ್ನು ರೂ. 160 ಕೋಟಿಯಷ್ಟು ಹೆಚ್ಚಿಸುವ ಉದ್ದೇಶ

ಎದೆ. ಇದಕ್ಕೆ ಸುಮಾರು ರೂ. 8.5 ಕೋಟಿ ಬಂಡವಾಳವನ್ನು ಇರಿಸಲಾಗಿದೆ. ದೇಶದಲ್ಲಿ ತೊಗಲು ಕೈಗಾರಿಕೆಗೆ ಇರುವ ಅವಕಾಶವನ್ನೂ ಪ್ರಪಂಚದ ಎಲ್ಲಾ ದೇಶಗಳಲ್ಲೂ ಹೆಚ್ಚುತ್ತಿರುವ ಬೇಡಿಕೆಯನ್ನೂ ನಾವು ಉಪಯೋಗಿಸಿಕೊಳ್ಳದೆ ಇರುವ ಮಾರುಕಟ್ಟೆಗಳನ್ನೂ ಪರಿಶೀಲಿಸಿದಲ್ಲಿ ನಮ್ಮ ಯೋಜನೆಯ ರಫ್ತು ಗುರಿಯನ್ನು ಮೀರಿಸುವುದು ಅಸಾಧ್ಯವಲ್ಲ. ಅದು ನಮ್ಮ ಸಂಕಲ್ಪ ಸಾಧನೆಗಳನ್ನೇ ಹೊಂದಿಕೊಂಡಿದೆ.

ಬಿ. ಎಸ್. ಸರ್ವಮಂಗಳಾ

ಬಾದಾಮಿ ಚಾಲುಕ್ಯವಂಶದ ರಾಣಿಯರು

ಕನ್ನಡನಾಡನ್ನು ವೈಭವಯುತವಾಗಿ ಆಳಿದ ರಾಜವಂಶಗಳಲ್ಲಿ ಬಾದಾಮಿ ಚಾಲುಕ್ಯ ವಂಶ ಉಲ್ಲೇಖನಾರ್ಹವಾದ್ದು. ಇವರು ಮೊದಲು ಅಯೋಧ್ಯೆಯಲ್ಲಿದ್ದರೆಂದೂ, ಅನಂತರ ರಾಜ್ಯಾಕಾಂಕ್ಷಿಗಳಾಗಿ ದಕ್ಷಿಣಕ್ಕೆ ಬಂದು ಸ್ವತಂತ್ರರಾಜ್ಯವನ್ನು ಸ್ಥಾಪಿಸಿ ಕ್ರಿ. ಶ. 550ರಿಂದ ಕ್ರಿ.ಶ. 757ರವರೆಗೂ ವೈಭವಯುತವಾಗಿ ಕರ್ನಾಟಕವನ್ನಾಳಿದರೆಂದೂ ಅವರ ಶಾಸನಗಳಿಂದ ಗೊತ್ತಾಗುತ್ತದೆ. ಹೀಗೆ ಸುಮಾರು 250 ವರ್ಷಗಳಲ್ಲಿ ಅವರ ಆಡಳಿತ ಸುಭದ್ರವಾಗಿ ರಾಜ್ಯದಲ್ಲಿ ಶಾಂತಿ ಸಮಾಧಾನಗಳು ಏರ್ಪಟ್ಟಾಗ ಕಲೆಯನ್ನು ಮುಂದುವರಿಸಲು ರಾಜರ ಜೊತೆಗೆ ರಾಣಿಯರೂ ಕಂಕಣಬದ್ಧರಾಗಿ ರಾಜ್ಯಕ್ಕೆ ತಮ್ಮ ಸೇವೆ ಸಲ್ಲಿಸಿದರು. ಗಂಗ, ಬಟ್ಟೂರ, ಕದಂಬ, ಸೇಂದ್ರಕ, ಕಲಚೂರ್ಯ ಮುಂತಾದ ಹಲವಾರು ಮನೆತನಗಳ ರಾಜಕುಮಾರಿಯರನ್ನು ಚಾಲುಕ್ಯರಸರು ಮದುವೆಯಾಗಿದ್ದರು ಮತ್ತು ತಮ್ಮ ರಾಜಕುಮಾರಿಯರನ್ನು ತಮ್ಮ ಸಾಮಂತರಲ್ಲಿ ಅನೇಕರಿಗೆ ಕೊಟ್ಟು ಮದುವೆಮಾಡಿದ್ದರು. ಹೀಗೆ ಮಾಡುವುದರಲ್ಲಿ ರಾಜಕೀಯ ಅನುಕೂಲತೆಯೂ ಇತ್ತು. ಈ ರಾಣಿಯರು ಮತ್ತು ರಾಜಕುಮಾರಿಯರು ಹೇಗೆ ಚಾಲುಕ್ಯ ಸಾಮ್ರಾಜ್ಯದ ಅವಿಭಾಜ್ಯ ಅಂಗವಾಗಿ ಬದುಕಿ ಬಾಳಿ ಸಾಮ್ರಾಜ್ಯದ ಉನ್ನತಿಗೆ ಕಾರಣರಾದರು ಎಂಬುದನ್ನು ಮುಂದೆ ಶಾಸನಗಳ ಆಧಾರದಿಂದ ಪರಿಶೀಲಿಸಲಾಗಿದೆ.

ಚಾಲುಕ್ಯರ ವಂಶದಲ್ಲಿ ಐವತ್ತೊಂಬತ್ತು ರಾಜರಾಳಿದ ಮೇಲೆ ವಿಜಯಾದಿತ್ಯನೆಂಬ ರಾಜ ರಾಜ್ಯಾಕಾಂಕ್ಷಿಯಾಗಿ ದಕ್ಷಿಣಕ್ಕೆ ಬಂದ. ಆಗ ದಕ್ಷಿಣದಲ್ಲಿ ಪ್ರಬಲರಾದ ಪಲ್ಲವರ ಸಾಮಂತರಾಗಿದ್ದ ಗಂಗರ ರಾಜ್ಯದಲ್ಲಿ ರಾಜ್ಯಕ್ಕಾಗಿ ಅಂತಃಕಲಹ ನಡೆಯುತ್ತಿತ್ತು. ದುರ್ವಿನೀತ ತನ್ನ ಮಲತಮ್ಮನನ್ನು ಸದೆಬಡಿದು ತಾನು ರಾಜ್ಯವನ್ನು ಪಡೆಯಲು ಪ್ರಯತ್ನಿಸುತ್ತಿದ್ದ. ದುರ್ವಿನೀತನ ತಮ್ಮನಿಗೆ ಪಲ್ಲವರು ಸಹಾಯಕರಾಗಿದ್ದರು[1]. ದುರ್ವಿನೀತ ತನ್ನ ಮಗಳನ್ನು ಚಾಲುಕ್ಯ ವಿಜಯಾದಿತ್ಯನಿಗೆ ವಿವಾಹ ಮಾಡಿಕೊಟ್ಟು ತನ್ನ ಬಲವನ್ನು ಹೆಚ್ಚಿಸಿಕೊಂಡ. ಪಲ್ಲವ ಚಾಲುಕ್ಯರ ದೀರ್ಘಕಾಲದ ಕದನದಲ್ಲಿ ವಿಜಯಾದಿತ್ಯ ರಣಾಂಗಣದಲ್ಲಿ ಕೊಲ್ಲಲ್ಪಟ್ಟ. ಆಗ ಗರ್ಭಿಣಿಯಾಗಿದ್ದ ಅವನ ಹೆಂಡತಿ ನೆಲೆಗಾಣದೆ ಮುಡಿವೇಮು ಎಂಬ ಗ್ರಾಮದಲ್ಲಿ ಸೋಮಯಾಜಿ ವಿಷ್ಣುಶರ್ಮನ ಮನೆಯಲ್ಲಿ ಗಂಡು ಮಗುವಿಗೆ ಜನ್ಮವಿತ್ತಳು. ತನಗೆ ಆಪತ್ಕಾಲದಲ್ಲಿ ರಕ್ಷಣೆ ನೀಡಿದ ಗುರುವಿನ ಹೆಸರನ್ನೆ ತನ್ನ ಮಗನಿಗೆ (ವಿಷ್ಣುವರ್ಧನ) ಇಟ್ಟಳು. ಇವನಿಗೆ ಜಯಸಿಂಹ ವಲ್ಲಭ ಕೀರ್ತಿವರ್ಮ ಎಂದು ಇನ್ನೊಂದು ಹೆಸರಿತ್ತೆಂದು ಗಂಗರ ಶಾಸನಗಳಿಂದ ತಿಳಿದು ಬರುತ್ತದೆ. ಇವನ ತಾಯಿ ನಿಜವಾದ ವೀರರಮಣಿಯಾಗಿದ್ದಳು. ಶತ್ರುವಿನಿಂದ ತನಗಾದ ಪರಾಭವವನ್ನು ದುರ್ಗತಿಯನ್ನು ಮರೆಯದೆ, ತನ್ನ ಮಗ ವಿಷ್ಣುವರ್ಧನನಿಗೆ ರಾಜಯೋಗ್ಯವಾದ ಶಿಕ್ಷಣವನ್ನು ಕೊಡಿಸಿ, ಸೇಡು ತೀರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಇವಳು ಎಷ್ಟು ಛಲವಂತೆಯೋ ಅಷ್ಟೇ ದೈವಭಕ್ತೆಯುಳ್ಳವಳೂ ಆಗಿದ್ದಳು. ತಾಯಿಯ ಗುಣಗಳನ್ನೆ ಮೈಗೂಡಿಸಿಕೊಂಡು ಬೆಳೆದ ವಿಷ್ಣುವರ್ಧನ ಪ್ರಾಪ್ತವಯಸ್ಕನಾದ ಅನಂತರ 'ಚಾಲುಕ್ಯಗಿರಿ'ಯಲ್ಲಿ ತಪಸ್ಸು ಮಾಡಿ 'ನಂದ ಭಗವತಿ ಗೌರಿ', 'ಕುಮಾರ',

[1] R. R. Diwakar (Ed): *Karnataka through the Ages*, p. 119

'ನಾರಾಯಣಿ', 'ಸಪ್ತಮಾತೃಕೆ'ಯರನ್ನು ಆರಾಧಿಸಿ, ದೈವಬಲದಿಂದ ಕದಂಬ, ಪಲ್ಲವ, ಗಂಗ ಮೊದಲಾದ ರಾಜರನ್ನು ಗೆದ್ದು ಚಾಲುಕ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ. ವಿಜಯಿಯಾದ ವಿಷ್ಣುವರ್ಧನ ತನ್ನ ಗೆಲುವಿನ ಸಂಕೇತವಾಗಿ ಪಲ್ಲವ ರಾಜಕುಮಾರಿಯನ್ನು ಮದುವೆಯಾದ. ಇವರ ಮಗನೇ ವಿಜಯಾದಿತ್ಯ, ಇವನ ಮಗನೇ ಮೊದಲನೆಯ ಪುಲಿಕೇಶಿ ಎಂದು ಪೂರ್ವ ಚಾಲುಕ್ಯ ಶಾಖೆಯ ಒಂದನೆಯ ವಿಷ್ಣುವರ್ಧನ ರಾಜರಾಜನ ದಾನ ಲೇಖನದಿಂದ ತಿಳಿದು ಬರುತ್ತದೆ[2].

ಚಾಲುಕ್ಯ ವಂಶದ ಸ್ವತಂತ್ರ ರಾಜರಲ್ಲಿ ಮೊದಲನೆಯವನಾದ (ಶಾಸನಗಳ ಪ್ರಕಾರ) ಮೊದಲನೆಯ ಪುಲಿಕೇಶಿಯ ಕಾಲದಲ್ಲಿ ಚಾಲುಕ್ಯ ರಾಜ್ಯ ಹೆಚ್ಚು ವಿಸ್ತಾರಗೊಂಡಿತ್ತು ಎಂದು ಖಚಿತವಾಗಿ ಹೇಳುವುದಕ್ಕೆ ಶಾಸನಗಳ ಆಧಾರವಿಲ್ಲ. ಬನವಾಸಿಯ ಕದಂಬರಿಂದ ಬಾದಾಮಿಯನ್ನು ಗೆದ್ದುಕೊಂಡು ಅದರ ಸುತ್ತ ಮುತ್ತಲ ಪ್ರದೇಶವನ್ನು ಇವನು ಆಳುತ್ತಿದ್ದಿರಬೇಕು[3]. ಇವನು ತನ್ನ ಬಲವನ್ನು ಹೆಚ್ಚಿಸಿಕೊಳ್ಳಲು ನೆರೆರಾಜ್ಯಗಳೊಂದಿಗೆ ವಿವಾಹ ಸಂಬಂಧವನ್ನು ಬೆಳೆಸಿದ್ದಿರಬಹುದು. ಏಕೆಂದರೆ ಇವನ ಮಗ ಮಂಗಲೀಶ ದುರ್ಲಭದೇವಿಯನ್ನು 'ಮಲತಾಯಿ' ಎಂದು ಕರೆದಿರುವುದರಿಂದ 1ನೇ ಪುಲಿಕೇಶಿಗೆ ಇನ್ನೂ ಹಲವು ಪತ್ನಿಯರಿದ್ದಿರಬಹುದೆಂಬ ಶಂಕೆ ಮೂಡುತ್ತದೆ.

ಬಪ್ಪೂರ ಕುಲದ ದುರ್ಲಭದೇವಿ ಇವನ ಪಟ್ಟಮಹಿಷಿಯಾಗಿದ್ದಳು. ಇವಳು ಶೈವಭಕ್ತಳೂ ನಿಪುಣ ರಾಜಕಾರಣಿಯೂ ಉದಾರ ಹೃದಯದವಳೂ ಆಗಿದ್ದಿರಬಹುದೆಂದು ಮಂಗಲೀಶನ ಮಹಾಕೂಟ ಸ್ತಂಭ ಶಾಸನ[4]ದಿಂದ ಗೊತ್ತಾಗುತ್ತದೆ. ಈ ಶಾಸನದಲ್ಲಿ ಕಿಸುವೊಳಲ್, ಕೆಂದೂರುಮಾನ್ಯ, ನಂದಿಗ್ರಾಮ, ವ್ರೀಹಿಮುಖ, ಶ್ರೀಯಂಬಾಟಕ ಇನ್ನೂ ಮೊದಲಾದ ಹತ್ತು ಗ್ರಾಮಗಳನ್ನು ತನ್ನ ಮಲತಾಯಿಯಾದ (ಸ್ವಗುರುಪತ್ನಿ) ದುರ್ಲಭದೇವಿಯ ಅಪ್ಪಣೆಯ ಮೇರೆಗೆ ಮಕುಟೇಶ್ವರ ದೇವಸ್ಥಾನಕ್ಕೆ ದಾನ ಮಾಡಿದ–ಎಂದಿದೆ. ದುರ್ಲಭದೇವಿ ಬಾದಾಮಿಯ ಸುತ್ತಮುತ್ತಲಿನ ಕೆಲವು ಪ್ರಾಂತ್ಯಗಳನ್ನು ಆಳುತ್ತಿದ್ದಳೆಂದು ತಿಳಿಯಬಹುದು. ಇವಳನ್ನು 'ಸ್ವಗುರುಪತ್ನಿ' ಎಂದಿರುವುದಕ್ಕೆ 'ಮಲತಾಯಿ' ಅಥವಾ 'ಅಣ್ಣನ ಹೆಂಡತಿ' ಎಂದು ವಿದ್ವಾಂಸರು ಭಿನ್ನಾಭಿಪ್ರಾಯ ಸೂಚಿಸಿದ್ದಾರೆ. ಆದರೆ 1ನೆಯ ಪುಲಿಕೇಶಿಯ ಮಗ 1ನೆಯ ಕೀರ್ತಿವರ್ಮ ಸೇಂದ್ರಕ ವಂಶದ ದೊರೆ ಶ್ರೀವಲ್ಲಭ ಸೇನಾನಂದನ ಸಹೋದರಿಯನ್ನು ಪಟ್ಟಮಹಿಷಿಯನ್ನಾಗಿ ಮಾಡಿಕೊಂಡಿದ್ದನೆಂಬ ಸಂಗತಿ 2ನೆಯ ಪುಲಿಕೇಶಿಯ ಚಿಪಳೂಣ ತಾಮ್ರ ಶಾಸನದಿಂದ[5] ಗೊತ್ತಾಗುತ್ತದೆ. ಈ ಮೇಲಿನ ಕಾರಣದಿಂದ ದುರ್ಲಭದೇವಿ 1ನೆಯ ಪುಲಿಕೇಶಿಯ ಪಟ್ಟಮಹಿಷಿಯಾಗಿದ್ದಳೆಂದು ತಿಳಿಯಬಹುದು. ಲಾಕುಳ ಶೈವರು ಕರ್ನಾಟಕದಲ್ಲಿ ಕಟ್ಟಿಸಿದ ಅತ್ಯಂತ ಪ್ರಾಚೀನ ದೇವಸ್ಥಾನಗಳ ಗುಂಪಿಗೆ ಮಕುಟೇಶ್ವರ ದೇವಾಲಯ ಸೇರಿರುವುದರಿಂದ ಇವಳು ಶಿವನ ಆರಾಧಕಳಾಗಿ ಶೈವಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದಳು ಎಂದು ತಿಳಿಯಬಹುದು. ಗೋವಾ ತಾಮ್ರ ಶಾಸನದಲ್ಲಿ[6] ಆದಿ ಮಹಾ ಬಪ್ಪೂರ ಕುಲದ ಸತ್ಯಾಶ್ರಯ ಧ್ರುವರಾಜ ಇಂದ್ರವರ್ಮ ರೇವತಿ ದ್ವೀಪವನ್ನು ನಾಲ್ಕು ವಿಷಯಗಳನ್ನು ಕ್ರಿ. ಶ. 610–11ರಲ್ಲಿ ಆಳುತ್ತಿದ್ದನೆಂದು ಹೇಳಿದೆ. ಇದರಿಂದ ದುರ್ಲಭದೇವಿ ಚಾಲುಕ್ಯರ ಸಾಮಂತ ರಾಜಮನೆತನದಿಂದ ಬಂದವಳೂ ಸುಸಂಸ್ಕೃತಳೂ ಆಗಿರಬಹುದೆಂದು ಊಹಿಸಬಹುದು.

1ನೆಯ ಕೀರ್ತಿವರ್ಮನ ಮಗ 2ನೆಯ ಪುಲಿಕೇಶಿ ತನ್ನ ಸಾಮಂತರಲ್ಲೊಬ್ಬನಾದ ಕದಂಬ ರಾಜಕುಮಾರಿ ಅಗ್ರಮಹಾದೇವಿಯನ್ನು ಮದುವೆಯಾಗಿದ್ದನೆಂಬುದು ಮಾರಟೂರು ತಾಮ್ರಶಾಸನದಿಂದ ತಿಳಿದು ಬರುತ್ತದೆ[7]. ಪುಲಿಕೇಶಿ ಪಟ್ಟಕ್ಕೆ ಬರುವ ತರುಣದಲ್ಲಿ ತನ್ನ ಚಿಕ್ಕಪ್ಪನಾದ ಮಂಗಲೀಶನನ್ನು

---

[2] E. I. Vol. IV, p. 300

[3] E. I. Vol. VI p. 48. ; I. A Vol. VIII, p. 237

[4] I. A. XIX, p. 15

[5] E. I. III, p. 504

[6] J. B. B. R. A. S.; Vol. X; p. 348

[7] *Andhra Pradesh Govt. Archaeological series*, No. 6, p. 11

ಎದುರಿಸಬೇಕಾಯಿತು. ರಾಜ್ಯಕ್ಕಾಗಿ ಅಂತಃಕಲಹ ನಡೆದಿದ್ದಾಗ ಪ್ರತಿ ಸಾಮಂತರೂ ಸ್ವತಂತ್ರರಾಗಲು ಪ್ರಯತ್ನಿಸುತ್ತಿದ್ದರು. ಅಂಥ ಕ್ಲಿಷ್ಟ ಪರಿಸ್ಥಿತಿಯಲ್ಲಿ ಕದಂಬರನ್ನು ಸೋಲಿಸಿ8 ಪುಲಿಕೇಶಿಯು ಕದಂಬ ರಾಜಕುಮಾರಿಯಾದ ಅಗ್ರಮಹಾದೇವಿಯನ್ನು ಮದುವೆಯಾಗಿರಬಹುದು ಎಂದು ಗ್ರಹಿಸುವುದು ಸಮಂಜಸವೆನಿಸಬಹುದು.

ಸಾವಿತ್ರೀ ಸುವರ್ಚಲಾರುಂಧತೀ ಸ್ವಾಹಾ ಶಚೀ ಸಮ
ಸೌಶೀಲ್ಯನಯ ವಿನಯ ದಾನ ಸದ್‌ವೃತ್ತಾದರಾದಿರನೇಕ
ಸದ್ಗುಣೈರಪಹ ತಮನಸ್ಕಕದಂಬ ನಾಮಧೇಯಾಗ್ರ ಮಹಾದೇವ್ಯೋ॥

ಎಂದು ಶಾಸನದಲ್ಲಿ ಅಗ್ರಮಹಾದೇವಿಯನ್ನು ಸ್ತುತಿಸಿದೆ. ಇವಳು ಪುರಾಣ ಸ್ತ್ರೀಯರಾದ ಸಾವಿತ್ರೀ, ಸುವರ್ಚಲಾ, ಅರುಂಧತಿ. ಸ್ವಾಹಾ ಮತ್ತು ಶಚಿಯರಂತೆ ನಯವಿನಯ ದಾನ ಸೌಶೀಲ್ಯಾದಿ ಸದ್ಗುಣಗಳಿಂದ ಕೂಡಿದವಳಾಗಿದ್ದಳೆಂದು ತಿಳಿದು ಬರುತ್ತದೆ. ಅನೇಕ ವೇದ ಪಾರಂಗತರಾದ ಬ್ರಾಹ್ಮಣರಿಗೆ ಮಾರೂಟರು ಗ್ರಾಮವನ್ನು ಅಗ್ರಹಾರವಾಗಿ ದಾನ ಮಾಡಿದನೆಂದು ಹೇಳಿದೆ.

ಎರಡನೆಯ ಪುಲಿಕೇಶಿಗೆ ಕ್ರಮವಾಗಿ ಚಂದ್ರಾದಿತ್ಯ, ರಣರಾಗವರ್ಮ, ಆದಿತ್ಯವರ್ಮ, ವಿಕ್ರಮಾದಿತ್ಯ ಮತ್ತು ಧಾರಾಶ್ರಯ ಜಯಸಿಂಹವರ್ಮ ಎಂದು ಐದು ಜನ ಗಂಡು ಮಕ್ಕಳು, ಅಂಬೇರಾ ಎಂಬ ಹೆಣ್ಣು ಮಗಳು ಇದ್ದರು. ಹೊಸೂರು ತಾಮ್ರಶಾಸನದಲ್ಲಿ9 ಪುಲಿಕೇಶಿ ತನ್ನ ಮಗಳು ಅಂಬೇರಾ ಎಂಬುವಳ ವಿಜ್ಞಾಪನೆಯ ಮೇರೆಗೆ ದಾನ ಮಾಡಿದನೆಂದು ಹೇಳಿದೆ. 'ಅಂಬೇರಾ' ಎಂದರೆ 'ಪಾರ್ವತಿಯನ್ನು ಪ್ರೀತಿಸುವವಳು' ಅರ್ಥಾತ್ ಪಾರ್ವತಿಯ ಆರಾಧಕಳು ಎಂದು ಅರ್ಥವಾಗುತ್ತದೆ. ಆದ್ದರಿಂದ ಅಂಬೇರಾ ಶಿವಭಕ್ತಳಾಗಿದ್ದಳೆಂದು ಗೊತ್ತಾಗುತ್ತದೆ.

2ನೆಯ ಪುಲಿಕೇಶಿಯ ಮೊದಲನೆಯ ಮಗನಾದ ಚಂದ್ರಾದಿತ್ಯನ ಹೆಂಡತಿ ವಿಜಯ ಭಟ್ಟಾರಿಕೆ ಸಂಸ್ಕೃತ ಪಂಡಿತಳೂ, ರಾಜ್ಯಾಡಳಿತದಲ್ಲಿ ನಿಪುಣೆಯೂ, ನೀಲವರ್ಣದವಳೂ ತನ್ನ ವಿದ್ವತ್ತಿನ ಬಗ್ಗೆ ಅಪಾರ ಅಭಿಮಾನವುಳ್ಳವಳೂ ಆಗಿದ್ದಳು. ನೆರೂರು10 ಮತ್ತು ಕೋಚ್ರೇ11 ತಾಮ್ರ ಶಾಸನಗಳಲ್ಲಿ ಇವಳು 'ಸ್ವರಾಜ್ಯ ಪಂಚಮ ಸಂವತ್ಸರೆ' ಎಂದು ಆಳ್ವಿಕೆಯ ಕಾಲಗಣನೆಯನ್ನು ಮಾಡುವುದರಿಂದ ವಿಕ್ರಮಾದಿತ್ಯನ ಅಣ್ಣನಾದ ಚಂದ್ರಾದಿತ್ಯನ 'ಪ್ರಿಯಮಹಿಷಿ'ಯೆಂದೂ, ಸ್ವತಂತ್ರವಾಗಿ ರಾಜ್ಯಭಾರ ಮಾಡುತ್ತಿದ್ದಳೆಂದೂ ತಿಳಿಯಬಹುದು. ವಿಜಯ ಮಹಾದೇವಿಯ ಹೆಸರು 1–18 ಸಾಲುಗಳಲ್ಲಿ 'ಪೋಡಿ' ಅಥವಾ 'ಪೋಟಿ' ಎಂದು ಹೇಳಿದೆ12. ಈ ಕಾಲದ ಇತರ ಕೆಲವು ಶಾಸನಗಳಲ್ಲಿ ಗೋವಿಂದ ಪೊಡ್ಡಿ, ಬದಿಪೊಡ್ಡಿ, ವಿನಾಪೋಟಿ ಎಂಬ ವೇಶ್ಯೆಯರ ಹೆಸರು ಬರುತ್ತದೆ. ಈ ಕಾಲದ ಸಮಾಜದಲ್ಲಿ ವೇಶ್ಯಾ ಸ್ತ್ರೀಯರು ವಿಶೇಷವಾಗಿ ಗೌರವಿಸಲ್ಪಡುತ್ತಿದ್ದರು. ಇವರು ರೂಪಲಾವಣ್ಯ ಬುದ್ಧಿಕೌಶಲ ಮತ್ತು ಕಲಾಸಕ್ತಿಗಳಿಗಾಗಿ ಹೆಸರಾಗಿದ್ದರಲ್ಲದೆ ಶ್ರೀಮಂತಿಕೆ. ವಿಲಾಸ ವೈಭವಗಳಿಗಾಗಿಯೂ ಪ್ರಖ್ಯಾತರೆನಿಸಿದ್ದರು. ವಿಜಯಾದಿತ್ಯನ ವೇಶ್ಯೆ 'ವಿನಾಪೋಟಿ' ಎಂಬವಳು ರಾಜನ 'ಪ್ರಾಣವಲ್ಲಭೆ'ಯೆನಿಸಿದ್ದಳೆಂದೂ, ಮಹಾಕೂಟದ ದೇವಸ್ಥಾನಕ್ಕೆ ಒಂದು ಸುವರ್ಣಪೀಠ. ಒಂದು ರಜಚ್ಛತ್ರ ಮತ್ತು 800 ಮತ್ತರ ಭೂಮಿಯನ್ನು ದಾನಮಾಡಿದಳೆಂದೂ ಮಹಾಕೂಟ ಶಿಲಾ ಶಾಸನ13ದಿಂದ ತಿಳಿದು ಬರುತ್ತದೆ. ಈ ನಿದರ್ಶನಗಳಿಂದ ವಿಜಯ ಭಟ್ಟಾರಿಕೆ ವೇಶ್ಯೆಯರ ಮನೆತನದಿಂದ ಬಂದವಳಿರಬಹುದೇ ಎಂಬ ಶಂಕೆಯು ತಲೆದೋರುತ್ತದೆ.

ಸಂಸ್ಕೃತ ಸಾಹಿತ್ಯದಲ್ಲಿ ಸುಪ್ರಸಿದ್ಧವಾದ ಐತಿಹಾಸಿಕ ಕಾವ್ಯವಾದ 'ಕೌಮುದೀ ಮಹೋತ್ಸವ'ದ ಕರ್ತೃವಾದ 'ವಿಜ್ಜಿಕಾ' ಎಂಬುವಳು ಈ ವಿಜಯ ಭಟ್ಟಾರಿಕೆಯೇ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ.

---

8 E. I. Vol. VI., p. 4
9 I. A. VIII, p. 96
10 I. A. VII, p. 163
11 I. A. VIII, p. 44
12 I. A. VIII, p. 44
13 I. A. X; p. 102

ಕಾಳಿದಾಸನ ತರುವಾಯ ವೈದರ್ಭಿ ಶೈಲಿಯಲ್ಲಿ ವಿಜ್ಜಿಕೆಯಂತೆ ಲೀಲಾಜಾಲವಾಗಿ ಬರೆಯ ಬಲ್ಲವರು ಬೇರಾರೂ ಇಲ್ಲ ಎಂದು ಸುಪ್ರಸಿದ್ಧ ರಾಜಶೇಖರ ತನ್ನ ಕಾವ್ಯ ಮೀಮಾಂಸೆಯಲ್ಲಿ ಹೊಗಳಿದ್ದಾನೆ. ಸುಭಾಷಿತ ಗ್ರಂಥಗಳಲ್ಲಿ ವಿಜಯ ಮಹಾದೇವಿಯ ಬಿಡಿಯ ಪದ್ಯಗಳು ದೊರೆಯುತ್ತವೆ[14]. ಅವೆಲ್ಲ ಒಬ್ಬಳವೋ ಅದೇ ಹೆಸರಿನ ಬೇರೆ ಕವಯಿತ್ರಿಯವೋ ಹೇಳಲಿಕ್ಕಾಗುವುದಿಲ್ಲ. ಬ್ರಹ್ಮ, ವ್ಯಾಸ ಮತ್ತು ವಾಲ್ಮೀಕಿ ಈ ಮೂವರು ಇವಳಿಗೆ ಪೂಜ್ಯರು. ಈ ಮಹಾಕವಿಗಳಿಗೆ ನಮಸ್ಕಾರ; ಆದರೆ ಸಾಂಪ್ರತ ಕಾಲೀನರು ತಮ್ಮ ಗದ್ಯ, ಪದ್ಯವನ್ನು ಪ್ರದರ್ಶಿಸ ಹೊರಟರೆ ಕರ್ಣಾಟಕ ರಾಜಪ್ರಿಯೆಯಾದ ನಾನು ಅವರ ತಲೆಯ ಮೇಲೆ ಪಾದಾಚರಣವನ್ನು ಇಡಬೇಕಾಗುವುದು–ಎಂದು ಅವಳು ಘೋಷಿಸಿಕೊಂಡಿದ್ದಾಳೆ.

ದಂಡಿ ತನ್ನ 'ಕಾವ್ಯಾದರ್ಶ'ದಲ್ಲಿ ವಿದ್ಯಾಧಿದೇವತೆಯಾದ ಸರಸ್ವತಿಯನ್ನು 'ಸರ್ವಶುಕ್ಲಾ ಸರಸ್ವತಿ' ಎಂದು ಸ್ತುತಿಸಿದ್ದಾನೆ. ಈ ಬಣ್ಣನೆಯನ್ನು ವಿಜಯ ಭಟ್ಟಾರಿಕೆ ತೆಗಳಿ 'ನೀಲೋತ್ಪಲ ದಲ ಶ್ಯಾಮೆ' ಯಾದ ನನ್ನನ್ನು ದಂಡಿ ನೋಡಿರಲಿಲ್ಲ. ನೋಡಿದ್ದರೆ ಸರಸ್ವತಿಯನ್ನು ಶುಕ್ಲವರ್ಣದಿಂದ ಬಣ್ಣಿಸುತ್ತಿರಲಿಲ್ಲ ಎಂದು ಮೂದಲಿಸಿದ್ದಾಳೆ. ಇದರಿಂದ ವಿಜ್ಜಿಕೆ ಬಹುಶಃ ಕಪ್ಪು ಬಣ್ಣದವಳಾಗಿದ್ದಿರಬಹುದು ಎನಿಸುತ್ತದೆ ಮತ್ತು ಅವಳಿಗಿದ್ದ ಅತಿಯಾದ ಅಭಿಮಾನ ವ್ಯಕ್ತಪಡುತ್ತದೆ.

ಇಮ್ಮಡಿ ಪುಲಕೇಶಿಯ ಎರಡನೆಯ ಮಗ ರಣರಾಗವರ್ಮನ ಮಗಳನ್ನು ಗಂಗ ಮನೆತನದ ಕಲಿಯುಗನ ಮಗನಾದ ಮಾಧವನಿಗೆ ಕೊಟ್ಟಿತ್ತು ಎಂಬ ಅಂಶ 1ನೆಯ ವಿಕ್ರಮಾದಿತ್ಯನ ಹೊನ್ನೂರ ತಾಮ್ರಶಾಸನದಿಂದ[15] ಗೊತ್ತಾಗುತ್ತದೆ. ಮಾಧವ ಮತ್ತು ಅವನ ಹೆಂಡತಿಯ ವಿಜ್ಞಾಪನೆಯ ಮೇರೆಗೆ 1ನೆಯ ವಿಕ್ರಮಾದಿತ್ಯ ತನ್ನ ಆಳ್ವಿಕೆಯ 16ನೆಯ ವರ್ಷ ಶಕ 592ರಲ್ಲಿ ಕಂಚಿಯ ಹತ್ತಿರ ಮಲ್ಲಿಯೂರಲ್ಲಿ ಬೀಡುಬಿಟ್ಟಾಗ ದಾನ ಮಾಡಿದ ಸಂಗತಿ ಇದೆ.

1ನೆಯ ವಿಕ್ರಮಾದಿತ್ಯ ಯುದ್ಧ ಭೂಮಿಯಲ್ಲಿ ಇದ್ದಾಗ ಗಂಗ ಮಹಾದೇವಿಯ ಇಚ್ಛೆಯಂತೆ ದಾನ ಮಾಡಿದನೆಂದು ಗದ್ವಾಲ ತಾಮ್ರಶಾಸನದಲ್ಲಿ[16] ಹೇಳಿರುವುದರಿಂದ 1ನೆಯ ವಿಕ್ರಮಾದಿತ್ಯನ ಹೆಂಡತಿ ಗಂಗರ ರಾಜಕುಮಾರಿಯೆಂದೂ, ಸ್ತ್ರೀಯರು ದಂಡಯಾತ್ರೆಗಳಲ್ಲಿ ಪತಿಗಳಿಗೆ ಸಹಕಾರಿಣಿಯರಾಗಿ ಹೋಗುತ್ತಿರಬಹುದೆಂಬ ಅಂಶವೂ ವ್ಯಕ್ತವಾಗುತ್ತದೆ.

1ನೆಯ ವಿಕ್ರಮಾದಿತ್ಯನ ಮಗನಾದ ವಿನಯಾದಿತ್ಯನ ಹೆಂಡತಿ 'ವಿನಯವತಿ'. ಇವಳು ರಾಜಧಾನಿಯಾದ ವಾತಾಪಿಯಲ್ಲಿ ತೆರಿಗೆಗಳಿಂದ ಬಂದ ಹಣದಿಂದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಪ್ರತಿಷ್ಠಾಪನೆ ಮಾಡಿಸಿದ್ದಳು. ಇವಳು ಬಹು ಧರ್ಮಿಷ್ಠಳೂ, ದೈವಭಕ್ತಳೂ ಆಗಿದ್ದಳೆಂದೂ ಊಹಿಸಬಹುದು[17].

ವಿನಯಾದಿತ್ಯನ ಮಗಳಾದ ಕುಂಕುಮ ಮಹಾದೇವಿಯನ್ನು ಅಳುಪ ರಾಜನಾದ ಚಿತ್ರವಾಹನನಿಗೆ ಮದುವೆ ಮಾಡಿಕೊಡಲಾಗಿತ್ತು. ಇವರಿಬ್ಬರೂ ಜೈನ ಧರ್ಮವನ್ನು ಹೆಚ್ಚಾಗಿ ಪೋಷಿಸುತ್ತಿದ್ದರು. ಕುಂಕುಮ ಮಹಾದೇವಿ ಪಕ್ಷಿರಥ ಮೊದಲಾಗಿ ಹಿರಣ್ಯಗರ್ಭದಾನ ಮಾಡಿ ಅವಭೃಥ ಸ್ನಾನದಿಂದ ಪವಿತ್ರಳಾಗಿ ಪುಲಿಗೆರೆ ನಗರ (ಈಗಿನ ಲಕ್ಷ್ಮೇಶ್ವರ)ದಲ್ಲಿ ಜಿನ ಮಂದಿರವನ್ನು ಕಟ್ಟಿಸಿದ್ದಳು. ವಿಜಯಾದಿತ್ಯನ ಆಳ್ವಿಕೆಯ 11ನೆಯ ವರ್ಷದಲ್ಲಿ ಕಿಸುವೊಳಲಿನಲ್ಲಿ ಇದ್ದಾಗ 'ಚಾಳುಕ್ಯ ರಾಜ್ಯಾಭಿವೃದ್ಧಿ ಹೇತುಭೂತ'ನಾದ ಚಿತ್ರವಾಹನ ನರೇಂದ್ರನ ವಿಜ್ಞಾಪನೆಯಿಂದ ತನ್ನ ತಂಗಿ ಕಟ್ಟಿಸಿದ ಜಿನದೇಗುಲಕ್ಕೆ ಗುಡಿಗೆರೆ ಎಂಬ ಗ್ರಾಮವನ್ನು ದಾನಕೊಟ್ಟನೆಂದು ತಿಳಿದು ಬರುತ್ತದೆ[18].

ವಿಜಯಾದಿತ್ಯನ ಮಗ 2ನೆಯ ವಿಕ್ರಮಾದಿತ್ಯ ಅಪ್ರತಿಮ ಶೂರನಾಗಿದ್ದ. ಇವನ ಕಾಲದಲ್ಲಿ ಚಾಲುಕ್ಯ ಸಾಮ್ರಾಜ್ಯ ಅತಿಯಾಗಿ ವಿಸ್ತಾರಗೊಂಡಿದ್ದೇ ಅಲ್ಲದೆ, ಕಲೆಗೆ ಹೆಚ್ಚು ಪ್ರೋತ್ಸಾಹ ದೊರಕಿತು. ರಾಣಿಯರೂ, ಪುರ ಪ್ರಮುಖರೂ ಎಲ್ಲರೂ ಹೆಚ್ಚು ಹೆಚ್ಚಾಗಿ ಕಲೆಯ ಬೆಳವಣಿಗೆಗೆ ಶ್ರಮಿಸಿ ತಮ್ಮ ಅಮೂಲ್ಯವಾದ ಕೊಡುಗೆಯನ್ನು ಸಲ್ಲಿಸಿದರು. ಇವನು ಕಲಚೂರ್ಯ ವಂಶದ ಇಬ್ಬರು ರಾಜಕುಮಾರಿ

[14] R. S. ಪಂಚಮುಖಿ : ಕರ್ನಾಟಕದ ಇತಿಹಾಸ, p. 136
[15] M. A. R., 1939, p. 129
[16] E. I. Vol. X, p. 100
[17] I. A. X, p. 60
[18] E. I. XXXII, pt. Shiggon Copper plate

ಯರನ್ನು ಮದುವೆಯಾಗಿದ್ದ. ಅವರು ಲೋಕ ಮಹಾದೇವಿ ಮತ್ತು ಆಕೆಯ ತಂಗಿ ತ್ರೈಲೋಕ್ಯ ಮಹಾದೇವಿ. ಪಲ್ಲವರ ಮೇಲೆ ಅವರ ಪತಿ ಗಳಿಸಿದ ಗೆಲುವಿನ ಸ್ಮಾರಕವಾಗಿ ಲೋಕೇಶ್ವರ ದೇವಾಲಯವನ್ನು ಲೋಕಮಹಾದೇವಿಯೂ, ತ್ರೈಲೋಕೇಶ್ವರ ದೇವಾಲಯವನ್ನು ತ್ರೈಲೋಕ ಮಹಾದೇವಿಯೂ ಪಟ್ಟದ ಕಲ್ಲಿನಲ್ಲಿ ಕಟ್ಟಿಸಿದರು. 19. ಈ ಎರಡು ದೇವಾಲಯಗಳನ್ನೂ ಕಟ್ಟಿದವನು 'ಗುಂಡ ಅನಿವಾರಿತಾಚಾರಿ' ಎಂಬವನು. ಲೋಕಮಹಾದೇವಿ ಇವನಿಗೆ 'ತ್ರಿಭುವನಾಚಾರಿ' ಎಂಬ ಬಿರುದನ್ನು ಕೊಟ್ಟಳು. ಇಂದೂ 'ವಿರೂಪಾಕ್ಷ' ಹಾಗೂ 'ಮಲ್ಲಿಕಾರ್ಜುನ' ದೇವಾಲಯಗಳೆಂದು ಹೆಸರು ಪಡೆದಿರುವ ಈ ದೇವಾಲಯಗಳನ್ನು ಪಟ್ಟದ ಕಲ್ಲಿನಲ್ಲಿ ನೋಡಬಹುದು. ಪಟ್ಟದ ಕಲ್ಲಿನಲ್ಲಿ ಸುಮಾರು ಹತ್ತಕ್ಕೂ ಹೆಚ್ಚು ಶೈವ ದೇವಾಲಯಗಳಿವೆ. ಇದು ಚಾಲುಕ್ಯರ ಕಾಲದಲ್ಲಿ ಪ್ರಸಿದ್ಧ ಶೈವಕ್ಷೇತ್ರವೂ ಚಾಲುಕ್ಯರ ಪಟ್ಟ ಬಂಧದ ರಾಜಧಾನಿಯೂ ಆಗಿತ್ತೆಂದು ತಿಳಿದು ಬರುತ್ತದೆ.

ಲೋಕಮಹಾದೇವಿ ಸಂಗೀತ ನೃತ್ಯ ಕಲೆಗಳಿಗೂ ಹೆಚ್ಚು ಪ್ರೋತ್ಸಾಹ ನೀಡಿದಳು. ಇವಳ ಕಾಲದಲ್ಲಿ ಹೊಸ ಮಾದರಿಯ ನೃತ್ಯಕಲೆಯೊಂದು ಪ್ರೋತ್ಸಾಹ ಪಡೆಯಿತು. ನೃತ್ಯಕಲಾವಿದ 'ಅಚಲ' ಎಂಬುವನಿಗೆ ಇವಳು ಆಶ್ರಯ ನೀಡಿದ್ದಳು.20

2ನೆಯ ವಿಕ್ರಮಾದಿತ್ಯನ ಮಗಳಾದ ವಿನಯವತಿಯನ್ನು ರಾಷ್ಟ್ರಕೂಟರ ದೊರೆ ಮೊದಲನೆಯ ಗೋವಿಂದ ರಾಜ ಮದುವೆಯಾಗಿದ್ದನು. ಕ್ರಿ. ಶ. 771ರ ಸೇಲಂ ತಾಮ್ರ ಶಾಸನದಲ್ಲಿ ಗಂಗ ಶ್ರೀ ಪುರುಷನ ಮಗನಾದ ದುಗ್ಗಮಾರನ ಹೆಂಡತಿ ಕಂಚಿಯಬ್ಬೆ ರಾಷ್ಟ್ರಕೂಟ ಗೋವಿಂದ ರಾಜನ ಮಗಳೆಂದು ಹೇಳಿದೆ ಮತ್ತು ಗೋವಿಂದ ರಾಜನು ಚತುರ್ದ್ವಿಗಧಿಪತಿಯಾದ ವಿಕ್ರಮಾದಿತ್ಯನ ಮಗಳಾದ ವಿನಯವತಿಯನ್ನು ಮದುವೆಯಾಗಿದ್ದನೆಂದು ಹೇಳಿದೆ. ಈ ಕಾಲದಲ್ಲಿ ಚತುರ್ದ್ವಿಗಧಿಪತಿಯೆಂದು ಪ್ರಸಿದ್ಧಿಯಾದ ವಿಕ್ರಮಾದಿತ್ಯನು ಚಾಲುಕ್ಯ ವಿಕ್ರಮಾದಿತ್ಯನೇ (733–45) ಆಗಿರಬೇಕು ಮತ್ತು ರಾಷ್ಟ್ರಕೂಟ ರಾಜನಾದ ಗೋವಿಂದನು ಆ ವಂಶದ ಒಂದನೆಯ ಗೋವಿಂದನಾಗಿರಬೇಕು. (755). ಹಾಗಿದ್ದ ಪಕ್ಷದಲ್ಲಿ ಎರಡನೆಯ ವಿಕ್ರಮಾದಿತ್ಯನ ಮಗಳಾದ ವಿನಯವತಿಯನ್ನು ರಾಷ್ಟ್ರಕೂಟ ಒಂದನೇ ಗೋವಿಂದ ಮದುವೆಯಾಗಿದ್ದನೆಂದು ಖಚಿತವಾಗುತ್ತದೆ.

ಇಮ್ಮಡಿ ಪುಲಿಕೇಶಿಯ ಆಸ್ಥಾನಕ್ಕೆ ಭೇಟಿ ಕೊಟ್ಟಿದ್ದ ಚೀನಾ ಯಾತ್ರಿಕ ಹ್ಯೂಯೆನ್‌ತ್ಸಾಂಗನ ಹೇಳಿಕೆಯಂತೆ ರಾಜರ ಮತ್ತು ಶ್ರೀಮಂತ ಕುಲೀನರ ವೇಷ ಭೂಷಣಗಳು ಆಡಂಬರ ಪೂರ್ಣವಾಗಿದ್ದುವು. ಗಂಡಸರು, ಹೆಂಗಸರು ಎಲ್ಲರೂ ರತ್ನಖಚಿತ ಕಂಠಹಾರಗಳನ್ನೂ ಮಿಸುನಿಯ ವೇಷಭೂಷಣಗಳನ್ನೂ ಪ್ರತಿದಿನವೂ ಧರಿಸುತ್ತಿದ್ದರು. ಸ್ತ್ರೀಯರು ಪೂರ್ಣವಾಗಿ ಮೈ ಮುಚ್ಚುವಂತೆ ದೀರ್ಘಾಂಬರಧಾರಿಗಳಾಗಿದ್ದರು.

ಆಗಿನ ಕಾಲದ ಸ್ತ್ರೀಯರ ವೇಷಭೂಷಣಗಳು ಹೇಗಿದ್ದುವೆಂಬುದನ್ನು ತಿಳಿಯಲು, ಆ ಕಾಲದ ಶಿಲ್ಪಕಲೆಗಳು ನಮಗೆ ಪ್ರತ್ಯಕ್ಷ ಆಧಾರಗಳಾಗಿವೆ. ಶಿಲಾ ದೇವಾಲಯಗಳಲ್ಲಿರುವ ಸ್ತ್ರೀ ಪುರುಷರ ವಿಗ್ರಹಗಳ ಕೆತ್ತನೆಗಳಿಂದ ಆಗಿನ ಜನರು ನಾನಾ ರೀತಿಯ ಕರ್ಣಕುಂಡಲ, ಕಂಠಹಾರ, ಕಾಲ್ಕಡಗ, ಕಂಕಣಗಳು, ಮೇಖಲೆಗಳು ಇವೇ ಮೊದಲಾದ ಆಭರಣಗಳನ್ನು ಧರಿಸುತ್ತಿದ್ದರೆಂಬುದು ಗೊತ್ತಾಗುತ್ತದೆ.

ಯಾವ ಕಾಲದಲ್ಲೇ ಆಗಲಿ, ಸಮಾಜದಲ್ಲಿ ಸ್ತ್ರೀಯರಿಗೆ ಲಭಿಸುವ ಗೌರವ ಅಂದಿನ ಸುಸಂಸ್ಕೃತಿಯನ್ನು ವ್ಯಕ್ತಪಡಿಸುತ್ತದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಸ್ತ್ರೀಯರಿಗೆ ಹೆಚ್ಚಿನ ಸ್ವಾತಂತ್ರ್ಯ ಹಾಗೂ ಗೌರವ ದೊರಕುತ್ತಿತ್ತು. ಆದ್ದರಿಂದಲೇ, ಚಾಲುಕ್ಯ ಸಾಮ್ರಾಜ್ಯ ಒಳ್ಳೆಯ ರಾಜಕಾರ್ಯ ನಿಪುಣೆಯರನ್ನು ಕಲಾರಾಧಕರನ್ನು, ಕವಯಿತ್ರಿಯರನ್ನು, ದಾನಧರ್ಮಗಳಲ್ಲಿ ವಿಶೇಷತಃ ಆಸಕ್ತಿಯಿದ್ದವರನ್ನು ಸೃಷ್ಟಿಸಲು ಸಾಧ್ಯವಾಯಿತು. ಚಾಲುಕ್ಯ ರಾಜಚಿಹ್ನೆ ವಿಷ್ಣುವಿನ ಅವತಾರವಾದ 'ವರಾಹ'ವಾದರೂ ಬಹಳ ಮಂದಿ ರಾಣಿಯರು ಶೈವಧರ್ಮವನ್ನು ಪೋಷಿಸಿ, ಅದರ ಬಹುಮುಖ ಬೆಳವಣಿಗೆಗೆ ಕಾರಣರಾದರು. ಚಾಲುಕ್ಯ ಸಾಮ್ರಾಜ್ಯದ ಸರ್ವತೋಮುಖ ಬೆಳವಣಿಗೆಗೆ ಚಾಲುಕ್ಯರ ರಾಣಿಯರು ಸಲ್ಲಿಸಿದ ಸೇವೆ ಕೊಡುಗೆಗಳು, ಕನ್ನಡನಾಡಿನ ಸಾಂಸ್ಕೃತಿಕ ಇತಿಹಾಸ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲು ಅರ್ಹವಾಗಿವೆ.

---

[19] I. A. X, p. 164, 166, 167
[20] M. V.Krishna Rao : *Glimpses of Karnataka*, p. 29

ಬಾದಾಮಿ ಚಾಲುಕ್ಯರ ವಂಶಾವಳಿ

ವಿಜಯಾದಿತ್ಯ
ಹೆಂ-ಗಂಗ ದೊರೆ ದುರ್ವಿನೀತನ ಮಗಳು

↓

ವಿಷ್ಣುವರ್ಧನ
ಹೆಂ-ಪಲ್ಲವೆ ದೊರೆ ತ್ರಿಲೋಚನ ಪಲ್ಲವನ ಮಗಳು

↓

1ನೆಯ ಪುಲಿಕೇಶಿ(550)
ಹೆಂ-ಬಟ್ಪೂರ ಕುಲದ ದುರ್ಲಭದೇವಿ

↓

1ನೆಯ ಕೀರ್ತಿವರ್ಮ (566-67–597-98) ಹೆಂ-ಸೇಂದ್ರಕ ಶ್ರೀವಲ್ಲಭ ಸೇನಾನಂದನ ಸಹೋದರಿ	ಮಂಗಲೀಶ (597–97–608)

↓

2ನೆಯ ಪುಲಿಕೇಶಿ
ಹೆಂ-ಕದಂಬ ಅಗ್ರಮಹಾದೇವಿ (609–642)

↓

ಚಂದ್ರಾದಿತ್ಯ ಹೆಂ-ವಿಜಯ ಭಟ್ಟಾರಿಕೆ (655–659)	ರಣರಾಗವರ್ಮ ಮಗಳು, ಗಂಡ- ಗಂಗ ಕಲಿಯುಂಗನ ಮಗ ಮಾಧವ	ವಿಕ್ರಮಾದಿತ್ಯ ಹೆಂ-ಗಂಗಾಮಹಾದೇವಿ (655–680)	ಆದಿತ್ಯವರ್ಮ	ಧಾರಾಶ್ರಯ ಜಯಸಿಂಹ ವರ್ಮ	(ಮಗಳು) ಅಂಬೇರಾ

↓

ವಿನಯಾದಿತ್ಯ (680–696) ಹೆಂ.ವಿನಯವತಿ

↓

ವಿಜಯಾದಿತ್ಯ(696–733)	ಕುಂಕುಮದೇವಿ, ಗಂಡ ಆಳುಪ ಮಹಾರಾಜ ಚಿತ್ರವಾಹನ

↓

2ನೇ ವಿಕ್ರಮಾದಿತ್ಯ
(733-34–746-47)

↓

ಹೆಂ-ಕಲಚೂರ್ಯ ವಂಶದ ಲೋಕ
ಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿ

↓

2ನೇಯ ಕೀರ್ತಿವರ್ಮ (746-47 ಮತ್ತು 757)	ವಿನಯವತಿ, ಗಂಡ-ರಾಷ್ಟ್ರಕೂಟ ದೊರೆ 1ನೇ ಗೋವಿಂದ ರಾಜ

ವಸ್ತುಕೋಶ

ಮಾನವ ವಿಕಾಸದ ಮೇಲೆ ಹೊಸಬೆಳಕು

ಮಾನವ ವಿಕಾಸದ ಅಧ್ಯಯನ ಎಷ್ಟೇ ತ್ವರಿತಗತಿಯಿಂದ ಸಾಗುತ್ತಿದ್ದರೂ, ಅದರ ವಿಷಯದಲ್ಲಿ ಇನ್ನೂ ಅನೇಕ ಅಂಶಗಳು ಹೊರಬಿದ್ದಿಲ್ಲ. ಮಾನವ ವಿಕಾಸವನ್ನು ಬಹು ಆಸಕ್ತಿ ಮತ್ತು ಶ್ರದ್ಧೆಗಳಿಂದ ಅಧ್ಯಯನ ಮಾಡುತ್ತಿರುವವರಲ್ಲಿ ಕೆನ್ಯಾದ ಲೀಕಿ ದಂಪತಿಗಳು ಬಹು ಮುಖ್ಯರು. ಇವರ ಹೆಸರನ್ನು ಕೇಳದ ಮಾನವ ಶಾಸ್ತ್ರಜ್ಞನಿಲ್ಲವೆಂದರೆ ಅತಿಶಯೋಕ್ತಿಯೇನಲ್ಲ. ಲೀಕಿ ದಂಪತಿಗಳ ಪುತ್ರ ರಿಚರ್ಡ್ ಲೀಕಿಯೂ ಮಾನವ ವಿಕಾಸ ಅಧ್ಯಯನದಲ್ಲಿ ತಮ್ಮ ತಂದೆತಾಯಿಯೊಡನೆ ಕೆಲಸಮಾಡುತ್ತಿದ್ದು, ಇತ್ತೀಚೆಗೆ ವಿಶ್ವದಲ್ಲಿ ಅತ್ಯಂತ ಪ್ರಾಚೀನ ಮಾನವ ತಲೆಬುರುಡೆಯನ್ನು ಪತ್ತೆ ಮಾಡಿದ್ದಾರೆ. ಈ ತಲೆ ಬರುಡೆ ಮತ್ತು ಅದಕ್ಕೆ ಸಂಬಂಧಿಸಿದ ಮೂಳೆಗಳು ಎರಡೂವರೆ ಮಿಲಿಯನ್ ವರ್ಷಗಳ ಪ್ರಾಚೀನತೆಯನ್ನು ಹೊಂದಿವೆ. ಇದುವರೆಗೂ ದೊರಕಿರುವ ಮಾನವನ ಮೂಳೆಗಳಲ್ಲಿ ಇದೇ ಪ್ರಾಚೀನತಮವಾದುದು. ಇದು ಪತ್ತೆಯಾದ ಮೇಲೆ ಮಾನವ ವಿಕಾಸದ ಅನೇಕ ಸಿದ್ಧಾಂತಗಳು ಬದಲಾಗಬೇಕಾಗುತ್ತವೆ. ಸಾಮಾನ್ಯವಾಗಿ ಹೇಳುವುದಾದರೆ ಮಾನವನ ಉಗಮ ಸುಮಾರು ಎರಡು ಮಿಲಿಯನ್ ವರ್ಷಗಳ ಹಿಂದೆ ಆಸ್ಟ್ರೊಲೊಪಿತೆಕೆಸ್ ಎಂಬ ಕಪಿ ಮಾನವನಿಂದ ಪ್ರಾರಂಭವಾಯಿತೆನ್ನುವುದು ಈವರೆಗಿನ ಸಿದ್ಧಾಂತ. ನೆಟ್ಟಗೆ ನಿಲ್ಲಬಲ್ಲ, ಎರಡು ಕಾಲುಗಳುಳ್ಳ ಮತ್ತು ದೊಡ್ಡದಾದ ತಲೆಬರುಡೆಯನ್ನುಳ್ಳ 'ಹೊಮೊ ಎರಕ್ಟಸ್' ಎಂದು ಕರೆಯಲ್ಪಡುವ ಮಾನವ ಕೇವಲ ಒಂದು ಮಿಲಿಯನ್ ವರ್ಷಗಳ ಹಿಂದೆ ಉಗಮಿಸಿದವನು.

ಆದರೆ ರಿಚರ್ಡ್ ಲೀಕಿಯವರು ಪತ್ತೆ ಹಚ್ಚಿರುವ ಈ ತಲೆ ಬುರುಡೆ ಮಾನವನ ಉಗಮದ ಕಾಲವನ್ನು ಎರಡೂವರೆ ಮಿಲಿಯನ್ ವರ್ಷಗಳ ಹಿಂದಕ್ಕೆ ಕೊಂಡೊಯ್ಯುತ್ತದೆ. ಅಷ್ಟೇ ಅಲ್ಲದೆ ಮಾನವ ಆಸ್ಟ್ರೊಲೊಪಿತೆಕಸ್ ಕಪಿಮಾನವನ ಮೂಲಕ ವಿಕಾಸ ಹೊಂದಲಿಲ್ಲವೆಂದೂ, ನೆಟ್ಟಗೆ ನಡೆಯುವ 'ಹೊಮೊ ಎರಕ್ಟಸ್' ಮಾನವ ಮತ್ತು ಆಸ್ಟ್ರೊಲೊಪಿತೆಕಸ್ ಮಾನವನೂ ಒಟ್ಟಿಗೆ ಜೀವಿಸುತ್ತಿದ್ದರೆಂದೂ ತಿಳಿದು ಬರುತ್ತದೆ. ಈ ಹೊಸ ತಲೆಬುರುಡೆಯ ಅಧ್ಯಯನ ಪೂರ್ಣಗೊಂಡ ಮೇಲೆ ಮಾನವ ವಿಕಾಸಕ್ಕೆ ಸಂಬಂಧಪಟ್ಟ ಅನೇಕ ಜಟಿಲ ಪ್ರಶ್ನೆಗಳು ಸರಳವಾಗಬಹುದೆಂದು ಆಶಿಸಬಹುದು.

—ಎ. ವಿ. ಎನ್.

ಕರ್ಣಾಟಕದ ಪ್ರಾಚೀನತಮ ಕನ್ನಡ ತಾಮ್ರಶಾಸನ

ಕರ್ಣಾಟಕದಲ್ಲಿ ನೂರಾರು ತಾಮ್ರಶಾಸನಗಳು ದೊರಕಿರುವುದು ಮತ್ತು ಶಾಸನತಜ್ಞರ ಶೋಧನೆಗಳಿಂದಾಗಿ ಇಂದಿಗೂ ದೊರಕುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿ. ಇತ್ತೀಚೆಗೆ ಕರ್ಣಾಟಕದಲ್ಲೇ ಅತ್ಯಂತ ಪ್ರಾಚೀನವಾದ ತಾಮ್ರ ಶಾಸನ ಬೆಳಕಿಗೆ ಬಂತು. ಇದನ್ನು ಬೆಳಕಿಗೆ ತಂದ ಕೀರ್ತಿ ಡಾ. ಪಿ. ಗುರುರಾಜ ಭಟ್ಟರಿಗೆ ಸೇರುತ್ತದೆ. ಶ್ರೀಯುತರು ಹತ್ತಾರು ವರ್ಷಗಳಿಂದ ಸತತವಾಗಿ ಶೋಧನೆ ಮತ್ತು ಸಂಶೋಧನೆ

ಗವನ್ನು ನಡೆಸುತ್ತಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವದ ಬೆಳವಣಿಗೆಗೆ ಮಹತ್ತರವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಶಾಸನ ಬೆಳ್ಮಣ್ಣು ಗ್ರಾಮದಲ್ಲಿ ಶ್ರೀ ಮಹಿಷಮರ್ದಿನಿ ದೇವಾಲಯದಲ್ಲಿ ದೊರಕಿತು. ದೇವಾಲಯದವರು ಒಂದು ಗೋಡೆಯನ್ನು ಅಗೆಸುತ್ತಿದ್ದಾಗ ನೆಲದ ಒಳಗೆ ಒಂದು ಪೆಟ್ಟಿಗೆಯೊಳಗೆ ಐದು ಪತ್ರಗಳನ್ನೊಳಗೊಂಡ ಈ ಶಾಸನ ಬೆಳಕಿಗೆ ಬಂದಿತು. ಈ ಶಾಸನ ಕ್ರಿ.ಶ. ಎಂಟನೆಯ ಶತಮಾನದ ಕನ್ನಡ ಲಿಪಿಯಲ್ಲಿದೆ. ಬರೆದ ನಾಲ್ಕು ಪತ್ರಗಳ 7 ಭಾಗಗಳಲ್ಲಿಯೂ ಕಾಣಬರುತ್ತದೆ. ಪ್ರತಿಯೊಂದು ತಗಡೂ 17½ ಸೆಂ. ಮೀ. ಉದ್ದ. 7½ ಸೆಂ. ಮೀ. ಅಗಲ ಮತ್ತು ಮೂರನೇ ಒಂದು ಸೆಂ. ಮೀ. ದಪ್ಪವಾಗಿದೆ. ಅಕ್ಷರಗಳು ಸ್ಫುಟವಾಗಿವೆ. ಇದು ಆಳುಪ ವಂಶದ ಶಾಸನವಾದುದರಿಂದ ಈ ಎಲ್ಲ ತಗಡುಗಳನ್ನೂ ಸೇರಿಸಿ ಆಳುಪರಾಜರ ಲಾಂಛನವಾದ ಎರಡು ಮೀನುಗಳಿಂದ ಕೂಡಿದ ಮುದ್ರೆಯುಂಗುರದಿಂದ ಒಟ್ಟು ಕೂಡಿಸಲಾಗಿದೆ. ಇದರ ಕಾಲ ಕ್ರಿ. ಶ. ಎಂಟನೆಯ ಶತಮಾನದ ಉತ್ತರಾರ್ಧ.

ಈ ಶಾಸನ ಓಂ ನಮಶ್ಶಿವಾಯ ಎಂದು ಪ್ರಾರಂಭವಾಗಿ ಅನಂತರ ಆಳುಪರಸನ ಬಿರುದು ಮುಂತಾದುವನ್ನು ತಿಳಿಸುತ್ತದೆ. ಇದಾದ ಅನಂತರ ದಾನದ ವಿಚಾರವನ್ನು ತಿಳಿಸುತ್ತದೆ. ಒಟ್ಟಿನಲ್ಲಿ ಇದೊಂದು ಮಹತ್ವಪೂರ್ಣ ಕನ್ನಡ ಪ್ರಾಚೀನ ಶಾಸನ.

—ಎ. ವಿ. ಎನ್.

ಪುಸ್ತಕಲೋಕ

ಅಪರ್ ಪ್ಲ್ಯಾನ್ಸ್. ದೆರ್ ಅಚೀವ್‌ಮೆಂಟ್ಸ್ ಅಂಡ್ ಷಾರ್ಟ್‌ಫಾಲ್ಸ್: ಲೇ: ಎಂ ಗೋವಿಂದ ರೆಡ್ಡಿ. ಪ್ರ: ಪ್ರಸಾರಾಂಗ. ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು, 1971. ಪು: 88. ಬೆಲೆ: ರೂ 3.

ಆರ್ಥಿಕ ಯೋಜನೆಗಳ ಬಗ್ಗೆ ಭಾರತಕ್ಕೆ ಈಗಾಗಲೇ ಎರಡು ದಶಕಗಳಿಗೂ ಮೀರಿದ ಅನುಭವವಿದೆ. ಆದರೆ ಸಾಮಾನ್ಯ ಜನರು ಕೇಳುವ ಪ್ರಶ್ನೆ ಏನೆಂದರೆ ಯೋಜನೆಗಳಿಂದ ಪ್ರಯೋಜನವೇನಾದರೂ ಆಗಿದೆಯೆ ಎಂಬುದು. ಒಂದು ವೇಳೆ ಪ್ರಯೋಜನವಾಗಿದ್ದ ಪಕ್ಷದಲ್ಲಿ ಇಷ್ಟರ ಮಟ್ಟಿನ ಪ್ರಯೋಜನವನ್ನು ಯೋಜನೆಯನ್ನು ಕೈಗೊಳ್ಳದೆಯೇ ಪಡೆಯಲು ಸಾಧ್ಯವಿರಲಿಲ್ಲವೇ ಎಂಬುದು ಎರಡನೆಯ ಪ್ರಶ್ನೆ. ಈ ಪ್ರಶ್ನೆಗಳನ್ನು ಕುರಿತು ಈಗಾಗಲೇ ಭಾರತೀಯ ಹಾಗೂ ವಿದೇಶಿ ತಜ್ಞರಿಂದ ಅನೇಕ ಪುಸ್ತಕಗಳು ಬೆಳಕಿಗೆ ಬಂದಿವೆ. ಆದರೆ ಇವುಗಳಲ್ಲಿ ಬಹಳ ಪುಸ್ತಕಗಳು ಪಂಡಿತರನ್ನು ಕುರಿತು ಬರೆದಂಥವು. ಸಾಮಾನ್ಯ ಜನರ ಮನಮುಟ್ಟುವಂಥ ಸರಳ ಭಾಷೆ ಹಾಗೂ ರೀತಿಯಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಕುರಿತು ಬರೆದಂಥ ಒಂದು ಪುಸ್ತಕದ ಕೊರತೆ ಇತ್ತು. ಈ ಕೊರತೆಯನ್ನು ತುಂಬಲು ಪ್ರಸಾರಾಂಗ ಶ್ರೀ ಗೋವಿಂದ ರೆಡ್ಡಿಯವರ ಪುಸ್ತಕವನ್ನು ಓದುಗರ ಮುಂದೆ ಇಟ್ಟಿದೆ.

ಈ ಪುಸ್ತಕ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಶ್ರೀ ಗೋವಿಂದ ರೆಡ್ಡಿಯವರು ಭಾರತದ ಯೋಜನೆಗಳನ್ನು ಕುರಿತು ಮಾಡಿದ ಉಪನ್ಯಾಸಗಳನ್ನೊಳಗೊಂಡಿದೆ. ಪುಸ್ತಕದಲ್ಲಿ ಮೂರು ಭಾಗಗಳಿದ್ದು ಪ್ರತಿಯೊಂದೂ ಯೋಜನೆಯ ಒಂದೊಂದು ಅಂಶವನ್ನು ವಿವರಿಸುತ್ತದೆ. ಮೊದಲನೆಯ ಭಾಗ ಭಾರತದ ಯೋಜನೆಗಳಿಗೆ ಹಿನ್ನೆಲೆಯ ರೂಪದಲ್ಲಿ ಯೋಜನೆಯ ಸಾಮಾನ್ಯ ಆವಶ್ಯಕತೆಗಳಾವುವು

ಹಾಗೂ ವಿದೇಶಗಳಲ್ಲಿಯ ಯೋಜನೆಗಳ ಲಕ್ಷಣಗಳೇನು ಎಂಬುದನ್ನು ವೈಚಾರಿಕವಾಗಿ ವಿವರಿಸುತ್ತದೆ. ಎರಡನೆಯ ಭಾಗ ಭಾರತದ ಯೋಜನೆಗಳ ಸಾಧನೆಗಳನ್ನು ಗುರುತಿಸುತ್ತದೆ. ಯೋಜನೆಯನ್ನು ರೂಪಿಸುವ ಬಗ್ಗೆ ವಿವರಣೆ ಕೊಟ್ಟ ಅನಂತರ ಶ್ರೀಯುತರು ಪ್ರತಿಯೊಂದು ಯೋಜನೆಯ ಸಾಧನೆ ಏನು ಎಂಬುದನ್ನು ವಿಚಾರ ಮಾಡುತ್ತಾರೆ. ಯೋಜನೆಯ ಧ್ಯೇಯಗಳನ್ನು ಆಧಾರವಾಗಿಟ್ಟುಕೊಂಡು ಅದರ ಸಾಧನೆಯನ್ನು ತೌಲನಿಕವಾಗಿ ನೋಡಲಾಗಿದೆ. ಪ್ರತಿ ಯೋಜನಾವಧಿಯಲ್ಲಿ ಪ್ರತಿಕ್ಷೇತ್ರದಲ್ಲೂ ಕೃಷಿ, ಕೈಗಾರಿಕೆ, ಉದ್ಯೋಗ, ವಿದ್ಯಾಭ್ಯಾಸ ಇತ್ಯಾದಿ–ಕಂಡು ಬಂದ ವೃದ್ಧಿಯನ್ನು ಅಂಕಿ ಅಂಶಗಳ ಸಹಾಯದಿಂದ ಗುರುತಿಸಲಾಗಿದೆ. ಯೋಜನಾವಧಿಯಲ್ಲಿ ರಾಷ್ಟ್ರದ ಪ್ರತಿಕ್ಷೇತ್ರದಲ್ಲಿ ಕಂಡು ಬಂದ ಕುಂದುಕೊರತೆಗಳೇನು ಎಂಬುದರ ವಿವರಣೆಯನ್ನು ಪುಸ್ತಕದ ಕೊನೆಯ ಭಾಗದಲ್ಲಿ ಕೊಡಲಾಗಿದೆ. ಶ್ರೀಯುತರು ತೋರಿಸಿ ಕೊಟ್ಟಿರುವ ಕುಂದುಕೊರತೆಗಳಲ್ಲಿ ಮುಖ್ಯವಾದುವೆಂದರೆ ಹಣಕಾಸಿನ ಅತ್ಯಧಿಕ ಪ್ರಯೋಗ, ಭೂಸುಧಾರಣೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರದಿರುವುದು, ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಅಸಮರ್ಥವಾಗಿರುವುದು. ಕೈಗಾರಿಕೆ ಮತ್ತು ಕೃಷಿ ಉತ್ಪಾದನೆಯಲ್ಲಿ ಕೊರತೆ ಮತ್ತು ಸರ್ಕಾರಿ ಕ್ಷೇತ್ರದ ಕೈಗಾರಿಕೆಗಳ ತೃಪ್ತಿಕರವಲ್ಲದ ಕಾರ್ಯಚಟುವಟಿಕೆ.

ಹೀಗೆ ಶ್ರೀಯುತರು ಭಾರತದ ಯೋಜನೆಗಳಿಗೆ ಸಂಬಂಧಿಸಿದ ಎಲ್ಲ ಅಂಶಗಳನ್ನೂ ಕುರಿತು ಸಣ್ಣ ಹೊತ್ತಿಗೆಯಲ್ಲಿ ಸಾಮಾನ್ಯ ಜನತೆಗೆ ಅರ್ಥವಾಗುವ ಶೈಲಿಯಲ್ಲಿ ಬರೆದಿರುವುದು ಶ್ಲಾಘನೀಯ. ಅಡಿ ಟಿಪ್ಪಣಿಗಳನ್ನು ಕೊಟ್ಟು ಗ್ರಂಥಸೂಚಿಯನ್ನು ಸಾಂಪ್ರದಾಯಿಕ ರೀತಿ ಕೊಡಬಹುದಿತ್ತು. ಭಾಷೆಯನ್ನು ತಿದ್ದಿಸಿದ್ದರೆ ಚೆನ್ನಾಗಿರುತ್ತಿತ್ತು ಎನಿಸುತ್ತದೆ. ಅಲ್ಲದೆ ಭೂ ಕಂದಾಯ ಪರೋಕ್ಷ ತರಿಗೆ ಎಂಬುದನ್ನು ಶ್ರೀಯುತರು ಹೇಳುವುದು (ಪು. 13)ಆಶ್ಚರ್ಯಕರವಾದುದು. ಹಾಗೂ ಮತ್ತೊಂದು ಆಶ್ಚರ್ಯಕರವಾದ ಸಂಗತಿಯೇನೆಂದರೆ, ಅಮೆರಿಕಾ ಸಂಯುಕ್ತ ಸಂಸ್ಥಾನ ಯೋಜಿತ ಆರ್ಥಿಕತೆಯನ್ನುಳ್ಳದ್ದು ಎಂಬ ಭಾವವನ್ನು ಓದುಗರಲ್ಲಿ ಮೂಡಿಸುವುದು.

—ಅಬ್ದುಲ್ ಅಜೀಸ್

ಭೌತಿಕ ಭೂಗೋಲಶಾಸ್ತ್ರ ಪ್ರವೇಶ. ಲೇ: ಶ್ರೀ ಎನ್. ಬಿ. ಕೆ. ರೆಡ್ಡಿ, ಶ್ರೀ ಎನ್. ಸಿ. ವಿಜಯರಾಜ ಮತ್ತು ಇತರರು: ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ. ಪು: 246, ಬೆಲೆ: ರೂ. 8.50

ಭೌತಿಕ ಭೂಗೋಲಶಾಸ್ತ್ರ ಪ್ರವೇಶ ಎಂಬ ಶೀರ್ಷಿಕೆಯಲ್ಲಿ ಪ್ರಕಾಶನ ಹೊಂದಿರುವ ಈ ಪಠ್ಯಪುಸ್ತಕವನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ಬಿ.ಎ. ಭಾಗ-1ರ ಪಠ್ಯಕ್ರಮವನ್ನು ಅನುಸರಿಸಿ ಲೇಖಕರು ಬರೆದಿದ್ದಾರೆ. ಈ ಪಠ್ಯಪುಸ್ತಕವನ್ನು ನುರಿತ ತರುಣ ಉಪನ್ಯಾಸಕರು ರಚಿಸಿರುವುದು ಶ್ಲಾಘನೀಯವಾದುದು. ಈ ಪುಸ್ತಕ ಭೂಗೋಲ ಪಠ್ಯ ಪುಸ್ತಕ ಸಮಿತಿಯ ಶ್ರೀಯುತ ಎನ್. ಸಿ. ವಿಜಯರಾಜರವರ ಕಾರ್ಯಾಧ್ಯಕ್ಷ ಸ್ಥಾನದಿಂದ ಮೂಡಿ ಬಂದಿರುವುದು ಮತ್ತೊಂದು ಸಂತಸದ ಸಂಗತಿ.

ಇತ್ತೀಚೆಗೆ ಪ್ರೌಢ ಅಧ್ಯಯನದ ಅನುಕೂಲಕ್ಕೋಸ್ಕರವಾಗಿ ಮಾತೃಭಾಷೆಯಲ್ಲಿ ಪಠ್ಯಪುಸ್ತಕಗಳು ರಚನೆಗೊಂಡು ಪ್ರಕಟಗೊಳ್ಳುತ್ತಿರುವುದು ವಿಶ್ವವಿದ್ಯಾಲಯಗಳು ಸಾಧಿಸುತ್ತಿರುವ ರಚನಾತ್ಮಕ ಕಾರ್ಯಗಳಲ್ಲಿ ಮಹತ್ತರವಾದುದೆಂದೇ ಹೇಳಬೇಕಾಗಿದೆ. ಈ ದಿಸೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಮುಖಂಡರು ವಿಚಾರವನ್ನು ಸ್ಪಷ್ಟವಾಗಿ ಅರಿತು ಮಟ್ಟಕ್ಕೆ ಅನುಗುಣವಾಗಿ ವಿಷಯಗಳನ್ನು ಸುಲಲಿತವಾದ ಭಾಷೆಯಲ್ಲಿ ಬರುವಂತೆ ಪ್ರೋತ್ಸಾಹವನ್ನಿತ್ತು ಭೂಗೋಲ ಕ್ಷೇತ್ರದ ನುರಿತ ಜ್ಞಾನಿಗಳಿಂದ ಪಠ್ಯಪುಸ್ತಕವನ್ನು ಬರೆಯಿಸಿರುವುದು ಶ್ಲಾಘನೀಯ. ಭೌತಿಕ ಭೂಗೋಲ ಶಾಸ್ತ್ರವನ್ನು ಸರಳವಾಗಿ ವ್ಯಕ್ತಪಡಿಸುವುದು ಕಷ್ಟವಾದ ಕೆಲಸವೆಂಬುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಚಾರ. ಆದರೆ ನಿತ್ಯ ಉಪನ್ಯಾಸ ಕಾರ್ಯದಲ್ಲಿ ತೊಡಗಿರುವ ಉಪನ್ಯಾಸಕರನ್ನು ಪಠ್ಯಪುಸ್ತಕದ ರಚನೆಗೆ ತೊಡಗಿಸಿದಾಗ ಅದು ಸಮರ್ಪಕವಾಗಿರುವುದೆಂದು ನಿರೀಕ್ಷಿಸಬಹುದು. ಅಂಥ ಹೊಗಳಿಕೆ ಪಡೆಯಬಲ್ಲ ಕಾರ್ಯವನ್ನು ಲೇಖಕರು ನಿರ್ವಹಿಸಿದ್ದಾರೆ. ಆದರೆ ಈ ಕಾರ್ಯದಲ್ಲಿ ಕೆಲವು ನ್ಯೂನತೆಗಳು ಕಂಡು ಬಂದು ಪುಸ್ತಕದ

ವಾಲ್ಯಕ್ಕೆ ಕುಂದುಂಟಾಗಿದೆ. ಈ ನ್ಯೂನತೆಗಳು ಲೇಖಕರ ಗಮನವನ್ನು ತಪ್ಪಿಸಿಕೊಂಡು ಮುದ್ರಣದ ಮೂಲಕ ಹೊರಬಂದಿರುವುದನ್ನು ನೋಡಿದರೆ ಶೀಘ್ರಗತಿಯಲ್ಲಿ ಮುಗಿಸಬೇಕೆಂಬ ಆತುರ ಲೇಖಕರಲ್ಲಿ ಇತ್ತೆಂದು ಭಾವಿಸಬೇಕಾಗಿದೆ.

ಈ ಪಠ್ಯ ಪುಸ್ತಕದ ಹಲವಾರು ಪುಟಗಳಲ್ಲಿ ತಪ್ಪುಗಳು ಪಾರಿಭಾಷಿಕ ಶಬ್ದಗಳಲ್ಲಿ ಮತ್ತು ವಿವರಣೆಯಲ್ಲಿ ಗೋಚರವಾಗುವುವು. ಉದಾಹರಣೆಗೆ, ಪುಟ 60ರಲ್ಲಿ ಮೇಜರ್ ರಿಲೀಫ್ ಎಂಬುದಕ್ಕೆ 'ಪ್ರಮುಖ ಪರಿಳಿತ'ದ ಬದಲು 'ಪ್ರಮುಖ ಭೂ ಲಕ್ಷಣ' ಎಂದಿದ್ದರೆ ಚೆನ್ನಾಗಿರುತ್ತಿತ್ತು. ಪುಟ 64ರಲ್ಲಿ ಫ್ರಾಸ್ಟ್ ಆಕ್ಷನ್‌ಗೆ 'ಬರ್ಫೀಕರಣ'ವೆಂದು ತಿಳಿಸಲಾಗಿದೆ. ಹಿಮ ಕಾರ್ಯವೆಂದು ಹೇಳಿದ್ದರೆ ಸಾಕಾಗಿತ್ತು. ಪುಟ 76–77ರಲ್ಲಿ 'ತ್ರಿಭುಜ ಪ್ರದೇಶ'ವನ್ನು (ಡೆಲ್ಟ) ನದೀಮುಖಜ ಭೂಮಿ ಅಥವಾ ಪ್ರದೇಶವೆಂದು ಕರೆಯುವುದೇ ಸೂಕ್ತ. ಹೀಗೆಯೇ 'ವ್ಹಿರ್ಲ್‌ಪೂಲ್'ಗೆ 'ಚಕ್ರಗುಂಡಿ'ಯ ಬದಲು ನೀರಿನ ಸುಳಿ ಅಥವಾ ಸುರುಳಿ" ಮಿಡ್ಲ್‌ಕೋರ್ಸ್‌ಗೆ 'ಮಧ್ಯಭಾಗ'ದ ಬದಲು 'ಮಧ್ಯಪಾತ್ರ', 'ಆಕ್ಸ್ ಬೋಗೆ 'ನಾಲಿನಾಕಾರ'ದ ಬದಲು 'ಎತ್ತಿನ ಕೊಂಬಿನಾಕಾರ', 'ಸ್ವಾಲೋ ಹೋಲ್'ಗೆ 'ನುಂಗುವ ತಗ್ಗು' ಬದಲು 'ನುಂಗು ಬಿಲ 'ಬ್ಲೈಂಡ್ ವ್ಯಾಲಿ'ಗೆ 'ಕುರುಡು ಕೊಳ್ಳ'ದ ಬದಲು 'ಅಗೋಚರ ಕಣಿವೆ' ಎಂದು ತಿಳಿಸಿದ್ದರೆ ಅಪಾರ್ಥಕ್ಕೆ ಎಡೆಯಾಗುತ್ತಿರಲಿಲ್ಲ. ಪುಟ 93ರಲ್ಲಿ ಹಿಮ ರೇಖೆಯ ಉತ್ತುಂಗದ ಸರಾಸರಿಯನ್ನು 'ಘೂ' ಎಂದು ಹೇಳುವುದರ ಬದಲು 'ಅಡಿ' ಎಂದು ಕನ್ನಡದಲ್ಲಿ ತಿಳಿಸಿದ್ದರೆ ಸೂಕ್ತವಾಗಿರುತ್ತಿತ್ತು. ಇದೇ ಪುಟದಲ್ಲಿ 'ಸಮುದ್ರ ಪಾತಾಳಿಯಲ್ಲಿಯೂ ಹಿಮರೇಖೆ ಕಂಡು ಬರುತ್ತದೆಂದು ಇದೆ. ಇಲ್ಲಿ ಸಮುದ್ರ ಪಾತಾಳಿಗಿಂತ 'ಸಮುದ್ರಮಟ್ಟದಲ್ಲಿಯೂ' ಎಂದು ಹೇಳಿದ್ದರೆ ಸರಿಯಾಗಿರುತ್ತಿತ್ತು. ಪುಟ 100ರಲ್ಲಿ 'ಉಷ್ಣತೆಯು ಹಿಮಬಿಂದುವಿಗಿಂತ ಕಡಿಮೆಯಾದಾಗ ಘನೀಭವಿಸಿ ಬರ್ಫವಾಗಿ ಮಾರ್ಪಡುವಾಗ' ಎನ್ನುವುದಕ್ಕಿಂತ 'ಘನೀಭವನ ಹೊಂದಿ ಮಾರ್ಪಡುವಾಗ' ಎಂದರೆ ಪೂರ್ಣ ಅರ್ಥ ಕೊಡುವುದು. ಏಕೆಂದರೆ ಇಲ್ಲಿ 'ಬರ್ಫ' ಅರ್ಥ ಶೂನ್ಯವಾದ ಪದ. ಪುಟ 102ರಲ್ಲಿಯ 'ಕೃತ್ರಿಮ ಸರೋವರ'ದ ಬದಲು 'ಕೃತಕ ಸರೋವರ'ವೇ ಸರಿ. ಪುಟ 109ರ 'ರಿಫ್ಟ್ ವ್ಯಾಲಿ'ಗೆ 'ಕಡಿದಾದ ಕಂದ ಕದ' ಬದಲು 'ಸೀಳು ಕಣಿವೆ'ಯೇ ಸೂಕ್ತವಾದುದು. ಇದೇ ಪುಟದ ಸಿಂಕ್ಲೈನ್'ನ 'ಬಳಮಡಿಕೆ'ಗೆ 'ಭೂಸ್ತರದ ಇಳಿಪ್ಪೋರೆ' ಸರಿ ಎನಿಸುವುದು. ಅನಂತರ 112ನೆಯ ಪುಟದಲ್ಲಿ ಬಳಸಿರುವ ಮೀಟರ್ ಅಳತೆಯ ಲೆಕ್ಕಾಚಾರವನ್ನು ಪುಸ್ತಕದ ಇತರ ಭಾಗಗಳಲ್ಲಿಯೂ ಬಳಸಬೇಕಾಗಿತ್ತು. ಪುಟ 130ರಲ್ಲಿ 'ಡೀಪ್ ಸೀ ಪ್ಲೇವ್ಸ್' 'ಸಾಗರದ ಆಳ ಮೈದಾನಗಳು' ಬದಲು ಆಳದಿಂದ ಕೂಡಿದ ಸಾಗರದ ಮೈದಾನಗಳು' ಮತ್ತು ಓಷನ್ ಡೀಪ್ಸ್' 'ಸಾಗರ ತಳದ ಪ್ರಪಾತಗಳು' ಬದಲು 'ಸಾಗರದ ಆಳಗಳು' ಎನ್ನುವುದು ಸರಿಯಾದ ಅರ್ಥವನ್ನುಂಟು ಮಾಡುವುದು. 159ನೆಯ ಪುಟದ ವ್ಯಾಪಾರಿ ಮತ್ತು ಪ್ರತಿವ್ಯಾಪಾರಿ ಗಾಳಿಗಳನ್ನು 'ವಾಣಿಜ್ಯ ಮತ್ತು ವಾಣಿಜ್ಯ ಮಾರುತಗಳು' ಎಂಬುದಾಗಿ ಕರೆಯುವುದೇ ಲೇಸು. ಪುಟ 207ರ ಚಿತ್ರ 98ರಲ್ಲಿ 'ನೈಋತ್ಯ ವಾಣಿಜ್ಯ ಮಾರುತ'ಗಳು ಎಂದು ತಿಳಿಸಿರುವುದು ತಪ್ಪು. ಇದು 'ಆಗ್ನೇಯ ವಾಣಿಜ್ಯ ಮಾರುತ' ಗಳೆಂದು ಇರಬೇಕಾಗಿತ್ತು. ಪುಟ 310ರ ಸೀ ಬ್ರೀಜಸ್ ಅಂಡ್ ಲ್ಯಾಂಡ್ ಬ್ರೀಜಸ್‌ಗೆ 'ಭೂ ಮತ್ತು ಸಾಗರಗಾಳಿಗಳು' ಎಂದು ಹೇಳುವುದರ ಬದಲು 'ಭೂ ಮತ್ತು ಕಡಲಿನ ಮಂದ ಮಾರುತಗಳು' ಎಂಬುದಾಗಿ ವ್ಯಕ್ತಪಡಿಸುವುದು ಸರಿ. ಪುಟ 218ರ ಕಂಡೆನ್ಸೇಷನ್" 'ಸಾಂದ್ರೀಕರಣ'ವೆಂದು ಹೇಳದೆ 'ಘನೀಕರಣ'ವೆಂದಿರಬೇಕಾಗಿತ್ತು. ಪುಟ 216ರಿಂದ 224ರ ವರೆಗೆ ಕಂಡು ಬರುವ ಚಿತ್ರಗಳ ಸಂಖ್ಯೆಯನ್ನು 96ರಿಂದ 100ರ ವರೆಗೆ ಸೂಚಿಸಲಾಗಿದೆ. ಈ ಚಿತ್ರಗಳು 105ರಿಂದ 109ರ ವರೆಗೆ ಕ್ರಮಾನುಗತವಾಗಿರಬೇಕಾಗಿತ್ತು. ಮತ್ತೆ ಪಾರಿಭಾಷಿಕ ಶಬ್ದಗಳ ಭಾಗದ ಪುಟಗಳ ಸಂಖ್ಯೆ 241ರಿಂದ 246 ಇರಬೇಕಾಗಿದ್ದುದು 341ರಿಂದ 346 ಎಂದು ಕಂಡುಬರುತ್ತದೆ. ಲೇಖಕರು ಈ ಎಲ್ಲ ತಪ್ಪುಗಳನ್ನು ಒಪ್ಪಗೊಳಿಸಬೇಕಾಗಿದೆ. ವಿದ್ಯಾಮಟ್ಟಕ್ಕೆ ಅನುಗುಣವಾಗಿ ವಿವರಣೆಯಿಂದ ಕೂಡಿದ್ದು ಅವಶ್ಯಕವಾದ ಭಾಗಗಳಲ್ಲಿ ಭೂಪಟ ಹಾಗೂ ಚಿತ್ರಗಳಿರುವ ಈ ಪಠ್ಯಪುಸ್ತಕ ತಪ್ಪುಗಳಿಂದ ವಿಮೋಚನೆಗೊಂಡು ಪುನರ್ ಮುದ್ರಣಗೊಂಡರೆ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕವೃಂದಕ್ಕೆ ಉಪಯುಕ್ತವಾಗುತ್ತದೆ.

—ಎಂ. ಶಿವಲಿಂಗಯ್ಯ

ಕನ್ನಡ ರಂಗಭೂಮಿಯ ಕಲಾವಿದರು. ಲೇ: ಹ. ವೆಂ. ಸೀತಾರಾಮಯ್ಯ. ಪ್ರ: ಕಲಾ ಸಾಹಿತ್ಯ ಪ್ರಕಾಶನ. 20/1 ಎರಡನೆಯ ಅಡ್ಡರಸ್ತೆ, ನಾಗಪ್ಪಬ್ಲಾಕ್, ಬೆಂಗಳೂರು 21. ಪು: 295, ಬೆಲೆ: 8.00

ಹ. ವೆಂ. ಸೀತಾರಾಮಯ್ಯ ಅವರು ರಚಿಸಿರುವ ಹೊತ್ತಗೆ 'ಕನ್ನಡ ರಂಗಭೂಮಿ ಕಲಾವಿದರು' ಕನ್ನಡ ವೃತ್ತಿರಂಗಭೂಮಿಗಾಗಿ ದುಡಿದಿರುವ ಹಾಗು ದುಡಿಯುತ್ತಿರುವ ನಲವತ್ತೆಂಟು ವ್ಯಕ್ತಿಗಳ ಪರಿಚಯ. ಬಹಳ ಮಟ್ಟಿನ ವ್ಯಕ್ತಿಗಳು ವೈವಿಧ್ಯಮಯ ಪಾತ್ರಗಳಲ್ಲಿ ರಾರಾಜಿಸಿದರೂ, ಕೆಲವರು ನಾನಾ ವಿಧವಾದ ಜವಾಬುದಾರಿಗಳನ್ನು ಹೊತ್ತು, ತಮ್ಮ ಕೊಡುಗೆಗಳಿಂದ ವೃತ್ತಿರಂಗಭೂಮಿಯನ್ನು ಜೀವಂತಗೊಳಿಸಿದರು. ಉದಾಹರಣೆಗೆಂದು ಕೆಲವರನ್ನು ಇಲ್ಲಿ ನೋಡಬಹುದು.ಒಂದು ಕಾಲದಲ್ಲಿ ಮರಾಠೀ ಕಂಪನಿಗಳೇ ಪ್ರಾಬಲ್ಯದಿಂದಿದ್ದಾಗ, ಕನ್ನಡ ಕಂಪನಿಯನ್ನು ಕಟ್ಟಿ, ಕನ ಡ ನಾಟಕಗಳನ್ನು ಮೆರೆದವರು ಶಿರಹಟ್ಟಿ ವೆಂಕೋಬರಾಯರು. ಇವರು ಕನ್ನಡ ಕಂಪನಿಯನ್ನು ಕಟ್ಟಿದ್ದಷ್ಟೇ ಅಲ್ಲ, ನಾಟಕಗಳನ್ನು ಬರೆಯಿಸುವ ಕೆಲಸವನ್ನೂ ಮಾಡಿದರು. ಗರೂಡ ಸದಾಶಿವರಾಯರು, ಕನ್ನಡ ನಾಟಕಗಳನ್ನು ಮಹಾರಾಷ್ಟ್ರದಲ್ಲೆಲ್ಲಾ ಪ್ರದರ್ಶಿಸಿದರು. ಹಿರಣ್ಣಯ್ಯನವರು ಸಾಮಾಜಿಕ ವಸ್ತುಗಳುಳ್ಳ ನಾಟಕಗಳನ್ನು ವೃತ್ತಿರಂಗಭೂಮಿಯಲ್ಲಿ ತಂದು ಕ್ರಾಂತಿಯನ್ನುಂಟುಮಾಡಿದರು. ಬಳ್ಳಾರಿ ರಾಘವರು ತಾವು ವಹಿಸಿದ ಪಾತ್ರಗಳಲ್ಲಿ ಹೊಸತನವನ್ನು ತೋರಿದರು. ಮೇಲಿನ ವ್ಯಕ್ತಿ ಚಿತ್ರಗಳಿಂದ ಆಯ್ದ ಉದಾಹರಣೆಗಳು ಈ ಹೊತ್ತು ರಂಗಭೂಮಿಯಲ್ಲಿ ಕೆಲಸ ಮಾಡುವವರಿಗೆ ಆದರ್ಶವಾಗಲಿಕ್ಕೆ ಸಾಕು. ಯಾವುದೇ ಕ್ಷೇತ್ರದಲ್ಲಿ ದುಡಿಯುವವರಿಗೆ. ಅದೇ ಕ್ಷೇತ್ರದಲ್ಲಿ ಹಿಂದೆ ದುಡಿದವರನ್ನು ನೋಡುವ ಆಸಕ್ತಿ ಇದ್ದೇ ಇರುತ್ತದೆ. ಆ ಹಿನ್ನೆಲೆ ಮುಂದಿನವರಿಗೆ ಸ್ಫೂರ್ತಿ ಕೊಡಬೇಕು. ಒಮ್ಮೊಮ್ಮೆ ಸ್ಫೂರ್ತಿ ಕೊಡುವುದರ ಬದಲು ಭಯತರಲೂ ಸಾಕು. ಭಯಗೊಳ್ಳುವುದರ ಬದಲು, ಅದರ ಕಷ್ಟ–ನಷ್ಟಗಳನ್ನು ಅರಿತು ಮುನ್ನುಗ್ಗುವವನೇ ಆಕ್ಷೇತ್ರದಲ್ಲಿ ತನ್ನನ್ನು ತಾನೇ ಗುರುತಿಸಿಕೊಳ್ಳುತ್ತಾನೆ. ಈ ಪುಸ್ತಕದ ಬಗ್ಗೆ ದೇಜಗೌ ಅವರು ಮುನ್ನುಡಿಯಲ್ಲಿ "ಯಾವ ಕ್ಷೇತ್ರ ಅಭಿವೃದ್ಧಿಗೆ ಬರಬೇಕಾದರೂ ಪ್ರತಿಭಾವಂತ ಜನಬೇಕು; ಆ ವಿಷಯದಲ್ಲಿ ಚಟವನ್ನು ಬೆಳೆಸಿಕೊಂಡ ಜನಬೇಕು. ಸಮಾಜದಲ್ಲಿ ನಾಟಕ ಕಲೆಯ ಬಗೆಗೆ ತಿರಸ್ಕಾರ ಮನೋಭಾವವಿದ್ದರೂ, ಆ ಕ್ಷೇತ್ರವನ್ನು ಹೊಕ್ಕದ್ದಾದರೆ ಬದುಕು ಸುಖಮಯವಾಗುವುದಿಲ್ಲವೆಂಬ ಭಾವನೆ ಇದ್ದರೂ ಪ್ರತಿಭೆ ಮತ್ತು ಚಟ–ಈ ಎರಡರ ಪ್ರಚೋದನೆಯಿಂದಾಗಿ ಅನೇಕ ಮಹನೀಯರು ತಮ್ಮ ಭವಿಷ್ಯವನ್ನು ಲೆಕ್ಕಿಸದೆ ಅಪಾರ ತ್ಯಾಗಕ್ಕೂ ಸಿದ್ಧರಾಗಿ. ಆಸ್ತಿಪಾಸ್ತಿಗಳನ್ನು ಸಹ ಕಳೆದುಕೊಂಡು ನಾಟಕ ರಂಗಕ್ಕೆ ಧುಮುಕಿದ್ದುಂಟು. ಇಂಥ ಸಾಹಸತ್ಯಾಗಗಳಿಗೆ ಅವರು ಸಿದ್ಧರಾಗದಿದ್ದರೆ ಕನ್ನಡ ರಂಗಭೂಮಿ ಬರಡಾಗುತ್ತಿತ್ತು" ಎಂದು ಹೇಳಿದ್ದಾರೆ. ಈ ಹೇಳಿಕೆ ಮೇಲಿನ ಮಾತುಗಳನ್ನು ಸ್ಪಷ್ಟಪಡಿಸುತ್ತವೆ. ಆದರೆ ಇಂದಿನ ಸ್ಥಿತಿಯೇ ಬೇರೆಯಾಗಿದೆ. ವೃತ್ತಿರಂಗಭೂಮಿಯನ್ನು ಅವಲಂಬಿಸಿದವರಿಗೆ ಬಂದ ಕಷ್ಟ ಪರಂಪರೆ ಹೇಳತೀರದು. ಆದ್ದರಿಂದ ಈಗಾಗಲೇ ಅಲ್ಲಿ ದುಡಿಯುತ್ತಿರುವವರನ್ನು ಬಿಟ್ಟು, ವೃತ್ತಿ ರಂಗಭೂಮಿ ಕಡೆ ಯಾರೂ ಆಕರ್ಷಿತರಾಗುತ್ತಿಲ್ಲ. ಕಾರಣಗಳು ಈ ಗ್ರಂಥದಲ್ಲಿ ಸಾಕಷ್ಟು ಇವೆ. ಒಂದು ನಾಡಿನ, ದೇಶದ ಸಂಸ್ಕೃತಿಯನ್ನು ಹೇಳುವಂಥ ಕಲೆ ನಶಿಸಿ ಹೋಗಬಾರದು. ಸರಕಾರ, ಚಲನಚಿತ್ರಗಳಿಗೆ ಸಹಾಯ ಮಾಡುವಂತೆ ವೃತ್ತಿ ಕಂಪನಿಗಳಿಗೂ ಸಹಾಯ ಮಾಡಿ ಈ ಕಲೆ ನಶಿಸಿ ಹೋಗದಂತೆ ನೋಡಿಕೊಳ್ಳಬೇಕು.

ಈ ಗ್ರಂಥವನ್ನು ನೋಡುವಾಗ ನಮ್ಮ ಕಣ್ಣ ಮುಂದೆ ಅನೇಕ ಉತ್ತಮ ಕಲಾವಿದರು ಕಾಣಿಸಿಕೊಳ್ಳುತ್ತಾರೆ. ಕೆಲವರು ಸ್ವಂತ ಕಂಪನಿಗಳನ್ನು ನಡಸಿರುವುದನ್ನು ಕಾಣುತ್ತೇವೆ. ಆದರೆ ಒಂದು ಮಾತನ್ನು ಈ ಕಲಾವಿದರ ಬಗ್ಗೆ ಹೇಳಲೇ ಬೇಕು. ಎಲ್ಲೋ ಕೆಲವರನ್ನು ಬಿಟ್ಟರೆ, ಉಳಿದವರೆಲ್ಲರೂ ಹತ್ತಾರು ಕಂಪನಿಗಳನ್ನು ನೋಡಿರುವ ಕಲಾವಿದರೇ ಹೆಚ್ಚು. ಹತ್ತಾರು ಕಂಪನಿಗಳಲ್ಲಿ ಕೆಲಸ ಮಾಡುವುದು, ಸ್ವಂತ ಕಂಪನಿ ಕಟ್ಟುವುದು ಇವೇ ಆಗಿ. ಕಲಾವಿದರಲ್ಲಿಯ ಪೂರ್ಣ ಶಕ್ತಿ–ಪ್ರತಿಭೆಗಳು ರಂಗಭೂಮಿಯ ಏಳಿಗೆಗಾಗಿ ಆಗಿಲ್ಲದಿರಬಹುದು ಎಂದು ಸಂದೇಹಿಸಲು ಅವಕಾಶವಿದೆ.

ವೀರಣ್ಣನವರ ವ್ಯಕ್ತಿಚಿತ್ರ ಇಲ್ಲಿ ಇಲ್ಲದಿದ್ದರೂ, ಅವರು ಗ್ರಂಥದ ಉದ್ದಕ್ಕೂ ಪರೋಕ್ಷವಾಗಿ ಕಾಣಿಸಿಕೊಳ್ಳುತ್ತಾರೆ. ಬಹಳ ಮಟ್ಟಿನ ಕಲಾವಿದರು ಗುಬ್ಬಿ ಕಂಪನಿಯನ್ನು ಹಾದು ಹೋಗಿದ್ದಾರೆ. ಗುಬ್ಬಿ ವೀರಣ್ಣನವರ ಸಾಹಸದ ಫಲವಾಗಿ ಗುಬ್ಬಿ ಕಂಪನಿ ಇಂದಿಗೂ ಚೆನ್ನಾಗಿ ಕೆಲಸ ಮಾಡಿಕೊಂಡು

ಬರುತ್ತಿರುವುದು ಕನ್ನಡಿಗರ ಸುದೈವ. "ಗುಬ್ಬಿ ಕಂಪನಿಯೊಂದಿಲ್ಲದಿದ್ದರೆ ಅವರ ಗತಿಯೇನಾಗುತ್ತಿತ್ತು" ಎಂದು ದೇಜಗೌ ಅವರು ಮುನ್ನುಡಿಯಲ್ಲಿ ಹೇಳಿರುವ ಮಾತು ಸತ್ಯ. ಮೇಲಿನ ಅಂಶ ಸತ್ಯವೆಂದರೂ, ಕಲಾವಿದರು ಅನೇಕ ರೀತಿಯಲ್ಲಿ ತ್ಯಾಗ ಮಾಡಿ. ಕಷ್ಟನಷ್ಟಗಳಿಗೆ ಗುರಿಯಾಗಿ ರಂಗಭೂಮಿಗಾಗಿ ದುಡಿದಿರುತ್ತಾರೆ. ಹಾಗೆಲ್ಲ ಅವರು ತ್ಯಾಗಮಾಡದಿದ್ದರೆ ಕನ್ನಡ ರಂಗಭೂಮಿ ಇಷ್ಟೊಂದು ಸಮೃದ್ಧಿಯಾಗಿರಲು ಸಾಧ್ಯವಾಗಿರುತ್ತಿತ್ತೆ?

ಗರೂಡ ಸದಾಶಿವರಾವ್. ಬಳ್ಳಾರಿ ರಾಘವ. ಸಿ. ಬಿ. ಮಲ್ಲಪ್ಪ. ಕೆ. ಹಿರಣ್ಣಯ್ಯ. ಶಿರಹಟ್ಟಿ ವೆಂಕೋಬರಾವ್ ಮೊದಲಾದವರ ಚಿತ್ರಗಳು ಚೆನ್ನಾಗಿ ರೂಪಿತಗೊಂಡಿವೆ. ಕೆಲವು ವ್ಯಕ್ತಿ ಚಿತ್ರಗಳ ಬಗ್ಗೆ ಸಾಕಷ್ಟು ಸಾಮಗ್ರಿ ಇದ್ದು. ಚಿತ್ರಗಳು ಚೆನ್ನಾಗಿ ರೂಪಿತಗೊಂಡಿವೆ: ಕೆಲವಕ್ಕೆ ಸಾಕಷ್ಟು ಸಾಮಗ್ರಿ ಇರದೆ ಅರೆಕೊರೆಯ ಚಿತ್ರಗಳಾಗಿವೆ.

ಒಟ್ಟಾರೆ ಈ ಗ್ರಂಥವನ್ನು ಅವಲೋಕಿಸಿದಾಗ. ನಾಟಕರಂಗದಿಂದ ಚಿತ್ರ ಪ್ರಪಂಚವನ್ನು ಸೇರಿದವರನ್ನು ಬಿಟ್ಟು ಉಳಿದವರಲ್ಲಿ ಹಲವರು ಕಷ್ಟನಷ್ಟಗಳನ್ನು ಅನುಭವಿಸಿದವರೇ ಹೆಚ್ಚು. ಹೀಗಿರುವಾಗ ವೃತ್ತಿ ರಂಗಭೂಮಿ ತನ್ನ ಕಾಲ ಮೇಲೆ ತಾನು ನಿಲ್ಲಲು ಸಾಧ್ಯವೇ ಇಲ್ಲ. ಸರ್ಕಾರ ಸಹಾಯಕ್ಕೆ ಬರಲೇಬೇಕು. ಸರ್ಕಾರವಾದರೂ ಎಷ್ಟು ಸಹಾಯ ಮಾಡಲಿಕ್ಕಾದೀತು? ಅಂದರೆ ರಂಗಭೂಮಿಯ ಭವಿಷ್ಯವೇನು? ವೃತ್ತಿ ಕಂಪನಿಗಳನ್ನೇನೋ ಸರ್ಕಾರ ಸಂಪೂರ್ಣವಾಗಿ ನಶಿಸಿಹೋಗದಂತೆ ನೋಡಿಕೊಳ್ಳಬಹುದು. ಆದರೆ ವೃತ್ತಿ ಕಂಪನಿಗಳು ಹಿಂದೆ ಕೆಲಸ ಮಾಡುತ್ತಿದ್ದಂತೆ ಈಗ ಮಾಡಲು ಸಾಧ್ಯವಿಲ್ಲ: ನಿಜ. ವೃತ್ತಿ ಕಂಪನಿಗಳ ಸ್ಥಾನವನ್ನು ಇಂದು ಹವ್ಯಾಸಿ ತಂಡಗಳು ತೆಗೆದುಕೊಳ್ಳಬೇಕು. ಮುಂದಿನ ಜನತೆಗೆ ಹವ್ಯಾಸಿ ರಂಗಭೂಮಿಯೇ ಕನ್ನಡ ರಂಗಭೂಮಿಯನ್ನು ಪರಿಚಯ ಮಾಡಿಕೊಡಬೇಕು: ಇದು ಅಗತ್ಯ. ಅನಿವಾರ್ಯ. ಗ್ರಂಥಕರ್ತ ಸೀತಾರಾಮಯ್ಯನವರು ಕಷ್ಟಪಟ್ಟು ಸಾಮಗ್ರಿ ಸಂಗ್ರಹಿಸಿ ಈ ಪುಸ್ತಕವನ್ನು ರಚಿಸಿರುತ್ತಾರೆ.

—ಸಿಂಧುವಳ್ಳಿ

ಪ್ರಾಚೀನ ಹಸ್ತಪ್ರತಿಗಳು. ಲೇ: ಎಚ್. ಎಲ್. ಎಸ್. ಭಾರತಿ. ಎಂ.ಎ.: ಪ್ರ: ಪ್ರಸಾರಾಂಗ. ಮೈಸೂರು ವಿಶ್ವವಿದ್ಯಾನಿಲಯ. 1971: ಪು: 72 + 12: ಬೆಲೆ: 25ಪೈಸೆ.

ಧರ್ಮ ಪ್ರಧಾನವಾದ ಭರತಖಂಡದಲ್ಲಿ ಪ್ರಾಚೀನ ಗ್ರಂಥಗಳಿಗೆ ಅತ್ಯಂತ ಗೌರವವನ್ನು ಸಲ್ಲಿಸಿಕೊಂಡು ಬರಲಾಗಿದೆ. ವೇದ. ಪುರಾಣ. ಆಗಮ. ರಾಮಾಯಣ. ಮಹಾಭಾರತ–ಇವೇ ಮೊದಲಾದ ಪವಿತ್ರ ಗ್ರಂಥಗಳನ್ನು ನಮ್ಮ ಜನ ಅನನ್ಯಭಕ್ತಿಯಿಂದ ಆರಾಧಿಸಿಕೊಂಡು ಬಂದಿದ್ದಾರೆ.

ಮುದ್ರಣ ಸೌಲಭ್ಯ ಮಾನವ ಜನಾಂಗಕ್ಕೆ ಇತ್ತೀಚೆಗೆ ದೊರೆತಿರುವ ಒಂದು ವರ. ಈ ಸೌಲಭ್ಯವಿಲ್ಲದಿದ್ದ ಕಾಲದಲ್ಲಿ ಪ್ರಾಚೀನ ಪವಿತ್ರ ಗ್ರಂಥಗಳನ್ನು ಕಂಠಪಾಠ ಮಾಡಿಕೊಂಡು ರಕ್ಷಿಸಿಕೊಂಡು ಬರುತ್ತಿದ್ದರು. ಇದು ಸರ್ವರಿಗೂ ಸುಲಭ ಸಾಧ್ಯವಲ್ಲದುದರಿಂದ ಕ್ರಮೇಣ ಕಲ್ಲಿನ ಮೇಲೆ. ಲೋಹದ ಮೇಲೆ. ತಾಳೆಗರಿಗಳ ಮೇಲೆ. ಭೂರ್ಜ ಪತ್ರದ ಮೇಲೆ ಗ್ರಂಥಗಳನ್ನು ಶಾಸನಗಳನ್ನು ಬರೆಯುತ್ತಿದ್ದರು; ಕೊರೆಯುತ್ತಿದ್ದರು. ಬಹುಕಾಲ ಇವು ನಿಲ್ಲುತ್ತವೆಂದು ಅವರು ಭಾವಿಸಿದ್ದಂತೆ ತೋರುತ್ತದೆ. ಆದರೆ ಆಧುನಿಕ ವೈಜ್ಞಾನಿಕ ಸೌಲಭ್ಯಗಳಿಲ್ಲದಿದ್ದ ಆ ಕಾಲದಲ್ಲಿ ಈ ಪ್ರಾಚೀನ ಗ್ರಂಥಗಳನ್ನು ಬಹುಕಾಲ ರಕ್ಷಿಸುವುದು ದುಸ್ತರದ ಕಾರ್ಯವಾಗುತ್ತಿತ್ತು. ಕ್ರಮೇಣ ಇವು ಹಾಳಾಗುತ್ತಾ ಬರತೊಡಗಿದುವು. ಎಷ್ಟೋ ಗ್ರಂಥಗಳು ನಾಮಾವಶೇಷವೂ ಆದುವು. ಇದಕ್ಕೆ ಮತ್ತೊಂದು ಕಾರಣವೆಂದರೆ ಈ ಪ್ರಾಚೀನ ಗ್ರಂಥಗಳು ಪವಿತ್ರವೂ ಪೂಜ್ಯವೂ ಆದವು ಎಂಬ ಭಾವನೆಯಿಂದ ನಮ್ಮ ಜನ ಅವನ್ನು ಮನೆಮಠಗಳಲ್ಲಿ. ದೇವರ ಗೂಡುಗಳಲ್ಲಿ ಇಟ್ಟು ಪೂಜಿಸುತ್ತಾ ಬಂದಿದ್ದಾರೆ. ಇವು ತಮ್ಮ ಹಿರಿಯರು ತಮಗಾಗಿ ಬಿಟ್ಟು ಹೋಗಿರುವ ಅಮೂಲ್ಯ ಆಸ್ತಿ ಎಂದೂ ಅವರು ಭಾವಿಸಿದ್ದಾರೆ. ಹೀಗಾಗಿ ವರ್ಷಕ್ಕೊಮ್ಮೆಯೋ ಇಮ್ಮೆಯೋ ಇವನ್ನು ಪೂಜಿಸಿ ತೃಪ್ತರಾಗುತ್ತಾರೆ. ಆದರೆ ಇವುಗಳ ಸಂರಕ್ಷಣೆಗೆ ಮಾತ್ರ ಗಮನಕೊಟ್ಟಂತಿಲ್ಲ: ಅಷ್ಟೇ ಏಕೆ ಅನೇಕರು ಅವನ್ನು ಹೊರಗೆ ತೆಗೆಯಲೂ ಅಸಮ್ಮತಿಸುತ್ತಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಹಸ್ತಪ್ರತಿ

ಗಳನ್ನು ಒಂದೆಡೆ ಕೂಡಿಸಿ ಕಾಪಾಡುವುದು ತುಂಬಾ ಕಷ್ಟಕರವಾದುದು. ಇತ್ತೀಚೆಗೆ ಸರ್ಕಾರಗಳು, ಸಂಸ್ಥೆಗಳು ಇವುಗಳ ರಕ್ಷಣೆಗೆ ವ್ಯವಸ್ಥೆ ಮಾಡಿವೆ. ಕೆಲವು ವಿದ್ಯಾವಂತ ಜನ ವಂಶ ಪಾರಂಪರ್ಯವಾಗಿ ಬಂದ ಈ ಪ್ರಾಚೀನ ಕೃತಿಗಳನ್ನು ಸಂಸ್ಥೆಗಳಿಗೆ ಕೊಟ್ಟು ಅವು ಬೆಳಕು ಕಾಣುವಂತೆ ಮಾಡಿದ್ದಾರೆ.

ಪ್ರಕೃತ 'ಪ್ರಾಚೀನ ಹಸ್ತಪ್ರತಿಗಳು' ಕಿರುಹೊತ್ತಗೆಯಲ್ಲಿ ಹಸ್ತಪ್ರತಿಗಳ ಸಂಗ್ರಹಣೆ, ಸಂರಕ್ಷಣೆಗಳನ್ನು ಕುರಿತು ಉಪಯುಕ್ತವಾಗಿ ಬರೆಯಲಾಗಿದೆ. ಅಷ್ಟೇ ಅಲ್ಲ ಈ ಹಸ್ತಪ್ರತಿಗಳ 'ಮೈಕ್ರೋ ಫಿಲ್ಮಿಂಗ್' ವಿಷಯವನ್ನೂ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿಗೆ ಸಂಬಂಧಿಸಿದ ವಿವರಗಳನ್ನೂ ನಿರೂಪಿಸಲಾಗಿದೆ. ಜೊತೆಗೆ ಗ್ರಂಥಸಂಪಾದನೆ. ಈ ಕಾರ್ಯದಲ್ಲಿ ಹಸ್ತಪ್ರತಿಗಳಿಂದ ಉಂಟಾಗುವ ಕ್ಲೇಶಗಳು. ಅವುಗಳ ಪರಿಹಾರೋಪಾಯ.ಅಧಿಕೃತ ಸಂಸ್ಕರಣದಲ್ಲಿ ಅನುಸರಿಸಬೇಕಾದ ವಿಧಾನ- ಇವೇ ಮುಂತಾದ ಎಲ್ಲ ಸಂಗತಿಗಳನ್ನು ಅರ್ಥವಾಗುವಂತೆ ತಿಳಿಲಾಗಿದೆ. ಇದು ಕಿರುಹೊತ್ತಗೆಯಾದರೂ, ಹಸ್ತಪ್ರತಿಗಳಿಗೆ ಸಂಬಂಧಿಸಿದ ಸಮಸ್ತ ವಿವರಗಳನ್ನು ಸಾಧಾರಣವಾಗಿ. ವೈಜ್ಞಾನಿಕವಾಗಿ ವಿವರಿಸಲಾಗಿದೆ. ಒಟ್ಟಿನಲ್ಲಿ ಎಲ್ಲ ದೃಷ್ಟಿಗಳಿಂದಲೂ ಇದು ತುಂಬಾ ಉಪಯುಕ್ತವಾದ ಗ್ರಂಥವಾಗಿದೆ.

—ಎಸ್. ಬಸವಾರಾಧ್ಯ

ಪ್ರಾನ್ಸ್‌ದೇಶದ ಮಹಾಕ್ರಾಂತಿ. ಲೇ: ಪ್ರೊ. ಎ. ಕೆ. ಶಾಸ್ತ್ರಿ ಟೊಣ್ಣೇಮನೆ; ಪ್ರ: ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾನಿಲಯ. ಧಾರವಾಡ: 1971. ಪು: 8 + 269, ಬೆಲೆ: ಸಾದಾ ರೂ.4, ಕ್ಯಾಲಿಕೊ ರೂ 6.00

ಕರ್ನಾಟಕ ವಿಶ್ವವಿದ್ಯಾನಿಲಯದ ಪತ್ರಪುಸ್ತಕ ನಿರ್ದೇಶನಾಲಯ ಪ್ರಕಟಿಸಿದ ಈ ಪುಸ್ತಕ ವಿದ್ಯಾರ್ಥಿಗಳಿಗೆ ಒಂದು ಪೂರಕ ಗ್ರಂಥವಾಗಿದೆ. ಇದು ಅಂಥ ನಾಲ್ಕನೆಯ ಗ್ರಂಥ. ಇದರ ಲೇಖಕರಾದ ಶ್ರೀ ಎ. ಕೆ. ಶಾಸ್ತ್ರಿ ಟೊಣ್ಣೇಮನೆಯವರು ಉತ್ತರ ಕನ್ನಡ ಜಿಲ್ಲೆಯ ಶಿರ್ಸಿಯ ಕಾಲೇಜಿನಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿದ್ದು. ಎಂಟು ವರ್ಷಗಳಿಂದ ಸ್ನಾತಕಪೂರ್ವ ವಿದ್ಯಾರ್ಥಿಗಳಿಗೆ ಆಧುನಿಕ ಯೂರೋಪಿನ ಇತಿಹಾಸವನ್ನು ಕಲಿಸುತ್ತಿದ್ದಾರೆ. ನಿಯೋಜಿತ ಪಠ್ಯಕ್ರಮ ಆರಂಭವಾಗುವುದೇ 1789ರಲ್ಲಿ ನಡೆದ ಪ್ರಾನ್ಸ್‌ದೇಶದ ಮಹಾಕ್ರಾಂತಿಯಿಂದ. ಸಹಜವಾಗಿಯೇ ಈ ವಿಷಯ ಲೇಖಕರ ಮನಸ್ಸನ್ನು ಸೆಳೆದಿದೆ.

ಯೂರೋಪಿನ ಇತಿಹಾಸದಲ್ಲಿ ಆಧುನಿಕಯುಗ ಆರಂಭವಾದುದು ಈ ಕ್ರಾಂತಿಯಿಂದಲೇ ಎನ್ನಬಹುದು. ಇದಕ್ಕೆ ಹಿನ್ನೆಲೆಯಾಗಿ ಸಂಭವಿಸಿದ ಸಾಂಸ್ಕೃತಿಕ ಪುನರುಜ್ಜೀವನ ಹಾಗೂ ಧಾರ್ಮಿಕ ಕ್ರಾಂತಿ. ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮ, ಹಾಗೂ ಕೈಗಾರಿಕಾ ಕ್ರಾಂತಿ ಇವು ಯೂರೋಪಿನ ಜನ ಜೀವನದಲ್ಲಿ ಅಗಾಧವಾದ ಬದಲಾವಣೆಯನ್ನುಂಟು ಮಾಡಿವೆ. ಈ ಘಟನೆಗಳ ಸಾಲಿನಲ್ಲಿ ಹದಿನೆಂಟನೆಯ ಶತಮಾನದ ಅಂತ್ಯದಲ್ಲಿ ನಡೆದ ಪ್ರಾನ್ಸ್‌ನ ಕ್ರಾಂತಿ ಕಿರೀಟಪ್ರಾಯವಾಗಿದ್ದು. ಒಮ್ಮಿಂದೊಮ್ಮೆಲೆ ಯೂರೋಪಿನಲ್ಲಿ ನವಚೈತನ್ಯ. ಹೊಸರಾಜಕೀಯ ತತ್ವಗಳು. ನವೀನ ದೃಷ್ಟಿಕೋನಗಳಿಗೆ ಎಡೆಮಾಡಿತು. ಈ ಕ್ರಾಂತಿ ಮಾನವನ ಇತಿಹಾಸದಲ್ಲೇ ಅಭೂತಪೂರ್ವ ಮಾರ್ಪಾಡುಗಳಿಗೆ ಕಾರಣವಾಗಿದೆ. ಮಾನವನ ಮೂಲಭೂತ ಹಕ್ಕುಗಳೆಂದು ಹೇಳಲಾದ ಸ್ವಾತಂತ್ರ್ಯ. ಸಮಾನತೆ ಹಾಗೂ ಬಂಧುತ್ವ ಇವು ವಿಶ್ವ ಮಾನ್ಯಗಳಾದವು. ಶತಮಾನಗಳವರೆಗೆ ಮೆರೆದಿದ್ದ ಅರಸರ ನಿರಂಕುಶ ಪ್ರಭುತ್ವದ ಅಂತ್ಯಕ್ಕೆ ಈ ಘಟನೆ ನಾಂದಿಯನ್ನು ಹಾಡಿತು. ಇದರ ಪ್ರಭಾವ ಯೂರೋಪಿನಲ್ಲೇ ಅಲ್ಲದೆ ವಿಶ್ವದ ಇತರ ಖಂಡಗಳಿಗೂ ವ್ಯಾಪಿಸಿತು. ಈ ಕ್ರಾಂತಿಯ ಹಿಂದೆ ಅಡಗಿದ್ದ ತತ್ವಗಳಿಗಾಗಿ ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ವಿಶ್ವದ ಬೇರೆ ಕಡೆಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮಗಳು. ಹೋರಾಟಗಳು ಉಂಟಾದುವು. ಇಂಥ ಮಹತ್ವಪೂರಿತ ಘಟನೆಯನ್ನು ಕುರಿತು ಕನ್ನಡದಲ್ಲಿ ಬರೆಯಲಾದ ಈ ಗ್ರಂಥದ ಲೇಖಕರು ವಿದ್ಯಾರ್ಥಿಗಳ ಓದುಗರ ಮೆಚ್ಚುಗೆಗೆ ಪಾತ್ರರಾಗುವುದರಲ್ಲಿ ಸಂದೇಹವಿಲ್ಲ.

ಪ್ರಸ್ತುತ ಗ್ರಂಥದಲ್ಲಿ ಎರಡು ಭಾಗಗಳಿದ್ದು. ಮೊದಲನೆಯ ಭಾಗದಲ್ಲಿ (ಪುಟ 1–75) ಆಧುನಿಕ ಯೂರೋಪಿನ ಐತಿಹಾಸಿಕ ಹಿನ್ನೆಲೆಯನ್ನು ಗುರುತಿಸಲಾಗಿದೆ. ಎರಡನೆಯ ಭಾಗದಲ್ಲಿ ಮಹಾಕ್ರಾಂತಿಯ

ಕಾರಣಗಳು. ಗತಿ ಹಾಗೂ ಅದರ ಪರಿಣಾಮಗಳನ್ನು ನಿರೂಪಿಸಲಾಗಿದೆ. ಈ ಪುಸ್ತಕದ ರಚನೆಗೆ ಲೇಖಕರು ಇದಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳ ನೆರವನ್ನು ಪಡೆದಿದ್ದಾರೆ. "ನಾನು ಕನ್ನಡದಲ್ಲಿ ಬರೆದ ಪ್ರಥಮ ಕೃತಿಯಾದ ಕಾರಣ ಓದುಗರಿಗೆ ಭಾಷೆಯ ಸೊಗಸನ್ನು ಸಂಪೂರ್ಣವಾಗಿ ಸವಿಯಲು ಅಷ್ಟೊಂದು ಅವಕಾಶ ದೊರೆಯಲಿಕ್ಕಿಲ್ಲ" ಎಂಬ ಲೇಖಕರ ಸಂಕೋಚದ ಮಾತುಗಳೇ ಅರ್ಥವಾಗಿಲ್ಲ. ಪುಸ್ತಕವನ್ನು ಓದುವಾಗ ಅಲ್ಲಲ್ಲಿ ಕೆಲವು ವಾಕ್ಯಗಳು ಲೇಖಕರದೇ ಆಗಿರದೆ ಬೇರಾವುದೋ ಪುಸ್ತಕದಲ್ಲಿನ ವಾಕ್ಯಗಳ ತರ್ಜುಮೆ ಇದ್ದಂತೆ ಅನಿಸುತ್ತದೆ. ಅಂಥ ಸಂದರ್ಭಗಳಲ್ಲಿ ಶೈಲಿ ಎಡವಿದೆ. "ಈತನೂ ತನ್ನ ಕಾಲದ ಒಂದು ಸಾಮಾನ್ಯ ಪರಿಸ್ಥಿತಿಗೆ ಬಾಹಿರನಾಗಿರಲಿಲ್ಲ" (ಪು. 13). "ಹಳೆಯ ಸಂಪ್ರದಾಯದಂತೆ ರಾಜ್ಯಭಾರ ಮಾಡುವವರ ಜೊತೆಗೆ ಯಾವುದೇ ಕೆಲಸವನ್ನು ಪ್ರಾರಂಭಿಸುವ ಮೊದಲು ಜಾಗ್ರತೆ ವಹಿಸುವುದರಲ್ಲಿ ನಿಸ್ಸೀಮನಾಗಿದ್ದನು"(ಪು 15) ಇತ್ಯಾದಿ ವಾಕ್ಯಗಳನ್ನು ಗಮನಿಸಬಹುದು. ಪು. 65ರ ಒಂದುವಾಕ್ಯ ಹೀಗಿದೆ: "ಸಾಮ್ರಾಟ್ ಆರನೆಯ ಚಾರ್ಲ್ಸನ ಮರಣದ ನಂತರ ಕ್ರಿ. ಶ. 1740ರಿಂದ 48ರ ವರೆಗೆ ಆಸ್ಟ್ರಿಯಾದ ಉತ್ತರಾಧಿಕಾರಕ್ಕಾಗಿ ನಡೆದ ಯುದ್ಧ ನಡೆಯಿತಲ್ಲವೇ?" "ಸಾಕ್ಷಿಗಳನ್ನು ಬಹಿರಂಗ ಸ್ಥಳಗಳಲ್ಲಿ ಪಡೆಯುವದೇ: ಗೌಪ್ಯಸ್ಥಳಗಳಲ್ಲಿ ಪಡೆಯಲಾಗುತ್ತಿತ್ತು"(ಪು. 96) ಎನ್ನುವಾಗಿ ಸಾಕ್ಷಿ ಎಂಬುದರ ಬದಲು ಸಾಕ್ಷ್ಯ ಬಂದಿರಬೇಕಿತ್ತೇನೋ.

ಅಲ್ಲಲ್ಲಿ ವಿಷಯಗಳನ್ನು ಪುನರಾವೃತ್ತಿಮಾಡಲಾಗಿದೆ. 18–19ನೆಯ ಪುಟಗಳಲ್ಲಿ ಪ್ರಷ್ಯ ಆಸ್ಟ್ರಿಯಾಗಳ ನಡುವೆ ನಡೆದ ತಿಕ್ಕಾಟಗಳ ವಿವರಗಳನ್ನು ಪುನಃ 64–66ನೆಯ ಪುಟಗಳಲ್ಲಿ ಅಂತರ ರಾಷ್ಟ್ರೀಯ ಸಂಬಂಧವೆಂಬ ಶೀರ್ಷಿಕೆಯಡಿ ಕಾಣುತ್ತೇವೆ. ಫ್ರಾನ್ಸ್ ಸರ್ಕಾರದ ನ್ಯಾಯಾಂಗದಲ್ಲಿ ಏಕರೂಪತೆಯಿರಲಿಲ್ಲವೆಂಬ ಮಾತನ್ನು ಪುಟ 94 ಮತ್ತು 95ನೆಯ ಪುಟಗಳಲ್ಲಿ ಹೇಳಲಾಗಿದೆ. ಮಹಾ ಕ್ರಾಂತಿಯ ಪರಿಣಾಮಗಳನ್ನು ಪಟ್ಟಿ ಮಾಡುವಾಗ ನೆಪೋಲಿಯನ್ ಆ ಕ್ರಾಂತಿಯ ಶಿಶು. ಫ್ರಾನ್ಸಿನಲ್ಲಿ ಹಾಗೂ ಯುರೋಪಿನಲ್ಲಿ ಆತನ ಹೆಸರಿನಲ್ಲಿ ಆರಂಭವಾದ ಯುಗವೊಂದರ ಪ್ರವರ್ತಕನೆನಿಸಿದ ಈತ ಕ್ರಾಂತಿಯಿಲ್ಲದಿದ್ದಲ್ಲಿ ಐತಿಹಾಸಿಕ ವ್ಯಕ್ತಿಯಾಗುತ್ತಲೇ ಇರಲಿಲ್ಲ ಎಂಬ ಮಾತನ್ನು ಹೇಳಬಹುದಾಗಿತ್ತೇನೋ. ಇದು ಕೇವಲ ಅಭಿಪ್ರಾಯದ ಮಾತಲ್ಲ, ವಾಸ್ತವಿಕ ಅಂಶ.

ಪುಸ್ತಕದ ಕೊನೆಯಲ್ಲಿ 35 ತಪ್ಪುಗಳ ಒಪ್ಪೋಲೆ ಕೊಟ್ಟಿದ್ದರೂ ಇನ್ನೂ ಅನೇಕ ಮುದ್ರಣ ದೋಷಗಳು ಉಳಿದುಕೊಂಡಿವೆ. ಗ್ರಂಥ ಋಣದಲ್ಲಿ 'ಗತಕಾಲದ ಗುರುತುಗಳು' 'ಆಧುನಿಕ ಮಾನವನ ಹೋರಾಟ' ಎಂಬ ಹಿಂದೊಮ್ಮೆ ಎಸ್. ಎಸ್. ಎಲ್. ಸಿ. ತರಗತಿಗೆ ಪಠ್ಯಗಳಾಗಿದ್ದ ಪುಸ್ತಕಗಳನ್ನು ಹೆಸರಿಸಿರುವುದು ಕುತೂಹಲಕಾರಿಯಾಗಿದೆ

ಇಷ್ಟೆಲ್ಲ ಮಾತು ಮುಂದಿನ ಮುದ್ರಣದಲ್ಲಿ ಹಲವಾರು ತಿದ್ದುಪಡಿಗಳ ಅವಶ್ಯಕತೆ ಇದೆ ಎಂಬುದನ್ನು ತೋರಿಸಲು ಮಾತ್ರ. ಇದರಿಂದ ಗ್ರಂಥದ ಉಪಯುಕ್ತತೆಗೆ ಕುಂದುಂಟಾಗಿಲ್ಲ.

—ಬಾ. ರಾ. ಗೋಪಾಲ

ಹಿಂದೂ ವಿವಾಹ ಶಾಸನ. ಲೇ: ಎಚ್. ಗಂಗಾಧರನ್: ಪ್ರಕಾಶಕರು: ಪ್ರಸಾರಾಂಗ (ಗೃಹಸರಸ್ವತೀ ಗ್ರಂಥಮಾಲೆ) ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. 1972 ಪು: 160. ಬೆಲೆ:ರೂ.3

ಮೈಸೂರು ವಿಶ್ವವಿದ್ಯಾನಿಲಯದ 'ಪ್ರಸಾರಾಂಗ'ದ ಸಾಧನೆಗಳು ಸ್ತುತ್ಯವಾದವು. ಗೃಹಸರಸ್ವತೀ ಗ್ರಂಥಮಾಲೆ ಪ್ರಸಾರಾಂಗದ ಒಂದು ಮಗು. ಪ್ರೌಢ ಹಾಗೂ ಜನಪ್ರಿಯ ಶಿಕ್ಷಣದ ಬೃಹತ್ ಯೋಜನೆಯೊಂದಿಗೆ ಈ 'ಮಗು' ಈಗಾಗಲೇ ಪ್ರೌಢವಾದಂತಿದೆ. ಯಾಕೆಂದರೆ ಕಾನೂನಿನಂತೆ ಪ್ರೌಢತ್ವದ ಸಂಖ್ಯೆಯಾದ 19ನೆಯ ಸಾಧನೆಯೇ 'ಹಿಂದೂ ವಿವಾಹ ಶಾಸನ'ದ ಪ್ರಕಟಣೆ.

ಶ್ರೀಮಾನ್ ಎಚ್. ಗಂಗಾಧರನ್ ನಿರೂಪಿಸಿರುವ 'ಹಿಂದೂ ವಿವಾಹ ಶಾಸನ'. ಗೃಹಸರಸ್ವತೀ ಗ್ರಂಥಮಾಲೆಯ ಡೈರೆಕ್ಟರ ಶ್ರೀ ಪ್ರಭುಶಂಕರರವರು ಪುಸ್ತಕದ ಪ್ರಾರಂಭದಲ್ಲಿ ನಿರ್ದೇಶಿಸಿದ ಉದ್ದೇಶಗಳನ್ನು ಸಾಧಿಸಬಲ್ಲುದೇ ಎಂಬುದು. ಹೊತ್ತಿಗೆ ಓದಿದ ನಂತರ ಬರುವ ಮೊದಲ ಸಂದೇಹ. ಯಾಕೆಂದರೆ, "ಜಟಿಲವೂ. ತಾಂತ್ರಿಕವೂ ಆದ ಅಂಶಗಳನ್ನು ನಿವಾರಿಸಬೇಕು". ಎಂಬುದು ಡೈರೆಕ್ಟರರ ನಿರ್ದೇಶನ.

ಇವಕ್ಕೆ ಉತ್ತರವಾಗಿ ಪುಸ್ತಕಮುದ್ರಕ್ಕೂ ನಾವು ಓದುವ ಕಾಯಿದೆಯ ಕೇವಲ ತಾಂತ್ರಿಕ ಅಂಶ. ನಿರ್ದೇಶಕರ ಉದ್ದೇಶ ಸ್ಪಷ್ಟವಿದೆ. ಜಟಿಲವಾದ ತಾಂತ್ರಿಕ ಅಂಶಗಳನ್ನು ಅಭ್ಯಾಸ ಮಾಡುವವರು ಅದನ್ನು ಮೂಲದಲ್ಲಿ ಇಂಗ್ಲಿಷಿನಲ್ಲಿಯೇ ಓದಬಹುದಾಗಿದೆ. ಆದರೆ ಇಂಥ ಪ್ರಕಟಣೆಗಳು ಕೇವಲ ಶ್ರೀಸಾಮಾನ್ಯನಿಗೆ ವಿಾಸಲಾಗಿರಬೇಕು ಎಂದು. ಇವಕ್ಕೆ ಬದಲಾಗಿ ಈ ಕೆಳಗಿನ ಪರಿಚ್ಛೇದವನ್ನು ಗಮನಿಸಿರಿ.

"......ತನ್ನ ದೂರಿನ ಸತ್ಯಾಂಶಗಳನ್ನು ವಾದಿಯು ನ್ಯಾಯಾಲಯದಲ್ಲಿ ಸ್ಥಿರ ಪಡಿಸಬೇಕು. ಆದುದರಿಂದ ಈ ವಿಧಿಯಂತೆ (ಸೆಕ್ಷನ್?) ನ್ಯಾಯಾಲಯಕ್ಕೆ ದೂರು ಕೊಟ್ಟವರು ಹತ್ತರಿಂದ ಹದಿಮೂರನೇ ವಿಧಿಗಳಲ್ಲಿ ನಮೂದಿಸಿರುವ ಕಾರಣವಲ್ಲದೇ ಕೊಟ್ಟ ದೂರು ಗಣನೀಯವಾದ ಕಾರಣಗಳನ್ನು ಹೊಂದಿರಬೇಕು. ಎಂದಿದೆ. ದಂಪತಿಗಳು ಕ್ಷಮ್ಯ ಕಾರಣಗಳಿಲ್ಲದೇ ಪ್ರತ್ಯೇಕವಾಗಿದ್ದಲ್ಲಿ ಮಾತ್ರ ಈ ವಿಧಿಯಂತೆ ಆದೇಶ ನೀಡಬಹುದು ಎಂದಿರುವುದರಿಂದ ಉಳಿದ ವಿಧಿಗಳಲ್ಲಿರುವ ಅಂಶಗಳಲ್ಲದೇ ಮಾನವ ಸಾಮಾನ್ಯವಾದ ಪ್ರಸಂಗಗಳನ್ನೂ ಗಮನದಲ್ಲಿಟ್ಟುಕೊಂಡು ನ್ಯಾಯವನ್ನು ನಿರ್ಧರಿಸಬೇಕಾಗುತ್ತದೆಂಬ ಅಭಿಪ್ರಾಯವನ್ನು ಅನೇಕ ಶ್ರೇಷ್ಠ ನ್ಯಾಯಾಲಯಗಳು ಸೂಚಿಸಿವೆ"(ಪುಟ 400)

ಇಲ್ಲಿ. "......ಹತ್ತರಿಂದ ಹದಿಮೂರನೇ ವಿಧಿಗಳು" ಎಂದರೇನು? ಅವು ಏನು ಹೇಳುತ್ತವೆ? ಗಣನೀಯ ಕಾರಣಗಳು ಯಾವುವು? ಕ್ಷಮ್ಯ ಕಾರಣಗಳೆಂದರೇನು? ಮಾನವ ಸಾಮಾನ್ಯ ಪ್ರಸಂಗಗಳು ಯಾವವು? ಒಟ್ಟಿನಲ್ಲಿ ಈ ವಾಕ್ಯಾವಳಿ ಏನು ಹೇಳುತ್ತದೆ? ಮೊದಲಾದ ಸಂದೇಹಗಳು ಸಾಮಾನ್ಯ ಓದುಗನಿಗೆ ಬರುವದು ಸ್ವಾಭಾವಿಕ. ಪರಿಚ್ಛೇದದ ಕೊನೆಯಲ್ಲಿ ನ್ಯಾಯಾಲಯಗಳ ರೂಲಿಂಗ್‌ನ ಪಟ್ಟಿಯನ್ನು ಕೊಟ್ಟಿದೆ. ಆದರೆ ಅದರಿಂದ ಓದುಗನಿಗೆ ಯಾವುದೇ ಪರಿಣಾಮ ಆಗುವ ಸಾಧ್ಯತೆಗಳೇ ಇಲ್ಲ. ಯಾಕೆಂದರೆ ಹೈಕೋರ್ಟ್ ರೂಲಿಂಗ್‌ಗಳು ಕಾನೂನು ತಜ್ಞರಿಗೂ ನೆನಪಿರಲು ಅಸಾಧ್ಯ. ಹಾಗಿರುವಾಗ ಏನೂ ಅರಿಯದ ಸಾಮಾನ್ಯ ಓದುಗನಿಗೆ, ಇಂಥ ಹೈಕೋರ್ಟ್ ಇಂಥ ವರ್ಷದಲ್ಲಿ ಈ ವಿಷಯದಲ್ಲಿ ಇಂತಿಷ್ಟನೇ ಪುಟದಲ್ಲಿ ಹೀಗೆ ಅಭಿಪ್ರಾಯ ಪಟ್ಟಿದೆಯೆಂದು, AIR 1959, Punj 162, ಇಷ್ಟು ಮಾತ್ರ ಸೂಚಿಸಿಬಿಟ್ಟರೆ, ಓದುಗನ ಆಸಕ್ತಿ ಇದರ ಬಗ್ಗೆ ಕೆರಳುವದೆಂದು ತಿಳಿಯುವುದು ಕೇವಲ ತಪ್ಪಾದೀತು. ನಮ್ಮ ಓದುಗನಿಗೆ ಬೇಕಾದ್ದು ದೇಶದ ಕಾಯದೆ. ಈ ವಿಷಯದಲ್ಲಿ ಎಲ್ಲಿ–ಏನು? ಎಂಬ ವಿಷಯದ ಸಾರಸಂಗ್ರಹ ಮಾತ್ರ ಹೊರತು. ಇಂಗ್ಲಿಷಿನಿಂದ ಕನ್ನಡಕ್ಕೆ ತರ್ಜುಮೆ ಮಾಡಿದಂಥ ರೈಲ್ವೇ ಗೈಡಿನ ಮಾದರಿಯ ಭಾಷಾಂತರ ರೂಪವಲ್ಲ. ಆದ್ದರಿಂದ ಶಾಸನವನ್ನು ಮೂಲದಲ್ಲಿ ಹೇಗಿದೆಯೋ ಹಾಗೇ, ಕಲಮಿನಿಂದ ಕಲಮಿಗೆ ಲೇಖಕರ ಭಾಷೆಯಲ್ಲಿ ವಿಧಿವತ್ತಾಗಿ ಇಳಿಸುವುದರ ಬದಲು, ಆಯಾ ವಿಷಯಕ್ಕನುಗುಣವಾಗಿ, ಅದಕ್ಕೆ ಸಂಬಂಧಿಸಿದ ಕಾಯಿದೆಯ ಸ್ವರೂಪವನ್ನು ಸಾರಸಂಗ್ರಹವಾಗಿ ನಿರೂಪಿಸಿದ್ದರೆ ಹೆಚ್ಚು ಪರಿಣಾಮಕಾರಿಯೂ–ಪ್ರಯೋಜನಕರವೂ ಆಗುತ್ತಿತ್ತು.

ಪೂರ್ವಪೀಠಿಕೆ ಹಾಗೂ ಪ್ರಾಚೀನ ಸಂಪ್ರದಾಯಗಳು ಎಂಬ ತಲೆಬರಹದಡಿಯ ಪರಿಚ್ಛೇದಗಳಲ್ಲಿ ಮಾತ್ರ ಲೇಖಕರು ಆ ಮಟ್ಟಿಗೆ ಯಶಸ್ವಿಯಾಗಿದ್ದಾರೆನ್ನಬಹುದು. ಇಂಗ್ಲಿಷಿನ ಅನೇಕ ಪಾರಿಭಾಷಿಕ ಶಬ್ದಗಳು ಕನ್ನಡದಲ್ಲಿ ಬಳಕೆಯಲ್ಲಿವೆ. ಅವುಗಳನ್ನು ಮೂಲದಲ್ಲಿದ್ದಂತೆ ಅಥವಾ ಬಳಕೆಯಲ್ಲಿದ್ದಂತೆ ಪ್ರಯೋಗಿಸಿದ್ದರೆ ಹೆಚ್ಚು ಸ್ವಾಭಾವಿಕವೆನಿಸುತ್ತಿತ್ತು. ಅದಿಲ್ಲದೆ ಕನ್ನಡ ಪದ ಪ್ರಯೋಗಗಳ ಬಗ್ಗೆಯೇ ಹಟ ತೊಟ್ಟರೆ ಅರ್ಥ ಅಸಂಬದ್ಧವಾಗುವ ಸಂದರ್ಭಗಳೂ ಇಲ್ಲದಿಲ್ಲ. ಉದಾ: 'ಆತುರದ ತೀರ್ಪು'(?) (ಎಕ್ಸ್–ಪಾರ್ಟಿ) ಪುಟ 400. 'ಏಕ ಪಕ್ಷೀಯ ಹೆಚ್ಚು ಸಮಂಜಸ. ಜಿಲ್ಲಾ ಮಟ್ಟದ ವ್ಯಾಪ್ತಿಯುಳ್ಳ ಸಾರ್ವಜನಿಕ ನ್ಯಾಯಾಲಯ' (ಸಿವಿಲ್ ಜಜ್) ಪುಟ 106. ಇವಕ್ಕೆ ಬದಲಾಗಿ 'ಸಿವಿಲ್ ಜಜ್' ಎಂದರೆ ತಪ್ಪೇನು? 'ಸಾರ್ವಜನಿಕ ಶಾಸನದ ವ್ಯಾಪ್ತಿ' ಅಂದರೆ 'ಸಿವಿಲ್ ಪ್ರೊಸೀಜರ್ ಕೋಡ್' (ಪುಟ 111) ಎಂದು ಯಾರು ಊಹಿಸಬಲ್ಲರು? ಅದರಂತೆ 'ಅಪೀಲ್' ಅನ್ನು 'ಅಪೀಲು' ಎಂದರೆ ಯಾರಾದರೂ ಸಹಜವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ. ಅಂಥದರಲ್ಲಿ. 'ಪುನರ್‌ವಿಚಾರಣಾ ವಿವಾದ' (ಪುಟ 147) ಎಂದರೆ ನಿಜವಾಗಿ ಹಾಗೆಂದರೆ 'ರಿಮಾಂಡ್' ಎಂದಾಗುತ್ತದೆ. ಇಂಥ ಹಲವಾರು ಉದಾಹರಣೆಗಳನ್ನು ಈ ಪುಸ್ತಕದಲ್ಲಿ ಕಾಣಬಹುದಾಗಿದೆ.

ಇಂಗ್ಲಿಷಿನ ಮೂಲಕ್ಕೆ ಭಂಗ ಬರಬಾರದೆಂದು ಲೇಖಕರು ಸಾಕಷ್ಟು ಪರಿಶ್ರಮ ಪಟ್ಟಂತೆ ಕಾಣುತ್ತದೆ. ಇದರ ಪರಿಣಾಮವಾಗಿ ಭಾಷೆಯು ಕ್ಲಿಷ್ಟತೆ ಮಾತ್ರವಲ್ಲದೆ ಅಸಮಂಜಸ ಪದಪ್ರಯೋಗಗಳೂ ಹಣಕಿ

ಹಾಕಿವೆ. ಉದಾ "......ಬೊಂಬಾಯಿ ಶ್ರೇಷ್ಠ ನ್ಯಾಯಾಲಯದ ಸರ್ವ ನ್ಯಾಯಾಧೀಶರ ತಂಡವು ತೀರ್ಪು ನೀಡಿತು" (ಪುಟ 153) ಬಹುಶಃ 'ಫುಲ್ ಬೆಂಚ್ ಆಫ್ ಬಾಂಬೇ ಹೈಕೋರ್ಟ್' ಇರಬಹುದೆ? 'ಪ್ರಸಾರಾಂಗ'ದ ಈ ಪ್ರಕಟಣೆಯ ಉದ್ದೇಶ ಪೂರ್ತಿಯಾಗಿ ಸಫಲವಾಗಬೇಕಿದ್ದರೆ, ಸ್ಪೆಷಲ್ ಮ್ಯಾರೇಜ್ ಆಕ್ಟ್ 1954–ವಿಶೇಷ ವಿವಾಹ ಕಾಯಿದೆ-1954, ಇದರ ಸಂಕ್ಷಿಪ್ತ ಸಮೀಕ್ಷೆಯನ್ನು ಕೊಡಬಹುದಿತ್ತು. ಈ ಶಾಸನದ ಪ್ರಕಾರ ಮದುವೆಗಳನ್ನು ರಿಜಿಸ್ಟರ ವಗೈರೆ ಮಾಡುವುದು, ಅವುಗಳ ವಿಧಾನ, ಉದ್ದೇಶ, ಹಾಗೂ ಕಾಯ್ದೆಯಂತೆ ಇದರ ಸಾಧಕ–ಬಾಧಕಗಳು ಇವುಗಳ ಪರಿಚಯ ಹೆಚ್ಚು ವ್ಯಾವಹಾರಿಕ ಅನುಕೂಲತೆಗಳನ್ನೊದಗಿಸುತ್ತಿತ್ತು. ಯಾಕೆಂದರೆ ಈ ಕಾಯ್ದೆಯ ಉಲ್ಲಂಘನೆಯು ಶಿಕ್ಷೆ ಮತ್ತು ದಂಡವನ್ನು ವಿಧಿಸುವಂಥಾದ್ದಾಗಿದೆ.

ಕನ್ನಡದಲ್ಲಿ ಕಾನೂನಿನ ಪುಸ್ತಕಗಳೇ ವಿರಳವೆನಿಸಿದಾಗ, ಅಲ್ಲೊಂದು–ಇಲ್ಲೊಂದು ಕಾಣಸಿಗುವ ಇಂಥ ಪ್ರಕಟಣೆಗಳೂ ಜನಸಾಮಾನ್ಯ ಓದುಗರಿಗೆ ಉಪಯುಕ್ತ ಹೊತ್ತಿಗೆಯಾಗಿ ಬಾರದಿರುವುದು ನಿರಾಶಾದಾಯಕವಾಗಿದೆ.

ಮೂಲಕಾಯಿದೆಯನ್ನು ಸಮಗ್ರವಾಗಿ ತರ್ಜುಮೆ ಮಾಡುವುದರ ಉದ್ದೇಶವೇ ಬೇರೆ ಹಾಗೂ ಕಾಯಿದೆಯ (ಶಾಸನದ) ಸ್ಥೂಲರೂಪವನ್ನು ಸರಳಭಾಷೆಯ ಸಂಗ್ರಹರೂಪದಲ್ಲಿ, ಸಾಮಾನ್ಯಜನರಿಗೆ ತಿಳುವಳಿಕೆಯ ಬಗ್ಗೆ ಬರೆಯುವುದರ ಉದ್ದೇಶವೇ ಬೇರೆ. 'ಪ್ರಸಾರಾಂಗದ' ಉದ್ದೇಶ ಎರಡನೆಯದು. ಆದರೆ 'ಹಿಂದೂ ವಿವಾಹ ಶಾಸನ' ಈ ಪ್ರಕಟಣೆ. ಮೇಲಿನ ಎರಡರಲ್ಲಿ ಯಾವ ಉದ್ದೇಶವನ್ನೂ ಸಫಲಗೊಳಿಸಲಿಕ್ಕಿಲ್ಲ ಎಂದು ವಿಷಾದದಿಂದ ಆದರೆ ನಿರ್ಭಿಡೆಯಿಂದ ಹೇಳಬೇಕಾಗಿದೆ.

ಕಾಯ್ದೆಯನ್ನು ಮೂಲಭಾಷೆಯಿಂದ ಇನ್ನೊಂದು ಭಾಷೆಗೆ ತರ್ಜುಮೆ ಮಾಡುವುದು ಕಷ್ಟ. ಅದರ ಸಾರ–ಸಂಗ್ರಹವನ್ನು ತಿಳಿ ಭಾಷೆಯಲ್ಲಿ ನಿರೂಪಿಸುವುದು ಕಷ್ಟ ಸಾಧ್ಯ. ಆದರೆ ಯಾವುದೂ ಅಸಾಧ್ಯವೇನಲ್ಲ.

ಲೋಪದೋಷಗಳನ್ನು ಕೆಲಮಟ್ಟಿಗೆ ಕಡೆಗಣಿಸಿ ವೀಕ್ಷಿಸಿದರೆ ಇಂಥ ಒಂದು ಪ್ರಕಟಣೆಯೇ ಒಂದು ಸಾಹಸ. ಲೇಖಕರು ಪರಿಶ್ರಮಿಸಿದ್ದಾರೆ. ಅವರೂ ಅಭಿನಂದನಾರ್ಹರು. ಮುದ್ರಣ ಚೆನ್ನಾಗಿದೆ.

—ಬಿ. ಡಿ. ಹೆಗಡೆ, ದೊಡ್ಮನೆ

ಮಾನವಿಕ ಕರ್ಣಾಟಕ

ಸಂಪುಟ ೨

೧೯೭೧–೭೨

ಸೂಚಿ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು

ವಿಷಯ ಸೂಚಿ

ವ್ಯಕ್ತಿ, ಜೀವನ

ಲೇಖನಗಳು

ವಸ್ತುಕೋಶ

ಸಂಪಾದಕೀಯ

ಪುಸ್ತಕಲೋಕ

ಲೇಖಕ ಸೂಚಿ

WO 11276—MUPM—2000+25 copies—12-4-73

ಮಾನವಿಕ ಕರ್ಣಾಟಕ

ವಾರ್ಷಿಕ ಚಂದಾ

(ಅಂಚೆವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	೪ ರೂ.
ಸಾಮಾನ್ಯ ಚಂದಾದಾರರಿಗೆ	೬ ರೂ.
ಸಂಸ್ಥೆಗಳಿಗೆ	೮ ರೂ.
ಆಜೀವ ಸದಸ್ಯತ್ವ	೧೦೦ ರೂ.

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ
ಮೈಸೂರು–೫೭೦೦೦೬